ಭಾನುವಾರ, ಏಪ್ರಿಲ್ 6, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 95 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಶ್ರೀರಾಮನವಮಿ ಶುಭಾಶಯಗಳು

ಏಟು ಎದಿರೇಟು

ಸುಖಾಸುಮ್ಮನೆ ನನ್ನನ್ನು ಕೆಣಕಬೇಡಿ. ‘ನಾನು ಕನಕಪುರದಲ್ಲಿ ಮಾತ್ರ ಬಂಡೆ ಒಡೆದಿದ್ದೇನೆ. ಬಳ್ಳಾರಿಗೂ ನನಗೂ ಏನು ಸಂಬಂಧ’ ಎಂದು ಡಿ.ಕೆ.ಶಿವಕುಮಾರ್ ಕೇಳಿದ್ದಾರೆ. ಬಳ್ಳಾರಿಗೂ ಅವರಿಗೂ ಏನು ಸಂಬಂಧ ಎಂಬುದಕ್ಕೆ ನನ್ನ ಬಳಿ ಟನ್ ಗಟ್ಟಲೆ ದಾಖಲೆಗಳು ಇವೆ. ನಾನು ಗಾಳಿಯಲ್ಲಿ ಗುಂಡು ಹೊಡೆಯುತ್ತಿಲ್ಲ,

ಎಚ್‌.ಡಿ.ಕುಮಾರಸ್ವಾಮಿ
ಕೇಂದ್ರ ಸಚಿವ



ಕುಮಾರಸ್ವಾಮಿಗೆ ಹೆದರುವ ಮಗ ನಾನಲ್ಲ. ಟನ್‌ಗಟ್ಟಲೆ ದಾಖಲೆಯಲ್ಲ, ಭೂಲೋಕ ಎಷ್ಟಿದೆಯೋ ಅಷ್ಟೂ ವ್ಯವಹಾರದ ದಾಖಲೆ ಬಿಡುಗಡೆ ಮಾಡಲಿ. ನನ್ನ ಹೆಂಡತಿ, ಮಕ್ಕಳ ಆಸ್ತಿ ವಿವರವನ್ನೂ ಬಹಿರಂಗ ಮಾಡಲಿ.

ಡಿ.ಕೆ. ಶಿವಕುಮಾರ್
ಉಪಮುಖ್ಯಮಂತ್ರಿ



ಎರಡು ತಿಂಗಳ ನಂತರ ಒಳಮೀಸಲಾತಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾರು ಬೇಡವೆಂದರೂ ಒಳ ಮೀಸಲಾತಿ ಜಾರಿ ಮಾಡುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಎರಡು ತಿಂಗಳ ಬಳಿಕ ಜಾರಿ ಮಾಡಿಯೇ ಮಾಡುತ್ತೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ಸಿದ್ದರಾಮಯ್ಯ

ಸಮಾಜ ಕಲ್ಯಾಣ ಇಲಾಖೆ ವಿಧಾನ ಸೌಧದ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ಬಾಬೂ ಜಗಜೀವನ್ ರಾಮ್ ಅವರ 118ನೇ ಜನ್ಮ ದಿನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ‘ಸುಪ್ರೀಂ ಕೋರ್ಟ್ ಆದೇಶವನ್ನು ಪಾಲಿಸುತ್ತೇವೆ. ಆಯೋಗದ ಅಧ್ಯಕ್ಷ ನಾಗಮೋಹನ್ ದಾಸ್ ಅವರು ಎರಡು ತಿಂಗಳ ಅವಧಿ ಕೇಳಿದ್ದಾರೆ. ಬಳಿಕ, ಪರಿಶಿಷ್ಟ ಗುಂಪಿನ ಯಾವ ಜಾತಿಗೂ ಅನ್ಯಾಯ ಆಗದಂತೆ ಒಳ ಮೀಸಲಾತಿ ಜಾರಿ ಮಾಡುತ್ತೇವೆ’ ಎಂದು ಭರವಸೆ ನೀಡಿದರು.

7ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಟ್ರಂಪ್ ನಡೆಯಿಂದ ಕರ್ನಾಟಕದ ಬೊಕ್ಕಸಕ್ಕೆ ಬರೆ • ವ್ಯಾಪಾರಿಗಳ ಮೇಲೂ ಹೊರೆ

ಪ್ರತಿಸುಂಕ: ರಾಜ್ಯದಲ್ಲೂ ಕಂಪನ

• ಕೆ.ಎಚ್‌. ಓಬಳೇಶ್

ಒಳನೋಟ

ಬೆಂಗಳೂರು: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತದ ಮೇಲೆ ಶೇ 26ರಷ್ಟು ಪ್ರತಿ ಸುಂಕದ ಅಸ್ತ್ರ ಪ್ರಯೋಗಿಸಿದ್ದಾರೆ. ಇದರ ಬಿಸಿ ಕರ್ನಾಟಕದ ವ್ಯಾಪಾರ ವಹಿವಾಟಿಗೂ ತಟ್ಟಲಿದ್ದು, ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹದಲ್ಲಿ ಇಳಿಕೆಯಾಗುವ ಆತಂಕ ಎದುರಾಗಿದೆ.

ರಾಜ್ಯದ ಆರ್ಥಿಕತೆಗೆ ಒಂದರ ಮೇಲೊಂದು ಏಟು ಬೀಳುತ್ತಿದೆ. ವಿತ್ತೀಯ ಕೊರತೆ, ಸಾಲದ ಪ್ರಮಾಣ ಏರಿಕೆ, ನಿರುದ್ಯೋಗ, ಪ್ರಾದೇಶಿಕ ಅಸಮಾನತೆ, ಈ ಅಂಶಗಳು ಅರ್ಥ ವ್ಯವಸ್ಥೆಯನ್ನು ಶಿಥಿಲಗೊಳಿಸುತ್ತಿವೆ.

ಸದ್ಯ ಜಿಎಸ್‌ಟಿ ಸಂಗ್ರಹದಲ್ಲಿ ಮಹಾರಾಷ್ಟ್ರದ ಬಳಿಕ ರಾಜ್ಯವು ಎರಡನೇ ಸ್ಥಾನದಲ್ಲಿದೆ. ಮುಂಬರುವ ದಿನಗಳಲ್ಲಿ ವ್ಯಾಪಾರ ವಹಿವಾಟಿನ ಇಳಿಕೆಯಿಂದ ರಾಜ್ಯದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ಖೋತಾ ಆಗಲಿದೆ. ಟ್ರಂಪ್ ನೀತಿಯು ಖಜಾನೆಯ ಮೇಲೆ ಖಚಿತವಾಗಿ ಕೆಟ್ಟ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ಆರ್ಥಿಕ ತಜ್ಞರು ಅಂದಾಜಿಸಿದ್ದಾರೆ. ಇದನ್ನು ರಾಜ್ಯ ಸರ್ಕಾರವೂ ಅನುಮೋದಿಸುತ್ತದೆ.

‘ಅಮೆರಿಕದ ಸುಂಕ ನೀತಿಯು ರಾಜ್ಯದ ಆರ್ಥಿಕತೆ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ ಎಂಬುದನ್ನು ಈಗಲೇ ಲೆಕ್ಕ ಹಾಕುವುದು ಅಥವಾ ಅಂದಾಜು ಮಾಡುವುದು ಸುಲಭದ ಕೆಲಸವಲ್ಲ. ಆದರೆ, ಇದು ಪರೋಕ್ಷವಾಗಿ ಉದ್ಯೋಗ ಮತ್ತು ನಿಯಮಿತ ವ್ಯಾಪಾರದ ಜಿಎಸ್‌ಟಿ ಸಂಗ್ರಹದ ಮೇಲೆ ಪರಿಣಾಮ ಬೀಳುವ ಸಾಧ್ಯತೆ ಇದೆ. ಅದನ್ನು ತಕ್ಷಣಕ್ಕೆ ಅಂದಾಜು ಮಾಡಲು ಸಾಧ್ಯವಿಲ್ಲ’ ಎನ್ನುತ್ತಾರೆ ಹಣಕಾಸು ಇಲಾಖೆಯ ಕಾರ್ಯದರ್ಶಿ ಪಿ.ಸಿ. ಜಾಫರ್.

ಟ್ರಂಪ್ ನೀತಿಯು ಕೃಷಿ ವಲಯದ ಬೆಳವಣಿಗೆ ಮೇಲೆ ಹೆಚ್ಚು ಪರಿಣಾಮ ಬೀರಲಿದೆ ಎಂದು ಅಂದಾಜಿಸಲಾಗಿದೆ. ಈಗಾಗಲೇ ಈ ವಲಯವು ಮಳೆ ಕೊರತೆ, ಉತ್ಪಾದನೆ ಕುಸಿತ, ಬೆಲೆ ಅಸ್ಥಿರತೆಯಿಂದಾಗಿ ಸಂಕಷ್ಟದ ಸರಮಾಲೆಗಳನ್ನು ಎದುರಿಸುತ್ತಿದೆ.

ಇದಕ್ಕೆ ಸಾಕ್ಷಿ ಎಂಬಂತೆ 2023-24ರಲ್ಲಿ ಕೃಷಿ ಹಾಗೂ ಅದರ ಅವಲಂಬಿತ ವಲಯದ ಬೆಳವಣಿಗೆ ದರವು ಶೇ 4.9ರಷ್ಟು ಕುಸಿತ ಕಂಡಿತ್ತು. 2024-25ರಲ್ಲಿ ಶೇ 4ರಷ್ಟು ಏರಿಕೆ ದಾಖಲಿಸುವ ನಿರೀಕ್ಷೆಯಿದ್ದು, ಚೇತರಿಕೆಯ ಹಳಿಗೆ ಮರಳಲಿದೆ ಎಂದು ಆರ್ಥಿಕ ಸಮೀಕ್ಷೆಯು ಅಂದಾಜಿಸಿದೆ.

ಮತ್ತೊಂದೆಡೆ ಕೃಷಿ ಉತ್ಪನ್ನಗಳ ರಫ್ತು ಬೆಳವಣಿಗೆಯು ಆಶಾದಾಯಕವಾಗಿಲ್ಲ. 2022-23ರಲ್ಲಿ ₹23,850 ಕೋಟಿ ಮೌಲ್ಯದ ಉತ್ಪನ್ನಗಳನ್ನು ರಫ್ತು ಮಾಡಲಾಗಿತ್ತು. 2023-24ರಲ್ಲಿ ₹17,500 ಕೋಟಿಗೆ ಇಳಿದಿದೆ. ಒಟ್ಟಾರೆ ಶೇ 27ರಷ್ಟು ಕಡಿಮೆಯಾಗಿದೆ.



ಕೆಲವು ಸರಕುಗಳ ರಫ್ತು ಇಳಿಕೆಯಾಗಬಹುದು. ಐ.ಟಿ ರಫ್ತಿನ ಮೇಲೆ ಶೂನ್ಯ ಸುಂಕ ಇರುವುದರಿಂದ ಈ ವಲಯದ ತೆರಿಗೆಯಿಂದ ಬರುವ ಆದಾಯದಲ್ಲಿ ಇಳಿಕೆಯಾಗುವುದಿಲ್ಲ

ಪಿ.ಸಿ. ಜಾಫರ್
ಕಾರ್ಯದರ್ಶಿ, ಹಣಕಾಸು ಇಲಾಖೆ

ಟ್ರಂಪ್ ನೀತಿಯು ಮತ್ತಷ್ಟು ಪರಿಣಾಮ ಬೀರಲಿದೆ ಎಂದು ಕೃಷಿ ತಜ್ಞರು ಹೇಳುತ್ತಾರೆ.

ಕಾಫಿ ಕಥೆ ಏನು?: ರಾಜ್ಯದ ಪ್ರಮುಖ ವಾಣಿಜ್ಯ ಬೆಳೆಯಾದ ಉತ್ಕೃಷ್ಟ ಗುಣ ಮಟ್ಟದ ಕಾಫಿಗೆ ಜಾಗತಿಕ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಇದೆ.

6ನೇ ಪುಟ ನೋಡಿ

ವಕ್ಫ್ ಮಸೂದೆಗೆ ರಾಷ್ಟ್ರಪತಿ ಅಂಕಿತ

ನವದೆಹಲಿ (ಪಿಟಿಐ): ಸಂಸತ್ತಿನ ಅಂಗೀಕಾರ ಪಡೆದಿರುವ ವಕ್ಫ್ ತಿದ್ದುಪಡಿ ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶನಿವಾರ ರಾತ್ರಿ ಅಂಕಿತ ಹಾಕಿದ್ದಾರೆ.

ಮಂಡನೆಗೂ ಮುನ್ನ ಸಂಸತ್‌ನ ಜಂಟಿ ಸದನ ಸಮಿತಿಯು ಮಸೂದೆಯ ಬಗ್ಗೆ ಆರು ತಿಂಗಳ ಕಾಲ ಚರ್ಚೆ ನಡೆಸಿತ್ತು. ಸಂಸತ್ತಿನ ಉಭಯ ಸದನಗಳು ಸುದೀರ್ಘ ಚರ್ಚೆಯ ನಂತರ ಈ ಮಸೂದೆಗೆ ಅಂಗೀಕಾರ ನೀಡಿದ್ದವು. ಮಸೂದೆಗೆ ಅಂಕಿತ ಹಾಕಬಾರದು ಎಂದು ಕೆಲವು ಸಂಸದರು ರಾಷ್ಟ್ರಪತಿ ಅವರಲ್ಲಿ ಮನವಿ ಮಾಡಿದ್ದರು.

ರಾಷ್ಟ್ರಪತಿ ಅವರು ಸಹಿಹಾಕಿದ ಬಳಿಕ ಮಸೂದೆಯು ಕಾಯ್ದೆಯಾಗಿದೆ.

ಅನುಷ್ಠಾನಕ್ಕೆ ಪ್ರಯತ್ನಿಸಿ: ಹೈಕೋರ್ಟ್

‘ಯುಸಿಸಿ ಜಾರಿಗೆ ಕ್ರಮ ವಹಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂವಿಧಾನದ ಮೂಲ ತತ್ವಗಳನ್ನು ಸಾಕಾರಗೊಳಿಸಲು ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಅತ್ಯಂತ ಅಗತ್ಯವಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅದರ ಅನುಷ್ಠಾನಕ್ಕೆ ಎಲ್ಲ ಪ್ರಯತ್ನ ಮಾಡಬೇಕು’ ಎಂದು ಹೈಕೋರ್ಟ್ ಸಲಹೆ ನೀಡಿದೆ.

ಮುಸ್ಲಿಂ ಕುಟುಂಬವೊಂದರ ಆಸ್ತಿ ಪಾಲು ದಾವೆಯೊಂದಕ್ಕೆ ಸಂಬಂಧಿಸಿ ಬೆಂಗಳೂರಿನ ವಿವೇಕ ನಗರದ ಸಮೀವುಲ್ಲಾ ಖಾನ್ (73) ಮತ್ತಿತರರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಭಾಗಶಃ ಪುರಸ್ಕರಿಸಿರುವ ನ್ಯಾಯಮೂರ್ತಿ ಹಂಚಾಟೆ ಸಂಜೀವ್ ಕುಮಾರ್ ಅವರಿದ್ದ



ಏಕಸದಸ್ಯ ನ್ಯಾಯಪೀಠ ತನ್ನ ತೀರ್ಪಿನಲ್ಲಿ ಈ ಅಂಶವನ್ನು ಪ್ರತಿಪಾದಿಸಿದೆ.

‘ಮುಸ್ಲಿಂ ಮಹಿಳೆಯರಿಗೆ ಆಸ್ತಿಯಲ್ಲಿ ಪುರುಷರಷ್ಟೇ ಸಮಾನ ಪಾಲು ಇಲ್ಲ. ಹೀಗಾಗಿ, ಯುಸಿಸಿ ಜಾರಿಗೊಳಿಸುವ ಅಗತ್ಯವಿದೆ’ ಎಂದು ವಿವರಿಸಿರುವ ನ್ಯಾಯಪೀಠ, ಈ ದಿಸೆಯಲ್ಲಿ ಸಂವಿಧಾನ ಕರಡು ರಚನಾ ಸಮಿತಿ ಸಭೆಯ ಚರ್ಚೆಯನ್ನು ಉಲ್ಲೇಖಿಸಿದೆ.

9ನೇ ಪುಟ ನೋಡಿ

ವಿನಯ್ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಸೋಮವಾರಪೇಟೆ (ಕೊಡಗು ಜಿಲ್ಲೆ): ಬೆಂಗಳೂರಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಅಂತ್ಯಕ್ರಿಯೆ ಸ್ವಗ್ರಾಮ ಗೋಣಿಮರೂರಿನಲ್ಲಿ ಅರೆಭಾಷಿಕ ಗೌಡ ಜನಾಂಗದ ಸಂಪ್ರದಾಯದಂತೆ ಶನಿವಾರ ನಡೆಯಿತು.

ಸೋಮಯ್ಯ ಕುಟುಂಬದ ಕಾಫಿ ತೋಟದಲ್ಲಿ ಅಂತಿಮ ವಿಧಿವಿಧಾನ ನೆರವೇರಿತು. ಅವರ ತಾಯಿ ದೇವಕ್ಕಿ, ಪತ್ನಿ ಪೂಜೆ ಸಲ್ಲಿಸಿದರು. ಅವಳಿ ಸೋದರ ವಿವೇಕ್ ಅಗ್ನಿಸ್ಪರ್ಶ ಮಾಡಿದರು.

ಸಿಬಿಐ ತನಿಖೆಗೆ ಆಗ್ರಹ: ವಿನಯ್ ಆತ್ಮಹತ್ಯೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಕುಶಾಲನಗರದಲ್ಲಿ ಪ್ರತಿಭಟನೆ ನಡೆಸಿದರು.

‘ಹೃದಯವಂತಿಕೆ ಇದ್ದರೆ ಸೇವೆ ಮಾಡಲು ಸಾಧ್ಯ’

ರಾಜರಾಜೇಶ್ವರಿನಗರ: ‘ಸಮಾಜದಲ್ಲಿ ಹೃದಯವಂತಿಕೆಯಿರುವ ವ್ಯಕ್ತಿಗಳಿಂದ ಮಾತ್ರ ಸರ್ವಜನಾಂಗದ ಅಭಿವೃದ್ಧಿ, ಬಡವರು, ನೊಂದವರು, ಶ್ರಮಿಕರ ಸೇವೆ ಮಾಡಲು ಸಾಧ್ಯ’ ಎಂದು ಕೂಡಲ ಸಂಗಮ ವೀರಶೈವ ಲಿಂಗಾಯತ ಮಠದ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಲಗ್ಗೆರೆಯಲ್ಲಿ ಅರ್ಪಿತಾ ಸೇವಾ ಟ್ರಸ್ಟ್ ಹಮ್ಮಿಕೊಂಡಿದ್ದ ಚಿನ್ನರ ಅಂಗಳ-ಬೇಸಿಗೆ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ಸಿರಿವಂತಿಕೆ ಉಳ್ಳವರೆಲ್ಲರೂ ಬಡವರ ಸೇವೆ ಮಾಡುವುದಿಲ್ಲ ಬಡವರ, ನೊಂದವರ ಬಗ್ಗೆ ಚಿಂತನೆ ಇರುತ್ತದೆಯೋ ಅಂತಹ ಜನ ಪ್ರತಿನಿಧಿಗಳು, ಸಮಾಜಮುಖಿ ಚಿಂತನೆ ಉಳ್ಳವರಿಂದ ಸಮಾಜದ ಪ್ರಗತಿ ಕಾಣಬಹುದು. ಆ ಸಾಲಿನಲ್ಲಿ ಲಗ್ಗೆರೆ ನಾರಾಯಣಸ್ವಾಮಿ ಕುಟುಂಬ ಮುಂಚೂಣಿಯಲ್ಲಿದೆ’ ಎಂದರು.

ಅರ್ಪಿತಾ ಸೇವಾ ಟ್ರಸ್ಟ್‌ನ ಅಧ್ಯಕ್ಷ ಲಗ್ಗೆರೆ ನಾರಾಯಣಸ್ವಾಮಿ ಮಾತನಾಡಿ, ‘ಹುಟ್ಟು ಆಕಸ್ಮಿಕ, ಸಾವು ಖಚಿತ. ಭಗವಂತ ಈ ಭೂಮಿಗೆ ಕಳುಹಿಸಿ ಬಡವರ ಸೇವೆಯ ಅವಕಾಶ ಕಲ್ಪಿಸಿದ್ದಾನೆ. ಆ ಮೂಲಕ ದೇವರನ್ನು ಕಾಣುವ ಪ್ರಯತ್ನ ಮಾಡಲಾಗುತ್ತಿದೆ’ ಎಂದರು.

ಕೆಪಿಸಿಸಿ ವಕ್ತಾರೆ ಎಚ್.ಕುಸುಮಾ, ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತ ರಾಯಪ್ಪ, ಪಾಲಿಕೆ ಮಾಜಿ ಸದಸ್ಯರಾದ ಎಚ್.ಎಸ್.ಸಿದ್ದೇಗೌಡ, ಮಂಜುಳಾ ನಾರಾಯಣಸ್ವಾಮಿ, ಬಿ.ಆರ್. ನಂಜುಂಡಪ್ಪ, ವೇಲುನಾಯಕರ್, ಮೋಹನ್ ಕುಮಾರ್ ಉಪಸ್ಥಿತರಿದ್ದರು.

‘ಹೈಕಮಾಂಡ್ ಮಾತಿಗೆ ಡಿ.ಕೆ.ಶಿ ಬದ್ಧ’

ರಾಮನಗರ: ‘ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತು ತೀರ್ಮಾನವನ್ನು ಹೈಕಮಾಂಡ್ ಕೈಗೊಳ್ಳಲಿದೆ. ಅದಕ್ಕೆ ನಮ್ಮ ನಾಯಕರೂ (ಡಿ.ಕೆ.ಶಿವಕುಮಾರ್) ಒಪ್ಪಿದ್ದು, ಅಧ್ಯಕ್ಷ ಸ್ಥಾನ ಬಿಡುವುದಕ್ಕೆ ತಯಾರಾಗಿದ್ದಾರೆ. ಹೈಕಮಾಂಡ್ ಸೂಕ್ತ ವ್ಯಕ್ತಿಯನ್ನು ಗುರುತಿಸಿದರೆ ನಾವೂ ಸ್ವಾಗತಿಸುತ್ತೇವೆ’ ಎಂದು ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದರು.

‘ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರವೇ ಹೆಚ್ಚುವರಿ ಅನುದಾನ ನೀಡಲಿ’



ಅಮೃತರಾಜ್ ಎ

ಬೆಂಗಳೂರು: ‘ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ನೌಕರರಿಗೆ 7ನೇ ವೇತನ ಆಯೋಗದ ಶಿಫಾರಸಿನ ಅನ್ವಯ ನೀಡಬೇಕಿರುವ ಪರಿಷ್ಕೃತ ವೇತನದ ಹೆಚ್ಚುವರಿ ಅನುದಾನವನ್ನು ಸರ್ಕಾರವೇ ಬಿಡುಗಡೆ ಮಾಡಬೇಕು’ ಎಂದು ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘ ಆಗ್ರಹಿಸಿದೆ.

‘7ನೇ ವೇತನ ಆಯೋಗದ ಪರಿಷ್ಕೃತ ವೇತನದ ಹೆಚ್ಚುವರಿ ಅನುದಾನ ಹಾಗೂ 2023ರ ಏಪ್ರಿಲ್‌ನಿಂದ 2024ರ ಜುಲೈವರೆಗೆ ಪಾವತಿಸಬೇಕಿದ್ದ ಮಧ್ಯಂತರ ಪರಿಹಾರವನ್ನೂ ಸ್ಥಳೀಯ ಸಂಸ್ಥೆಗಳು ಸ್ವಂತ ಸಂಪನ್ಮೂಲಗಳಿಂದ ಭರಿಸುವಂತೆ ಹಣಕಾಸು ಇಲಾಖೆ ಸುತ್ತೋಲೆ ಹೊರಡಿಸಿದೆ. ಬಹುತೇಕ ಸ್ಥಳೀಯ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲ. ಸರ್ಕಾರವೇ ಅನುದಾನ ನೀಡಬೇಕು’ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅಮೃತ್‌ರಾಜ್, ‘ಸ್ಥಳಿಯ ಸಂಸ್ಥೆಗಳಿಗೆ ರಾಜ್ಯ ಹಣಕಾಸು ಆಯೋಗದ (ಎಸ್‌ಎಫ್‌ಸಿ) ಅನುದಾನದಲ್ಲಿ ಇಳಿಕೆಯಾಗಿದೆ. ಘನತ್ಯಾಜ್ಯ, ಉದ್ಯಾನ ನಿರ್ವಹಣೆ ಸೇರಿ ಇತ್ಯಾದಿ ಮೂಲ ಸೌಕರ್ಯಗಳ ವೆಚ್ಚವೂ ಹೆಚ್ಚಾಗಿದೆ

ಸ್ವಂತಮೂಲದಿಂದಸಂಗ್ರಹವಾಗುವ ಸಂಪನ್ಮೂಲಗಳಿಂದ ಸಾಮಾನ್ಯ ವೆಚ್ಚ ಭರಿಸಲು ಪರದಾಡುವ ಸ್ಥಿತಿ ಇದೆ. ಹಣಕಾಸು ಇಲಾಖೆಯ ಸುತ್ತೋಲೆ ಹಿಂಪಡೆಯಬೇಕು’. ‘ಪರಿಷ್ಕೃತ ವೇತನ ಜಾರಿಗೆ ತರುವಲ್ಲಿ ಸರ್ಕಾರದ ವಿಳಂಬವನ್ನು ಸಂಘ ಖಂಡಿಸುತ್ತದೆ. ಶೀಘ್ರ ಪರಿಹಾರ ಕಲ್ಪಿಸದಿದ್ದರೆ, ಎಲ್ಲ ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ ನೌಕರರ ಸಂಘಟನೆ ಸದಸ್ಯರು ಏ.10 ರಂದು ಹೋರಾಟದ ಬಗ್ಗೆ ನಿರ್ಧರಿಸುತ್ತೇವೆ’ ಎಂದರು.

‘ಎಲ್ಲರಿಗೂ ಉದ್ಯೋಗ ಸಿಗಲಿ’

ಕೆಂಗೇರಿ: ಸರ್ವರಿಗೂ ಶಿಕ್ಷಣ ದೊರೆಯುತ್ತಿರುವಂತೆ ಎಲ್ಲರಿಗೂ ಉದ್ಯೋಗಾವಕಾಶ ದೊರಕುವಂತಾಗಬೇಕು ಎಂದು ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಸ್. ಲತಾಕುಮಾರಿ ಹೇಳಿದರು.

ಕುಂಬಳಗೋಡು ಗ್ರಾಮ ಪಂಚಾಯಿತಿ, ಬೆಂಗಳೂರು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಹಾಗೂ ರಾಜರಾಜೇಶ್ವರಿ ತಾಂತ್ರಿಕ ಮಹಾ ವಿದ್ಯಾಲಯದ ಸಹಯೋಗದೊಂದಿಗೆ ಆರ್.ಆರ್. ಎಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಿದ್ದ ಉದ್ಯೋಗ ಮೇಳ-2025ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಉದ್ಯೋಗಂ ಪುರುಷ ಲಕ್ಷಣಂ ಎಂಬ ಹೇಳಿಕೆ ಇಂದಿಗೆ ಅಪ್ರಸ್ತುತ ಎನಿಸಿದೆ. ಲಿಂಗಭೇದವಿಲ್ಲದೆ ಸರ್ವರಿಗೂ ಉದ್ಯೋಗದ ಅಗತ್ಯತೆಗಳು ರೂಪುಗೊಂಡಿವೆ. ಈ ನಿಟ್ಟಿನಲ್ಲಿ ಸ್ತ್ರೀ -ಪುರುಷರೆನ್ನದೆ ಎಲ್ಲರೂ ಉದ್ಯೋಗ ಹೊಂದಿ ಆರ್ಥಿಕವಾಗಿ ಸಬಲರಾಗ ಬೇಕಿದೆ’ ಎಂದರು.

ಯಶವಂತಪುರ ಶಾಸಕ ಎಸ್.ಟಿ. ಸೋಮಶೇಖರ್ ಅವರು ಮಾತನಾಡಿ, ಉದ್ಯೋಗ ಮೇಳದ ಮೂಲಕ ಸಾವಿರಾರು ಮಂದಿ ಉದ್ಯೋಗ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಬಿಂದು, ಆರ್.ಆರ್. ಎಂಜಿನಿಯರಿಂಗ್ ಕಾಲೇಜ್ ಪ್ರಾಂಶುಪಾಲ ಬಾಲಕೃಷ್ಣ, ಕುಂಬಳಗೂಡು ಗ್ರಾಮ ಪಂಚಾಯಿತಿ ಅಧ್ಯಕ್ಷ ಪಟೇಲ್ ಎನ್. ದೇವರಾಜು, ಉಪಾಧ್ಯಕ್ಷ ಗೋಪಾಲಕೃಷ್ಣ, ಮಾಜಿ ಅಧ್ಯಕ್ಷರಾದ ಚಿಕ್ಕರಾಜು, ರಾಮಕೃಷ್ಣ ಉಪಸ್ಥಿತರಿದ್ದರು.

ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಪತ್ನಿಯ ಕತ್ತು ಕೊಯ್ದು ಕೊಲೆ: ಪತಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೊಡ್ಡ ತೇಗೂರು ಬಳಿ ಪತ್ನಿಯ ಕತ್ತು ಕೊಯ್ದು ಕೊಲೆ ಮಾಡಿದ್ದ ವ್ಯಕ್ತಿಯನ್ನು ಎಲೆಕ್ಟ್ರಾನಿಕ್ ಸಿಟಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಾಗೇಪಲ್ಲಿಯ ಶಾರದಾ(35) ಕೊಲೆಯಾದ ಮಹಿಳೆ. ಕೃತ್ಯ ಎಸಗಿದ ಆರೋಪದ ಅಡಿ ಶಾರದಾ ಅವರ ಪತಿ, ಆಂಧ್ರಪ್ರದೇಶದ ಕೃಷ್ಣಪ್ಪ (43) ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.



ಶಾರದಾ

ಶಾರದಾ ಮನೆ ಕೆಲಸ ಮಾಡುತ್ತಿದ್ದರೆ, ಕೃಷ್ಣಪ್ಪ ಕೂಲಿ ಕಾರ್ಮಿಕನಾಗಿದ್ದ. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಕೃಷ್ಣಪ್ಪ ಪ್ರತಿನಿತ್ಯ ಮದ್ಯಪಾನ ಮಾಡಿ ಪತ್ನಿಯ ಜೊತೆಗೆ ಜಗಳ ಮಾಡುತ್ತಿದ್ದ. ಕೌಟುಂಬಿಕ ಕಲಹದಿಂದ ಇತ್ತೀಚೆಗೆ ದಂಪತಿ ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ಪುತ್ರ ಕೃಷ್ಣಪ್ಪನ ಜತೆಗೆ ನೆಲಸಿದ್ದರೆ, ಪುತ್ರಿ ಶಾರದಾ ಅವರೊಂದಿಗೆ ಇದ್ದಳು ಎಂದು ಪೊಲೀಸರು ಹೇಳಿದರು.

‘ಪತ್ನಿ ಬೇರೊಬ್ಬ ವ್ಯಕ್ತಿಯೊಂದಿಗೆ ಸ್ನೇಹ ಬೆಳೆಸಿಕೊಂಡಿದ್ದರು ಎಂದು ಪತಿ ನಿತ್ಯವೂ ಗಲಾಟೆ ಮಾಡುತ್ತಿದ್ದ. ನಗರದ ದೊಡ್ಡ ತೇಗೂರು ಬಳಿಯ ಪ್ರಗತಿ ನಗರದಲ್ಲಿ ಶಾರದಾ ಶುಕ್ರವಾರ ರಾತ್ರಿ ನಡೆದುಕೊಂಡು ಹೋಗುತ್ತಿದ್ದಾಗ ಚಾಕುವಿನಿಂದ ಹಲ್ಲೆ ನಡೆಸಿ, ಕೊಲೆ ಮಾಡಿದ್ದ’ ಎಂದು ಪೊಲೀಸರು ತಿಳಿಸಿದರು.

‘ಪತ್ನಿಯನ್ನು ಕೊಲ್ಲಲು ಎರಡು ಚಾಕು ತಂದಿದ್ದ ಆರೋಪಿ ಆಕೆಯ ಕುತ್ತಿಗೆ ಸೀಳಿ ಕೊಲೆ ಮಾಡಿದ್ದ. ಕೃತ್ಯ ಎಸಗಿದ ಬಳಿಕ ಪರಾರಿ ಆಗಲು ಯತ್ನಿಸಿದ ಆತನನ್ನು ಸ್ಥಳೀಯರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದರು. ಆರೋಪಿಯನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಶುಕ್ರವಾರ ರಾತ್ರಿ ಎಂಟು ಗಂಟೆಯ ಸುಮಾರಿಗೆ ಸಹಾಯವಾಣಿಗೆ ಕರೆ ಬಂದಿತ್ತು. ಅದನ್ನು ಆಧರಿಸಿ ಸ್ಥಳಕ್ಕೆ ತೆರಳಿದಾಗ ಕೃತ್ಯ ನಡೆದಿದ್ದು ಗೊತ್ತಾಯಿತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಎಲೆಕ್ಟ್ರಾನ್ ಸಿಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಲ್ವರು ದರೋಡೆಕೋರರ ಬಂಧನ

ಇಸ್ಪೀಟ್ ಆಡುತ್ತಿದ್ದ ಕೊಠಡಿಯ ಮೇಲೆ ದಾಳಿ ನಡೆಸಿ, ಕೊಠಡಿಯಲ್ಲಿ ಇದ್ದವರನ್ನು ನಗ್ನಗೊಳಿಸಿ ನಗದು ಹಾಗೂ ಚಿನ್ನಾಭರಣ ದೋಚಿ ಪರಾರಿಯಾಗಿದ್ದ ನಾಲ್ವರು ದರೋಡೆಕೋರರನ್ನು ಬನಶಂಕರಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಯುಗಾದಿ ಹಬ್ಬದ ದಿನ ಘಟನೆ ಸಂಬಂಧ ಬನ್ನೇರುಘಟ್ಟ ಪೊಲೀಸ್ ಠಾಣೆಯ ರೌಡಿಶೀಟರ್ ಪ್ರವೀಣ್, ಸಹಚರರಾದ ಮನೋಹರ್, ಶ್ರೀಕಾಂತ್ ಸತೀಶ್ ಎಂಬುವವರನ್ನು ಬಂಧಿಸಲಾಗಿದೆ. ಇಬ್ಬರು ತಲೆಮರೆಸಿಕೊಂಡಿದ್ದು, ಬಂಧನಕ್ಕೆ ಶೋಧ ಕಾರ್ಯ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಬನಶಂಕರಿ ಎರಡನೇ ಹಂತದ ನಿವಾಸಿ ಟಿ.ರಮೇಶ್ (58) ಅವರು ನೀಡಿದ ದೂರು ಆಧರಿಸಿ ನಾಲ್ವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ರಮೇಶ್ ಅವರು ತಮ್ಮ ಗೆಳೆಯರಾದ ಮುರುಳಿ, ಉಮಾಶಂಕರ್, ತಿಮ್ಮಣ್ಣ, ಕಿರಣ್, ಪುಟ್ಟಸ್ವಾಮಿ, ಬಾಬು ರೆಡ್ಡಿ, ನಾಗರಾಜ್, ಆನಂದ್, ಬೆಟ್ಟೇಗೌಡ, ರವಿಕುಮಾರ್, ಶೇಖರ್ ಹಾಗೂ ಗುಂಡು ಅವರ ಜತೆಗೆ ಬನಶಂಕರಿ ಎರಡನೇ ಹಂತದ 9ನೇ ಮುಖ್ಯರಸ್ತೆಯ ಬಿವಿಕೆ ಕ್ಲಬ್‌ಗೆ ಯುಗಾದಿ ಹಬ್ಬದಂದು ತೆರಳಿ ಎರಡನೇ ಮಹಡಿಯ 201ನೇ ಕೊಠಡಿಯಲ್ಲಿ ಇಸ್ಪೀಟ್ ಆಡುತ್ತಿದ್ದರು. ಅಂದು ಸಂಜೆ ಆರು ಗಂಟೆಗೆ ಸುಮಾರಿಗೆ ಕೊಠಡಿಗೆ ನುಗ್ಗಿದ್ದ ಆರೋಪಿಗಳು, ಕೊಠಡಿಯಲ್ಲಿ ಇದ್ದವರ ಬಟ್ಟೆ ಬಿಚ್ಚಿಸಿ, ಹಲ್ಲೆ ನಡೆಸಿ ₹10 ಲಕ್ಷ ನಗದು ಹಾಗೂ 700 ಗ್ರಾಂ ಚಿನ್ನಾಭರಣವನ್ನು ದೋಚಿ ಪರಾರಿ ಆಗಿದ್ದರು.

‘ಬಂಧಿತರ ಪೈಕಿ ಪ್ರವೀಣ್ ವಿರುದ್ಧ ಈ ಹಿಂದೆಯೇ ಮೂರು ಪ್ರಕರಣಗಳು ದಾಖಲಾಗಿದ್ದವು. ಆರೋಪಿಗಳನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಲಾಗಿದೆ. ಪರಾರಿ ಆಗಿರುವ ಆರೋಪಿಗಳ ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ. ಹೆಚ್ಚಿನ ತನಿಖೆ ಮುಂದುವರೆದಿದೆ’ ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಜಗಲಾಸರ್ ತಿಳಿಸಿದರು.

ಬುದ್ಧಿಮಾತು ಹೇಳಿದ್ದಕ್ಕೆ ಮಾರಕಾಸ್ತ್ರಗಳಿಂದ ಹಲ್ಲೆ

ಅಪರಾಧ ಸುದ್ದಿ

ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಬಸವೇಶ್ವರ ನಗರದ ನಿವಾಸಿ ಚಿರಂಜೀವಿ (32) ಅವರಿಗೆ ಬೈಕ್‌ನಲ್ಲಿ ಬಂದಿದ್ದ ಆರೋಪಿಗಳು ಚಾಕುವಿನಿಂದ ಇರಿದು ಪರಾರಿ ಆಗಿದ್ದಾರೆ.

ಕಮಲಾನಗರದಲ್ಲಿ ಘಟನೆ ನಡೆದಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಳ ಪತ್ತೆಗೆ ಹುಡುಕಾಟ ನಡೆಸುತ್ತಿದ್ದಾರೆ ಎಂದು ಗೊತ್ತಾಗಿದೆ.

‘ಚಿರಂಜೀವಿ ಅವರು ಅತ್ತೆಯ ಮನೆಗೆ ಸ್ನೇಹಿತನ ಜತೆಗೆ ಬೈಕ್‌ನಲ್ಲಿ ತೆರಳಿದ್ದರು. ಇಳಿದು ಮನೆಯತ್ತ ನಡೆದುಕೊಂಡು ಹೋಗುತ್ತಿದ್ದರು. ಆಗ ಕಮಲಾನಗರದ ಕೆರೆ ಅಂಗಳದ ವೀರಭದ್ರೇಶ್ವರ ಚಿತ್ರಮಂದಿರದ ಬಳಿ ಬೈಕ್‌ನಲ್ಲಿ ಬಂದಿದ್ದ ಅಪರಿಚಿತರು, ಇವರಿಗೆ ಡಿಕ್ಕಿ ಹೊಡೆಯುವಂತೆ ವೇಗವಾಗಿ ಹೋಗಿದ್ದರು. ಇದನ್ನು ಕಂಡ ಚಿರಂಜೀವಿ ಅವರು ನಿಧಾನವಾಗಿ ನೋಡಿಕೊಂಡು ಬೈಕ್ ಚಾಲನೆ ಮಾಡುವಂತೆ ಹೇಳಿದ್ದರು. ಇಷ್ಟಕ್ಕೇ ಕೋಪಗೊಂಡ ಆರೋಪಿಗಳು, ‘ನಮ್ಮೆದುರೇ ಎಗರಾಡುತ್ತೀಯಾ’ ಎಂದು ಅವರ ಮೇಲೆ ಮಾರಕಾಸ್ತ್ರದಿಂದ ಹಲ್ಲೆ ನಡೆಸಿದ್ದರು’ ಎಂದು ಗೊತ್ತಾಗಿದೆ.

‘ಹಲ್ಲೆಯಿಂದ ಗಾಯಗೊಂಡಿದ್ದ ಚಿರಂಜೀವಿ ಅವರು ಕುಸಿದು ಬಿದ್ದಿದ್ದರು. ಚಿರಂಜೀವಿ ಅವರ ಸಹೋದರಿಗೆ ಸ್ಥಳೀಯರು ಮಾಹಿತಿ ನೀಡಿದ್ದರು.

ಚಿಕಿತ್ಸೆ ಪಡೆದು ಚೇತರಿಸಿಕೊಂಡು ಚಿರಂಜೀವಿ ಅವರು ಬಸವೇಶ್ವರ ಠಾಣೆಗೆ ಹಾಜರಾಗಿ ದೂರು ನೀಡಿದ್ದರು. ದೂರು ಆಧರಿಸಿ ಪ್ರಕರಣದ ತನಿಖೆ ನಡೆಸಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

ಬೆಲೆ ಏರಿಕೆ ವಿರುದ್ಧ ಎಎಪಿ ಆಕ್ರೋಶ, ಜನ ಜಾಗೃತಿ ಮೂಡಿಸಲು ಸಂಕಲ್ಪ

ಕೇಂದ್ರ, ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆಟ್ರೋಲ್– ಡೀಸೆಲ್ ಬೆಲೆ ಏರಿಕೆ, ವಿದ್ಯುತ್, ಮೆಟ್ರೊ ಪ್ರಯಾಣ ದರ, ಟೋಲ್, ಆಸ್ತಿ ತೆರಿಗೆಯನ್ನು ಏರಿಸಿರುವ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಪಕ್ಷದ ರಾಜ್ಯ ಕಾರ್ಯಾಧ್ಯಕ್ಷ ಸೀತಾರಾಂ ಗುಂಡಪ್ಪ, ‘ಅಗತ್ಯ ವಸ್ತುಗಳ ಬೆಲೆ ಏರಿಸಿರುವ ಮೂಲಕ ಜನ ಸಾಮಾನ್ಯನಿಗೆ ಬರೆ ಎಳೆದಿದೆ. ಇದು ಹಗಲು ದರೋಡೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಅಗತ್ಯ ವಸ್ತುಗಳ ಬೆಲೆ ಏರಿಸಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕ್ರಮ ಖಂಡಿಸಿ ಎಎಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

‘ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ಸರ್ಕಾರಿ ಖಜಾನೆಯನ್ನು ಭರ್ತಿ ಮಾಡಿಕೊಳ್ಳುತ್ತಿವೆ. ಕಾಮಗಾರಿಗಳ ನೆಪದಲ್ಲಿ ಭ್ರಷ್ಟಾಚಾರ ಎಸಗುತ್ತಿವೆ. ಇದಕ್ಕಾಗಿ ಪ್ರಜೆಗಳ ಮೇಲೆ ತುಘಲಕ್ ಮಾದರಿಯ ತೆರಿಗೆಗಳನ್ನು ಹೇರುತ್ತಿವೆ. ಇದು ದೇಶಕ್ಕೆ ಮಾರಕವಾಗಿದೆ’ ಎಂದರು.

‘ಸರ್ಕಾರಗಳ ಜನವಿರೋಧಿ ನೀತಿಗಳ ಕುರಿತು ಮತದಾರರ ಮನೆ ಮನೆಗೆ ತೆರಳಿ ಜಾಗೃತಿ ಮೂಡಿಸುತ್ತೇವೆ. ಈ ಮೂಲಕ ಸರ್ಕಾರಗಳಿಗೆ ತಕ್ಕ ಪಾಠ ಕಲಿಸುವ ಕಾಲ ಹತ್ತಿರವಾಗುತ್ತಿದೆ’ ಎಂದು ಪಕ್ಷದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಸತೀಶ್ ಕುಮಾರ್ ಹೇಳಿದರು.

ರಾಜ್ಯ ಖಜಾಂಚಿ ಪ್ರಕಾಶ್ ನೆಡುಂಗಡಿ, ಉಪಾಧ್ಯಕ್ಷ ರುದ್ರಯ್ಯ ನವಲಿಮಠ, ಬೆಂಗಳೂರು ನಗರ ಪ್ರಧಾನ ಕಾರ್ಯದರ್ಶಿ ಜಗದೀಶ್ ಚಂದ್ರ, ಅಶೋಕ್ ಮೃತ್ಯುಂಜಯ, ಶಶಿಧರ್ ಆರಾಧ್ಯ, ಅನಿಲ್ ನಾಚಪ್ಪ ಸೇರಿದಂತೆ ವಿವಿಧ ನಾಯಕರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಲೈಂಗಿಕ ಕಿರುಕುಳ: ಆರೋಪಿಗೆ ಥಳಿತ

ಕಾರಟಗಿ: ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ವ್ಯಕ್ತಿಗೆ ಸಾರ್ವಜನಿಕರೇ ಏಟು ನೀಡಿ ಶನಿವಾರ ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ.



ಮಹಮ್ಮದ್ ಕುಟ್ಟಿ

ಬೇಕರಿಯಲ್ಲಿ ಕೆಲಸಕ್ಕಿದ್ದ ಕೇರಳ ಮೂಲದ ಮಹಮ್ಮದ್ ಕುಟ್ಟಿ (48) 6 ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಿ. ಬಾಲಕಿ ನೀರಿನ ಬಾಟಲಿ ಖರೀದಿಗೆ ಬೇಕರಿಗೆ ತೆರಳಿದ್ದಳು. ಆರೋಪಿ ಚಾಕೊಲೇಟ್ ಆಮಿಷ ಒಡ್ಡಿ ಲೈಂಗಿಕ ಕಿರುಕುಳ ನೀಡುತ್ತಿದ್ದಾಗ, ಬಾಲಕಿ ಚೀರಿದ ಧ್ವನಿ ಕೇಳಿ ಜನರು ನೆರೆದಾಗ ಘಟನೆ ಬೆಳಕಿಗೆ ಬಂದಿದೆ ಎಂದು ಮೂಲಗಳು ತಿಳಿಸಿವೆ.

ಬಾಲಕಿಯ ತಂದೆ ನೀಡಿದ ದೂರಿನನ್ವಯ ಪೋಕ್ಸೊ ಪ್ರಕರಣ ದಾಖಲಾಗಿದೆ. ಆರೋಪಿಯನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

‘ಅರ್ಚಕರಿಗೆ ದ್ರೋಹ ಎಸಗಿದ ಬಿಜೆಪಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿಯವರು ಧರ್ಮದ ಹೆಸರಿನಲ್ಲಿ ರಾಜಕೀಯ ಮಾಡುತ್ತಿದ್ದರೂ ಧಾರ್ಮಿಕ ದತ್ತಿ ಇಲಾಖೆಯ ದೇವಸ್ಥಾನಗಳ ಅರ್ಚಕ ಸಮುದಾಯಕ್ಕೆ ದ್ರೋಹ ಬಗೆಯುತ್ತಿದ್ದಾರೆ’ ಎಂದು ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ, ಉಪಾಧಿವಂತರ ಒಕ್ಕೂಟ ಆಕ್ರೋಶ ವ್ಯಕ್ತಪಡಿಸಿದೆ.

‘ಧಾರ್ಮಿಕ ದತ್ತಿ ಇಲಾಖೆಯ ದೇಗುಲಗಳು ಹಾಗೂ ಅರ್ಚಕರ ಕಲ್ಯಾಣ, ಅಭಿವೃದ್ಧಿ ಮಾಡದಿರುವ ಬಿಜೆಪಿ, ಕಾಂಗ್ರೆಸ್ ಸರ್ಕಾರವು ಅರ್ಚಕರ ಕಲ್ಯಾಣಕ್ಕಾಗಿಯೇ ರೂಪಿಸಿರುವ ಮಸೂದೆಗೆ ವಿರೋಧ ವ್ಯಕ್ತಪಡಿಸಿದೆ. ಇದರಿಂದ ಆ ಮಸೂದೆಗೆ ರಾಜ್ಯಪಾಲರು ಒಪ್ಪಿಗೆ ನೀಡಿಲ್ಲ’ ಎಂದು ಒಕ್ಕೂಟ ದೂರಿದೆ.

‘ಅರ್ಚಕರ ಅನುಕೂಲಕ್ಕಾಗಿ ಕಾನೂನು ತಿದ್ದುಪಡಿ ಮಾಡಿರುವ ಕಡತಕ್ಕೆ ಸಹಿ ಹಾಕಬೇಕು ಎಂದು ರಾಜ್ಯಪಾಲರನ್ನು ಭೇಟಿ ಮಾಡಿ ಮನವಿ ಮಾಡಿಕೊಳ್ಳಲಾಗುತ್ತದೆ’ ಎಂದು ಒಕ್ಕೂಟದ ಗೌರವ ಸಲಹೆಗಾರ ಪ್ರೊ.ಕೆ.ಇ. ರಾಧಾಕೃಷ್ಣ, ಗೌರವ ಉಪಾಧ್ಯಕ್ಷರಾದ ಎಸ್.ಆರ್. ಶೇಷಾದ್ರಿ, ಭಟ್ಟರ್, ಮುಖ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್ ತಿಳಿಸಿದ್ದಾರೆ.

ಕಾಂಗ್ರೆಸ್ ಮುಖಂಡ ಆಂಧ್ರ ಪೊಲೀಸರ ವಶಕ್ಕೆ

ಪ್ರಜಾವಾಣಿ ವಾರ್ತೆ

ಕೆಜಿಎಫ್: ಚೆನ್ನೈನಿಂದ ಚಿನ್ನ ಸಾಗಿಸುತ್ತಿದ್ದ ವ್ಯಾಪಾರಿಗಳನ್ನು ಬೆದರಿಸಿ ಚಿನ್ನ ಅಪಹರಣ ಮಾಡಿದ ಆರೋಪದಡಿ ಹಿರಿಯ ಕಾಂಗ್ರೆಸ್ ಮುಖಂಡ ಹಾಗೂ ನಗರಸಭೆ ಸದಸ್ಯ ಜಯಪಾಲ್ ಎಂಬುವರನ್ನು ಆಂಧ್ರಪ್ರದೇಶದ ವಿ.ಕೋಟೆ ಪೊಲೀಸರು ಶುಕ್ರವಾರ ರಾತ್ರಿ ವಶಕ್ಕೆ ಪಡೆದಿದ್ದಾರೆ.



ಜಯಪಾಲ್

ನಗರದ ಮಿಲನ್ ಕಲೆಕ್ಷನ್ ಸೆಂಟರ್ ವ್ಯಾಪಾರಿಯಾದ ದೀಪಕ್ ಜೈನ್ ಪುತ್ರ ಚೇತನ್, ಚೆನ್ನೈನಿಂದ ಗುರುವಾರ ಸುಮಾರು ಮೂರೂವರೆ ಕೆ.ಜಿ ಚಿನ್ನದ ಆಭರಣಗಳನ್ನು ಸಾಗಿಸುತ್ತಿದ್ದರು. ಚಿನ್ನದ ಸಾಗಾಣಿಕೆ ಕುರಿತು ಕಾರು ಚಾಲಕ ಮುಕ್ರಂ ಪಾಷ, ಜಯಪಾಲ್ ಸೇರಿದಂತೆ ಇತರರಿಗೆ ಮಾಹಿತಿ ನೀಡಿದ್ದಾರೆ. ವಿ.ಕೋಟೆಯಿಂದ ತಮಿಳುನಾಡಿನ ಗಡಿಗೆ ಹೋಗುವ ನಾಯಕನೇರಿ ಘಾಟ್ ಬಳಿ ರಾತ್ರಿ 9.30 ಸಮಯದಲ್ಲಿ ಕಾರು ಅಡ್ಡಗಟ್ಟಿದ ನಾಲ್ವರು ಮುಸುಕುಧಾರಿಗಳು ಕಾರಿನಲ್ಲಿದ್ದವರಿಗೆ ಮಾರಕಾಸ್ತ್ರ ತೋರಿಸಿ, ಅವರಿಂದ ಚಿನ್ನ ಮತ್ತು ಆಭರಣವನ್ನು ದೋಚಿದ್ದಾರೆ.

ಈ ಸಂಬಂಧ ಚಿನ್ನ ಕಳೆದುಕೊಂಡ ಅಂಗಡಿ ಮಾಲೀಕರು ಆಂಧ್ರಪ್ರದೇಶದ ವಿ.ಕೋಟೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಚಿತ್ತೂರು ಎಸ್.ಪಿ ಮಣಿಕಂಠ ದುಷ್ಕರ್ಮಿಗಳ ಪತ್ತೆಗೆ ವಿಶೇಷ ತಂಡ ರಚಿಸಿ ಕಾರ್ಯಾಚರಣೆ ನಡೆಸಿದ್ದರು. ದರೋಡೆ ಪ್ರಕರಣದಲ್ಲಿ ಕೆಜಿಎಫ್ ನಗರದ ನಾಲ್ವರು ಮತ್ತು ತಮಿಳುನಾಡಿನ ಪೇರ್ನಾಂಪೇಟ್ ಪಟ್ಟಣದ ಇಬ್ಬರು ಸೇರಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಬೆಂಕಿಗೆ ಆಹುತಿಯಾದ ವಾಹನಗಳು

3 ವಾಹನಗಳು ಬೆಂಕಿಗೆ ಆಹುತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಟೋನ್ಮೆಂಟ್ ಬಳಿ ಶನಿವಾರ ಬೆಳಿಗ್ಗೆ 11 ಗಂಟೆ ಸುಮಾರಿಗೆ ಸಂಭವಿಸಿದ ಅಗ್ನಿ ಅವಘಡದಲ್ಲಿ ರಸ್ತೆ ಬದಿಯಲ್ಲಿ ನಿಲುಗಡೆ ಮಾಡಿದ್ದ ಮೂರು ವಾಹನಗಳು ಸುಟ್ಟುಹೋಗಿವೆ.

ಒಂದು ಸರಕು ಸಾಗಣೆ ಹಾಗೂ ಎರಡು ಟೋಯಿಂಗ್ ವಾಹನಗಳು ಸುಟ್ಟುಕರಕಲಾಗಿವೆ. ಕಸಕ್ಕೆ ತಗುಲಿದ ಬೆಂಕಿ ವಾಹನಗಳಿಗೆ ವ್ಯಾಪಿಸಿರುವ ಶಂಕೆ ವ್ಯಕ್ತವಾಗಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ಅಗ್ನಿಶಾಮಕ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ತೆರಳಿ ಬೆಂಕಿ ನಂದಿಸಲಾಯಿತು. ಕಾರ್ಯಾಚರಣೆಗೆ ಎರಡು ವಾಹನ ಬಳಸಿಕೊಳ್ಳಲಾಯಿತು ಎಂದು ಅಗ್ನಿಶಾಮಕ ಇಲಾಖೆ ಅಧಿಕಾರಿಗಳು ತಿಳಿಸಿದರು.

ಘಟನಾ ಸ್ಥಳಕ್ಕೆ ಭಾರತಿನಗರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕುಶಾಲನಗರದಲ್ಲಿ ವಿನಯ್ ಸೋಮಯ್ಯ ಮೃತದೇಹವಿದ್ದ ಶವಾಗಾರದ ಬಳಿ ಬಿಜೆಪಿ ಕಾರ್ಯಕರ್ತರಿಂದ ಪ್ರತಿಭಟನೆ

ವಿಜಯೇಂದ್ರ, ಬಿಜೆಪಿ ಮುಖಂಡರು ವಶಕ್ಕೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣದ ಎಫ್‌ಐಆರ್‌ನಲ್ಲಿ ಶಾಸಕರಾದ ಎ.ಎಸ್. ಪೊನ್ನಣ್ಣ ಹಾಗೂ ಡಾ. ಮಂತರ್‌ಗೌಡ ಹೆಸರು ಸೇರ್ಪಡೆಗೆ ಒತ್ತಾಯಿಸಿ ಹಾಗೂ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಆಗ್ರಹಿಸಿ ಶನಿವಾರ ಬಿಜೆಪಿ ಕಾರ್ಯಕರ್ತರು ಕುಶಾಲನಗರದಲ್ಲಿ ಪ್ರತಿಭಟನೆ ನಡೆಸಿದರು.

ಈ ವೇಳೆ ಡಿವೈಎಸ್‌ಪಿ ಕಚೇರಿಯತ್ತ ನುಗ್ಗಲು ಮುಂದಾದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ 71 ಮಂದಿ ಮುಖಂಡರು ಹಾಗೂ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದರು.

ಆರೋಗ್ಯ ಕೇಂದ್ರದ ಶವಾಗಾರದ ಬಳಿ ಸೇರಿದ್ದ ಕೊಡಗು ಹಾಗೂ ಮೈಸೂರು ಜಿಲ್ಲೆಗಳ ಬಿಜೆಪಿ ಮುಖಂಡರು, 'ಪೊನ್ನಣ್ಣ ಹಾಗೂ ಮಂತರ್‌ಗೌಡ ಹೆಸರನ್ನು ಎಫ್‌ಐಆರ್‌ನಲ್ಲಿ ಸೇರಿಸುವವರೆಗೂ ಮೃತದೇಹ ತೆಗೆಯಲು ಬಿಡುವುದಿಲ್ಲ' ಎಂದು ಪಟ್ಟು ಹಿಡಿದು ಪ್ರತಿಭಟಿಸಿದರು.

ಈ ವೇಳೆ ಪೊಲೀಸರು–ಕಾರ್ಯಕರ್ತರ ನಡುವೆ ವಾಗ್ವಾದ ನಡೆಯಿತು. ವಿಜಯೇಂದ್ರ ಒಂದು ಗಂಟೆಯ ಕಾಲಾವಕಾಶವನ್ನೂ ನೀಡಿದ್ದರು. ಬಳಿಕ, ಆರೋಗ್ಯ ಕೇಂದ್ರದಿಂದ ಡಿವೈಎಸ್‌ಪಿ ಕಚೇರಿಯತ್ತ ತೆರಳುತ್ತಿದ್ದ ಮುಖಂಡರು ಹಾಗೂ ಕಾರ್ಯಕರ್ತರನ್ನು ಪೊಲೀಸರು ಮೂರು ವಾಹನಗಳಿಗೆ ಬಲವಂತವಾಗಿ ಹತ್ತಿಸಿಕೊಂಡು ರೈತ ಸಹಕಾರ ಭವನಕ್ಕೆ ಕರೆದೊಯ್ದರು. ನಂತರ ವಿನಯ್ ಸೋಮಯ್ಯ ಮೃತದೇಹವನ್ನು ಬಿಗಿ ಭದ್ರತೆಯಲ್ಲಿ ಸ್ವಗ್ರಾಮ ಸೋಮವಾರಪೇಟೆ ತಾಲ್ಲೂಕಿನ ಗೋಣಿಮರೂರಿಗೆ ಸಾಗಿಸಲಾಯಿತು.

ಎಷ್ಟು ಸರಿ?: 'ಸಾರ್ವಜನಿಕ ಶೌಚಾಲಯದ ಸಮಸ್ಯೆ ಸರಿಪಡಿಸುವಂತೆ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಾಕಿದರೆ, ಅವರ ವಿರುದ್ಧ ಪ್ರಕರಣ ದಾಖಲಿಸುವುದು ಎಷ್ಟು ಸರಿ?' ಎಂದು ವಿಜಯೇಂದ್ರ ಕೇಳಿದರು.

'ಈ ಸರ್ಕಾರದಲ್ಲಿ ಪೊಲೀಸ್ ಠಾಣೆಗಳು ಕಾಂಗ್ರೆಸ್ ಕಚೇರಿಗಳಂತಾಗಿವೆ. ವಿನಯ್ ಆತ್ಮಹತ್ಯೆಗೆ ಇಬ್ಬರು ಶಾಸಕರ ಒತ್ತಡವೇ ಕಾರಣ' ಎಂದು ಆರೋಪಿಸಿದರು.

'ನಾವು ಸಾವಿನ ಮನೆಯಲ್ಲಿ ರಾಜಕೀಯ ಮಾಡುತ್ತಿಲ್ಲ. ಶಾಸಕ ಎ.ಎಸ್. ಪೊನ್ನಣ್ಣ ಪ್ರಾಮಾಣಿಕರಾಗಿದ್ದರೆ ತನಿಖೆ ಎದುರಿಸಬೇಕಿತ್ತು' ಎಂದರು.



ಕುಶಾಲನಗರದಲ್ಲಿ ಶನಿವಾರ ಪ್ರತಿಭಟಿಸುತ್ತಿದ್ದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಪೊಲೀಸರು ವಶಕ್ಕೆ ಪಡೆದರು

'ಬೆಂಕಿ ಹಾಕೋ ಕೆಲಸ ಮಾಡಿದರೆ ಕ್ರಮ'



ಬೆಂಗಳೂರು: ಬಿಜೆಪಿ ಬೆಂಕಿ ಹಾಕೋ ಕೆಲಸ ಮಾಡಿದರೆ ಕಾನೂನು ಪ್ರಕಾರ ಏನು ಮಾಡಬೇಕು ಎನ್ನುವುದು ಪೊಲೀಸರಿಗೆ ಗೊತ್ತಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ದೇಶದ ಕಾನೂನು ಎಲ್ಲರಿಗೂ ಒಂದೇ ಇದೆ. ಕಾನೂನು ಪಾಲನೆಗಾಗಿಯೇ ಪೊಲೀಸರು ಇದ್ದಾರೆ. ಗೃಹ ಸಚಿವರನ್ನು ಕೇಳಿ ಎಫ್‌ಐಆರ್ ಮಾಡುವುದಿಲ್ಲ. ಶಾಸಕರು, ಸಚಿವರು ಯಾರೇ ಇದ್ದರೂ ಕಾನೂನು ಪ್ರಕಾರವೇ ಕ್ರಮಕೈಗೊಳ್ಳುತ್ತಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಹರಿಹಾಯ್ದರು.

'ಸಾವಿನ ಘಟನೆಗಳನ್ನು ಇಟ್ಟುಕೊಂಡು ರಾಜಕೀಯಕ್ಕಾಗಿ ಅವರು ಹೋರಾಟ ನಡೆಸುವುದು ಗೊತ್ತಿದೆ. ಇಂತಹ ನಡೆಗೆ ರಾಜಕೀಯಕ್ಕಾಗಿಯೇ ಉತ್ತರ ಕೊಡುತ್ತೇವೆ' ಎಂದರು.

ಯಾರು ವಿನಯ್ ಸೋಮಯ್ಯ?



ಮಡಿಕೇರಿ: ಬೆಂಗಳೂರಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ವಿನಯ್ ಸೋಮಯ್ಯ ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಗೋಣಿಮರೂರು ಗ್ರಾಮದವರು. ಅವರು ಕೊಡಗು ಜಿಲ್ಲಾ ಬಿಜೆಪಿ ಘಟಕದಲ್ಲಿ ಯಾವುದೇ ಜವಾಬ್ದಾರಿ ಹೊಂದಿರಲಿಲ್ಲ. ಆದರೆ, ಅವರ ತಂದೆ ಸಾಕಷ್ಟು ಹಿಂದೆ ಬಿಜೆಪಿಯ ಹೋಬಳಿ ಘಟಕದ ಅಧ್ಯಕ್ಷರಾಗಿದ್ದರು. ಅವರ ನಾಲ್ವರು ಪುತ್ರರಲ್ಲಿ ವಿನಯ್ ಒಬ್ಬರು.

ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ 15 ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಪತ್ನಿಯೊಂದಿಗೆ ವಾಸವಿದ್ದರು. ಹಬ್ಬ, ಜಾತ್ರೆ ಮೊದಲಾದ ಪ್ರಮುಖ ಸಂದರ್ಭದಲ್ಲಿ ಮಾತ್ರವೇ ಊರಿಗೆ ಬಂದು ಹೋಗುತ್ತಿದ್ದರು. ಸಾಮಾಜಿಕ ಮಾಧ್ಯಮದಲ್ಲಿ ಸಕ್ರಿಯರಾಗಿದ್ದರು.

ಅವರ ವಿರುದ್ಧ ಫೆಬ್ರುವರಿಯಲ್ಲಿ ಪ್ರಕರಣ ದಾಖಲಾಗುವ ಕೆಲವೇ ದಿನಗಳಿಗೂ ಮುಂಚೆ 'ಕೊಡಗಿನ ಸಮಸ್ಯೆಗಳು ಮತ್ತು ಸಲಹೆ ಸೂಚನೆಗಳು' ಎಂಬ ವಾಟ್ಸ್‌ಆ್ಯಪ್ ಗ್ರೂಪ್ ಅಡ್ಮಿನ್ ಆಗಿದ್ದರು. ಈ ಗ್ರೂಪ್‌ನಲ್ಲಿ ಕೊಡಗಿನ ಸಮಸ್ಯೆಗಳು ಮತ್ತು ಕುಂದುಕೊರತೆಗಳ ಬಗ್ಗೆ ಚರ್ಚೆಯಾಗುತ್ತಿತ್ತು.

'ಸಾವಾದಾಗ ರಣಹದ್ದುಗಳಂತೆ ರಾಜಕೀಯ ಮಾಡುವ ಬಿಜೆಪಿ'

ಮಡಿಕೇರಿ: 'ಬಿಜೆಪಿಯವರು ಸಾವುಗಳಾದಾಗ ರಣಹದ್ದುಗಳಂತೆ ಹೋಗಿ ರಾಜಕಾರಣ ಮಾಡುತ್ತಾರೆ' ಎಂದು ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಆರೋಪಿಸಿದರು.

ಇಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ವಿನಯ್ ಸೋಮಯ್ಯ ಆತ್ಮಹತ್ಯೆಗೆ ಅವರು ಗುರುತಿಸಿಕೊಂಡಿದ್ದ ಸಂಘಟನೆ ಕಾರಣವೇ ಹೊರತು ನಾವಲ್ಲ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಈಗ ಬಂದು ಅವರ ಕುಟುಂಬದವರಿಗೆ ಧನಸಹಾಯ ಮಾಡಿದಂತೆ ವಾರದ ಹಿಂದೆಯೇ ಮಾಡಿದ್ದರೆ ಬಹುಶಃ ವಿನಯ್ ಬದುಕುತ್ತಿದ್ದರು' ಎಂದರು.



ಎ.ಎಸ್.ಪೊನ್ನಣ್ಣ

'ಬಿಜೆಪಿಯವರು ಶುಕ್ರವಾರದಿಂದ ನಡೆದುಕೊಂಡಿರುವುದನ್ನು ನಾಗರಿಕ ಸಮಾಜ ಒಪ್ಪುವುದಿಲ್ಲ. ಬೆಂಗಳೂರಿನಲ್ಲಿ ಪ್ರತಿಭಟನೆ ಬಳಿಕ ಎಲ್ಲರೂ ಅವರವರ ಮನೆಗೆ ಹೋದರು. ವಿನಯ್ ಮೃತದೇಹದೊಂದಿಗೆ ಗೆಳೆಯರೊಬ್ಬರು ಮಾತ್ರ ಕುಶಾಲನಗರಕ್ಕೆ ಬಂದರು. ಇಲ್ಲೂ ಶವ ತೆಗೆಯಲು ಅಡ್ಡಿಪಡಿಸಿದ ಬಿಜೆಪಿ ನಾಯಕರು ಪ್ರತಿಭಟನೆಯ ನಾಟಕವಾಡಿದರು. ಅಂತ್ಯಕ್ರಿಯೆ ಮುಗಿಯುವವರೆಗೂ ಇರದೇ ಹೋದರು' ಎಂದು ಟೀಕಿಸಿದರು.

'ತೆನ್ನಿರಾ ಮೈನಾ ದೂರು ನೀಡುವ ಮುನ್ನ ನನ್ನೊಂದಿಗೆ ಚರ್ಚಿಸಿಲ್ಲ. ನಾನು ಪೊಲೀಸ್ ಸಿಬ್ಬಂದಿಗೆ ಕರೆ ಮಾಡಿಲ್ಲ. ನ್ಯಾಯಾಲಯದ ತಡೆಯಾಜ್ಞೆ ಮೀರಿ ವಿಚಾರಣೆಗೆ ಕರೆದವರು ಯಾರು ಎಂಬುದನ್ನು ಬಹಿರಂಗಪಡಿಸಲಿ. ನಾನು ಒತ್ತಡ ಹೇರಿದ ಸಾಕ್ಷ್ಯಾಧಾರ ಇದ್ದರೆ ಕೊಡಲಿ' ಎಂದು ಸವಾಲೆಸೆದರು.

'ಕೊಲೆಗಡುಕರು ಎಂದು ನನ್ನ ಚಿತ್ರ ಹಾಕಿ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಹಾಕುತ್ತಿದ್ದಾರೆ. ಇದರಿಂದ ನನಗೆ ನೋವಾಗುವುದಿಲ್ಲವೇ, ನಾನು ಸುಮ್ಮನಿರಬೇಕೇ? ವಿನಯ್ ಸಾವು ಆಗಿದ್ದು ಯಾವಾಗ, ಅವರ ಮೊಬೈಲ್ ಫೋನ್ ಯಾರ ಬಳಿ ಇತ್ತು, ಅವರ ಕುಟುಂಬದವರಿಗೆ ವಿಷಯ ಯಾವಾಗ ಗೊತ್ತಾಯಿತು ಎಂಬ ಪ್ರಶ್ನೆಗಳಿಗೆ ತನಿಖೆಯಿಂದ ಉತ್ತರ ಸಿಗಬೇಕಿದೆ' ಎಂದರು.

ಶಾಸಕ ಡಾ.ಮಂತರ್‌ಗೌಡ ಮಾತನಾಡಿ, 'ಕುಶಾಲನಗರ ಆಸ್ಪತ್ರೆಗೆ ಸಂಬಂಧಿಸಿದಂತೆ ಫೇಸ್‌ಬುಕ್‌ನಲ್ಲಿ ನನ್ನನ್ನು ಕಳೆದ ವರ್ಷ ನವೆಂಬರ್‌ನಲ್ಲಿ ವಿನಯ್ ಟ್ಯಾಗ್ ಮಾಡಿದ್ದರು. ಆಗ ಕರೆ ಮಾಡಿ ಸಮಸ್ಯೆಗಳಿದ್ದರೆ ನೇರವಾಗಿ ನನ್ನ ಗಮನಕ್ಕೆ ತನ್ನಿ ಎಂದಿದ್ದೆ. ನಂತರ ಅವರನ್ನು ಸಂಪರ್ಕಿಸಿಲ್ಲ' ಎಂದರು.

ಸುದ್ದಿ 2 ನಿಮಿಷ

ತೆನ್ನಿರಾ ಮೈನಾಗೆ ನೋಟಿಸ್ ಜಾರಿಗೆ ಪೊಲೀಸರಿಂದ ಸಿದ್ಧತೆ

ಬೆಂಗಳೂರು: ಕೊಡಗು ಜಿಲ್ಲೆಯ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣದ ತನಿಖೆ ಆರಂಭಿಸಿರುವ ನಗರದ ಹೆಣ್ಣೂರು ಠಾಣೆ ಪೊಲೀಸರು, ಪ್ರಕರಣದ ಕುರಿತು ಶನಿವಾರ ಪ್ರಾಥಮಿಕ ಮಾಹಿತಿ ಕಲೆಹಾಕಿದರು.

ವಿನಯ್ ಅವರ ಮರಣ ಪತ್ರ ಆಧರಿಸಿ ಕೊಡಗು ಜಿಲ್ಲಾ ಕಾಂಗ್ರೆಸ್ ವಕ್ತಾರ ತೆನ್ನಿರಾ ಮೈನಾ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಆರೋಪಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಲು ಪೊಲೀಸರು ಸಿದ್ಧತೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ವಿನಯ್ ಅವರ ಮೊಬೈಲ್, ಲ್ಯಾಪ್‌ಟಾಪ್ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದ ಮರಣ ಪತ್ರವನ್ನು ಜಪ್ತಿ ಮಾಡಿಕೊಂಡು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿದೆ. ವಿನಯ್ ಅವರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೂ ಮುನ್ನ ಯಾರಿಗೆಲ್ಲಾ ಕರೆ ಮಾಡಿದ್ದರು? ಯಾರೊಂದಿಗೆ ಎಷ್ಟು ಸಮಯ ಮಾತುಕತೆ ನಡೆಸಿದ್ದರು ಎಂಬುದನ್ನು ಪರಿಶೀಲನೆ ನಡೆಸಲಾಗುತ್ತಿದೆ. ಮೊಬೈಲ್ ಕರೆಗಳ ವಿವರ ಪಡೆದುಕೊಳ್ಳಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ವಿರಾಜಪೇಟೆ ಕ್ಷೇತ್ರದ ಶಾಸಕರೂ ಆಗಿರುವ ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಹಾಗೂ ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂತರ್‌ಗೌಡ ಅವರ ಹೆಸರನ್ನು ಎಫ್‌ಐಆರ್‌ನಲ್ಲಿ ಸೇರಿಸಬೇಕು ಎಂದು ವಿನಯ್ ಸಹೋದರ ಜೀವನ್ ಅವರು ಎರಡನೇ ಬಾರಿಗೆ ದೂರು ನೀಡಿದ್ದಾರೆ. ಅವರ ದೂರನ್ನು ಪರಿಶೀಲಿಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.



ಪೊನ್ನಣ್ಣ, ಮಂತರ್ ಹೆಸರು ಸೇರಿಸಲಾಗದು: ಸಿದ್ದರಾಮಯ್ಯ

ಬೆಂಗಳೂರು: ಕಾಂಗ್ರೆಸ್ ಶಾಸಕರಾದ ಪೊನ್ನಣ್ಣ, ಮಂತರ್ ಗೌಡ ಅವರ ಹೆಸರನ್ನು ವಿನಯ್ ಆತ್ಮಹತ್ಯೆ ಪ್ರಕರಣದ ಎಫ್‌ಐಆರ್‌ನಲ್ಲಿ ಸೇರಿಸಬೇಕು ಎನ್ನುವ ಬಿಜೆಪಿ ನಾಯಕರ ಬೇಡಿಕೆ ಒಪ್ಪಲು ಆಗದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣದಲ್ಲಿ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ತನಿಖೆ ಆರಂಭವಾಗಿದ್ದು, ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ತನಿಖೆ ನಡೆಯುವಾಗ ಪ್ರಕರಣ ಕುರಿತು ಮಾತನಾಡುವುದು ಸರಿಯಲ್ಲ. ಬಿಜೆಪಿ ನಾಯಕರು ಹತಾಶರಾಗಿ ಮಾತನಾಡುತ್ತಿದ್ದಾರೆ. ಸಾವಿನಲ್ಲೂ ರಾಜಕೀಯ ಮಾಡುವುದು ಅವರಿಗೆ ಕರಗತವಾಗಿದೆ ಎಂದು ಸಿದ್ದರಾಮಯ್ಯ ದೂರಿದರು.

'ಕೈ' ನಾಯಕರಾಗಲು ಪೊಲೀಸರು ಯೋಗ್ಯ'

ಹುಬ್ಬಳ್ಳಿ: 'ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ವಿರುದ್ಧ ದಾಖಲಾದ ಪ್ರಕರಣದ ಕುರಿತು ಕೋರ್ಟ್ ತಡೆಯಾಜ್ಞೆ ತಂದರೂ ಅವರ ವಿರುದ್ಧ ಪೊಲೀಸರು ರೌಡಿಪಟ್ಟಿ ತೆರೆದಿದ್ದಾರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

'ಪೊಲಿಟಿಕಲ್ ಬಾಸ್ ಹೇಳಿದಂತೆ ಪೊಲೀಸರು ಕೆಲಸ ಮಾಡುತ್ತಾರೆ. ಅವರು ಸರ್ಕಾರದ ಉದ್ಯೋಗಿಯೋ ಅಥವಾ ಕಾಂಗ್ರೆಸ್ ಪಕ್ಷದ ಗುಲಾಮರೋ? ಕಾಂಗ್ರೆಸ್ ನಾಯಕರಾಗಲು ಯೋಗ್ಯ-ರಾಗಿದ್ದಾರೆ. ಕೊಡಗಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮತ್ತು ಬೆಂಗಳೂರಿನ ಡಿವೈಎಸ್‌ಪಿ ದೇವರಾಜ ಅವರನ್ನು ತಕ್ಷಣವೇ ಅಮಾನತು ಮಾಡಬೇಕು. ಈ ಕುರಿತು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲು ಕಾರ್ಯಕರ್ತರಿಗೆ ಹೇಳಿದ್ದೇನೆ' ಎಂದು ಅವರು ಶನಿವಾರ ಸುದ್ದಿಗಾರರಿಗೆ ಅವರು ತಿಳಿಸಿದರು.

ಡಿಕೆಶಿ–ಪರಮೇಶ್ವರ ಪಿಸುಮಾತು

ಪ್ರಜಾವಾಣಿ ವಾರ್ತೆ


ಬೆಂಗಳೂರು: ವಿಧಾನಸೌಧದ ಆವರಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಬಾಬೂ ಜಗಜೀವನ್ ರಾಮ್ ಜಯಂತಿ ಕಾರ್ಯಕ್ರಮದ ವೇಳೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಜಿ. ಪರಮೇಶ್ವರ ಅವರ ಪಿಸು ಮಾತುಗಳು ಕುತೂಹಲ ಮೂಡಿಸಿದವು.



ಡಿ.ಕೆ ಶಿವಕುಮಾರ್

ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬರುವುದು ಸ್ವಲ್ಪ ತಡವಾದ ಕಾರಣ ಇಬ್ಬರು ಅಕ್ಕಪಕ್ಕ ಕುಳಿತು ದಿನಪತ್ರಿಕೆ ಓದುತ್ತಾ, ಪತ್ರಿಕೆ ಅಡ್ಡ ಇಟ್ಟುಕೊಂಡು ಮಾತು ಶುರು ಮಾಡಿದರು. ಬಿಜೆಪಿ ಕಾರ್ಯಕರ್ತನ ಆತ್ಮಹತ್ಯೆ, ಬಿಜೆಪಿ ಹೋರಾಟ ಹಾಗೂ ದೆಹಲಿ ಭೇಟಿ ಕುರಿತು ಮಾಹಿತಿ ವಿನಿಮಯ ಮಾಡಿಕೊಂಡರು. ಮಾಧ್ಯಮದವರು ಹತ್ತಿರ ಹೋಗುತ್ತಿದ್ದಂತೆ ಮೌನಕ್ಕೆ ಜಾರಿದರು.

ಆಂಜನೇಯ ಬೆಂಬಲಿಗರ ಗದರಿದ ಸಿ.ಎಂ



ಎಚ್‌.ಆಂಜನೇಯ

ಬಾಬೂ ಜಗಜೀವನ್ ರಾಮ್ ಜಯಂತಿ ಕಾರ್ಯಕ್ರಮದ ವೇಳೆ, ಮಾಜಿ ಸಚಿವ ಎಚ್. ಆಂಜನೇಯ ಅವರನ್ನು ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ಪರಿಗಣಿಸುವಂತೆ ಅವರ ಬೆಂಬಲಿಗರು ಒತ್ತಾಯಿಸಿದರು.

ಸಿದ್ದರಾಮಯ್ಯ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡುವಾಗ ಘೋಷಣೆ ಕೂಗಿದ ಅವರ ಬೆಂಬಲಿಗರ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹರಿಹಾಯ್ದರು. 'ಹೇಯ್ ಸುಮ್ಮನೆ ಇರಿ' ಎಂದು ಗದರಿದರು.ಸಿದ್ದರಾಮಯ್ಯ ಕೋಪಗೊಂಡಿದ್ದನ್ನು ಗಮನಿಸಿದ ಆಂಜನೇಯ ತಮ್ಮ ಬೆಂಬಲಿಗರಿಗೆ ಸುಮ್ಮನೆ ಇರುವಂತೆ ಸೂಚಿಸಿದರು. ಹಿಂದಿನ ವರ್ಷ ನಡೆದ ಬಾಬೂ ಜಗಜೀವನ್ ರಾಮ್ ಜಯಂತಿ ಕಾರ್ಯಕ್ರಮದಲ್ಲೂ ಅವರ ಬೆಂಬಲಿಗರು ಆಂಜನೇಯ ಪರ ಘೋಷಣೆ ಕೂಗಿದ್ದರು. ವಿಧಾನಪರಿಷತ್‌ಗೆ ಆಯ್ಕೆ ಮಾಡಿ, ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿದ್ದರು.

ವಾಟ್ಸ್‌ಆ್ಯಪ್ ಗ್ರೂಪ್ ಅಡ್ಮಿನ್ ಹೊಣೆ ಏನು?

ವಾಟ್ಸ್‌ಆ್ಯಪ್ ಗ್ರೂಪ್ ಒಂದರ ಅಡ್ಮಿನ್ ಆಗಿದ್ದ ಕಾರಣಕ್ಕೆ ವಿನಯ್ ಸೋಮಯ್ಯ ವಿರುದ್ಧ ಪ್ರಕರಣ ದಾಖಲಾಗಿತ್ತು. ಆ ಹಿನ್ನೆಲೆಯೊಳಗೆ, ಅಡ್ಮಿನ್ ಜವಾಬ್ದಾರಿ ಕುರಿತು ಕಾನೂನು ಹೇಳುವುದೇನು ಎಂಬ ವಿವರ ಇಲ್ಲಿದೆ...

• ಜಯಸಿಂಹ ಆರ್.

ಬೆಂಗಳೂರು: ವಾಟ್ಸ್‌ಆ್ಯಪ್ ಗ್ರೂಪ್‌ನ ಸದಸ್ಯರು ಹಾಕುವ ಸಂದೇಶ ಅಥವಾ ಪೋಸ್ಟ್‌ಗಳಿಗೆ, ಗ್ರೂಪ್‌ನ ಅಡ್ಮಿನ್ ನೇರ ಹೊಣೆಗಾರರಾಗುವುದಿಲ್ಲ. ಆದರೆ ಅಂತಹ ಸಂದೇಶಗಳನ್ನು ಅನುಮೋದಿಸಿ ಪ್ರತಿಕ್ರಿಯೆ ನೀಡಿದ್ದರೆ, ಶಿಕ್ಷೆ ವಿಧಿಸಲು ಅವಕಾಶವಿದೆ.

ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಹಂಚಿಕೆಯಾಗುವ ಸಂದೇಶ, ಚಿತ್ರ, ವಿಡಿಯೊಗಳ ನಿಯಂತ್ರಣಕ್ಕೆ ದೇಶದಲ್ಲಿ ಯಾವುದೇ ಪ್ರತ್ಯೇಕ ಕಾನೂನುಗಳು ಇಲ್ಲ. ಆದರೆ, ಮಾಹಿತಿ ತಂತ್ರಜ್ಞಾನ ಕಾಯ್ದೆಗೆ 2020ರಲ್ಲಿ ತಿದ್ದುಪಡಿ ತಂದು, ವಾಟ್ಸ್‌ಆ್ಯಪ್ ಗ್ರೂಪ್‌ನ ಅಡ್ಮಿನ್‌ಗಳನ್ನೇ ಹೊಣೆಗಾರರನ್ನಾಗಿಸಲು ಕೇಂದ್ರ ಸರ್ಕಾರವು ಕಾನೂನಿನಲ್ಲಿ ಅವಕಾಶ ಮಾಡಿಕೊಂಡಿತ್ತು.

ಈ ಕಾಯ್ದೆಯ 67ನೇ ಸೆಕ್ಷನ್ ಅಡಿಯಲ್ಲಿ ವಾಟ್ಸ್‌ಆ್ಯಪ್ ಗ್ರೂಪ್‌ನ ಅಡ್ಮಿನ್ ಅವರನ್ನು 'ಮಧ್ಯಸ್ಥಿಕೆದಾರ' ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯ ವ್ಯಾಖ್ಯಾನಿಸಿತ್ತು. ಅದರಂತೆ, ಗ್ರೂಪ್‌ನ ಸದಸ್ಯರು ಗ್ರೂಪ್‌ನಲ್ಲಿ ಅವಹೇಳನಕಾರಿ ಸಂದೇಶ, ಅನುಮತಿ ಇಲ್ಲದೆ ವ್ಯಕ್ತಿಗಳ ಚಿತ್ರ-ವಿಡಿಯೊ, ದ್ವೇಷ ಪ್ರಚೋದಿಸುವಂತಹ ಸಂದೇಶ, ದೇಶದ್ರೋಹದ ಸಂದೇಶ-ಪೋಸ್ಟ್‌ಗಳನ್ನು ಮಾಡಿದರೆ ಅದಕ್ಕೆ ಅಡ್ಮಿನ್ ನೇರ ಹೊಣೆಯಾಗುತ್ತಿದ್ದರು.

ಈ ವ್ಯಾಖ್ಯಾನದಂತೆ ವಾಟ್ಸ್‌ಆ್ಯಪ್ ಗ್ರೂಪ್‌ನ ಅಡ್ಮಿನ್‌ಗಳ ವಿರುದ್ಧ ದೇಶದಾದ್ಯಂತ ಹಲವು ಪ್ರಕರಣಗಳು ದಾಖಲಾಗಿದ್ದವು. ಅವುಗಳ ವಿರುದ್ಧ ಕೆಲವರು ನ್ಯಾಯಾಲಯಗಳ ಮೆಟ್ಟಿಲನ್ನೂ ಹತ್ತಿದ್ದರು. 2022ರಲ್ಲಿ ದಾಖಲಾದ ಅಂತಹ ಅರ್ಜಿಯೊಂದರಲ್ಲಿ ಕೇರಳ ಹೈಕೋರ್ಟ್ ನೀಡಿದ ತೀರ್ಪು, ವಾಟ್ಸ್‌ಆ್ಯಪ್ ಗ್ರೂಪ್‌ನ ಅಡ್ಮಿನ್‌ಗಳಿಗೆ ಈ ನಿಯಮದಿಂದ ತುಸು ರಕ್ಷಣೆ ನೀಡಿತು.

'ಮ್ಯಾನುಯಲ್ ವರ್ಸಸ್ ಕೇರಳ ಸರ್ಕಾರ' ಪ್ರಕರಣದಲ್ಲಿ ಕೇರಳ ಹೈಕೋರ್ಟ್, 'ವಾಟ್ಸ್‌ಆ್ಯಪ್ ಗ್ರೂಪ್‌ಗೆ ಸದಸ್ಯರನ್ನು ಸೇರಿಸುವ ಮತ್ತು ತೆಗೆಯುವುದಕ್ಕಷ್ಟೇ ಅಡ್ಮಿನ್‌ನ ಅಧಿಕಾರ ಸೀಮಿತಗೊಳ್ಳುತ್ತದೆ. ಸದಸ್ಯರು ಹಾಕುವ ಸಂದೇಶವನ್ನು ಪರಿಶೀಲಿಸಿ, ಅದನ್ನು ಪ್ರಕಟಿಸುವ ವ್ಯವಸ್ಥೆ ವಾಟ್ಸ್‌ಆ್ಯಪ್‌ನಲ್ಲಿ ಇಲ್ಲ. ಹೀಗಾಗಿ ಎಲ್ಲ ಸಂದೇಶಗಳಿಗೂ ಅಡ್ಮಿನ್ ಅನ್ನು ಹೊಣೆಗಾರರನ್ನಾಗಿ ಮಾಡಲು ಸಾಧ್ಯವಿಲ್ಲ' ಎಂದು ತೀರ್ಪು ನೀಡಿತ್ತು.

'ಆದರೆ ಸ್ವತಃ ಅಡ್ಮಿನ್ ಅಂತಹ ಸಂದೇಶಗಳನ್ನು ಹಾಕಿದ್ದರೆ ಅಥವಾ ಹಾಕುವಂತೆ ಪ್ರಚೋದನೆ ನೀಡಿದ್ದರೆ ಅವರು ಕಾನೂನು ಕ್ರಮಕ್ಕೆ ಗುರಿಯಾಗಬೇಕಾಗುತ್ತದೆ' ಎಂದೂ ತೀರ್ಪಿನಲ್ಲಿ ಹೇಳಿತ್ತು. ಈ ತೀರ್ಪೇ ಈಗ ದೇಶದಾದ್ಯಂತ ಅನ್ವಯವಾಗುತ್ತಿದೆ.

ಯಾವ ಪ್ರಕರಣಗಳಲ್ಲಿ ಅಡ್ಮಿನ್ ತಪ್ಪಿತಸ್ಥ?

- ಅವಹೇಳನಕಾರಿ ಸಂದೇಶ, ವ್ಯಕ್ತಿಗಳ ಖಾಸಗಿ ಚಿತ್ರ-ವಿಡಿಯೊ, ತಿರುಚಲಾದ ಚಿತ್ರ-ವಿಡಿಯೊ, ದೇಶದ್ರೋಹದ ಸಂದೇಶ, ಸುಳ್ಳು ಸುದ್ದಿಗಳನ್ನು ಸದಸ್ಯರು ಹಾಕಿದರೆ ಆ ಬಗ್ಗೆ ಎಚ್ಚರಿಕೆ ನೀಡಬೇಕು
- ಆಕ್ಷೇಪಾರ್ಹ ಸಂದೇಶ/ಚಿತ್ರ/ವಿಡಿಯೊಗಳನ್ನು ಹಾಕುವಂತೆ ಸದಸ್ಯರಿಗೆ ಸೂಚಿಸಿದ್ದರೆ ಅಥವಾ ಪ್ರಚೋದಿಸಿದ್ದರೆ ಅಡ್ಮಿನ್ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬಹುದು
- ಗ್ರೂಪ್‌ನಲ್ಲಿ ಹಂಚಿಕೊಳ್ಳಲಾದ ಆಕ್ಷೇಪಾರ್ಹ ಸಂದೇಶ/ಚಿತ್ರ/ವಿಡಿಯೊಗಳಿಗೆ 'ಲೈಕ್' ಪ್ರತಿಕ್ರಿಯೆ ನೀಡಿದ್ದರೆ, ಅವುಗಳನ್ನು ಫಾರ್ವರ್ಡ್ ಮಾಡಿದ್ದರೆ ಅಡ್ಮಿನ್ ವಿರುದ್ಧ ಕ್ರಮ ತೆಗೆದುಕೊಳ್ಳಬಹುದು
- ಗ್ರೂಪ್‌ನಲ್ಲಿ ಹಂಚಿಕೊಳ್ಳಲಾದ ಪೋಸ್ಟ್/ಸಂದೇಶಗಳ ಸಂಬಂಧ ಪ್ರಕರಣ ದಾಖಲಾದ ನಂತರ ಅವುಗಳನ್ನು ಗ್ರೂಪ್‌ನಿಂದ ಡಿಲೀಟ್ ಮಾಡಿದರೆ, ಸದಸ್ಯರನ್ನು ಗ್ರೂಪ್‌ನಿಂದ ತೆಗೆದುಹಾಕಿದರೆ ಅಡ್ಮಿನ್ ವಿರುದ್ಧ ಪ್ರಕರಣ ದಾಖಲಿಸಬಹುದು

ಬೆಳಗಾವಿಯ ಮೂವರು ಸಾವು

ದಾವಣಗೆರೆ: ತಾಲ್ಲೂಕಿನ ಅತ್ತಿಗೆರೆ ಬಳಿಯ ಬೀರೂರು–ಸಮ್ಮಸಗಿ ರಾಜ್ಯ ಹೆದ್ದಾರಿಯಲ್ಲಿ ಶನಿವಾರ ನಸುಕಿನಲ್ಲಿ ಮಾರುತಿ ಇಕೊ ಕಾರು ಮತ್ತು ಬಸ್ ನಡುವೆ ಸಂಭವಿಸಿದ ಅಪಘಾತದಲ್ಲಿ ಮೂವರು ಮೃತಪಟ್ಟಿದ್ದಾರೆ.

ಬೆಳಗಾವಿ ಜಿಲ್ಲೆಯ ಕಾಗವಾಡ ತಾಲ್ಲೂಕಿನ ಸಿರುಗುಪ್ಪ ಗ್ರಾಮದ ವಿಜಯ್ ಭಜಂತ್ರಿ (30), ಬಸವರಾಜ ಐಬತ್ತಿ (30) ಹಾಗೂ ಶ್ರೀಧರ ವಡ್ಡರ (27) ಮೃತಪಟ್ಟವರು. ಗಾಯಗೊಂಡಿರುವ ವಿಶ್ವನಾಥ್ ಈರೇಗೌಡ (30) ಹಾಗೂ ರಾಜು ಕಾಟಕರ್ (30) ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ಪ್ರವಾಸಿ ನೌಕೆ

ಮಂಗಳೂರಿನ 'ನವ ಮಂಗಳೂರು ಬಂದರು ಪ್ರಾಧಿಕಾರಕ್ಕೆ ಶನಿವಾರ ಬಂದ ಎಂಎಸ್ ನಾರ್ವೆಜಿಯನ್ ಸ್ಕೈ ಹೆಸರಿನ ಪ್ರವಾಸಿ ಹಡಗು. ಈ ಋತುವಿನಲ್ಲಿ ಮಂಗಳೂರಿಗೆ ಬಂದ ಐದನೇ ಪ್ರವಾಸಿ ಹಡಗು ಇದಾಗಿದ್ದು, ಇದರಲ್ಲಿ 1,876 ಪ್ರವಾಸಿಗರು ಹಾಗೂ 861 ಸಿಬ್ಬಂದಿ ಇದ್ದಾರೆ
ಚಿತ್ರ: ಫಕ್ರುದ್ದೀನ್ ಎಚ್.

ಕೋವಿಡ್ ಅಕ್ರಮ: 1808 ಪುಟಗಳ ಎರಡನೇ ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿರ್ವಹಣೆಗಾಗಿ ಪಿಪಿಇ ಕಿಟ್ ಸೇರಿ ವೈದ್ಯಕೀಯ ಪರಿಕರಗಳ ಖರೀದಿಯಲ್ಲಿ ನಡೆದ ಹಗರಣದ ತನಿಖೆಗೆ ನೇಮಿಸಲಾಗಿದ್ದ ನ್ಯಾಯಮೂರ್ತಿ ಮೈಕಲ್ ಡಿಕುನ್ಹಾ ನೇತೃತ್ವದ ತನಿಖಾ ಆಯೋಗ ಎರಡನೇ ಮಧ್ಯಂತರ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶನಿವಾರ ಸಲ್ಲಿಸಿತು.

ವರದಿಯು ಏಳು ಸಂಪುಟಗಳಲ್ಲಿದ್ದು, 1,808 ಪುಟಗಳನ್ನು ಒಳಗೊಂಡಿದೆ. ಅದರಲ್ಲಿನ ನಾಲ್ಕು ಸಂಪುಟಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ನಡೆದ ಹಗರಣಗಳ ಮಾಹಿತಿಯನ್ನು ಒಳಗೊಂಡಿದೆ. ಬಿಬಿಎಂಪಿ ವ್ಯಾಪ್ತಿಯ ಬೊಮ್ಮನಹಳ್ಳಿ ವಲಯ, ದಕ್ಷಿಣ ವಲಯ, ಪಶ್ಚಿಮ ವಲಯ, ಯಲಹಂಕ ವಲಯಗಳ ಹಗರಣಗಳಿಗೆ ಸಂಬಂಧಪಟ್ಟ ವಿವರಗಳು ಪ್ರತ್ಯೇಕ ಸಂಪುಟಗಳಲ್ಲಿವೆ.

ಉಳಿದ ಮೂರು ಸಂಪುಟಗಳು ಬೆಂಗಳೂರು ನಗರ ಜಿಲ್ಲೆ, ಗ್ರಾಮಾಂತರ ಜಿಲ್ಲೆ ಮತ್ತು ಗದಗ ಹಾಗೂ ಕೊಪ್ಪಳ ಜಿಲ್ಲೆಗಳ ಹಗರಣಗಳ ಮಾಹಿತಿ ಒಳಗೊಂಡಿದೆ.

ವರದಿ ಸಲ್ಲಿಕೆಯ ವೇಳೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಉಪಸ್ಥಿತರಿದ್ದರು.

ಮೊದಲ ಮಧ್ಯಂತರ ವರದಿ 1,500 ಪುಟಗಳನ್ನು ಒಳಗೊಂಡಿತ್ತು.

ಕೋವಿಡ್ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ, ಆರೋಗ್ಯ ಸಚಿವರಾಗಿದ್ದ ಬಿ.ಶ್ರೀರಾಮುಲು ಅವರು, ಅಧಿಕಾರಿಗಳ ಶಿಫಾರಸುಗಳನ್ನು ಬದಿಗೊತ್ತಿ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ. ಇದರಿಂದ ವೈಯಕ್ತಿಕ ಲಾಭ ಮಾಡಿಕೊಂಡಿದ್ದಾರೆ. ಅವರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಕ್ರಿಮಿನಲ್ ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ವರದಿಯಲ್ಲಿ ಶಿಫಾರಸು ಮಾಡಿತ್ತು.



ನ್ಯಾಯಮೂರ್ತಿ ಮೈಕಲ್ ಡಿಕುನ್ಹಾ ಅವರು ಎರಡನೇ ಮಧ್ಯಂತರ ವರದಿಯನ್ನು ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದರು

₹2.53 ಕೋಟಿ ಉಳಿತಾಯ: ಸಚಿವ ಚಲುವರಾಯಸ್ವಾಮಿ ಮಾಹಿತಿ

87ನೇ ನುಡಿಜಾತ್ರೆಗಾದ ವೆಚ್ಚ ₹29.65 ಕೋಟಿ

ಯಾವ್ಯಾವುದಕ್ಕೆ ಎಷ್ಟು ಖರ್ಚು?

ಬಾಬ್ತು	ಮೊತ್ತ
ವೇದಿಕೆ	₹8.92 ಕೋಟಿ
ವಸತಿ	₹1.97 ಕೋಟಿ
ಕುಡಿಯುವ ನೀರು	₹49.99 ಲಕ್ಷ
ಮಾಧ್ಯಮ ಸಮನ್ವಯ ಸಮಿತಿ	₹99.99 ಲಕ್ಷ
ಮೆರವಣಿಗೆ	₹74.31 ಲಕ್ಷ
ಪುಸ್ತಕ ಆಯ್ಕೆ ಸಮಿತಿ	₹29.98 ಲಕ್ಷ
ಸಾರಿಗೆ	₹81.54 ಲಕ್ಷ
ಕನ್ನಡ ಜ್ಯೋತಿ ರಥ ನಿರ್ವಹಣಾ ಸಮಿತಿ	₹42.99 ಲಕ್ಷ
ಆಹಾರ	₹6.74 ಕೋಟಿ
ಪ್ರಚಾರ	₹1.29 ಕೋಟಿ
ನಗರ ಅಲಂಕಾರ	₹74.99 ಲಕ್ಷ
ಸಾಂಸ್ಕೃತಿಕ ಸಮಿತಿ	₹82.43 ಲಕ್ಷ
ಸ್ಮರಣಿಕೆ	₹32.20 ಲಕ್ಷ
ಸ್ಮರಣ ಸಂಚಿಕೆ	₹19.99 ಲಕ್ಷ
ನೋಂದಣಿ ಸಮಿತಿ	₹64.93 ಲಕ್ಷ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಖರ್ಚು ವೆಚ್ಚದ ವಿವರ ಬಿಡುಗಡೆ ಮಾಡಿದ ಜಿಲ್ಲಾಡಳಿತ
- ₹3.17 ಕೋಟಿ ಜಿಎಸ್‌ಟಿ ಪಾವತಿ

ಮಂಡ್ಯ: 'ಇಲ್ಲಿ ಹೋದ ವರ್ಷ ಡಿ.20ರಿಂದ 22ರವರೆಗೆ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಒಟ್ಟು ₹29.65 ಕೋಟಿ ವೆಚ್ಚವಾಗಿದ್ದು, ₹2.53 ಕೋಟಿ ಉಳಿದಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.



ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸರ್ಕಾರ 2 ಕಂತುಗಳಲ್ಲಿ ಒಟ್ಟು ₹30 ಕೋಟಿ ಅನುದಾನ ನೀಡಿತ್ತು. ಜೊತೆಗೆ ವಾಣಿಜ್ಯ ಮತ್ತು ಪುಸ್ತಕ ಮಳಿಗೆಗಳು, ಪ್ರತಿನಿಧಿಗಳ ನೋಂದಣಿ ಶುಲ್ಕ ಹಾಗೂ ನೌಕರರ ಒಂದು ದಿನ ವೇತನದ ದೇಣಿಗೆ (ಎಚ್‌.ಆರ್‌.ಎಂ.ಎಸ್ ನೌಕರರನ್ನು ಹೊರತುಪಡಿಸಿ) ₹1.20 ಕೋಟಿ ಹಾಗೂ ಜಿಲ್ಲಾ ಖಜಾನೆ ವ್ಯಾಪ್ತಿಯ ಸರ್ಕಾರಿ ನೌಕರರ ದೇಣಿಗೆ ₹1.08 ಕೋಟಿ ಸೇರಿ ಒಟ್ಟು ₹32.74 ಕೋಟಿ ಸಂಗ್ರಹ ವಾಗಿತ್ತು' ಎಂದು ಮಾಹಿತಿ ನೀಡಿದರು.

'₹29.65 ಕೋಟಿಯಲ್ಲಿ ₹3.17 ಕೋಟಿ ಜಿಎಸ್‌ಟಿ, ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ (ಎಂಸಿಎ) ಸೇವಾ ಶುಲ್ಕ ₹1.08 ಕೋಟಿ ಸೇರಿದೆ' ಎಂದು ವಿವರಿಸಿದರು.

ಮಾದರಿ ಸಮ್ಮೇಳನ: 'ಸಮ್ಮೇಳನದ ಗೋಷ್ಠಿಗಳು, ಸಾಂಸ್ಕೃತಿಕ ಕಾರ್ಯಕ್ರಮಗಳೆಲ್ಲವೂ ಅಚ್ಚುಕಟ್ಟಾಗಿ ನಡೆದವು. ಊಟ, ವಸತಿ ಸೇರಿದಂತೆ ಮೂಲಸೌಕರ್ಯವನ್ನು ಜಿಲ್ಲಾಡಳಿತ ಸಮರ್ಪಕವಾಗಿ ಕಲ್ಪಿಸಿತ್ತು. ಸಮ್ಮೇಳನ ಅತ್ಯಂತ ಯಶಸ್ವಿಯಾಗಿದ್ದು, ಮಂಡ್ಯ ಚರಿತ್ರೆಯಲ್ಲಿ ದಾಖಲಾಗಿದೆ. ಸಾರ್ವಜನಿಕರ ತೆರಿಗೆ ಹಣವನ್ನು ವ್ಯವಸ್ಥಿತವಾಗಿ ಖರ್ಚು ಮಾಡಲಾಗಿದೆ. ಟೀಕೆ–ಟಿಪ್ಪಣಿಗಳು ಬಂದರೆ ಮುಕ್ತ ಮನಸ್ಸಿನಿಂದ ಸ್ವಾಗತಿಸುತ್ತೇವೆ' ಎಂದು ಹೇಳಿದರು.

ಜಿಲ್ಲಾಧಿಕಾರಿ ಕುಮಾರ, ಜಿಲ್ಲಾ ಪಂಚಾಯಿತಿ ಸಿಇಒ ಕೆ.ಆರ್. ನಂದಿನಿ, ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಮೀರಾ ಶಿವಲಿಂಗಯ್ಯ ಅವರು ಪಾಲ್ಗೊಂಡಿದ್ದರು.

'ಉಳಿಕೆ ಹಣದಲ್ಲಿ ಕನ್ನಡ ಭವನ'



ಚಲುವರಾಯಸ್ವಾಮಿ

'ಉಳಿತಾಯವಾಗಿರುವ ₹2.53 ಕೋಟಿಯನ್ನು ಸಮ್ಮೇಳನದ ಸವಿನೆನಪಿನ 'ಕನ್ನಡ ಭವನ' ನಿರ್ಮಾಣಕ್ಕೆ ಬಳಸಲಾಗುವುದು. ಜೊತೆಗೆ ಸರ್ಕಾರದಿಂದ ₹2.50 ಕೋಟಿ ಬಿಡುಗಡೆ ಮಾಡುತ್ತೇವೆ. ಈಗಾಗಲೇ 3 ಕಡೆ ನಿವೇಶನಗಳನ್ನು ನೋಡಿದ್ದು, ಅನುಮತಿ ದೊರೆತ ಬಳಿಕ ಶಂಕುಸ್ಥಾಪನೆ ನೆರವೇರಿಸುತ್ತೇವೆ' ಎಂದು ಚಲುವರಾಯಸ್ವಾಮಿ ತಿಳಿಸಿದರು.

'ಜೋಶಿ ಗೈರು; ಕಸಾಪದ ಲೆಕ್ಕ ಯಾವಾಗ?'

ಪತ್ರಿಕಾಗೋಷ್ಠಿಗೆ ಕಸಾಪ ಅಧ್ಯಕ್ಷ ಮಹೇಶ ಜೋಶಿ ಗೈರುಹಾಜರಾದುದು ಚರ್ಚೆಗೆ ಗ್ರಾಸವಾಗಿದೆ. '₹30 ಕೋಟಿ ಅನುದಾನದಲ್ಲಿ ಕಸಾಪಕ್ಕೆ ₹2.50 ಕೋಟಿ ನೀಡಲಾಗಿದೆ. ಅದರ ಖರ್ಚು–ವೆಚ್ಚದ ವಿವರ ನೀಡಲು ಜೋಶಿಯವರು ಏಕೆ ಬಂದಿಲ್ಲ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, 'ಜೋಶಿಯವರನ್ನು ಡಿ.ಸಿ ಕರೆದಿದ್ದರು. ಏಕೆ ಬಂದಿಲ್ಲ ಎಂಬುದು ಗೊತ್ತಿಲ್ಲ. ಶೀಘ್ರದಲ್ಲೇ ಖರ್ಚಿನ ವಿವರ ಕೊಡುತ್ತಾರೆ' ಎಂದರು.

ಬಾಲಕಿ ಮೇಲೆ ಅತ್ಯಾಚಾರ ಬ್ಯಾಡ್ಮಿಂಟನ್ ಕೋಚ್ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಡ್ಮಿಂಟನ್ ತರಬೇತಿಗೆ ಬರುತ್ತಿದ್ದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿ, ಆಕೆಯ ನಗ್ನ ಫೋಟೊ ಹಾಗೂ ವಿಡಿಯೊಗಳನ್ನು ಚಿತ್ರೀಕರಿಸಿಕೊಂಡಿದ್ದ ತರಬೇತುದಾರನನ್ನು ಹುಳಿಮಾವು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡಿನ ಸುರೇಶ್ ಬಾಲಾಜಿ (26) ಬಂಧಿತ ಆರೋಪಿ.

'ಅತ್ಯಾಚಾರಕ್ಕೆ ಒಳಗಾದ ಬಾಲಕಿಯ ತಾಯಿ ನೀಡಿದ ದೂರು ಆಧರಿಸಿ, ಆರೋಪಿಯ ವಿರುದ್ಧ ಪೋಕ್ಸೊ (ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ) ಕಾಯ್ದೆ ಪ್ರಕರಣ ದಾಖಲಿಸಿಕೊಂಡು ಬಂಧಿಸಲಾಗಿದೆ. ಎಂಟು ದಿನ ಪೊಲೀಸ್ ಕಸ್ಟಡಿಗೆ ಪಡೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿಯ ಮೊಬೈಲ್ ಜಪ್ತಿ ಮಾಡಿಕೊಂಡು ಪರಿಶೀಲನೆ ನಡೆಸಲಾಗಿದೆ. ಅತ್ಯಾಚಾರಕ್ಕೆ ಒಳಗಾದ 16 ವರ್ಷದ ಬಾಲಕಿ ಸೇರಿದಂತೆ ಎಂಟು ಬಾಲಕಿಯರ ನಗ್ನ ಫೋಟೊಗಳು ಹಾಗೂ ವಿಡಿಯೊಗಳು ಮೊಬೈಲ್‌ನಲ್ಲಿ ಪತ್ತೆಯಾಗಿವೆ' ಎಂದು ಮೂಲಗಳು ತಿಳಿಸಿವೆ.

'ತಮಿಳುನಾಡಿನಿಂದ ನಗರಕ್ಕೆ ಬಂದಿದ್ದ ಆರೋಪಿ, ಕೆಲವು ವರ್ಷಗಳಿಂದ ಠಾಣಾ ವ್ಯಾಪ್ತಿಯಲ್ಲಿ ನೆಲಸಿದ್ದ. ಬ್ಯಾಡ್ಮಿಂಟನ್ ತರಬೇತುದಾರನಾಗಿ ಕೆಲಸ ಮಾಡುತ್ತಿದ್ದ. ಆತ ಕೆಲಸ ಮಾಡುತ್ತಿದ್ದ ಕೋಚಿಂಗ್ ಕೇಂದ್ರಕ್ಕೆ ಎರಡು ವರ್ಷಗಳ ಹಿಂದೆ ಬಾಲಕಿ ಬ್ಯಾಡ್ಮಿಂಟನ್ ತರಬೇತಿಗೆ ಸೇರಿಕೊಂಡಿದ್ದಳು. ಆಕೆಯ ಸ್ನೇಹ ಸಂಪಾದಿಸಿದ್ದ ಆರೋಪಿ, ತನ್ನ ಮನೆಗೆ ಕರೆದೊಯ್ದು ಅತ್ಯಾಚಾರ ಎಸಗಿದ್ದ. ಅಲ್ಲದೇ ಯಾರಿಗೂ ವಿಷಯ ತಿಳಿಸದಂತೆ ಬೆದರಿಕೆ ಹಾಕಿದ್ದ' ಎಂದು ಮೂಲಗಳು ತಿಳಿಸಿವೆ.



ಸುರೇಶ್ ಬಾಲಾಜಿ

'ಎಸ್ಸೆಸ್ಸೆಲ್ಸಿ ಪರೀಕ್ಷೆಯ ಬಳಿಕ ಅಜ್ಜಿಯ ಮನೆಗೆ ಬಾಲಕಿ ತೆರಳಿದ್ದಳು. ಅಪರಿಚಿತ ಮೊಬೈಲ್ ಸಂಖ್ಯೆಯಿಂದ ಅಜ್ಜಿಯ ಮೊಬೈಲ್‌ಗೆ ನಗ್ನ ಫೋಟೊಗಳು ರವಾನೆ ಆಗಿದ್ದವು. ಅದನ್ನು ಗಮನಿಸಿದ ಅಜ್ಜಿ, ತಕ್ಷಣ ಸಂತ್ರಸ್ತೆಯ ಪೋಷಕರಿಗೆ ಮಾಹಿತಿ ನೀಡಿದ್ದರು. ಬಳಿಕ ಬಾಲಕಿಯ ತಾಯಿಯು ಮಗಳನ್ನು ವಿಚಾರಿಸಿದಾಗ ತರಬೇತುದಾರ ಹಲವು ಬಾರಿ ಲೈಂಗಿಕ ದೌರ್ಜನ್ಯ ಎಸಗಿರುವುದಾಗಿ ಹೇಳಿಕೊಂಡಿದ್ದಳು. ಪೋಷಕರು ನೀಡಿದ ದೂರು ಆಧರಿಸಿ, ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.


'ನೃತ್ಯ ತರಬೇತಿ ಹಾಗೂ ಮನೆಪಾಠಕ್ಕೆ ಬಾಲಕಿ ತೆರಳುತ್ತಿದ್ದ ಸಂದರ್ಭದಲ್ಲಿ ಆಕೆಯನ್ನು ಆರೋಪಿ ಮನೆಗೆ ಕರೆದೊಯ್ಯುತ್ತಿದ್ದ. ಲೈಂಗಿಕ ದೌರ್ಜನ್ಯ ಎಸಗಿ ಫೋಟೊ, ವಿಡಿಯೊ ಚಿತ್ರೀಕರಣ ಮಾಡಿಕೊಂಡಿದ್ದ' ಎಂದು ಮೂಲಗಳು ತಿಳಿಸಿವೆ

ಬಾಲಕಿಯರಿಗೆ ಬೆದರಿಕೆ: 'ಬ್ಯಾಡ್ಮಿಂಟನ್ ತರಬೇತಿಗೆ ಬರುತ್ತಿದ್ದ ಬಾಲಕಿಯರ ಸ್ನೇಹ ಗಳಿಸುತ್ತಿದ್ದ ಆರೋಪಿ, ಬಾಲಕಿಯರಿಗೆ ಲೈಂಗಿಕ ದೌರ್ಜನ್ಯ ಎಸಗುತ್ತಿದ್ದ. ಆ ದೃಶ್ಯವನ್ನು ತನ್ನ ಮೊಬೈಲ್‌ನಲ್ಲಿ ಚಿತ್ರೀಕರಣ ಮಾಡಿಕೊಳ್ಳುತ್ತಿದ್ದ. ವಿಷಯವನ್ನು ಯಾರಿಗೂ ತಿಳಿಸದಂತೆ ಬೆದರಿಕೆ ಹಾಕುತ್ತಿದ್ದ. ಆರೋಪಿ ಬೆದರಿಕೆ ಹಾಕಿದ್ದರಿಂದ ಯಾರೂ ಬಾಯ್ಬಿಟ್ಟಿರಲಿಲ್ಲ' ಎಂದು ಮೂಲಗಳು ತಿಳಿಸಿವೆ.



ವಿಕಸಿತ ಭಾರತದ ಕಡೆಗೆ ವಿಶ್ವದರ್ಜೆ ಮೂಲಸೌಕರ್ಯ

ಹೊಸ ಪಂಬನ್ ಸೇತುವೆ - ರಾಮೇಶ್ವರಂನಲ್ಲಿ
ಭಾರತದ ಮೊದಲ ವರ್ಟಿಕಲ್ ಲಿಫ್ಟ್ ಸಮುದ್ರ ಸೇತುವೆ



ರಾಷ್ಟ್ರಕ್ಕೆ ಸಮರ್ಪಣೆ

ಹೊಸ ಪಂಬನ್ ಸೇತುವೆ

- 2.08 ಕಿಲೋಮೀಟರ್ ಉದ್ದದ ಸೇತುವೆಯು ರಾಮನಾಥಸ್ವಾಮಿ ದೇವಸ್ಥಾನಕ್ಕೆ ಪ್ರತಿ ವರ್ಷ ಭೇಟಿ ನೀಡುವ 25 ಲಕ್ಷ ಯಾತ್ರಿಕರಿಗೆ ಪ್ರಯೋಜನವಾಗುತ್ತದೆ.
- ಸುಧಾರಿತ ಸಾಮಾಗ್ರಿ ಮತ್ತು ತುಕ್ಕು ವಿರೋಧಿ ತಂತ್ರಜ್ಞಾನವನ್ನು ಬಳಸಲಾಗಿದೆ.
- ದೊಡ್ಡ ದೋಣಿಗಳಿಗೆ 72.5 ಮೀ. ಲಿಫ್ಟ್ ಸ್ಪ್ಯಾನ್, 17 ಮೀ. ಎತ್ತರದ ಕ್ಲಿಯರೆನ್ಸ್ ಒದಗಿಸುವ ಅವಕಾಶ ನೀಡುತ್ತದೆ, ಸಮುದ್ರ ಸಂಪರ್ಕವನ್ನು ಸುಧಾರಿಸುತ್ತದೆ.
- ಸ್ಥಳೀಯ ಪ್ರವಾಸೋದ್ಯಮ ಮತ್ತು ಸಾಮಾಜಿಕ–ಆರ್ಥಿಕ ಬೆಳವಣಿಗೆಗೆ ಉತ್ತೇಜನ.

ಎನ್ ಹೆಚ್-332ರ ವಿಲ್ಲುಪುರಂ - ಪುದುಚೇರಿ ಸೆಕ್ಷನ್‌ನ 4 ಲೇನಿಂಗ್
ಎನ್ ಹೆಚ್-32ರ ಪೂಂಡಿಯಂಕುಪ್ಪಂನ - ಸಟ್ಟನಾಥಪುರಂ ಸೆಕ್ಷನ್‌ನ 4-ಲೇನಿಂಗ್
ಎನ್ ಹೆಚ್-36ರ ಚೋಳಪುರಂನ - ತಂಜಾವೂರು ಸೆಕ್ಷನ್‌ನ 4-ಲೇನಿಂಗ್

- ವಿಶಾಲವಾದ ರಸ್ತೆಗಳು ಸುಗಮ ಸಂಚಾರವನ್ನು ಖಚಿತಪಡಿಸುತ್ತವೆ, ಪ್ರಯಾಣದ ಸಮಯ ಕಡಿಮೆ ಮಾಡುತ್ತದೆ ಮತ್ತು ಕಡಿಮೆ ಇಂಧನ ವೆಚ್ಚವನ್ನು ತಗ್ಗಿಸುತ್ತದೆ
- ಪ್ರಮುಖ ಬಂದರುಗಳು ಮತ್ತು ಪ್ರಮುಖ ಕರಾವಳಿ ಜಿಲ್ಲೆಗಳ ನಡುವಿನ ಸಂಪರ್ಕವನ್ನು ಬಲಪಡಿಸುತ್ತದೆ

ಹಸಿರು ನಿಶಾನೆ

ರಾಮೇಶ್ವರಂ ಮತ್ತು ತಾಂಬರಂ (ಚೆನ್ನೈ) ನಡುವೆ ಹೊಸ ರೈಲು

- ತಮಿಳುನಾಡಿನ ಡೆಲ್ಟಾ ಪ್ರದೇಶದಲ್ಲಿ ಸುಧಾರಿತ ಸಂಪರ್ಕ ಕಲ್ಪಿಸುವುದು, ಸ್ಥಳೀಯ ಆರ್ಥಿಕತೆಯನ್ನು ಸುಧಾರಿಸುವುದು
- ಧಾರ್ಮಿಕ ಮತ್ತು ಪ್ರವಾಸಿ ತಾಣಗಳಿಗೆ ಪ್ರವೇಶಿಸುವಿಕೆಯನ್ನು ವೃದ್ಧಿಸುತ್ತದೆ

ಶಂಕುಸ್ಥಾಪನೆ

ಎನ್ ಹೆಚ್ 40ರ ಸೆಕ್ಷನ್ ಗಳಾದ ವಾಲಜಾಪೇಟ್/ರಾಣಿಪೇಟ್-ತಮಿಳುನಾಡು/ಆಂಧ್ರಪ್ರದೇಶದ ಗಡಿ ಭಾಗದ 4 ಲೇನಿಂಗ್

- ಆಧ್ಯಾತ್ಮಿಕ ಮತ್ತು ಮೆಟ್ರೋಪಾಲಿಟನ್ ಕೇಂದ್ರಗಳ ನಡುವೆ ವೇಗದ ರಸ್ತೆ ಸಂಪರ್ಕ
- ಯಾತ್ರಿಕರು, ಪ್ರವಾಸಿಗರು ಮತ್ತು ದೈನಂದಿನ ಪ್ರಯಾಣಿಕರಿಗೆ ನೇರ ಪ್ರಯಾಣದ ಆಯ್ಕೆ

ರೂ.8500 ಕೋಟಿ ಮೌಲ್ಯದ ಯೋಜನೆಗಳ ರಾಷ್ಟ್ರಕ್ಕೆ ಸಮರ್ಪಣೆ ಮತ್ತು ಶಂಕುಸ್ಥಾಪನೆ

ಇವರಿಂದ

ನರೇಂದ್ರ ಮೋದಿ

ಪ್ರಧಾನ ಮಂತ್ರಿಗಳು

ಘನ ಉಪಸ್ಥಿತಿ

ಆರ್. ಎನ್. ರವಿ
ರಾಜ್ಯಪಾಲರು, ತಮಿಳುನಾಡು

ಎಂ. ಕೆ. ಸ್ಟಾಲಿನ್
ಮುಖ್ಯಮಂತ್ರಿಗಳು, ತಮಿಳುನಾಡು

ನಿತಿನ್ ಜೈರಾಮ್ ಗಡ್ಕರಿ
ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವರು

ಅಶ್ವಿನಿ ವೈಷ್ಣವ್
ಕೇಂದ್ರ ರೈಲ್ವೆ, ಮಾಹಿತಿ ಮತ್ತು ಪ್ರಸಾರ ಹಾಗೂ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು

ಡಾ. ಎಲ್. ಮುರುಗನ್
ಕೇಂದ್ರ ಮಾಹಿತಿ ಮತ್ತು ಪ್ರಸಾರ ಹಾಗೂ ಸಂಸದೀಯ ವ್ಯವಹಾರಗಳ ರಾಜ್ಯ ಖಾತೆ ಸಚಿವರು

ತಂಗಂ ತೆನ್ನರಸು
ಹಣಕಾಸು ಮತ್ತು ಪರಿಸರ ಹವಾಮಾನ ಬದಲಾವಣೆ ಸಚಿವರು, ತಮಿಳುನಾಡು ಸರ್ಕಾರ

ಆರ್. ಎಸ್. ರಾಜಕಣ್ಣಪ್ಪನ್
ಹಾಲು ಮತ್ತು ಡೈರಿ ಅಭಿವೃದ್ಧಿ ಸಚಿವರು ತಮಿಳುನಾಡು ಸರ್ಕಾರ

ಭಾನುವಾರ 6ನೇ ಏಪ್ರಿಲ್, 2025 | ರಾಮೇಶ್ವರಂ, ತಮಿಳುನಾಡು | ಮಧ್ಯಾಹ್ನ 12.45 ಗಂಟೆಗೆ



Follow us on /RailMinIndia

ಡಿಡಿ ನ್ಯೂಸ್ ನಲ್ಲಿ ನೇರಪ್ರಸಾರ ವೀಕ್ಷಿಸಿ DD NEWS

ಪ್ರಜಾವಾಣಿ

ಕ್ಲಾಸಿಫೈಡ್ಸ್

TO LET

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

WANTED ANJANAPURA Banashankari 6th Stage JPNagar Near Kanakapura Road Any Measurement Immediate Settlement Call: 9964627255

BDA 30X40 South facing 1st Block Anjanapura 12,000/- Sft. 1490sft. corner 12,500/- Mahalakshmi Enterprise -9845144365

ANJANAPURA BDA Site For Sale 40X55 No786 8th Block 12000/-per sqft Contact: 80955 04466

Airport Road

"SALE 40X60 North_East Corner`Site 60`feet`Road BIAAPA_approved ₹1.44`Crore, before International Airport opp.KIADB Aero`Park "Sri.Ganesh Estate"- 9845286505"

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

SITE FOR SALE Banashankari 6th Stage 3rd Block 30x40_North Facing, Price_13,500/- sq.feet. owner meeting. 9740148870.

SITE FOR Sale In Banashankari 6th Stage 6th Block 20X30 W/F 62Lakhs & 10th Block 20x30 S/F 62Lakhs Contact: 9535575774

BANASHANKARI 6TH Stage, 9th Block, BDA, 30x40sft, West Facing, Park attached, Rs.1.08Crore. Owner 9845259332

J P Nagar

JP-NAGAR 5TH PHASE BDA 30x40 SOUTH FACING WITH OLD HOUSE NO. 342 CONTACT KRISHNA: 9845059328

SALE 30X40 J.P.Nagar 9th Phase 7th Block Raghuvanapalya Excellent Location Contact: 9066399102

BTM Layout



BTM 4th Stage, 2nd Block, Near Nano Hospital Back, Sai Baba Temple, Saraswathipuram Layout, North Builder Spot, 'B' Katha. Rs. 90 lacs. Nego. CALL : 9845286583

Basaweshwaranagar

40×60 BASVESHWARNAGAR 30×41 Rajajinagar, 50×75 Malleshwapur, 80×10 Race Course Road Site's Residential, Commercial Sale: 8660075308

***BASAVESHWARANAGAR* PAVITHRA** Paradise Circle Commercial 40x60,Judges Colony Residencial E/F 40x60 Site sale. Contact:-9945079777

Hebbal

HEBBAL 30X35 House Sale Ground 1 BHK Two Carparking 1st 2 BHK 2nd 2 BHK 9845623970/ 9739400838

Indiranagar

"INDIRANAGAR 2ND_STAGE 40x61, SITE WITH`OLD HOUSE, SOUTH FACING FOR SALE PRICE:₹28K P.SFT. "ARIES PROPERTY"- 9741134782/ 9448065721

Jayanagar

30X40_EAST facing excellent residential (near Jayanagar Orthopadic Centre) old_house site price, 3,25,00,000/- - Suraj_Realtors -9845232711

JAYANAGAR 1ST Block BDA East Facing 40X45 Site for Sale, (40 Feet Road), Contact: 98450-45747.

Kempegowda Layout

BDA-SITE FOR-SALE 20x30 and 40x60 at Good Location In Nadaprabhu Kempegowda Layout Call:7676900174 6363496142

NADAPRABHU KEMPEGOWDA layout, Sir M.Vishweshwaraiah. Sites for sale. 20x30,30x40, 40x60, 50x80. Manjunatha 9742568746, 9900701637.

Kothanur

2400SQFT, NORTH Facing Site, For Sale, Near Criya Hospital, Nrupathunganagar, Kothanur Main Road, Bangalore-560078. Call: 8904474500

Out-Station

MUMBAI HIGWAY Facing, Near Zaheerabad, 2.25 Acres Clear Title Land For Sale With NA Near to WOXEN UNIVERSITY Beside RESIDENTIAL ZONE. Ph: 9100203631/ 8297771369.

KHB SITE 60X40 East Facing,Housing Board colony kempegowda Layout Near citizen public school Nanjanagudu.Owner :8310030380

Multiple Locations

Anything and Everything in Real Estate.
✧ Short Term and Long Term Investment on quick Resaleable Agriculture, Residential Plots in Bangalore South, Harohalli, Jigani, Thatekere with good Returns in a Short Period, Investment Starting from 5,10,20 Lakhs and above, Property will be registered on Investor 's Name for 100% security against your investment
✧ Investment on Rental Income Properties
✧ Property Monitoring
✧ Property Management
✧ Residential, Commercial, Agricultural, Industrial Properties Buying & Selling
✧ Rental of Residential, Commercial Agricultural Industrial Properties
✧ Loans Arranged on all types of Properties

CONTACT **VICTORY PROPERTIES** (A 35 years Experienced Real Estate Company) 7411692219 8618576685 info@victoryproperties.in www.victoryproperties.in

Mysore Road

SLN-CITY NEAR Kempe Gowda Layout Ajjanahalli, 40x60 East Facing Plot 3500/per sft. Contact Mayur 9880065015

Nagarabhavi

NAGARABHAVI NAGADEVANAHALLI 35x40 West Facing 'B' Katha, Loan Available Near Ring Road, 7000/- PSft: 9845488488

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

NAGARABHAVI RHCS LAYOUT 2nd Stage BDA Approved 30x60 East Facing 40' Road 12500/- PSft: 9845488488

AVAILABLE PAPAREDDYPALYA A-khatha G+1+1 Rent`House North near`Deepa Complex Vishveshwaraiah 6th`North good location 40x60. 9448733456

"SALE 40X60 Commercial Site @ Mallathahalli Layout, Good location Genuine Buyers only Call: 7760388034"

Nelamangala

HONNASANDRA VILLAGE, (Chikka Tanda Village Junction) Ambica farms (Residential) Plot No.75, 5000 Sqft, East Facing, Per Sqft Rs. 800 (Negotiable) Contact BALAJI Ph: 9840108071.

Padmanabha Nagar

SALE A- Khatha 30x40, Padmanabha Nagar, South Facing, Behind Maharaj Agrasen Hospital: 8971799337



Rajarajeshwari Nagar

UNIVERSITY LAYOUT Rajarajeswari Nagar 30x40 SF Behind RR Nagar Police Station 17200/- Per Sqft: 9845488488

***41X40 W/S** Corner Site* sale University Layout, Rajarajeshwarinagar. Beautiful location, 19000/- Sqft. Direct Owner. 9591013777

Ramanagar

RESIDENTIAL CONVERTED RCUDA Approved Site @ Ramanagar 10000Sqft Attached Rajiv Gandhi Health University 1500/- P.Sft Going Cheap. Owner- 9900115519

Sahakarnagar

HEBBAL SHANTHIVANA Near Sahakarnagar Behind Astar Hospital 1120 sft South Facing Excellent Location Call: 9341260828

Vishweshwariah Layout

"VISHVESWARAIAH 6TH-BLOCK 60ft_Road 50x80 South facing Commercial Property with 75 Squares Building. 9845500019/ 7019314962"

***30X40 BDA** Aloted* Site Sale Vishveswaraiah Layout 2nd Block, Ready to Construction,Near 100ft-Road. 9886634578

"VISHVESWARAIAH 1ST-BLOCK 30x40_South/ West facing Site Sale Near_100`ft_Road Genuine Buyers only: 9845268611"

"VISHVESWARAIAH LAYOUT 6th Block near KLE Law College 40x60 North 100%`Vastu, 90%`White. 7022218837

"30X40 SF BDA TOP_LOCATION 40_FEET ROAD VISHVESHWARAIAH LAYOUT 1ST BLOCK SITE SALE- 9845143579"

VISHWESHWARAIAH LAYOUT 8TH BLOCK 30x40 SOUTH FACING BDA SITE NO. 979 CONTACT KRISHNA: 9845059328

VISHWESHWARAIAH LAYOUT 7th Block 20x30 West Facing Sites Available Near Ullal RTO Good Location: 9980433004

"30X38 SF CONVERSION BBMP SITE SALE ARUNACHALAM LAYOUT (NEAR VISHVESHWARAIAH LAYOUT 100 FEET ROAD)- 9480973579"

40X60 SOUTH facing Vishweshwariaha layout 5th block, near 100ft road, 12,000/- psqft, negotiable. Owner. 9342329030.

"VISHVESHWARAIAH LAYOUT 6th-Block 30x40 East facing Site 40'feet Road for sale. 9886294610 (Brokers Excuse)"

VISHWESHWARAIAH 6TH Block 30x40 North Facing Site No. 2297 Price 11500/- 40x60 West Facing: 9845793121

Yelahanka

MATHRU LAYOUT Sale 60X40 North facing with house (G+F) Rs.13800/-sft Direct buyers only: 6366431903/ 9986388438

Udupi

KHB SITE 1725 SQFT HEBRI TOWN AMIDST NATURE WESTERN GHATS 26 LAKHS OWNER CONTACT 9606866368

Basavanagudi

BASAVANGUDI SALE Site 70x90 East Posh Locality Near National College Circle. Rs 55k Negotiable: Shivu 9880004149

R T Nagar

R.T.NAGAR HMT LAYOUT 40X60 Site For-Sale with 2 carparking Excellent Location With old House Call:9341260828

Srirampura

SALE 30X100, Site, 1st cross,Single owner, 2 mins from metro, 17000/sqft, PH:9739732433

Kumaraswamy Layout

40X60 BDA SITE SALE, Kumaraswamy Layout, South Face, Extra Margin Land, Near 108 Ganesha Temple. 9886913658.

Bannerghatta Road

BANNERAGATTA ROAD Nandanavana Layout 30x40, 40x60, 50x80 Rs. 3500/- to 5000/- Psft BROCKERS EXCUSE 9449655947

Flat

Banashankari

GURURAJA LAYOUT Near Devegowda Petrol Bunk, New Luxury 4 BHK FLATS Sale, Ready to move. Call: 9449353535.

Hebbal

PRESTIGE MISTY WATER Hebbal 4BHK, North Facing Flat 3.5Cr 20th Floor Semi-Furnished 2Carpark Vastu 9880211880

Kanakapura Road

POSH FLATS 3 BHK/ 2 BHK at Kanakapura Road near Forum Mall/ Doddakallasandra Metro with Swimming pool, Car parks, Cauvery water, Generator, Vasthu. Narayannagar. Dr.Swamy- 9342247637. Promoters: Anika Projects.

FLATS FOR Sale Near Metro Stations, Kanakapura Road. Price Starts from 35 Lakhs. Sarakki Homes, 9663676464.

Padmanabha Nagar

BHARAT HOUSING_SOCIETY Near Padmanabhanagar New Luxury 3_BHK FLAT 2200`Sqft. Sale, Ready to_Move, Call: 9449353535.

2/3 BHK Flats Sale in Adarsh Astria in Banashankari 2nd Stage BRAND NEW LUXURY APARTMENT with Amenities: 9845039831

Vidyaranyapura

BEL LAYOUT 3BHK Semi Furnished Flat East facing 1650sft,100% Vastu, AC, Solar, Lift, Carparking. 1.15Cr. 9845243757



House

Banashankari

***BANASHANKARI* 6TH** Block,3rd Stage,3rd Phase 40x60 South-facing OLD HOUSE ₹28000/-per sft negotiable.ABHILASHA CONSULTANT: 9480565758

Jayanagar

JAYANAGAR 4TH block 30x50 corner with old house for sale Rs. 29k/sft. Contact 9880669560

J P Nagar

SALE JPNAGAR 2nd Phase Corner Property 30x40 Duplex-House 3BHK 1700sqft Granite-flooring Price 4cr Classic Estates 9845302589

J.P.NAGAR 2ND, Corner 30x40 Duplex House Near Tirumala Temple & Raggigudda Metro Station 3,85,00000/- 9739995042

J.P.NAGAR 2ND, Behind Central Mall, Raggigudda Metro Station 40x60, Two unit house, E-Katha, 6,60,00000/- 9739995042.

HOUSE FOR Sale at J.P Nagar Dollar's Layout, 4BHK, 51X49. 27K per sqft, West facing. Brokers excuse. Contact: 9538944624, 9480222767

Tumkur

DUPLEX HOUSE FOR SALE, 2600 Sft. N/East Corner, ASHOKA NAGARA, TUMKUR. Brokers Excuse. 9449450364, 9448742496

Srirampura

HOUSE FOR SALE in Sriramapuram, Land measuring 1500 sqft. Building 4000+. Ground+2. Covered Parking for 2 Cars. Contact: 9500995889, 9171918285.

Konanakunte Cross

5 BHK BUILT ON 1500 SQ FT DOCTORS COLONY MAIN ROAD. FOR DETAILS MESSAGE 9449852743

Agricultural Land

Magadi Road

LAND FOR SALE 3.34 acres RTC, 30guntas kharab on Magadi main road, 28kms from Bangalore, Highway facing. Contact. 9448061555/ 8310719986.

Tumkur

AGRICULTURE LAND @ Chikkanayakanahalli Tumkur. NH-150A Prime Commercial Land 2.35 Acres with Trees & Houses, Power, Suitable for Petrol Bunk, School, etc. 6Cr. AND 9.5 Acres Agriculture Land, Coconut, Mango Farm, LakeSide. 2.5Cr. both Solar Fencing with Borewell. Only Genuine Buyers Contact Owner: 9448473165

Commercial Land

Mysore Road

SALE, 52,000 sqft, Commercial Land near Gopalan Mall, North Facing, Mysore Road Rajarajeshwarinagar. 9141326819, 9035334418

Commerical

Majestic And Around



East Face Heart of Cottonpet Main Road, Bashyam Road (Near Poorvi Plaza), Near Super Talkies, Suitable for Commercial & Res. Apartment 9449751739, 6361767472

Out-Station

SHIVAMOGGA COMMERCIAL_PLOT FOR SALE 37.5'x110' @.BH.Road, Convent Circle,opp to`Sacred Heart_Church next`to PAI Electronics, Shivamogga, Call-6363869069

Farm House/ Land/ Resorts

Intl Airport Road

WANTED 5/10/ 20/ ACRES LAND ON Chapparkallu Road, IVC Road, Sadahalli, Nandhi Hills Road, Bagalur and Devanahalli Doddabalapur Road Sourroundings. Land Owners Call:9900001973

Industrial & Factory

Peenya

IMMEDIATE SALE, KIADB Vaccant land 5000, 10000, 20000 sqft, Peenya 3rd phase. Prime Location. PEENYA ESTATES: 9844039416

Joint Development

Hennur

JD OR Built to suit Hennur Cross commercial converted land BBMP 'E' Katha, 22000 sqft available for JD or buit to suit. Mob: No. 8310828141/ 6364112404. Send your profile, proposal through whatsapp.

Joint Venture

22,000 SQFT DC_Converted Land Available`for JVC, Apartment Construction.Near Nisarga`Layout Bukkasagar,Jigani Hobli.Call: Owner 9449235457 7349427477.

Residential/ Commercial

Devanahalli

18 GUNTA converted 15 furnished AC rooms rental income 6Lac Nandi hills road 9Cr sale Ph:7019346409

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT: 9845062822/ 8660751654

BDA-SITE WANTED @_Banashankari 6th Stage any Block 30x40, 40x60, 50x80 Immediate Settlement Contact: 98455-55666

Kanakapura Road

WANTED SITE'S 30x40_40x60 BDA or Housing Society allotted Site with Clear Titles, Agent_Excuse. Call: 9663454878.

Malleshwaram

MALLESWARAM-PROPERTY wanted for outright purchase. Lokapriya-9845162933

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

RENTAL PROPERTIES

Accommodation Available

Flats

2 BHK FLAT 1350.Sqft. for RENT at`Malleswaram 11th Cross, only Vegetarians. No Brokers. 8277466761.

Industrial And Factory

AVAILABLE OF Industrial Shed of 170000`sqft at Soukya Road, Whitefield. Available Built-to-Suit Warehouse 160000 sqft.`Vijipura, Hoskote Contact: 9341234288/ 9663224353/ 9845417487.

ಜಾತಿ ದೌರ್ಜನ್ಯ ಮತ್ತು ತಾರತಮ್ಯ ತಡೆಗಟ್ಟಲು ಜನಾಂದೋಲನ

ರೋಹಿತ್ ವೇಮುಲ ಕಾಯ್ದೆ ಜಾರಿಗೆ ಧರಣಿ

ಪ್ರಜಾವಾಣಿ ವಾರ್ತೆ



ರೋಹಿತ್ ವೇಮುಲ ಕಾಯ್ದೆಗೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಲಾಯಿತು. ಪ್ರಜಾವಾಣಿ ಚಿತ್ರ

ಬೆಂಗಳೂರು: ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ದಲಿತ ಮತ್ತು ಬಹುಜನ ವಿದ್ಯಾರ್ಥಿಗಳ ಮೇಲೆ ನಡೆಯುತ್ತಿರುವ ಜಾತಿ ದೌರ್ಜನ್ಯ ಮತ್ತು ತಾರತಮ್ಯ ತಡೆಗಟ್ಟಲು ರೋಹಿತ್ ವೇಮುಲ ಕಾಯ್ದೆ ಜಾರಿಗೊಳಿಸುವಂತೆ ಆಗ್ರಹಿಸಿ ಧರಣಿ ನಡೆಸಲಾಯಿತು.

'ರೋಹಿತ್ ವೇಮುಲ ಕಾಯ್ದೆಗಾಗಿ ಜನಾಂದೋಲನ' ವತಿಯಿಂದ ಶನಿವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಧರಣಿಯಲ್ಲಿ ನೂರಾರು ಜನರು ಪಾಲ್ಗೊಂಡಿದ್ದರು.

ವಿಶ್ವಸಂಸ್ಥೆಯ ಮಾನವ ಹಕ್ಕುಗಳ ವಿಶೇಷ ಪ್ರತಿನಿಧಿ ಕೆ.ಪಿ.ಅಶ್ವಿನಿ ಮಾತನಾಡಿ, 'ರೋಹಿತ್ ವೇಮುಲ ಅವರ ಸಾಂಸ್ಥಿಕ ಹತ್ಯೆಯನ್ನು ಗಟ್ಟಿ ಧ್ವನಿಯಲ್ಲಿ ಖಂಡಿಸಬೇಕು. ಹತ್ತು ವರ್ಷದಲ್ಲಿ ವಿಶ್ವವಿದ್ಯಾಲಯಗಳಲ್ಲಿ ನಡೆದ ಆತ್ಮಹತ್ಯೆಗಳಲ್ಲಿ ಶೇಕಡ 60ರಷ್ಟು ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಇದ್ದಾರೆ. ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ತಾರತಮ್ಯದ ಬಗ್ಗೆ ಮಾತನಾಡಲು ವೇದಿಕೆಯೇ ಇಲ್ಲ' ಎಂದು ಹೇಳಿದರು.

ದಲಿತ, ಹಿಂದುಳಿದ, ಆದಿವಾಸಿ, ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಒಂದು ವೇದಿಕೆಯಾಗಿದೆ. ಶಿಕ್ಷಣದಿಂದ ಸಾಮಾಜಿಕ, ಆರ್ಥಿಕವಾಗಿ ಮೇಲೆ ಬರಲು ಸಾಧ್ಯವಾಗುತ್ತದೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರು ಹೇಳಿದ್ದಾರೆ. ಜಾತಿ ನಿಂದನೆ ಕಾಯ್ದೆಯಲ್ಲಿ ಉನ್ನತ ಶಿಕ್ಷಣಗಳಲ್ಲಿ ನಡೆಯುವ ಜಾತಿ ತಾರತಮ್ಯದ ಬಗ್ಗೆ ಸ್ಪಷ್ಟವಾದ ಪರಿಹಾರವಿಲ್ಲ. ಆದ್ದರಿಂದ ಏಪ್ರಿಲ್ 14ರಂದು ರೋಹಿತ್ ವೇಮುಲ ಕಾಯ್ದೆ ಬಗ್ಗೆ ಸಮಿತಿ ರಚಿಸಬೇಕೆಂದರು.

ಶಿಕ್ಷಣತಜ್ಞ ಶ್ರೀಪಾದ್ ಭಟ್ ಮಾತನಾಡಿ, 'ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಆಗುತ್ತಿರುವ ದೌರ್ಜನ್ಯ ಹೇಳಿಕೊಳ್ಳಲು ಎಸ್‌ಸಿ, ಎಸ್‌ಟಿ ಆಯೋಗಕ್ಕೆ ಅಧ್ಯಕ್ಷರು, ಸದಸ್ಯರು ಇಲ್ಲ. ಈ ಬಗ್ಗೆ ಹೋರಾಟ ಮಾಡಬೇಕು. ಯುಜಿಸಿ ಜಾರಿಗೆ ತರುತ್ತಿರುವ ಎಸ್‌ಸಿ, ಎಸ್‌ಟಿ ಜಾತಿ ತಾರತಮ್ಯ ಕಾಯ್ದೆ ಬಗ್ಗೆ ಅರಿತುಕೊಳ್ಳಬೇಕು. ಅದರಲ್ಲಿನ ದೋಷ ಏನೆಂದರೆ ದಲಿತ ಸಮುದಾಯಗಳಿಂದ ಯಾರನ್ನೂ ಒಳಗೊಳ್ಳುತ್ತಿಲ್ಲ' ಎಂದರು.

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಲೇಖಕ ಶಿವಸುಂದರ್, ವಕೀಲ ವಿನಯ್ ಶ್ರೀನಿವಾಸ್, ಉಪನ್ಯಾಸಕ ಹುಲಿಕುಂಟೆ ಮೂರ್ತಿ, ಚಿಂತಕ ವಿ.ಎಲ್.ನರಸಿಂಹಮೂರ್ತಿ, ಬಸವರಾಜ ಕೌತಾಳ್, ಚಂದ್ರು ತರಹುಣಸೆ, ಅಶ್ವಿನಿ ಬೋಧ್, ಸರೋವರ ಬೆಂಕಿಕೆರೆ ಹಾಜರಿದ್ದರು.

'ನೆಟ್ ಜೀರೊ' ಕಟ್ಟಡ ಅನಿವಾರ್ಯ

ಪ್ರಜಾವಾಣಿ ವಾರ್ತೆ



ರುದ್ರಪ್ಪಯ್ಯ

ಬೆಂಗಳೂರು: ಇಂಧನ ಸಂರಕ್ಷಣೆ ಮತ್ತು ಪಂಚಾಮೃತ ಗುರಿಗಳನ್ನು (ಹವಾಮಾನ ಬದಲಾವಣೆ ಎದುರಿಸಲು ಐದು ಅಂಶಗಳ ಕ್ರಿಯಾ ಯೋಜನೆ) ಸಾಧಿಸಲು 'ನೆಟ್ ಜೀರೊ' ಕಟ್ಟಡಗಳು ಅನಿವಾರ್ಯ ಎಂದು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ ಹೇಳಿದ್ದಾರೆ.

ನಗರದ ಕ್ರೆಡಲ್ ಕಚೇರಿಯಲ್ಲಿ ಆಯೋಜಿಸಿದ್ದ 'ಇಂಧನ ಸಂರಕ್ಷಣೆ ಕಟ್ಟಡ ಸಂಹಿತೆ(ಇಸಿಬಿಸಿ)' ಕುರಿತ ಎರಡು ದಿನಗಳ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಬಿಇಇಯ (ಇಂಧನ ದಕ್ಷತೆ ಬ್ಯೂರೊ) ಇಂಧನ ಸಂರಕ್ಷಣೆ ಕಟ್ಟಡ ಸಂಹಿತೆ, 100 ಕಿಲೋ ವಾಟ್ ಅಥವಾ ಹೆಚ್ಚಿನ ಸಂಪರ್ಕಿತ ಲೋಡ್ ಹೊಂದಿರುವ ಹೊಸ ವಾಣಿಜ್ಯ ಕಟ್ಟಡಗಳಿಗೆ ಇಂಧನ ದಕ್ಷತೆಯ ನಿಯಮಗಳನ್ನು ನಿಗದಿಪಡಿಸಿದೆ. ಪರಿಸರ ಸ್ನೇಹಿ 'ನೆಟ್ ಜೀರೊ' (ನಿವ್ವಳ ಶೂನ್ಯ ಇಂಗಾಲ ಹೊಮ್ಮುವಿಕೆ) ಕಟ್ಟಡಗಳ ನಿರ್ಮಾಣವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಇದು ಅತ್ಯಂತ ಮಹತ್ವದ್ದಾಗಿದೆ. ಈ ನಿಯಮಗಳ ಅಳವಡಿಕೆಯಿಂದ ಸಾಂಪ್ರದಾಯಿಕ ಇಂಧನದ ಬಳಕೆ ತಗ್ಗುತ್ತದೆ' ಎಂದು ಹೇಳಿದರು.

'ದೇಶದಲ್ಲಿ ವಾರ್ಷಿಕವಾಗಿ ಉತ್ಪಾದನೆಯಾಗುವ ಒಟ್ಟು ವಿದ್ಯುತ್ತಿನಲ್ಲಿ ಮೂರನೇ ಒಂದು ಭಾಗ ಕಟ್ಟಡಗಳಿಗೆ ಬಳಕೆಯಾಗುತ್ತಿದೆ. ಹಸಿರುಮನೆ ಅನಿಲ ಹೊರಸೂಸುವಿಕೆಯ ಅತಿದೊಡ್ಡ ಕಾರಣಗಳಲ್ಲಿ ಇದೂ ಒಂದಾಗಿದೆ. 2030ರ ವೇಳೆಗೆ ಹಸಿರುಮನೆ ಅನಿಲ ಹೊರಸೂಸುವಿಕೆ ಕಡಿಮೆ ಮಾಡಬೇಕಿರುವುದರಿಂದ ನೆಟ್ ಜೀರೊ ಕಟ್ಟಡಗಳಿಗೆ ಆದ್ಯತೆ ನೀಡುವುದು ಮುಖ್ಯವಾಗಿದೆ' ಎಂದು ತಿಳಿಸಿದರು.

ಕಾರ್ಯಾಗಾರದಲ್ಲಿ 'ಇಸಿಬಿಸಿ' ಮಾಸ್ಟರ್ ತರಬೇತುದಾರರಾದ ಕನಕರಾಜ್ ಗಣೇಶನ್ ಮತ್ತು ಕುಲದೀಪ್ ಕುಮಾರ್ ಸಾದೇವಿ ಅವರು ವಾಣಿಜ್ಯ ಕಟ್ಟಡಗಳಲ್ಲಿ ಇಂಧನ ದಕ್ಷತೆಯ ಮಾನದಂಡಗಳ ಅನುಸರಣೆಯ ಕುರಿತು ವಿವರಿಸಿದರು.

ನಗರಾಭಿವೃದ್ಧಿ ಇಲಾಖೆ, ಜಿಲ್ಲಾ ಮುನ್ಸಿಪಲ್ ಪ್ರಾಧಿಕಾರಗಳ (ಡಿಎಂಎ) ಅಡಿಯಲ್ಲಿ ಕಾರ್ಯನಿರ್ವಹಿಸುವ ನಗರ ಸ್ಥಳೀಯ ಸಂಸ್ಥೆಗಳು (ಯುಎಲ್‌ಬಿ), ಬಿಬಿಎಂಪಿಯೂ ಸೇರಿ ಸುಮಾರು 200 ಅಧಿಕಾರಿಗಳು ಕಾರ್ಯಾಗಾರದಲ್ಲಿದ್ದರು.

ಪೂರ್ವ ತಾಲ್ಲೂಕು ತಹಶೀಲ್ದಾರ್ ಧೋರಣೆ ವಿರೋಧಿಸಿ ಕಚೇರಿ ಎದುರು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಜಿಲ್ಲಾಧಿಕಾರಿ ಹಾಗೂ ಕಂದಾಯ ಉಪ-ವಿಭಾಗದಿಕಾರಿಗಳ ನಿರ್ದೇಶನಗಳನ್ನು ಪಾಲಿಸದೆ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿರುವ ಪೂರ್ವ ತಾಲ್ಲೂಕು ತಹಶೀಲ್ದಾರ್ ವಿರುದ್ಧ ಪ್ರಜಾ ವಿಮೋಚನಾ ಚಳವಳಿಯ ಕಾರ್ಯಕರ್ತರು ಕೆ.ಆರ್.ಪುರ ತಾಲ್ಲೂಕು ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಬೆಂಗಳೂರು ಪೂರ್ವ ತಾಲ್ಲೂಕು ವ್ಯಾಪ್ತಿಯಲ್ಲಿ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಸರ್ಕಾರಿ ಜಮೀನುಗಳನ್ನು ಬಲಾಢ್ಯರು ಒತ್ತುವರಿ ಮಾಡಿಕೊಂಡು ಖಾಸಗಿ ಬಡಾವಣೆ ನಿರ್ಮಿಸಿಕೊಂಡು ಮಾರಾಟ ಮಾಡುತ್ತಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಹಾಗೂ ಉಪವಿಭಾಗಾಧಿಕಾರಿಗಳಿಗೆ ಮನವಿ ಮಾಡಲಾಗಿದೆ. ತಕ್ಷಣವೇ ಅವರು ತಹಶೀಲ್ದಾರ್ ಅವರಿಗೆ ಒತ್ತುವರಿದಾರರ ಮೇಲೆ ಕ್ರಮ ಜರುಗಿಸುವಂತೆ ದೂರವಾಣಿ ಮತ್ತು ಪತ್ರದ ಮೂಲಕ ನಿರ್ದೇಶನ ನೀಡಿದ್ದಾರೆ. ಆದರೆ ಅವರ ಸೂಚನೆಗಳನ್ನು ಧಿಕ್ಕರಿಸಿ ಬಿಲ್ಡರ್‌ಗಳ ಜೊತೆ ಶಾಮೀಲಾಗುವ ಮೂಲಕ ಸರ್ಕಾರಿ ಜಮೀನುಗಳನ್ನು ಕಬಳಿಸಲು ನೆರವಾಗುತ್ತಿದ್ದಾರೆ ಎಂದು ಪ್ರಜಾ ವಿಮೋಚನಾ ಚಳವಳಿಯ ರಾಜ್ಯಾಧ್ಯಕ್ಷ ಆನೇಕಲ್ ಕೃಷ್ಣಪ್ಪ ಆರೋಪಿಸಿದರು.

ಜಮೀನುಗಳಲ್ಲಿ ಅನಧಿಕೃತ ಬಡಾವಣೆಗಳನ್ನು ನಿರ್ಮಿಸುತ್ತಿರುವವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಸಮಸ್ಯೆ ಬಗೆಹರಿಸುವುದಾಗಿ ತಹಶೀಲ್ದಾರ್ ಭರವಸೆ ನೀಡಿದರು.

'ದುರ್ಬಲರು ಎಂಬ ಭಾವ ತೊರೆಯಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದವರು, ಪರಿಶಿಷ್ಟರು, ಅಲ್ಪ ಸಂಖ್ಯಾತರು ಸೇರಿದಂತೆ ಶೋಷಿತ ವರ್ಗದ ಜನರು ತಾವು ದುರ್ಬಲರು ಎನ್ನುವ ಮನೋಭಾವ ತೊರೆಯಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಬಾಬೂ ಜಗಜೀವನ್ ರಾಮ್ ಅವರ 118ನೇ ಜನ್ಮದಿನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಂತ ರವಿದಾಸರು ಹೇಳುವಂತೆ 'ನನ್ನ ಭಕ್ತಿಯೇ ನನ್ನ ಜಾತಿ, ನನ್ನ ಕರ್ಮವೇ ನನ್ನ ಧರ್ಮ' ಎನ್ನುವ ರೀತಿ ಜಗಜೀವನ್ ರಾಮ್ ಅವರು ರಾಜಕಾರಣ ಮಾಡಿದರು. ದೇಶದಲ್ಲಿ ಅತಿ ಹೆಚ್ಚು ವರ್ಷ ಸಚಿವರಾಗಿದ್ದ ಹೆಗ್ಗಳಿಕೆ ಅವರದಾಗಿತ್ತು ಎಂದು ಅವರು ಹೇಳಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

JOB OPPORTUNITIES

Teachers/ Professors

THIRUMALA VIDYA NIKETHAN SCHOOL
#29, G.D Park Extn, Vyalikaval, Bangalore-560003
Ph: 080-23447560/23447570 Email:- tvns1984@gmail.com
The above mentioned English Medium School requires Trained Science & Arts Graduate/Post Graduate with B.ED teachers to teach the following subjects:-
SANSKRIT, ENGLISH (FL), MATHS, SCIENCE, SOCIAL SCIENCE, COMPUTER FOR PRIMARY & HIGH SCHOOL.
PHYSICAL EDUCATION INSTRUCTOR FOR HIGH SCHOOL WITH B.PED (MALE ONLY)
The applications with relevant qualification and good communication skills are required. Salary as per the standards.
Contact through mail / submit the resume to the Principal within 15 days from the date of advertisement.

SUNRISE SCHOOL Requires Experienced Lady Teachers for Nursery, Primary & High School for-all Subjects (PE-Male) Coffee Board Layout, Hebbal Contact:9008981637 Email: svsres21@gmail.com

VALLABHA INTERNATIONAL School, Somanahalli, Kanakapura Road, Bangalore Needs Pre Primary, Primary And Highschool Teachers 9880439138/ 9591865641

WANTED LECTURERS in Kannada, English, Biology Accountancy, Business Studies, Commerce, Hindi and Computer Science. Vidyavana PU and Degree College, Thirumalashettyhalli Cross, Whitefield, Bengaluru. E-Mail: vidyavanahr@gmail.com WhatsApp: 9663389388

WANTED NEW Holy Saint Kannada-Hindi 16000+ Mathematics/ Science High School Lady Teachers 18000+: 7892461960

D'SOUZA EDUCATIONAL TRUST, Banashankari, Bengaluru. Requires experienced High-School TEACHERS for Maths, Science, Kannada and Social Science. Contact: 9880888022

MMET ENGLISH PRIMARY& HIGH SCHOOL
WANTED TEACHERS
8, Patel Kulappa Road, R.S. Palya, M.S. Nagar Post, B'lore - 33. Ph. 080 - 25450522, 72596 48179, 93428 54850
Please send the CV to mmetschool@gmail.com
Pre - Primary : PUC, NTT / Montessori
Primary : PUC, D.Ed / B.Ed
PET : D.P.Ed
TGT : Social Science, English, Hindi, Kannada (BA, B.Ed,)
Drawing Teacher: BFA / Diploma in fine arts

KNSS VIDYAMANDIR ENGLISH PRIMARY & HIGH SCHOOL
Anandapura, T.C Palya Main Road, Bangalore - 560 036. Ph. No. 080 - 2545 0522, 70224 77196, 94497 09292
Please send the CV to knssvidyamandirephs@gmail.com
Pre Primary : PUC, NTT / Montessori
TGT : English, Hindi, Kannada (BA, B.Ed)
Office Asst: B.Com, Tally
Attractive salary with benefits offered. Walk in interview on 16.04.25 (Wednesday) 10.00 AM onwards at MMET School.

ST.CHARLES HIGH SCHOOL#1086 1st Block,3rd Stage Adarsha Layout Basaveshwaranagar Bangalore-79. Phone:080-23235220/ 9449150749. Invites the Applications from Trained and Experienced English Medium-Teachers for Nursery,Primary,and High School to teach all the Subjects including-Computer, CP.Ed and Drawing.Qualification required:NTT,TCH D.Ed,B.Sc B.Ed,BA B.Ed.

CHRIST ACADEMY INSTITUTE OF LAW
Invites Application for Qualified and Experienced Teaching and Non-Teaching Staff
Teaching Position: **Law Faculty**
Eligibility: NET / Ph.D with Exp.
Non-Teaching Positions: **Office Staff (Senior and Junior)**
Eligibility: Proficiency in English and Kannada preferred
Eligible candidates can apply through Email to: career@calaw.in
Note: SC/ST candidates can apply for reserved vacancies
(A copy of application along with enclosures shall be sent to the Registrar, KSLU, Hubballi)
CHRIST ACADEMY INSTITUTE OF LAW
Christ Nagar, Begur - Koppa Road, Hullahalli, Sakkalawara Post, Bangalore – 560083
www.calaw.in

REQUIRED FEMALE TEACHERS
Required Teachers for English Medium School
Nursery School : Teachers -1 post. PUC NTT.
Higher Primary School :
Social Science-01 B.A / M.A B.Ed.,
Science-01-B.Sc./ M.Sc., B.Ed.
Hindi-01 -B.A., B.Ed., (Hindi)
Computer Science-01 B.C.A / Computer Science Application
Physical Education Teacher-01-B.A., B.P.Ed.
High School :Teachers -1 Post B.Sc./M.Sc. B.Ed.,
*PF and ESIC Facilities are availble
Contact Immediately : Hon. Secretary, Sri Vinayaka Education Society (R) # 218, BanappaPark, Cubbonpet, Bengaluru-02. Ph:22210459, 7406222209.

ABHAY SCHOOL, B.G.Road.Required Female Teachers With (B.P.Ed, NTT, B.Ed & D.Ed) for Primary and High School Walk-in Interview on 11/04/2025 Between 10am to 12pm What'sapp: 9448344014.

ST. MARTIN'S HIGH SCHOOL, 7th Cross Behind Anjan Theatre, Magadi Road, Bangalore-23 Requires HM, Administrative Officer, Academic Supervisor, Librarian. Qualified and trained Teachers for Nursery, Primary and High School to teach all the subjects including Computers, PT, Drawing. Contact 080-23101999/ 9591990199.

SRI SAJJAN RAO VIDYA SAMSTHE English Medium School No. 34 Jain Temple Street, V V Puram Bangalore- 560004 Qualified & Experienced Teachers Required for Science, Maths, English Subjects for State English Medium Syllabus. 1st to 7th Standard BA, BSc with D.Ed/ B.Ed Lady Candidates With 3 to 5 Years Experience. Fluency in English language will be given preference. Candidates to Send Their Resume To the Administrator/ Hon. Trustee Within One Week to, srvschool1991@gmail.com Ph: 080 26679909.

TRIVENI BALAVIKAS Central School CBS Erequires Teachers for Maths, Science, English, Social, Hindi & PE Teachers for Primary & Secondary classes. At Hesaraghatta Main Road. Interested candidates call: 6360291124 OR E-Mail: asha.tmet@gmail.com

SRI.RAMAKRISHNA EDUCATION Society, Halasuru Requires Experienced TEACHERS BSc/MSc,BEd Science, Maths & BA/MA,BEd for English, Kannada,NTT, Crafts Teacher & PE Teacher. 8861248642/ 9845048824 Mail: srkes1963@gmail.com

WANTED ENGLISH and SOCIAL STUDIES TEACHERS for High School Salary Negotiable. Walk-in-Interview on working days 'JNANADEEPTHI ENGLISH SCHOOL' #56, 6th Main Avalahalli, BDA Layout, Girinagar Bangalore-85. Phone: 26748056 (Near pushpak-10 Last Bus-stop)

ST. PHILOMENA PUBLIC SCHOOL, Byalakere, Yelahanka, Bangalore required Trained & Experienced TEACHERS all subjects (Primary & High School) 9480091189/ 9845036582/ stphilomenas118@gmail.com

Receptionist/ Secretary

WANTED MALE FRONT OFFICE RECEPTIONIST for a Hotel in Bangalore with a sound knowledge in Computer handling. Age: Between 22 years and 45 years. Salary Rs. 20,000/- per month Call: 9845007945/ 9886409153/ 9901774027.

Accounts & Finance

REQUIRED ACCOUNTS Assistant with Tally for a firm at Shantinagar Email.resume to shanmug.hariyalee@yahoo.in

Wanted

SALON/SPA VACANCY IN LEADING SALON IN BANGALORE: Stylist/Barber, Spa Therapist, Salon Manager. Contact 9845042670

ಕಪಸಸಂ ಬೇಕಾಗಿದ್ದಾರೆ
ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ಕಾರ್ಯದರ್ಶಿ(1) ಹುದ್ದೆಗೆ ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.
ಕಾರ್ಯದರ್ಶಿ ಹುದ್ದೆಗೆ ಕನಿಷ್ಠ ಶೇ.55 ರಷ್ಟು ಅಂಕಗಳೊಂದಿಗೆ ಎಂ.ಕಾಂ., ಬಿ.ಕಾಂ, ಎಲ್‌ಎಲ್‌ಬಿ, ಪದವಿ ಹೊಂದಿರುವ ಜೊತೆಗೆ ಕಂಪ್ಯೂಟರ್ ಮೂಲಕ ಲೆಕ್ಕಪತ್ರ ನಿರ್ವಹಣೆ, ಕಾನೂನು ಅನುಭವವಿರುವವರು ಅರ್ಜಿ ಸಲ್ಲಿಸಬಹುದು. ಸಹಕಾರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಆದ್ಯತೆ ನೀಡಲಾಗುವುದು. ಅರ್ಹ ಅಭ್ಯರ್ಥಿಗಳು ಈ ಪ್ರಕಟಣೆಯ ದಿನದಿಂದ 7 ದಿನಗಳೊಳಗೆ ಪೂರ್ಣ ವಿವರವುಳ್ಳ ಅರ್ಜಿಯನ್ನು ಭಾವಚಿತ್ರ ಸಮೇತ ಸಂಘದ ಇಮೇಲ್– kjcs2009@gmail.comಗೆ ಕಳುಹಿಸಬಹುದು ಅಥವಾ ಸಂಘದ ವಿಳಾಸಕ್ಕೆ ಅಂಚೆ/ ಕೊರಿಯರ್/ ಖುದ್ದಾಗಿ ತಲುಪಿಸಬಹುದು. ಕರ್ನಾಟಕ ಪತ್ರಕರ್ತರ ಸಹಕಾರ ಸಂಘ, ನಂ.11/4, ಸುವರ್ಣಭವನ, ಎರಡನೇ ಮಹಡಿ, ಕ್ವೀನ್ಸ್ ರಸ್ತೆ, ಬೆಂಗಳೂರು – 560052
ಸಹಿ/– ಸಿಬ್ಬಂದಿ ನೇಮಕಾತಿ ಸಮಿತಿ

Engg/ Production Technical

WANTED AC Operator/Mechanic. Qualification: ITI in Refrigeration & Air Conditioning Trade With First Class Pass With Minimum Of 60% And Two Years Of Experience in U R Rao Satellite Centre (ISRO) near Vimanapura, Bangalore. Contact: 9743700588/ 9886177333.

NATIONAL HIGHWAY CONTRACTOR COMPANY REQUIRES
STRUCTURAL ENGINEER
Minimum 5 years of experience in Structures with PSC Girders.
QUANTITY SURVEYOR
QUALITY CONTROL ENGINEER
For Both Post: Minimum 5 years of experience Highway's & Structure's.
Update your detailed Resume immediately to HRD;
H.P.MADHUKAR & CO.
41,'Prashant' Vijay Nagar Extn,Hubballi- 580 032
email:hrhpmhubli@gmail.com M:9449861320

Marketing & Sales

WANTED MARKETING EXECTIVE for Builders & Developers office at Vijayanagar, Bangalore.
Good Salary & Commission
Qualification: Any Degree
Languages: English, Kannada & Hindi
Contact: 9008005029 / 7829000837

Security & Detectives

WANTED URGENTLY REQUIRED SECURITY FILED OFFICERS AND GENERAL MANAGERS FOR 35 YEARS OLD SECURITY AGENCY. EXPERIENCE IN SECURITY FIELD. CONTACT: CHANDRASHEKAR PATIL PHONE: 9844012530

Domestic Helpers / Housekeeping

WANTED HOUSE maid with experience in cleaning and maintenance of house, must know to converse in English. Good Salary offered. Contact-9900966333

EDUCATIONAL

Admission

MBA 2025-2027 E-MBA 2025-2026 All Specialisations. Week End Regular Classes. Placement Assistance: 9341273990

Training

LEARN TO EXCEL, 10th`Pass or 12th`Pass. Certified Professional Training (Non IT) with 100% Placements. Call: 9148145808.

AUTOMOTIVE

Four Wheelers Selling

Hyundai

EXCELLENT CONDITION Sonet (Kia) 2023 & Royal Enfield Thunder Bird 2014 Sparingly Used For-Immediate Sale Contact:Prasad 6366633192 9740069728

BUSINESS

Business to Business

Agriculture

WORRIED ABOUT ur Agriculture Land,not Maintained,not Planned what to do,We Are here,Happy to Convert your plain Land to Agroforestry Farm all over Karnataka.Contact :7899039851

Business

VENUSCAST
WE ARE **BRANDING & SOCIAL MEDIA MARKETING AGENCY**
Complete Branding Solutions for Educational Institution, Businesses, Corporates, Developers & Builders!
OUR SERVICES
SOCIAL MEDIA MARKETING, META, GOOGLE, LINKEDIN, AUTOBACK, BUS BACK, HOARDINGS.
More Info Call Us
VENUSCAST TECHNOLOGIES PVT. LTD.
7411692219
8618576685
www.venuscast.com/ UAE.INDIA

Business Offers

Finance


URGENT LOAN AVAIL @ 3.5% per annum Personal, Business, Housing take over all types loan. Shivganga Finance. Phone: 8826494700.

PRM/KA/RERA/1251/310/PR/150223/005721
DS-MAX SAMYAK
LUXURIOUS 2 & 3-BHK APARTMENTS
MYSORE ROAD
Near Challaghatta Metro Station
2-BHK HOMES STARTS @ JUST
₹ 61.76 L*
BDA APPROVED | G + 14 FLOORS



8880 003 003
www.dsmaxproperties.com

MINI GEMS MUSEUM



FOR SALE
56 YEARS COLLECTION OF NATURAL REAL PRECIOUS & SEMI PRECIOUS GEMS / MINERAL SPECIMENS / STONE CURIOS / ANIMALS / BIRDS
GEMS STUDDED SILVER JEWELLERY
OLD COINS & NOTES
No. 57, Khazi Street (Near Masjid) Basavanagudi, Bengaluru - 04 Email: gemexgeo@gmail.com
Contact: 98454 99425 / 080 - 4989 4924



SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 12.50 CRORES
Call: 89713-79031 / 96111-99900

PERSONAL

Change of Name

I, HANNA Residing at no.5, Hanumanthappa Road, R.S.Palya, Bangalore- 560033 have changed my name to HANNA UMAPATHY Vide affidavit dated 04-04-2025 before Notary Y.R.CHANDRASEKAR Bangalore.

CHANGE OF NAME
I, **SUMITRA DEVI**, Spouse of Ex. HFL A. Hari Kumar (229309R) Residing at No. 703, 5th Main, 6th Cross, HAL 3rd Stage, Bangalore-560075 have changed my name from **SUMITRA DEVI to SUMITHRA DEVI** vide affidavit dated 03.04.2025 before notary M. Rajendra, Bangalore.

I, SHEKAR S/O Subramanya shastry born on 21/04/1972 residing at No 12 2nd cross D B Kallu Bangalore, have changed my name to Shekar H S vide affidavit No IN - KA46733066837503X dated 07/02/2025 at Bangalore

CHANGE OF NAME
I, **NEERAJ KUMAR** & **KANTI CHOUDHARY** Permanent Resident of No 119, Street No. 5, Near Barat Ghar, RZG Block, Vijay Enclave, Palam Village, Delhi Cantonment, South West Delhi-110045 currently Residing at Bangalore have changed our minor daughter's name from **YASASVINI** to **YUGALAPRIYA** vide affidavit dated 5-4-2025 before Notary C.K. Anupama, Bangalore. Henceforth she shall be known as **YUGALAPRIYA** only.

I, ANEES BANU W/O SYED HYDER HUSSAIN (Late) residing at Alipur, Gauribidanur taluk, Chikkaballapur district, Karnataka have changed my name to SYEDA ANEES BANU and my correct date of birth is 08.07.1949 vide affidavit dated 05.04.2025 before notary Muniswamy Reddy, Gauribidanur

CHANGE OF NAME
I, **SUBRAMANIYA IYER PRABAKAR** S/o. Late V. Subramani R/a #135A, 10th Main, 12th Cross, Malleshpalya, Maruthinagar, Bengaluru 560075 have changed my name to **PRABHAKAR. S.** vide affidavit dated 4.4.2025 sworn before Notary P. Nanjunda, Bengaluru.

CHANGE OF NAME
I, **KOTTU KARIAPPA RUKMANI** aged 69 Yrs, W/o Kodanda Rama L, Residing at # 29, 9th Cross, K.R Layout, Near Inchara Hotel, 6th Phase, J.P. Nagar, Bengaluru-560078, have changed my name to **KOTTUKATHIRA KARIYAPPA RUKMINI** vide affidavit dated 27-03-2025 before notary Meer Hassan, Bengaluru.

I, MATHANDA MUTHANNA NALINI W/o.Ganesh Moovera Erappa, residing at#3-121, Ganesh Nilaya, III Block, Bapuji Extension Kushalnagar- 571234, have changed my name to NALINI MOOVERA GANESH vide`affidavit dated:1.4.2025 sworn before`Notary Manjunatha.S.K. Kushalnagar.

ರಾಜಧಾನಿಯಲ್ಲೇ ಕಚೇರಿ ಉಳಿಸಲು ಸಚಿವರು, ಶಾಸಕರ ಮೂಲಕ ಒತ್ತಡ • ಪ್ರತ್ಯೇಕ ಅಕಾಡೆಮಿ ರಚನೆಗೆ ಒತ್ತಾಯ

ಯಕ್ಷಗಾನ ಅಕಾಡೆಮಿ ಸ್ಥಳಾಂತರ ಪ್ರಯತ್ನ

• ವರುಣ ಹೆಗಡೆ



ಬೆಂಗಳೂರು: ಕರ್ನಾಟಕ ಯಕ್ಷಗಾನ ಅಕಾಡೆಮಿಯ ಕೇಂದ್ರ ಕಚೇರಿ ಸ್ಥಳಾಂತರದ ಪ್ರಸ್ತಾವ ಮತ್ತೆ ಮುನ್ನೆಲೆಗೆ ಬಂದಿದ್ದು, ಇದಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿದೆ. ಇನ್ನೊಂದೆಡೆ, ಸ್ಥಳಾಂತರ ಅನಿವಾರ್ಯವಾದಲ್ಲಿ ಮೂಡಲಪಾಯ ಪ್ರಕಾರಕ್ಕೆ ಪ್ರತ್ಯೇಕ ಅಕಾಡೆಮಿ ರಚಿಸಬೇಕೆಂಬ ಕೂಗು ಎದ್ದಿದೆ.

ಕನ್ನಡ ಭವನದ ಎರಡನೇ ಮಹಡಿಯಲ್ಲಿ ಅಕಾಡೆಮಿಯ ಕಚೇರಿ ಕಾರ್ಯನಿರ್ವಹಿಸುತ್ತಿದೆ. ಇದನ್ನು ಉಡುಪಿ ಅಥವಾ ಮಂಗಳೂರಿಗೆ ಸ್ಥಳಾಂತರಿಸಬೇಕೆಂಬ ಪ್ರಯತ್ನ ನಡೆಯುತ್ತಿದೆ. ಅಕಾಡೆಮಿಯ ಹಾಲಿ ಅಧ್ಯಕ್ಷರಾದ ತಲ್ಲೂರು ಶಿವರಾಮಶೆಟ್ಟಿ ಅವರು ಉಡುಪಿ ಜಿಲ್ಲೆಯವರಾಗಿದ್ದು, 13 ಮಂದಿ ಸದಸ್ಯರಲ್ಲಿ 9 ಮಂದಿ ದಕ್ಷಿಣ ಕನ್ನಡ ಜಿಲ್ಲೆಯವರಾಗಿದ್ದಾರೆ. ಇದರಿಂದಾಗಿ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಆಯ್ಕೆಗೆ ಸಂಬಂಧಿಸಿದ ಸರ್ವ-ಸದಸ್ಯರ ಸಭೆ ಕೂಡ ಮಂಗಳೂರಿನ ತುಳು ಭವನದಲ್ಲಿ ನಡೆದಿತ್ತು. ಉಡುಪಿಯಲ್ಲಿಯೇ ಪ್ರಶಸ್ತಿಗಳ ಘೋಷಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಮಾಡಲಾಗಿತ್ತು. ಇದು ಸಹ ಅಕಾಡೆಮಿ ಸ್ಥಳಾಂತರದ ಚರ್ಚೆಗೆ ಇಂಬು ನೀಡಿದಂತಾಗಿದೆ.

ಯಕ್ಷಗಾನ ಅಕಾಡೆಮಿ ಕಚೇರಿ ಬೆಂಗಳೂರಿನಲ್ಲಿಯೇ ಇರಬೇಕೆಂದು ಆಗ್ರಹಿಸಿ ಅಕಾಡೆಮಿ ಅಧ್ಯಕ್ಷರಿಗೆ ಪತ್ರ ಬರೆದಿರುವ ಮೂಡಲಪಾಯ ಯಕ್ಷಗಾನ ಕಲಾವಿದರು, ಕಚೇರಿ ಸ್ಥಳಾಂತರಿಸು-ವುದಾದರೆ ಮೂಡಲಪಾಯವನ್ನು ಪ್ರತ್ಯೇಕಿಸಬೇಕು ಎಂದು ಆಗ್ರಹಿಸಿದ್ದಾರೆ. ಮೂಡಲಪಾಯ ಕಲಾವಿದರ ಪರವಾಗಿ, ಸಚಿವರಾದ ಕೃಷ್ಣ ಬೈರೇಗೌಡ, ಕೆ.ಎಚ್. ಮುನಿಯಪ್ಪ, ಶಾಸಕರಾದ ಎಸ್.ಆರ್. ವಿಶ್ವನಾಥ್, ಧೀರಜ್ ಮುನಿರಾಜ್ ಸಹ ಪತ್ರ ಬರೆದಿದ್ದು, ಅಕಾಡೆಮಿ ಕಚೇರಿ ಸ್ಥಳಾಂತರ ಮಾಡದಂತೆ ಮನವಿ ಮಾಡಿದ್ದಾರೆ.

ನಿರಂತರ ಪ್ರಯತ್ನ: ಈ ಹಿಂದೆ ಉಮಾಶ್ರೀ ಅವರು ಇಲಾಖೆ ಸಚಿವರಾಗಿದ್ದಾಗ ಅಕಾಡೆಮಿಯ ಕೇಂದ್ರ ಕಚೇರಿಯನ್ನು ಮಂಗಳೂರಿಗೆ ಸ್ಥಳಾಂತರಿಸುವಂತೆ ಆದೇಶ ಹೊರಡಿಸಿದ್ದರು. ದಕ್ಷಿಣ ಕನ್ನಡ, ಕರಾವಳಿ ಪ್ರದೇಶದಲ್ಲಿ ಯಕ್ಷಗಾನದ ಕಲಾವಿದರು ಹೆಚ್ಚಿದ್ದಾರೆ ಎಂಬ ಕಾರಣಕ್ಕೆ ಈ ಆದೇಶ ಹೊರಡಿಸಲಾಗಿತ್ತು. ಆದರೆ, ಸರ್ಕಾರದ ಈ ಕ್ರಮಕ್ಕೆ ಕಲಾವಿದರ ವಲಯದಲ್ಲಿ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಅಕಾಡೆಮಿಯ ಅಂದಿನ ಅಧ್ಯಕ್ಷ ಎಂ.ಎ. ಹೆಗಡೆ ಹಾಗೂ ಸದಸ್ಯರು ಕೂಡ ಆಕ್ಷೇಪಿಸಿದ್ದರು. ಆದ್ದರಿಂದ ನಂತರ ಅಧಿಕಾರಕ್ಕೆ ಬಂದ ಸಮ್ಮಿಶ್ರ ಸರ್ಕಾರ, ಸ್ಥಳಾಂತರದ ಆದೇಶವನ್ನು ಹಿಂಪಡೆದಿತ್ತು. ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿಯೂ ಉಡುಪಿಗೆ ಸ್ಥಳಾಂತರಿಸುವ ಪ್ರಯತ್ನ ನಡೆದಿತ್ತು.

‘ಯಕ್ಷಗಾನ ಕಲೆ ಕರಾವಳಿಗಷ್ಟೇ ಸೀಮಿತವಾಗದೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆಯುತ್ತಿದೆ. ಕಚೇರಿಯನ್ನು ಮಂಗಳೂರು ಅಥವಾ ಉಡುಪಿಗೆ ಸ್ಥಳಾಂತರಿಸಿದರೆ ಮೂಡಲಪಾಯ ಸೇರಿ ಯಕ್ಷಗಾನದ ಇನ್ನಿತರ ಕಲಾ ಪ್ರಕಾರಗಳಿಗೆ ಅಷ್ಟಾಗಿ ಪ್ರೋತ್ಸಾಹ ಸಿಗುವುದಿಲ್ಲ. ಕೇಂದ್ರ ಕಚೇರಿ ಬೆಂಗಳೂರಿನಲ್ಲೇ ಇರುವುದು ಸೂಕ್ತ’ ಎಂಬ ಅಭಿಪ್ರಾಯ ಯಕ್ಷಗಾನ ಕಲಾವಿದರ ವಲಯದಲ್ಲಿ ವ್ಯಕ್ತವಾಗಿದೆ.

ಅಕಾಡೆಮಿಯ ಕೇಂದ್ರ ಕಚೇರಿಯನ್ನು ಸ್ಥಳಾಂತರ ಮಾಡಬಾರದು. ಒಂದು ವೇಳೆ ಸ್ಥಳಾಂತರ ಅನಿವಾರ್ಯವಾದಲ್ಲಿ ಪ್ರತ್ಯೇಕಿಸಿ, ಮೂಡಲಪಾಯ ಕಚೇರಿ ಇಲ್ಲೇ ಇರಿಸಿ

ಎಸ್.ಪಿ. ಮುನಿಕೆಂಪಯ್ಯ, ಮೂಡಲಪಾಯ ಯಕ್ಷಗಾನ ಕಲಾವಿದ

ಕಲಾವಿದರ ಹಿತದೃಷ್ಟಿಯಿಂದ ಅಕಾಡೆಮಿಯ ಕೇಂದ್ರ ಕಚೇರಿ ಬೆಂಗಳೂರಿನಲ್ಲಿಯೇ ಇರಬೇಕು. ಸ್ಥಳಾಂತರ ಮಾಡಿದರೆ ಕಲೆ ಹಾಗೂ ಕಲಾವಿದರಿಗೆ ಸಮಸ್ಯೆ ಆಗುತ್ತದೆ

ಕೊಳಗಿ ಕೇಶವ ಹೆಗಡೆ, ಯಕ್ಷಗಾನ ಭಾಗವತ

ಸ್ಥಳಾಂತರದಿಂದ ಸಮಸ್ಯೆ?

ಯಕ್ಷಗಾನದಲ್ಲಿ ತೆಂಕುತಿಟ್ಟು, ಬಡಗುತಿಟ್ಟು, ಬಡಾಬಡಗುತಿಟ್ಟು, ಮೂಡಲಪಾಯ, ಬಯಲಾಟ, ತಾಳಮದ್ದಳೆ ಸೇರಿ ಹಲವು ಪ್ರಕಾರಗಳಿವೆ. ಎಲ್ಲವೂ ಅಕಾಡೆಮಿ ವ್ಯಾಪ್ತಿಗೆ ಬರುತ್ತವೆ. ಮೂಡಲಪಾಯ ಯಕ್ಷಗಾನ ಪ್ರಕಾರವು ಮಧ್ಯ ಕರ್ನಾಟಕದ ತುಮಕೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಮಂಡ್ಯ, ಮೈಸೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಯ ಬಯಲುನಾಡಿನ ತಾಲ್ಲೂಕುಗಳಲ್ಲಿ ಗುರುತಿಸಿಕೊಂಡಿದೆ. ಕೇಳಿಕೆ ಪ್ರಕಾರವು ಕೋಲಾರ, ಚಿಕ್ಕಬಳ್ಳಾಪುರ, ಘಟ್ಟದಕೋರೆ ಪ್ರಕಾರವು ಚಾಮರಾಜನಗರ, ಪಿರಿಯಾಪಟ್ಟಣದಲ್ಲಿ ಪ್ರಚಲಿತದಲ್ಲಿದೆ. ಮೂಡಲಪಾಯದ ಕಲಾವಿದರು ಬೆಂಗಳೂರಿನ ಸುತ್ತಮುತ್ತ ಇರುವುದರಿಂದ, ಕಚೇರಿ ಸ್ಥಳಾಂತರವಾದಲ್ಲಿ ಮಾಸಾಶನ ಸೇರಿ ವಿವಿಧ ಪ್ರಕ್ರಿಯೆಗೆ ಸಮಸ್ಯೆಯಾಗಲಿದೆ.

‘ಸ್ಥಳಾಂತರದ ಪ್ರಸ್ತಾವವಿಲ್ಲ’

‘ಅಕಾಡೆಮಿಯ ಕೇಂದ್ರ ಕಚೇರಿ ಬೆಂಗಳೂರಿನಲ್ಲಿ ಇರುವುದೇ ಉತ್ತಮ. ಉಡುಪಿ ಅಥವಾ ಮಂಗಳೂರಿಗೆ ಸ್ಥಳಾಂತರಿಸುವ ಬಗ್ಗೆ ಯಾವುದೇ ಪ್ರಸ್ತಾವವಿಲ್ಲ. ಈ ಬಗ್ಗೆ ಚಿಂತನೆ ಸಹ ಮಾಡಿರಲಿಲ್ಲ. ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚೆಯೂ ನಡೆದಿಲ್ಲ. ಸ್ಥಳಾಂತರದ ಬಗ್ಗೆ ಸದಸ್ಯರು ಹಾಗೂ ನಾನು ಆಸಕ್ತಿ ಹೊಂದಿಲ್ಲ. ನಾನು ವಿವಿಧ ಸಂಘಟನೆಗಳಲ್ಲಿ ಸಕ್ರಿಯ-ನಾಗಿರುವುದರಿಂದ ಮಂಗಳೂರು ಹಾಗೂ ಉಡುಪಿಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಸಿದೆ’ ಎಂದು ಅಕಾಡೆಮಿ ಅಧ್ಯಕ್ಷ ತಲ್ಲೂರು ಶಿವರಾಮಶೆಟ್ಟಿ ತಿಳಿಸಿದರು.

‘ಬಿಬಿಎಂಪಿ ಚುನಾವಣೆಗೆ ಸಿದ್ಧತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ಚುನಾವಣೆಗೆ ಜೆಡಿಎಸ್‌ನಿಂದ ಸ್ಪರ್ಧಿಸಲು ಎಲ್ಲ ರೀತಿಯಲ್ಲೂ ಸಿದ್ಧತೆ ಮಾಡಿಕೊಳ್ಳುತ್ತೇವೆ. ಎಲ್ಲ ವಾರ್ಡ್‌ಗಳಲ್ಲೂ ಪಕ್ಷ ಸಂಘಟನೆ ಮಾಡುತ್ತೇವೆ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮತನಾಡಿದ ಅವರು, ‘ಬೆಂಗಳೂರಿನಲ್ಲಿ ಈಗ ಕನ್ನಡೇತರರ ಸಂಖ್ಯೆಯೇ ಹೆಚ್ಚು ಇದೆ. ಉತ್ತರ ಭಾರತೀಯರಿಗೆ ಜೆಡಿಎಸ್ ಎಂಬ ಪಕ್ಷ ಇದೆ ಎಂಬುದೇ ಗೊತ್ತಿಲ್ಲ. ಅವರೆಲ್ಲರನ್ನೂ ಭೇಟಿ ಮಾಡಿ, ಬೆಂಗಳೂರಿಗಾಗಿ ನಮ್ಮ ಪಕ್ಷ ಏನೆಲ್ಲಾ ಮಾಡಿದೆ ಎಂಬುದನ್ನು ತಿಳಿಸುತ್ತೇವೆ. ಜತೆಗೆ ಅಧಿಕಾರಕ್ಕೆ ಬಂದರೆ ಏನೆಲ್ಲಾ ಮಾಡುತ್ತೇವೆ ಎಂಬುದನ್ನೂ ಹೇಳುತ್ತೇವೆ’ ಎಂದರು.

‘ಎಲ್ಲ ವಾರ್ಡ್‌ಗಳಿಗೂ ನಾಯಕರನ್ನು ನಾನೇ ಆಯ್ಕೆ ಮಾಡುತ್ತೇನೆ. ಪ್ರತಿ ಮನೆಗೂ ಭೇಟಿ ನೀಡಿ, ಮತದಾರರ ಜತೆ ಮಾತನಾಡುತ್ತೇನೆ. ಜನರು ನಮಗೆ ಅಧಿಕಾರ, ಶಕ್ತಿ ನೀಡಿದರೆ ಬೆಂಗಳೂರನ್ನು ಸುಸ್ಥಿತಿಗೆ ತರುತ್ತೇವೆ’ ಎಂದು ಅವರು ತಿಳಿಸಿದರು.

‘ನಗರದಲ್ಲಿ ಮಳೆ ಬಂದರೆ ರಸ್ತೆಗಳೆಲ್ಲಾ ಹೊಳೆಗಳಾಗುತ್ತಿವೆ. ರಾಜ-ಕಾಲುವೆಗಳಿಗೆ ತಡೆಗೋಡೆ ನಿರ್ಮಿಸುವ ಕೆಲಸ ನಿಧಾನಗತಿಯಲ್ಲಿದೆ. ಚರಂಡಿ ವ್ಯವಸ್ಥೆ ಸಮರ್ಪಕವಾಗಿಲ್ಲ. ಪ್ರತಿ ಜಾಗಕ್ಕೆ ಭೇಟಿ ನೀಡಿ ಪರಿಶೀಲಿಸಿದರಷ್ಟೇ ಸಮಸ್ಯೆ ಅರ್ಥವಾಗುತ್ತದೆ. ಈ ಸರ್ಕಾರ ಅದನ್ನು ಮಾಡುತ್ತಿಲ್ಲ. ಹೀಗಾಗಿಯೇ ಬೆಂಗಳೂರಿನ ಹೆಸರು ಹಾಳಾಗುತ್ತಿದೆ’ ಎಂದರು.

‘ಜೆ.ಪಿ.ನಗರದ ಕೆಲವು ಭಾಗಗಳಲ್ಲಿ ಮಳೆ ಬಂದಾಗಲೆಲ್ಲಾ ನೀರು ನಿಂತು ಪ್ರವಾಹದಂತಾಗುತ್ತಿತ್ತು. ನಾನು ಮೊದಲ ಬಾರಿ ಮುಖ್ಯಮಂತ್ರಿ ಆದಾಗ, ಖುದ್ದು ಭೇಟಿ ನೀಡಿ ಪರಿಶೀಲಿಸಿದ್ದೆ. ಅಲ್ಲಿನ ಚರಂಡಿ ವ್ಯವಸ್ಥೆ ಸರಿಪಡಿಸಲು ಸೂಚಿಸಿದ್ದೆ. ಅದರಂತೆ ಕಾಮಗಾರಿ ಮಾಡಲಾಗಿತ್ತು. ಅಲ್ಲಿ ಈಗಲೂ ಮಳೆ ಬಂದರೆ ಒಂದಿಂಚೂ ನೀರು ನಿಲ್ಲುವುದಿಲ್ಲ. ಅದೇ ಮಾದರಿಯನ್ನು ಬೆಂಗಳೂರಿನ ಎಲ್ಲೆಡೆ ಅನುಸರಿಸಬೇಕು’ ಎಂದರು.

‘ಕಾವೇರಿ: ಒಗ್ಗಟ್ಟಾಗದಿದ್ದರೆ ಅನ್ಯಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾವೇರಿ ನದಿ ನೀರು ಹಂಚಿಕೆ ವಿಷಯದಲ್ಲಿ ನಮಗೆ ಅನ್ಯಾಯ ಆಗಿದೆ. ಕನ್ನಡಿಗರು ಒಗ್ಗಟ್ಟಾಗಿ ಹೋರಾಡದಿದ್ದರೆ ನಮಗೆ ನ್ಯಾಯ ಸಿಗುವುದಿಲ್ಲ’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಕಾವೇರಿ ನದಿ ರಕ್ಷಣಾ ಸಮಿತಿ ಶನಿವಾರ ಹಮ್ಮಿಕೊಂಡಿದ್ದ ‘ಕಾವೇರಿ ನದಿ ನೀರಿನ ಹಂಚಿಕೆ ಕುರಿತ ಕಾರ್ಯಗಾರ, ವಿಚಾರಸಂಕಿರಣ’ದಲ್ಲಿ ಅವರು ಮಾತನಾಡಿದರು.

‘ಸಂಸತ್‌ನಲ್ಲಿ ಕಾವೇರಿ ವಿಷಯ ಪ್ರಸ್ತಾಪವಾದಾಗ ತಮಿಳುನಾಡಿನ ಎಲ್ಲಾ ಸಂಸದರು ರಾಜಕೀಯ ಭಿನ್ನಾಭಿಪ್ರಾಯ ಬದಿಗಿಟ್ಟು ಒಟ್ಟಾಗಿಬಿಡುತ್ತಾರೆ. ಆದರೆ, ನಮ್ಮಲ್ಲಿ ಏನಾಗುತ್ತಿದೆ? ಎಲ್ಲಕ್ಕೂ ರಾಜಕೀಯ ತರುತ್ತೇವೆ, ಜಾತಿ ತರುತ್ತೇವೆ. ಇದೇ ನಮಗೆ ಮುಳುವಾಗಿದೆ’ ಎಂದು ಅವರು ಬೇಸರ ವ್ಯಕ್ತಪಡಿಸಿದರು.



‘ನ್ಯಾಯಯುತ ನೀರಿನ ಹಕ್ಕಿಗಾಗಿ’ ಕಾರ್ಯಾಗಾರವನ್ನು ನಿರ್ಮಲಾನಂದನಾಥ ಸ್ವಾಮೀಜಿ ಗಿಡಕ್ಕೆ ನೀರು ಹಾಕಿ ಉದ್ಘಾಟಿಸಿದರು. ಎಚ್.ಕೆ. ರಾಮು, ಸಿದ್ಧರಾಮೇಶ್ವರ ಚೇತನ್ಯ ಸ್ವಾಮೀಜಿ, ಆರ್. ಅಶೋಕ,ಎಚ್.ಡಿ. ಕುಮಾರಸ್ವಾಮಿ, ಟಿ.ತಿಮ್ಮೇಗೌಡ, ವಿ.ಗೋಪಾಲಗೌಡ, ಸಿ. ಸೋಮಶೇಖರ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

‘ನಮ್ಮ ನೀರು ನಮ್ಮ ಹಕ್ಕು ಎಂದು ಹೇಳುತ್ತಾ ನಮ್ಮ ತೆರಿಗೆ ಹಣದಲ್ಲಿ ಅಣೆ-ಕಟ್ಟುಗಳನ್ನು ಕಟ್ಟಿ ತಮಿಳುನಾಡಿಗೆ ನೀರು ಹರಿಸುತ್ತಾ ನಾವು ‘ನೀರಗಂಟಿ’ ಕೆಲಸ ಮಾಡುತ್ತಿದ್ದೇವೆ. ಮೇಕೆದಾಟು ಯೋಜನೆ ಬಗ್ಗೆ ರಾಜ್ಯ ಕಾಂಗ್ರೆಸ್ ಸರ್ಕಾರ ದ್ವಿಮುಖ ನೀತಿ ಅನುಸರಿಸುತ್ತಿದೆ’ ಎಂದರು.

‘ತಮಿಳುನಾಡಿನ ಡಿಎಂಕೆ ಜತೆ ನಮ್ಮ ಸಂಬಂಧ ರಾಜಕೀಯಕ್ಕೆ ಮಾತ್ರ ಸೀಮಿತ. ಡಿಎಂಕೆ ಜತೆ ಮೇಕೆದಾಟು ವಿಷಯ ಮಾತನಾಡುವುದಕ್ಕೆ ರಾಜಕೀಯ ಒಪ್ಪಂದ ಮಾಡಿಕೊಂಡಿಲ್ಲ ಎಂದು ಉಪ ಮುಖ್ಯಮಂತ್ರಿ ಹೇಳಿದ್ದಾರೆ. ಇಲ್ಲಿ ನೋಡಿದರೆ ಮೇಕೆದಾಟು ಪಾದಯಾತ್ರೆ ಮಾಡಿ ನಮ್ಮ ನೀರು ನಮ್ಮ ಹಕ್ಕು ಎಂದು ಹೇಳಿಕೊಂಡು ಓಡಾಡುತ್ತಿದ್ದಾರೆ’ ಎಂದು ಟೀಕಿಸಿದರು.

‘ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಜನದಟ್ಟಣೆಯಿಂದ ಮುಂದೆ ಇಡೀ ಕನ್ನಂಬಾಡಿ ಕಟ್ಟೆಯ ನೀರೆಲ್ಲವನ್ನು ಕೊಟ್ಟರೂ ರಾಜಧಾನಿಗೆ ಕುಡಿಯುವ ನೀರು ಸಾಕಾಗದ ಪರಿಸ್ಥಿತಿ ಬರಬಹುದೇನೋ’ ಎಂದು ಆತಂಕ ವ್ಯಕ್ತಪಡಿಸಿದರು.

‘ಕಾವೇರಿ ಬಗ್ಗೆ ಹಿಂದೆ ರಾಜ್ಯದಲ್ಲಿ ನಡೆದಿರುವ ಹೋರಾಟ, ತ್ಯಾಗವನ್ನು ಮರೆಯುತ್ತಿದ್ದೇವೆ. ಚನ್ನಬಸಪ್ಪ, ಎಚ್.ಎನ್. ನಂಜೇಗೌಡ, ದೇವೇಗೌಡರು ನಡೆಸಿದ ಹೋರಾಟಗಳನ್ನು ನಾವು ನೆನಪಿಸಿಕೊಳ್ಳಬೇಕು’ ಎಂದರು.

ಜರ್ಮನ್, ಜಪಾನ್ ಭಾಷೆಗಳ ಪರಿಚಯ: ಸಚಿವ

‘ಸಾಗರೋತ್ತರ ಉದ್ಯೋಗ ಮೇಳ ಶೀಘ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜರ್ಮನಿ, ಜಪಾನ್, ಇಟಲಿಯಲ್ಲಿ ನರ್ಸ್, ಅರೆ ವೈದ್ಯಕೀಯ ವೃತ್ತಿಪರರಿಗೆ ಬೇಡಿಕೆಯಿದೆ. ಮುಂದಿನ ಮೂರು ತಿಂಗಳಲ್ಲಿ ಕೌಶಲಾಭಿವೃದ್ಧಿ ಇಲಾಖೆಯಿಂದ ಸಾಗರೋತ್ತರ ಉದ್ಯೋಗ ಮೇಳ ಆಯೋಜಿಸಲಾಗುವುದು’ ಎಂದು ವೈದ್ಯಕೀಯ ಶಿಕ್ಷಣ, ಕೌಶಲಾಭಿವೃದ್ಧಿ ಮತ್ತು ಜೀವನೋಪಾಯ ಸಚಿವ ಡಾ.ಶರಣ ಪ್ರಕಾಶ ಪಾಟೀಲ ಹೇಳಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯಿಂದ (ಎಫ್‌ಕೆಸಿಸಿಐ) ಶನಿವಾರ ನಡೆದ ಉದ್ಯೋಗ ಉತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಆರೋಗ್ಯ ಕ್ಷೇತ್ರದ ವೃತ್ತಿಪರರಿಗೆ ವಿದೇಶಗಳಲ್ಲಿ ಬೇಡಿಕೆ ಹೆಚ್ಚಿದೆ. ಆದರೆ, ಅವರಿಗೆ ಭಾಷೆ ಅಡ್ಡಿಯಾಗುತ್ತಿದೆ. ಹೀಗಾಗಿ, ರಾಜ್ಯದ ನರ್ಸಿಂಗ್ ಕಾಲೇಜುಗಳಲ್ಲಿ ಜರ್ಮನ್ ಮತ್ತು ಜಪಾನ್ ಭಾಷೆ ಪರಿಚಯಿಸಲು ನಿರ್ಧರಿಸಲಾಗಿದೆ ಎಂದರು.

ಮೇಳಗಳಲ್ಲಿ ಕಂಪನಿಗಳು ಅರ್ಹರಿಗೆ ಉದ್ಯೋಗ ನೀಡುತ್ತಿರುವುದು ಒಳ್ಳೆಯ ಕಾರ್ಯ. ಅವರು ಉತ್ತಮ ರೀತಿಯಲ್ಲಿ ಜೀವನ ಸಾಗಿಸಬೇಕಿದೆ. ಹಾಗಾಗಿ, ಉದ್ಯೋಗದಾತ ಸಂಸ್ಥೆಗಳು ಉತ್ತಮ ಸಂಬಳ ಸೌಲಭ್ಯ ಕಲ್ಪಿಸಬೇಕಿದೆ ಎಂದು ಸಲಹೆ ನೀಡಿದರು.



ಬೆಂಗಳೂರಿನಲ್ಲಿ ಶನಿವಾರ ನಡೆದ ಉದ್ಯೋಗ ಮೇಳದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ ಅವರು, ಉದ್ಯೋಗಾಕಾಂಕ್ಷಿಗಳೊಟ್ಟಿಗೆ ಚರ್ಚಿಸಿದರು. ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ, ಹಿರಿಯ ಉಪಾಧ್ಯಕ್ಷೆ ಉಮಾರೆಡ್ಡಿ ಇದ್ದರು

ಬೆಂಗಳೂರು, ಕಲಬುರಗಿ, ಹುಬ್ಬಳ್ಳಿ, ಬೆಳಗಾವಿ, ಮಂಗಳೂರಿನಲ್ಲಿ ಕೆಲಸ ಮಾಡುವವರಿಗೆ ಜೀವನ ನಿರ್ವಹಣೆಗೆ ಕೈತುಂಬಾ ಸಂಬಳ ಬೇಕಿದೆ. ಅದು ಸಿಗದಿದ್ದರೆ ಮತ್ತೆ ಗ್ರಾಮಗಳಿಗೆ ತೆರಳಿ ನಿರುದ್ಯೋಗಿಯಾಗುವ ಸಾಧ್ಯತೆ ಇರುತ್ತದೆ ಎಂದರು.

ಎಫ್‌ಕೆಸಿಸಿಐ ಕೌಶಲಾಭಿವೃದ್ಧಿ ಸಮಿತಿ ಅಧ್ಯಕ್ಷ ಅಭಿಷೇಕ್ ಬಿ.ಎ. ಮಾತನಾಡಿ, ‘ಮೇಳದಲ್ಲಿ 120ಕ್ಕೂ ಹೆಚ್ಚು ಕಂಪನಿಗಳು ಪಾಲ್ಗೊಂಡಿವೆ. 9 ಸಾವಿರ ಮಂದಿ ನೋಂದಾಯಿಸಿಕೊಂಡಿದ್ದು, ಐದು ಸಾವಿರ ಉದ್ಯೋಗಾಕಾಂಕ್ಷಿಗಳು ಭಾಗವಹಿಸಿದ್ದಾರೆ’ ಎಂದರು.

ಏಪ್ರಿಲ್ 16ರಂದು ಕಲಬುರಗಿಯಲ್ಲಿ ಉದ್ಯೋಗ ಮೇಳ ಆಯೋಜಿಸಲಾಗು-ವುದು. ಬಳಿಕ ಮೈಸೂರು, ಹುಬ್ಬಳ್ಳಿ, ಬೆಳಗಾವಿಯಲ್ಲಿ ವಿಭಾಗಮಟ್ಟದ ಮೇಳ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ಕೌಶಲಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಇ.ವಿ. ರಮಣರೆಡ್ಡಿ ಮಾತನಾಡಿದರು. ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ, ಹಿರಿಯ ಉಪಾಧ್ಯಕ್ಷೆ ಉಮಾರೆಡ್ಡಿ, ಉಪಾಧ್ಯಕ್ಷ ಟಿ. ಸಾಯಿರಾಂ ಪ್ರಸಾದ್, ಡೆವಲಪ್ ಸಂಸ್ಥೆ ಸಂಸ್ಥಾಪಕ ತೇಜಸ್ ಎನ್. ಗೌಡ ಇದ್ದರು.

ಸಂಕ್ಷಿಪ್ತ ಸುದ್ದಿ

32.35 ಲಕ್ಷ ಜನರಿಗೆ ಅನ್ನಭಾಗ್ಯ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಅನ್ನಭಾಗ್ಯ ಯೋಜನೆಯಡಿ 32,35,457 ಫಲಾನುಭವಿ-ಗಳಿಗೆ ₹54.42 ಕೋಟಿ ವೆಚ್ಚ ಮಾಡಲಾಗಿದೆ ಎಂದು ಬಿಬಿಎಂಪಿ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಜಿ. ಕೃಷ್ಣಪ್ಪ ತಿಳಿಸಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಚನೆಯಾಗಿ ಒಂದು ವರ್ಷ ಕಳೆದಿರುವ ಹಿನ್ನೆಲೆಯಲ್ಲಿ ಪ್ರತಿ ಫಲಾನುಭವಿಗಳ ಮನೆ ಮುಂದೆ ರಂಗೋಲಿ ಬಿಡಿಸಿ ಮನೆ-ಮನೆ ಭೇಟಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಗೃಹಲಕ್ಷ್ಮಿ ಯೋಜನೆಯಡಿ 2024ರ ಡಿಸೆಂಬರ್ ಅಂತ್ಯಕ್ಕೆ 8,80,415 ಫಲಾನುಭವಿಗಳಿಗೆ ₹176 ಕೋಟಿ ಭರಿಸಲಾಗಿದೆ. ಗೃಹಜ್ಯೋತಿ ಯೋಜನೆಯಡಿ 33,21,262 ಫಲಾನುಭವಿಗಳಿದ್ದು, 2025ರ ಫೆಬ್ರುವರಿ ಅಂತ್ಯಕ್ಕೆ ₹222.12 ಕೋಟಿ, ಯುವನಿಧಿ ಯೋಜನೆಯಡಿ 12,470 ಫಲಾನುಭವಿಗಳಿಗೆ ₹3.72 ಕೋಟಿ, ಶಕ್ತಿ ಯೋಜನೆಯಡಿ 6,21,52,268 ಫಲಾನುಭವಿಗಳಿದ್ದು, ₹95.63 ಕೋಟಿ ಭರಿಸಲಾಗಿದೆ ಎಂದು ತಿಳಿಸಿದರು.

ಅಕ್ರಮ ಒತ್ತುವರಿ ತೆರವು

ಬೆಂಗಳೂರು: ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ಸುಮಾರು ₹34.17 ಕೋಟಿ ಮೌಲ್ಯದ ಒಟ್ಟು 12 ಎಕರೆ 0.25 ಗುಂಟೆ ಸರ್ಕಾರಿ ಜಮೀನನ್ನು ಜಿಲ್ಲಾಧಿಕಾರಿ ಜಿ. ಜಗದೀಶ ಅವರ ನೇತೃತ್ವದಲ್ಲಿ ತೆರವುಗೊಳಿಸಿ ವಶಕ್ಕೆ ಪಡೆಯಲಾಗಿದೆ.

ಬಿದರಹಳ್ಳಿ, ವರ್ತೂರು, ಸರ್ಜಾಪುರ, ತಾವರೆಕೆರೆ, ಯಲಹಂಕ, ಹೆಸರುಘಟ್ಟ, ದಾಸನಪುರ, ಯಶವಂತಪುರ ಹೋಬಳಿಯಲ್ಲಿ ಒತ್ತುವರಿ ತೆರವುಗೊಳಿಸಲಾಗಿದೆ. ಹೆಚ್ಚುವರಿ ಜಿಲ್ಲಾಧಿಕಾರಿ ಜಗದೀಶ್ ಕೆ. ನಾಯಕ್ ಹಾಗೂ ತಹಶೀಲ್ದಾರ್‌ಗಳು ಉಪಸ್ಥಿತರಿದ್ದರು.

13ಕ್ಕೆ ‘ಪುಕ್ಕಟೆ ಸಲಹೆ’ ನಾಟಕದ ನೂರನೇ ಪ್ರದರ್ಶನ

ಬೆಂಗಳೂರು: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗತಂಡವು ಚುಟುಕು ಸಾಹಿತಿ ಎಚ್.ಡುಂಡಿರಾಜ್ ರಚಿಸಿರುವ ‘ಪುಕ್ಕಟೆ ಸಲಹೆ’ ಹಾಸ್ಯ ನಾಟಕದ 100ನೇ ಪ್ರದರ್ಶನವನ್ನು ಇದೇ 13ರಂದು ಸಂಜೆ 5 ಗಂಟೆಗೆ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಹಮ್ಮಿಕೊಂಡಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಾಟಕದ ನಿರ್ದೇಶಕ ಅಶೋಕ್ ಬಿ., ‘ನಾಟಕದ ನೂರನೇ ಪ್ರದರ್ಶನದ ಕಾರ್ಯಕ್ರಮದಲ್ಲಿ ನಾ. ದಾಮೋದರ ಶೆಟ್ಟಿ, ಬಿ.ಆರ್. ಲಕ್ಷ್ಮಣರಾವ್ ಸೇರಿ ಸಾಹಿತ್ಯ ಕ್ಷೇತ್ರದ ಪ್ರಮುಖರು ಭಾಗವಹಿಸುತ್ತಾರೆ. ಈ ನಾಟಕವು ಜ್ಯೋತಿಷ್ಯದ ಅವಾಂತರಗಳ ಬಗ್ಗೆ ಹಾಸ್ಯ–ವಿಡಂಬನೆಯನ್ನು ಹೊಂದಿದೆ. 90 ನಿಮಿಷ ಅವಧಿಯ ನಾಟಕದಲ್ಲಿ 15ಕ್ಕೂ ಹೆಚ್ಚು ಕಲಾವಿದರು ವಿವಿಧ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ’ ಎಂದು ತಿಳಿಸಿದರು.

ವೆಂಕಟೇಶ್‌ಗೆ ಕನ್ನಡ ಸಂಸ್ಕೃತಿ ಇಲಾಖೆ ಹೊಣೆ



ಎಂ.ವಿ.ವೆಂಕಟೇಶ್

ಬೆಂಗಳೂರು:- ಧಾರ್ಮಿಕ ದತ್ತಿ ಇಲಾಖೆ ಆಯುಕ್ತ ಎಂ.ವಿ.ವೆಂಕಟೇಶ್ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿಯ ಹೆಚ್ಚುವರಿ ಹೊಣೆ ನೀಡಲಾಗಿದೆ.

ಈ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ನಿಭಾಯಿಸುತ್ತಿದ್ದ ಮಂಜುಳಾ ಎನ್. ಅವರನ್ನು ಬಿಡುಗಡೆ ಮಾಡಿದ್ದರಿಂದ ತೆರವಾಗಿದ್ದ ಸ್ಥಾನವನ್ನು ವೆಂಕಟೇಶ್ ಅವರಿಗೆ ವಹಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಸುದ್ದಿ 2 ನಿಮಿಷ

ಶೋಧನಾ ಸಮಿತಿ: ಜಾಫೆಟ್ ಆಯ್ಕೆಗೆ ಆಕ್ಷೇಪ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಅಭ್ಯರ್ಥಿಗಳ ಆಯ್ಕೆಗೆ ರಚಿಸಲಾದ ಶೋಧನಾ ಸಮಿತಿ ಅಧ್ಯಕ್ಷರಾಗಿ ಮಾಜಿ ಕುಲಪತಿ ಎಸ್. ಜಾಫೆಟ್ ಅವರನ್ನು ನೇಮಕ ಮಾಡಿರುವುದಕ್ಕೆ ಕೆಲ ಆಕಾಂಕ್ಷಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕುಲಪತಿಯಾಗಿದ್ದ ಲಿಂಗರಾಜು ಗಾಂಧಿ ಅವರ ಅವಧಿ ಇದೇ ಏಪ್ರಿಲ್‌ಗೆ ಮುಕ್ತಾಯವಾಗುತ್ತಿದ್ದು, ಹೊಸ ಕುಲಪತಿ ಸ್ಥಾನಕ್ಕೆ ಸೂಕ್ತ ಅಭ್ಯರ್ಥಿಗಳ ಆಯ್ಕೆಗೆ ಮಾರ್ಚ್ 29ರಂದು ಜಾಫೆಟ್ ಅಧ್ಯಕ್ಷತೆಯಲ್ಲಿ ಮೂವರು ಸದಸ್ಯರನ್ನು ಒಳಗೊಂಡ ಶೋಧನಾ ಸಮಿತಿ ರಚಿಸಲಾಗಿತ್ತು. ಮಧ್ಯಪ್ರದೇಶದ ಡಾ.ಹರಿಸಿಂಗ್ ಗೌರ್, ವಿಶ್ವವಿದ್ಯಾಲಯದ ಕುಲಪತಿ ನೀಲಿಮಾ ಗುಪ್ತ, ಗುಜರಾತ್ ವಿಶ್ವವಿದ್ಯಾಲ-ಯದ ಕುಲಪತಿ ನೀರ್ಜಾ ಎ ಗುಪ್ತ ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಕರಿಸಿದ್ದಪ್ಪ ಸದಸ್ಯರಾಗಿ ನೇಮಕವಾಗಿದ್ದಾರೆ.

ಕರ್ನಾಟಕ ರಾಜ್ಯ ವಿಶ್ವ ವಿದ್ಯಾಲಯಗಳ ಕಾಯ್ದೆ–2020ರ ಅನ್ವಯ ಶೋಧನಾ ಸಮಿತಿಗೆ ಸದಸ್ಯರು ಅಥವಾ ಅಧ್ಯಕ್ಷರನ್ನು ನಾಮಕರಣ ಮಾಡುವಾಗ ಅದೇ ವಿಶ್ವವಿದ್ಯಾಲಯದಲ್ಲಿ ಕಾರ್ಯ-ನಿರ್ವಹಿಸಿದವರನ್ನು ನೇಮಕ ಮಾಡುವಂತಿಲ್ಲ. ಜಾಫೆಟ್ ಅವರು ನಗರ ವಿಶ್ವವಿದ್ಯಾಲಯದ ಕುಲಪತಿಯಾಗಿ ನಿವೃತ್ತರಾಗಿದ್ದಾರೆ. ಹಾಗಾಗಿ, ಅವರ ನೇಮಕ ಕಾನೂನುಬಾಹಿರ ಎಂದು ಆರೋಪಿಸಿದ್ದಾರೆ.

ಅಕ್ರಮ ಮನೆಗಳಿಗೆ ವಿದ್ಯುತ್ ಸಂಪರ್ಕ: ಪ್ರತಿಭಟನೆ



ಕೆ.ಆರ್.ಪುರ: ಸುಪ್ರೀಂ ಕೋರ್ಟ್ ಆದೇಶವನ್ನು ಉಲ್ಲಂಘಿಸಿ ಹಸಿರು ವ್ಯಾಪ್ತಿಯ ಜಮೀನುಗಳಲ್ಲಿ ಅಕ್ರಮವಾಗಿ ನಿರ್ಮಿಸಿಕೊಂಡಿರುವ ಮನೆಗಳಿಗೆ ನೀಡಿರುವ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವಂತೆ ಒತ್ತಾಯಿಸಿ ಪ್ರಜಾ ವಿಮೋಚನ ಚಳವಳಿಯ ಕಾರ್ಯಕರ್ತರು ಆವಲಹಳ್ಳಿಯ ಉಪವಿಭಾಗದ ಬೆಸ್ಕಾಂ ಕಚೇರಿ ಮುಂದೆ ಪ್ರತಿಭಟಿಸಿದರು.

‘ಹಸಿರು ವ್ಯಾಪ್ತಿಯ ಭೂಮಿಗಳಲ್ಲಿ ಖಾಸಗಿ ಬಡಾವಣೆ ನಿರ್ಮಾಣ ಮಾಡುವಂತಿಲ್ಲ. ಒಂದು ವೇಳೆ ಖಾಸಗಿ ಬಡಾವಣೆಯಲ್ಲಿ ಕಾನೂನು ಬಾಹಿರವಾಗಿ ಕಟ್ಟಿಕೊಂಡಿರುವ ಮನೆಗಳಿಗೆ ಅಕ್ರಮವಾಗಿ ಸಂಪರ್ಕ ನೀಡಿರುವ ಅಧಿಕಾರಿಗಳ ವಿರುದ್ಧ ನ್ಯಾಯಾಂಗನಿಂದನೆ ಪ್ರಕರಣ ದಾಖಲಿಸಿ ಜೈಲಿಗೆ ಕಳಿಸಬೇಕು’ ಎಂದು ಪ್ರಜಾ ವಿಮೋಚನ ಚಳವಳಿಯ ರಾಜ್ಯ ಘಟಕದ ಅಧ್ಯಕ್ಷ ಅನೇಕಲ್ ಕೃಷ್ಣಪ್ಪ ಹೇಳಿದರು.

ಸ್ಥಳೀಯ ಮುಖಂಡರಾದ ಹೂಡಿ ನಾಗರಾಜ್, ಎಸ್ ಕೆ ಮಾದೇಶ್, ಗುಂಜೂರು ವಿಜಯ್, ಆದೂರ್ ಗಣೇಶ್, ರಜಿಯಾ ಬೇಗಂ, ಗುಲಾಬ್ ಜಾನ್, ವೆಂಕಟರಣಪ್ಪ, ಆನೇಕಲ್ ತಾಲ್ಲೂಕಿನ ಮುಖಂಡರಾದ ಹಳೆಹಳ್ಳಿ ರವಿ, ಸಬ್ ಮಂಗಲ ರವಿ, ಲವ, ವೆಂಕಟೇಶ್ ಹಾಜರಿದ್ದರು.

ಚಿತ್ರಾವಳಿ



ಕೆ.ಆರ್.ಪುರ ಸಮೀಪದ ಆದೂರಿನಲ್ಲಿ ಪ್ರಜಾ ವಿಮೋಚನಾ ಚಳವಳಿ ಸಮತಾವಾದ ಸಂಘದ ರಾಜ್ಯ ಪ್ರದಾನ ಕಾರ್ಯದರ್ಶಿ ಆದೂರು ದೇವರಾಜ್ ಅವರು ಸಸಿ ನೆಡುವ ಮೂಲಕ ಮೂಲಕ ಅಂತರ್ಜಲ ವೃದ್ಧಿ, ಪರಿಸರ ಸಂರಕ್ಷಣೆ ಕುರಿತ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪರಿಸರ ಮಂಜು, ಮುಖಂಡರಾದ ಹೆಬ್ಬಾಳ ಮುನಿರಾಜು, ಮಂಡೂರು ಮುನಿಯಪ್ಪ, ಚಂದ್ರಶೇಖರ್, ವೆಂಕಟೇಶ್ ಇದ್ದರು



ಯಲಹಂಕದ ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿರುವ ರಾಷ್ಟ್ರಮಟ್ಟದ ತಂತ್ರಜ್ಞಾನ ಮತ್ತು ಸಾಂಸ್ಕೃತಿಕ ಉತ್ಸವ ‘ಅನಾದ್ಯಂತ–2025’ ಉದ್ಘಾಟನಾ ಸಮಾರಂಭದಲ್ಲಿ ವಿದ್ಯಾರ್ಥಿಗಳು ಸಮೂಹ ನೃತ್ಯ ಪ್ರಸ್ತುತಪಡಿಸಿದರು

ನಗರದಲ್ಲಿ ಇಂದು

250ನೇ ರಕ್ತದಾನ ಶಿಬಿರ: ಉದ್ಘಾಟನೆ: ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ರಾಘವೇಂದ್ರ ಕಾಂಚನ್ ಮರವಂತೆ, ಆಯೋಜನೆ: ಅಭಯಹಸ್ತ, ಸ್ಥಳ: ರಾಜರಾಜೇಶ್ವರಿ ಕಲ್ಯಾಣ ಮಂಟಪ, ಡಾ.ರಾಜ್‌ಕುಮಾರ್ ರಸ್ತೆ, ಬೆಳಿಗ್ಗೆ 8.30

‘ಭಕ್ತಿ ಭಾವಾನಂದಂ’ ಭಜನೆ: ಆಯೋಜನೆ: ಶ್ರೀ ಸತ್ಯಸಾಯಿ ಸೇವಾ ಸಂಸ್ಥೆ, ಸ್ಥಳ: ಸಾಯಿ ರಮೇಶ್ ಹಾಲ್, ಶ್ರೀ ಸತ್ಯ ಸಾಯಿ ಬಾಬಾ ಆಶ್ರಮ, ಕಾಡುಗೋಡಿ, ಬೆಳಿಗ್ಗೆ 9

ಲೋಕ ಕಲ್ಯಾಣಕ್ಕಾಗಿ ಗಿರಿಜಾ ಕಲ್ಯಾಣ: ಉಪಸ್ಥಿತಿ: ಡಿ.ಕೆ. ಶಿವಕುಮಾರ್, ರಾಮಲಿಂಗಾರೆಡ್ಡಿ, ಬೈರತಿ ಸುರೇಶ್, ಜಮೀರ್ ಅಹಮ್ಮದ್, ಶಿವರಾಜ ತಂಗಡಗಿ, ಸಂತೋಷ್ ಲಾಡ್, ಚಲುವರಾಯಸ್ವಾಮಿ, ಎಂ. ಕೃಷ್ಣಪ್ಪ, ಆಯೋಜನೆ: ಗಿರಿಜಾ ಕಲ್ಯಾಣೋತ್ಸವ ಸಮಿತಿ, ಸ್ಥಳ: ವೃಕ್ಷ ಹಾಲ್, ಗಾಯತ್ರಿ ವಿಹಾರ, ಗೇಟ್ ಸಂಖ್ಯೆ 4, ಅರಮನೆ ಮೈದಾನ, ಬೆಳಿಗ್ಗೆ 9

‘ಆರ್ಗ್ಯಾನಿಕ್’ ಸಂತೆ: ಅತಿಥಿ: ಶಶಿಧರ್ ಕೋಟೆ, ಕಲಾ ಪ್ರದರ್ಶನ: ಮುದ್ರಾ ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್, ಆಯೋಜನೆ ಹಾಗೂ ಸ್ಥಳ: ದಿ ಗ್ರೀನ್ ಪಾತ್, ಮಲ್ಲೇಶ್ವರ, ಬೆಳಿಗ್ಗೆ 9.30

ವಸಂತ ಕವಿಗೋಷ್ಠಿ, ರಾಮನವಮಿ ಆಚರಣೆ: ಮುಖ್ಯ ಅತಿಥಿ: ಎಂ.ಎಲ್. ಸುನಂದಮ್ಮ, ಸುಗಂಧಿ, ಅಭಿನಂದನೆ: ಟಿ.ಎನ್. ಚಂದ್ರಶೇಖರರಾವ್, ಆಯೋಜನೆ: ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30



ಜಗ್ಗೇಶ್

ತೆಲುಗು ವಿಜ್ಞಾನ ಸಮಿತಿಯ 72ನೇ ಯುಗಾದಿ ಉತ್ಸವ ಮತ್ತು ಶ್ರೀಕೃಷ್ಣ ದೇವರಾಯ ಪ್ರಶಸ್ತಿ ಪ್ರದಾನ ಸಮಾರಂಭ: ಪ್ರಶಸ್ತಿ ಪುರಸ್ಕೃತರು: ಜಗ್ಗೇಶ್, ಸಾಯಿಕುಮಾರ್, ಉದ್ಘಾಟನೆ: ಶಿವರಾಜ್ ಎಸ್. ತಂಗಡಗಿ, ಮುಖ್ಯ ಅತಿಥಿಗಳು: ಕೆ. ರಘುರಾಮ ಕೃಷ್ಣರಾಜು, ಕೆ. ಶ್ಯಾಮರಾಜು, ಅಧ್ಯಕ್ಷತೆ: ಎ. ರಾಧಾಕೃಷ್ಣರಾಜು, ಆಯೋಜನೆ: ತೆಲುಗು ವಿಜ್ಞಾನ ಸಮಿತಿ, ಸ್ಥಳ: ಶ್ರೀಕೃಷ್ಣ ದೇವರಾಯ ಕಲಾ ಮಂದಿರ, ವೈಯಾಲಿಕಾವಲ್, ಬೆಳಿಗ್ಗೆ 10

ನಾಗಮಣಿ ಎಸ್. ರಾವ್ ಅವರ ಆತ್ಮಕಥನ ‘ಸುದ್ದಿ ಸಂಗಾತಿಯ ಸ್ವಗತ’ ಪುಸ್ತಕ ಬಿಡುಗಡೆ: ಹಂ.ಪ. ನಾಗರಾಜಯ್ಯ, ಮುಖ್ಯ ಅತಿಥಿಗಳು: ಆಯೇಶಾ ಖಾನುಂ, ಎಚ್.ಎಲ್. ಪುಷ್ಪ, ಅಭಿ ನಂದನಾ ನುಡಿ: ಕೆ.ಎಚ್. ಸಾವಿತ್ರಿ, ಕೃತಿ ಪರಿಚಯ: ಮಾಲತಿ ಭಟ್, ಆಯೋಜನೆ: ಮಾಧ್ಯಮ ಚಿಂತನ ವೇದಿಕೆ, ಸ್ಥಳ: ಬಿ.ಎಂ.ಶ್ರೀ. ಸಭಾಂಗಣ, ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30



ನಾಗಮಣಿ ಎಸ್. ರಾವ್

ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ: ಮುಖ್ಯ ಅತಿಥಿ: ಸೂರ್ಯನಾರಾಯಣ, ಆಯೋಜನೆ ಹಾಗೂ ಸ್ಥಳ: ಎಂ.ವಿ.ಜೆ. ಶಿಕ್ಷಣ ಮಹಾವಿದ್ಯಾಲಯ, ಮಾರತ್ತಹಳ್ಳಿ, ಬೆಳಿಗ್ಗೆ 10.30

ಮಾಸದ ಮಂಥನ 73ನೇ ಸಂಭ್ರಮ: ಅತಿಥಿ: ಎಡೆಯೂರು ಮೂಡಲಗಿರಿ, ‘ಶರಣರು ಕಂಡ ಕಲ್ಯಾಣ’ ವಿಷಯದ ಬಗ್ಗೆ ವಿಚಾರಸಂಕಿರಣ, ಸ್ಥಳ: ನಂ.17, ಸಾನಿಧ್ಯ, 1ನೇ ಅಡ್ಡರಸ್ತೆ, ದೊಡ್ಡಕನ್ನೆಲ್ಲಿ, ಬೆಳಿಗ್ಗೆ 11

ಕನ್ನಡ ಗಜಲ್ ಗಾಯನ ಯಾತ್ರೆ: ಅನುರಾಗ್ ಗದ್ದಿ, ಶ್ವೇತ ದೇವನಹಳ್ಳಿ, ವಾದ್ಯ ಸಹಕಾರ: ಶ್ರೀನಿವಾಸ್, ಗಿರೀಶ್ ಕೋಳಾಲ್, ಶರಣು ಗೋಗಿ, ಆಯೋಜನೆ: ಧ್ವನಿ ಪ್ರತಿಷ್ಠಾನ, ಸ್ಥಳ: ಪ್ರಯೋಗ್ ಸ್ಟುಡಿಯೊ ಕತ್ರಿಗುಪ್ಪೆ, ಮಧ್ಯಾಹ್ನ 1.30

ಹನುಮಗಿರಿ ಮೇಳದಿಂದ ಯಕ್ಷಗಾನ-ಪ್ರಸಂಗ: ‘ನಮೋ ರಘುವಂಶ ದೀಪ’, ಆಯೋಜನೆ ಹಾಗೂ ಸ್ಥಳ: ತ್ರಿಗುಣಾತ್ಮಿಕಾ ಶ್ರೀ ಮಹಾಲಕ್ಷ್ಮೀ ದೇವಸ್ಥಾನದ ಸಭಾಂಗಣ, ಸರಸ್ವತೀಪುರ, ಹುಳಿಮಾವು, ಮಧ್ಯಾಹ್ನ 3

ಹತ್ತು ವರ್ಷಗಳ ಪಯಣ, ‘ಅರಿವು’ ಮಾಸಪತ್ರಿಕೆಯ ವಿಶೇಷಾಂಕ ಬಿಡುಗಡೆ: ಪಾರ್ವತಮ್ಮ, ಆಯೋಜನೆ: ಅಂಬೇಡ್ಕರ್ ವಿಚಾರ ವೇದಿಕೆ, ಸ್ಥಳ: ಗಾಂಧಿಭವನ, ಕುಮಾರಕೃಪ ರಸ್ತೆ, ಸಂಜೆ 4

ಬಿ.ಎಂ. ಶ್ರೀನಿವಾಸಯ್ಯ ಸ್ಮಾರಕ ಅಣಕು ನ್ಯಾಯಾಲಯ ಸ್ಪರ್ಧೆ: ಮುಖ್ಯ ಅತಿಥಿಗಳು: ರಂಗಸ್ವಾಮಿ ನಟರಾಜ್, ಸುಧೀಶ್ ಪೈ, ಎಂ.ಕೆ. ರಮೇಶ್, ಉಪಸ್ಥಿತಿ: ಬಿ.ಎಸ್. ರಾಗಿಣಿ ನಾರಾಯಣ್, ಪಿ. ದಯಾನಂದ ಪೈ, ಅಧ್ಯಕ್ಷತೆ: ಅವಿರಾಮ್ ಶರ್ಮ, ಆಯೋಜನೆ: ಬಿಎಂಎಸ್ ಎಜುಕೇಷನಲ್ ಟ್ರಸ್ಟ್, ಬಿಎಂಎಸ್ ಕಾನೂನು ಕಾಲೇಜು, ಸ್ಥಳ: ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು ಸಭಾಂಗಣ, ಬಸವನಗುಡಿ, ಸಂಜೆ 4.30

ಸಂಗೀತ ಬೈಠಕ್: ಗಾಯನ: ವಿಶ್ವಾಸ್ ಶಿರಗಾಂವ್ಕರ್, ತಬಲಾ: ಉದಯರಾಜ್ ಕರ್ಪೂರ್, ಹಾರ್ಮೋನಿಯಂ: ಮಧುಸೂದನ್ ಭಟ್, ಆಯೋಜನೆ ಹಾಗೂ ಸ್ಥಳ: ಸಪ್ತಕ ಸಭಾಂಗಣ, ಶುಶ್ರಾವ್ಯ, ಮಿಲ್ಕ್ ಕಾಲೊನಿ, ಮಲ್ಲೇಶ್ವರ, ಸಂಜೆ 5.30

ಪ್ರಥಮ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ಕಲಾ ಪ್ರದರ್ಶನ: ಆಯೋಜನೆ ಹಾಗೂ ಸ್ಥಳ: ದ್ವಿಜ ಕಲಾ ಗ್ಯಾಲರಿ, ಸಂಜೆ 5.30

ಭರತನಾಟ್ಯ ರಂಗಪ್ರವೇಶ: ಅನಘಾ ಗುರುಪ್ರಸಾದ್ ರಾವ್, ಮುಖ್ಯ ಅತಿಥಿಗಳು: ನಾಗಮಣಿ ಶ್ರೀನಾಥ್, ಬೃಂದಾ ಕೃಷ್ಣ ಅಯ್ಯಂಗಾರ್, ನಂದಿನಿ ಹರಿನಾಥ್, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ 8ನೇ ಬ್ಲಾಕ್, ಸಂಜೆ 6



ಪಂಡಿತ್ ಗೌರಂಗ್ ಕೋಡಿಕಲ್ ಸ್ಮರಣಾರ್ಥ ಸಂಗೀತ ಕಛೇರಿ: ನಿಶಾಂತ್ ಪಣಿಕರ್, ಕೃಷ್ಣೇಂದ್ರ ಸಮರ್ಥ್, ಶಶಿಭೂಷಣ ಗುರ್ಜರ್, ಸೂರ್ಯ ಉಪಾಧ್ಯ, ಆಯೋಜನೆ ಹಾಗೂ ಸ್ಥಳ: ಕೆನರಾ ಯೂನಿಯನ್, ಮಲ್ಲೇಶ್ವರ, ಸಂಜೆ 6

ಬೆಂಗಳೂರು ಕರಗ ಮಹೋತ್ಸವ: ವಿಶೇಷ ಪೂಜೆಗಳು ಮತ್ತು ಮಹಾಮಂಗಳಾರತಿ, ಆಯೋಜನೆ: ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ, ತಿಗಳರಪೇಟೆ, ಸಂಜೆ 7.30

ರಾಮನವಮಿ ಮಹೋತ್ಸವ ವಿಶೇಷ ಶ್ರೀರಾಮನವಮಿ ಮಹೋತ್ಸವ: ಅಭಿಷೇಕ, ಪೂಜೆ, ಪುಷ್ಪಾಲಂಕಾರ, ಮಹಾಮಂಗಳಾರತಿ, ಭಕ್ತಿಗೀತೆ, ಆಯೋಜನೆ ಹಾಗೂ ಸ್ಥಳ: ದಾರಿ ಆಂಜನೇಯಸ್ವಾಮಿ ದೇವಸ್ಥಾನ, ಯಶವಂತಪುರ, ಬೆಳಿಗ್ಗೆ 6ರಿಂದ

ನಗರ ಸಂಕೀರ್ತನ: ನರ್ತನ, ಸಮೂಹ ಗಾಯನ, ಆಯೋಜನೆ: ಸ್ವಾಭಾವಿಕಿ ಕಲೆ ಮತ್ತು ಸಂಸ್ಕೃತಿ ಸಂಸ್ಥೆ, ಸ್ಥಳ: ಹನುಮಂತನಗರದ ರಾಮಾಂಜನೇಯ ದೇವಸ್ಥಾನದಿಂದ ಗೋವರ್ಧನಗಿರಿ ಕ್ಷೇತ್ರ, ಬೆಳಿಗ್ಗೆ 7ರಿಂದ

ರಾಮನವಮಿ ಸಂಭ್ರಮಾಚರಣೆ: ಭಜನೆ, ಮಂಗಳಾರತಿ, ಪ್ರಸಾದ ವಿತರಣೆ, ಭಕ್ತಿ ಸಂಗೀತ, ಆಯೋಜನೆ ಹಾಗೂ ಸ್ಥಳ: ಶ್ರೀಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ಬೆಳಿಗ್ಗೆ 9ರಿಂದ

ರಾಮನವಮಿಯ 67ನೇ ವಾರ್ಷಿಕೋತ್ಸವ: ಸುಪ್ರಭಾತ ಸೇವೆ, ತೋಮಾಲೆ ಸೇವೆ, ಮಹಾಮಂಗಳಾರತಿ, ಅರವಂಟಿಕೆ ಸೇವೆ, ಭಜನೆ ಸೇವೆ, ತಿರುಪ್ಪಾವಡಿ ಸೇವೆ, ಸಹಸ್ರ ದೀಪಾಲಂಕಾರ, ಅಷ್ಟಾವದಾನ ಸೇವೆ, ಆಯೋಜನೆ ಹಾಗೂ ಸ್ಥಳ: ಕೋದಂಡರಾಮ ದೇವಸ್ಥಾನ, ಶ್ರೀರಾಮಮಂದಿರ ರಸ್ತೆ, ಸಂಪಂಗಿರಾಮನಗರ, ಬೆಳಿಗ್ಗೆ 5ರಿಂದ ರಾತ್ರಿ 10

87ನೇ ರಾಮೋತ್ಸವ ಸಮಾರಂಭ: ಬೆಳಿಗ್ಗೆ 10.15ರಿಂದ ಮಧ್ಯಾಹ್ನ 12.30ರವರೆಗೆ **ಪೂಜಾ–ಹೋಮ ಕೈಂಕರ್ಯ, ಸಂಜೆ 4.15ರಿಂದ ನಾದಸ್ವರ ಕಛೇರಿ:** ಎಂ. ಮುರಳಿ, ಸಂಜೆ 5.30ರಿಂದ ಉದ್ಘಾಟನೆ ಸಮಾರಂಭ, ಅಧ್ಯಕ್ಷತೆ: ರವಿ ಸುಬ್ರಹ್ಮಣ್ಯ, ಮುಖ್ಯ ಅತಿಥಿಗಳು: ಆರ್.ಕೆ. ಪದ್ಮನಾಭ, ಕಟ್ಟೆ ಸತ್ಯನಾರಾಯಣ, ಡಿ.ಟಿ. ಪ್ರಕಾಶ್, ಸಂಜೆ 7.15ರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ: ಅಕ್ಷತಾ ರುದ್ರಪಟ್ಟಣ (ಗಾಯನ), ಜನಾರ್ದನ್ ಎಸ್. (ಪಿಟೀಲು), ವಿನಯ್ ಎಂ. ನಾಗರಾಜನ್ (ಮೃದಂಗ), ಆಯೋಜನೆ: ಎನ್.ಆರ್. ಕಾಲೊನಿ ಶ್ರೀರಾಮಮಂದಿರಂ ಟ್ರಸ್ಟ್, ಸ್ಥಳ: ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಬಸವನಗುಡಿ

32ನೇ ಶ್ರೀರಾಮನವಮಿ ಸಂಗೀತೋತ್ಸವ: ವೀಣೆ: ಸಹನಾ ಎಸ್.ವಿ., ಮೃದಂಗ: ಡೆಲ್ಲಿ ಸಾಯಿರಾಮ್, ಘಟ: ಓಂಕಾರ್ ಜಿ., ಸಂಗೀತ ಕಛೇರಿ: ಗಾಯನ: ಮಲ್ಲಾಡಿ ಸೂರಿಬಾಬು, ಶ್ರೀರಾಮ್ ಪ್ರಸಾದ್, ರವಿಕುಮಾರ್, ಪಿಟೀಲು: ಮಲ್ಲಾಡಿ ಸಿಂಧು ರಾಗೇಶ್ವರಿ, ಮೃದಂಗ: ಮಲ್ಲಾಡಿ ಶಿವಾನಂದ್, ಮಲ್ಲಾಡಿ ಅರವಿಂದ್ ಕಾರ್ತಿಕ್, ಆಯೋಜನೆ ಹಾಗೂ ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 4.30ರಿಂದ

71ನೇ ಶ್ರೀರಾಮನವಮಿ ಸಂಗೀತ ಮಹೋತ್ಸವ: ಸಂಕ್ಷಿಪ್ತ ಪಾರಾಯಣ: ಯಮುನ ರಾಮಪ್ರತಿಯ ಮತ್ತು ಶಿಷ್ಯರು, ವೀಣಾವಾದನ: ಎಂ.ಎನ್. ಪ್ರಶಾಂತ್ ಅಯ್ಯಂಗಾರ್ ಮತ್ತು ವೃಂದ, ಆಯೋಜನೆ: ಕಾರಂಜಿ ಶ್ರೀರಾಮ ಸೇವಾ ಸಮಿತಿ ಟ್ರಸ್ಟ್, ಸ್ಥಳ: ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನ, ಬಸವನಗುಡಿ, ಸಂಜೆ 5.30

ಶ್ರೀರಾಮ ನವಮಿ ಸಂಗೀತೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ: ಮನಮೋಹನ್ ಕೃಷ್ಣ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಮತ್ತು ಆಂಜನೇಯ ಸ್ವಾಮಿಗಳ ದೇವಸ್ಥಾನ, 8ನೇ ಕ್ರಾಸ್, ಮಲ್ಲೇಶ್ವರ, ಸಂಜೆ 6

ವಸಂತ ನವರಾತ್ರಿ ಶ್ರೀರಾಮೋತ್ಸವ: ಬೆಳಿಗ್ಗೆ 7ರಿಂದ ಮಧ್ಯಾಹ್ನ 1ರವರೆಗೆ ಪಂಚಾಮೃತ ಅಭಿಷೇಕ, ತೊಟ್ಟಿಲು ಸೇವೆ, ಪಾನಕ ಸೇವೆ, ಸಂಜೆ 5ರಿಂದ 7ರವರೆಗೆ ಹರಿನಾಮ ಸಂಕೀರ್ತನೆ: ಸ್ತುತಿವಾಹಿನಿ ತಂಡ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಸಂಕ್ಷಿಪ್ತ ಸುದ್ದಿ

ಕೃಷಿತ್ಯಾಜ್ಯದ ಬೆಂಕಿ ರೈತ ಸಜೀವ ದಹನ

ಪ್ರಜಾವಾಣಿ ವಾರ್ತೆ

ಕುಂದಾಪುರ (ಉಡುಪಿ): ಗದ್ದೆಯಲ್ಲಿನ ಕೃಷಿ ತ್ಯಾಜ್ಯದ ರಾಶಿಗೆ ಬೆಂಕಿ ಹಾಕಿದ ಸಂದರ್ಭದಲ್ಲಿ ಬೆಂಕಿಯ ಕೆನ್ನಾಲಿಗೆಗೆ ಸಿಲುಕಿ ರೈತರೊಬ್ಬರು ಗದ್ದೆಯಲ್ಲೇ ಸಜೀವ ದಹನವಾದ ಘಟನೆ ಕಾಳಾವರದ ಬಡಾಗುಡ್ಡೆ ಎಂಬಲ್ಲಿ ಶನಿವಾರ ಮಧ್ಯಾಹ್ನ ನಡೆದಿದೆ.

ಕಾಳಾವರದ ಕೃಷಿಕ ಮಹಾಲಿಂಗ ದೇವಾಡಿಗ (80) ಮೃತಪಟ್ಟವರು.

ಕೃಷಿ ಕಾರ್ಯಕ್ಕೆ ಅನುಕೂಲವಾಗಲಿ ಎಂದು ತಮ್ಮ ಗದ್ದೆಯಲ್ಲಿ ಸಂಗ್ರಹಿಸಿಟ್ಟಿದ್ದ ಕೃಷಿ ತ್ಯಾಜ್ಯಕ್ಕೆ ಬೆಂಕಿ ಹಾಕಲು ಇವರು ಮಗಳು ಬೇಬಿಯೊಂದಿಗೆ ಗದ್ದೆಗೆ ಬಂದಿದ್ದರು. ಮಧ್ಯಾಹ್ನ ಬೆಂಕಿ ಹಾಕಿದ್ದರು. ಈ ಸಂದರ್ಭದಲ್ಲಿ ಬೆಂಕಿ ಸುತ್ತಲೂ ಆವರಿಸಿಕೊಂಡು, ಹತ್ತಿರದಲ್ಲೇ ಇದ್ದ ನಾಗಬನಕ್ಕೂ ತಗುಲಿದೆ.

ಬೇಬಿ ಅವರು ಅಲ್ಲಿಗೆ ತೆರಳಿ ಬೆಂಕಿ ನಂದಿಸಲು ಪ್ರಯತ್ನಿಸುತ್ತಿದ್ದಾಗ, ಇತ್ತ ಮಹಾಲಿಂಗ ದೇವಾಡಿಗರು ಬೆಂಕಿಯ ಕೆನ್ನಾಲಿಗೆಯಲ್ಲಿ ಸಿಲುಕಿ ಸಜೀವ ದಹನವಾಗಿದ್ದಾರೆ.

ಅಧಿಕಾರಿ ಬ್ಯಾಗ್‌ನಲ್ಲಿ ₹13 ಲಕ್ಷ ನಗದು ಪತ್ತೆ!

ಚಿಕ್ಕಬಳ್ಳಾಪುರ: ಬಾಗೇಪಲ್ಲಿ ತಾಲ್ಲೂಕಿನ ಸಹಾಯಕ ಕೃಷಿ ಅಧಿಕಾರಿ ಶಂಕರಯ್ಯ ಅವರನ್ನು ಲೋಕಾಯುಕ್ತ ಪೊಲೀಸರು ಶನಿವಾರ ನಗರದ ಕೃಷಿ ಇಲಾಖೆ ಜಂಟಿ ನಿರ್ದೇಶಕರ ಕಚೇರಿಯಲ್ಲಿ ದಾಳಿ ನಡೆಸಿ ವಶಕ್ಕೆ ಪಡೆದಿದ್ದಾರೆ.



ಶಂಕರಯ್ಯ

ಗುತ್ತಿಗೆದಾರರೊಬ್ಬರ ಬಿಲ್ ಬಿಡುಗಡೆಗೆ ಶಂಕರಯ್ಯ ₹3 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ಚಿಕ್ಕಬಳ್ಳಾಪುರ ಕೃಷಿ ಇಲಾಖೆ ಜಂಟಿ ನಿರ್ದೇಶಕರ ಕಚೇರಿಗೆ ಹಣ ತಂದು ಕೊಡುವಂತೆ ತಿಳಿಸಿದ್ದರು. ಗುತ್ತಿಗೆದಾರ ₹2 ಲಕ್ಷವನ್ನು ಶಂಕರಯ್ಯ ಅವರಿಗೆ ನೀಡುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ. ಶಂಕರಯ್ಯ ಅವರ ಬಳಿ ಇದ್ದ ಬ್ಯಾಗ್ ವಶಕ್ಕೆ ಪಡೆದಾಗ ಅದರಲ್ಲಿ ₹13,03,300 ಹಣ ಪತ್ತೆಯಾಯಿತು.

ಈ ಹಣ ಯಾರದ್ದು, ಶಂಕರಯ್ಯ ಯಾರ ಪರವಾಗಿ ಹಣ ಪಡೆದಿದ್ದಾರೆ, ಜಂಟಿ ನಿರ್ದೇಶಕರ ಕಚೇರಿಗೆ ಹಣ ತಲುಪಿಸಿದ್ದು ಏಕೆ? ಬಾಗೇಪಲ್ಲಿ ತಾಲ್ಲೂಕು ಕೃಷಿ ಇಲಾಖೆ ಅಧಿಕಾರಿಗಳು ಮತ್ತು ಜಿಲ್ಲೆಯ ಕೃಷಿ ಇಲಾಖೆ ಉನ್ನತ ಅಧಿಕಾರಿಗಳು ಕೂಡ ಈ ಪ್ರಕರಣದಲ್ಲಿ ಶಾಮೀಲಾಗಿದ್ದಾರೆಯೇ ಎನ್ನುವ ಬಗ್ಗೆ ಲೋಕಾಯುಕ್ತ ಪೊಲೀಸರು ರಾತ್ರಿವರೆಗೂ ಅವರನ್ನು ವಿಚಾರಣೆಗೆ ಒಳಪಡಿಸಿದರು.

‘ಕ್ರಾಂತಿಕಾರಿ ರಥಯಾತ್ರೆ’ಗೆ ಚಾಲನೆ

ಹನೂರು (ಚಾಮರಾಜನಗರ ಜಿಲ್ಲೆ): ಒಳಮೀಸಲಾತಿ ಶೀಘ್ರ ಜಾರಿಗೆ ಆಗ್ರಹಿಸಿ ರಾಜ್ಯದಾದ್ಯಂತ ಸಂಚರಿಸಲಿರುವ ‘ಕ್ರಾಂತಿಕಾರಿ ರಥಯಾತ್ರೆ’ಗೆ ಮಹದೇಶ್ವರ ಬೆಟ್ಟದಲ್ಲಿ ಶನಿವಾರ ವಿಚಾರವಾದಿ ಭಾಸ್ಕರ್ ಪ್ರಸಾದ್ ಹಾಗೂ ವಕೀಲ ಅರುಣ್‌ಕುಮಾರ್ ನೇತೃತ್ವದಲ್ಲಿ ಪೌರಕಾರ್ಮಿಕ ಮಹಿಳೆಯರಿಂದ ಚಾಲನೆ ನೀಡಲಾಯಿತು.

ಈ ಸಂದರ್ಭ ಭಾಸ್ಕರ್ ಪ್ರಸಾದ್ ಮಾತನಾಡಿ, ‘ಈಗಾಗಲೇ ಹರಿಹರದಿಂದ ಬೆಂಗಳೂರಿನವರೆಗೆ ಸರ್ಕಾರದ ವಿರುದ್ಧ ಪಾದಯಾತ್ರೆ ನಡೆಸಿ ಸರ್ಕಾರವನ್ನು ಎಚ್ಚರಿಸಲಾಗಿದೆ. ಅದರ ಪರಿಣಾಮ ನಾಗಮೋಹನ ದಾಸ್ ಆಯೋಗದ ಮಧ್ಯಂತರ ವರದಿ ಸ್ವೀಕರಿಸಿ, ಎರಡು ತಿಂಗಳ ಗಡುವು ನೀಡಿದೆ. ಆ ಎರಡು ತಿಂಗಳು ನಮ್ಮ ಹೋರಾಟ ಮತ್ತು ಚಳವಳಿಯನ್ನು ನಿರಂತರ ಮತ್ತು ಜೀವಂತವಾಗಿರಿಸಲು ಇಂದಿನಿಂದ ‘ಕ್ರಾಂತಿಕಾರಿ ರಥಯಾತ್ರೆ’ ಹಮ್ಮಿಕೊಳ್ಳಲಾಗಿದೆ’ ಎಂದರು.

ಚಿಲಿ ಜತೆಗೆ ನಾವೀನ್ಯತಾ ಸಹಕಾರ

ಬೆಂಗಳೂರು: ನಾವೀನ್ಯತೆ ಮತ್ತು ತಂತ್ರಜ್ಞಾನ ಸಹಕಾರ ಉತ್ತೇಜನ ಸಂಬಂಧ ಕರ್ನಾಟಕ ಸರ್ಕಾರ ಮತ್ತು ಚಿಲಿ ಸರ್ಕಾರವು ಉದ್ದೇಶ ಪತ್ರಕ್ಕೆ ಸಹಿ ಹಾಕಿವೆ.

ನಗರದಲ್ಲಿ ಶನಿವಾರ ಆಯೋಜಿಸಲಾಗಿದ್ದ ‘ನಾವೀನ್ಯತಾ ಶೃಂಗ’ದಲ್ಲಿ ಚಿಲಿ ಅಧ್ಯಕ್ಷ ಗೇಬ್ರಿಯಲ್ ಬೋರಿಕ್ ಫಾಂಟ್ ನೇತೃತ್ವದ ನಿಯೋಗವು ಭಾಗಿಯಾಗಿತ್ತು.

ಈ ವೇಳೆ, ಸಹಕಾರ ಒಪ್ಪಂದ ಪತ್ರಕ್ಕೆ ಚಿಲಿ ಮತ್ತು ಕರ್ನಾಟಕ ಸರ್ಕಾರದ ಪ್ರತಿನಿಧಿಗಳು ಸಹಿ ಮಾಡಿದರು. ರಾಜ್ಯ ಸರ್ಕಾರದ ‘ಜಾಗತಿಕ ನಾವೀನ್ಯತಾ ಮೈತ್ರಿ–ಜಿಐಎ’ಯ ಭಾಗವಾಗಿ ಈ ಪತ್ರಕ್ಕೆ ಸಹಿ ಮಾಡಲಾಗಿದೆ.

ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ‘ಕರ್ನಾಟಕವು ಲ್ಯಾಟಿನ್ ಅಮೆರಿಕದ ದೇಶವೊಂದರ ಜತೆಗೆ ಸಹಕಾರಕ್ಕೆ ಸಹಿ ಹಾಕಿದ್ದು ಇದೇ ಮೊದಲು. ಎರಡೂ ಕಡೆ ತಂತ್ರಜ್ಞಾನ ಕ್ಷೇತ್ರದಲ್ಲಿ ಹೂಡಿಕೆ ಮತ್ತು ಸಹಕಾರಕ್ಕೆ ವಿಪುಲ ಅವಕಾಶಗಳಿವೆ’ ಎಂದರು.

ಬೋರಿಕ್ ಫಾಂಟ್, ‘ಚಿಲಿಯಲ್ಲಿ ಹೂಡಿಕೆ ಮಾಡಿದರೆ ಸಹಕಾರ ನೀಡುತ್ತೇವೆ’ ಎಂದರು.

ರಾಜ್ಯಪಾಲರ ಭೇಟಿ: ಬೋರಿಕ್ ಫಾಂಟ್ ಅವರು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಶನಿವಾರ ಭೇಟಿ ಮಾಡಿದರು

ಡ್ರೋನ್ ಚಾಲನೆ ಪರವಾನಗಿ ಪಡೆದು ಸ್ವಾವಲಂಬನೆ ಸಾಧಿಸಿದ 12 ಸಖಿಯರು

ನಾರಿಯರಿಗೆ ಡ್ರೋನ್ ಬಲ

• ಎನ್. ವಿಜಯ

ಗಂಗಾವತಿ (ಕೊಪ್ಪಳ ಜಿಲ್ಲೆ): ಕೇಂದ್ರ ಸರ್ಕಾರದ ‘ನಮೋ ಡ್ರೋನ್ ದೀದಿ’ ಯೋಜನೆಯ ಲಾಭ ಪಡೆದ ಭತ್ತದನಾಡು ಗಂಗಾವತಿಯ ಡ್ರೋನ್ ಸಖಿಯರ ತಂಡ ಇದೀಗ ಸ್ವಾಭಿಮಾನದ ಬದುಕಿನ ಜೊತೆಗೆ ಆರ್ಥಿಕ ಸ್ವಾವಲಂಬನೆ ಸಾಧಿಸಿದೆ.

ಡ್ರೋನ್ ಸಖಿಯರ ತಂಡದಲ್ಲಿ 12 ಮಹಿಳೆಯರಿದ್ದು, ಎಲ್ಲರೂ ಡ್ರೋನ್ ಚಾಲನಾ ತರಬೇತಿ ಜೊತೆಗೆ ಪರವಾನಗಿ ಪತ್ರ ಪಡೆದಿದ್ದಾರೆ. ಡ್ರೋನ್ ಸಖಿಯರು ಗಂಗಾವತಿ ತಾಲ್ಲೂಕಿನಲ್ಲಿ ಡ್ರೋನ್ ಬಳಸಿ, ರೈತರ ಬೆಳೆಗಳಿಗೆ ಔಷಧಿ ಸಿಂಪಡಣೆ ಮಾಡುವ ಮೂಲಕ ಉತ್ತಮ ಆದಾಯಗಳಿಸಿ, ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ.

ತರಬೇತಿಗೆ ಗಂಗಾವತಿ, ಕುಕನೂರು ತಾಲ್ಲೂಕಿನಿಂದ 12 ಸಖಿಯರು 15 ದಿನಗಳ ಕಾಲ ಇಫ್ಕೋ, ಕೋರಮಂಡಲ, ಆರ್.ಸಿ.ಎಫ್ ಸೇರಿ ಇತರೆ ಹಲವು ಕಂಪನಿಗಳಿಂದ ಮೈಸೂರು, ಹೈದರಾಬಾದ್ ಮತ್ತು ಚೆನ್ನೈನ ಏರೋನಾಟಿಕ್ಸ್ ಕೇಂದ್ರಗಳಲ್ಲಿ ತರಬೇತಿ ಪಡೆದು, ಡ್ರೋನ್‌ಗಳನ್ನು ಸ್ವಯಂ ಚಾಲನೆ ಮಾಡುವ ಮೂಲಕ, ಸ್ವಯಂ ಉದ್ಯೋಗ ಕಲ್ಪಿಸಿಕೊಂಡು, ಇತರ ಮಹಿಳೆಯರಿಗೆ ಪ್ರೇರಣೆ ಆಗಿದ್ದಾರೆ ಎನ್ನುತ್ತಾರೆ ಎನ್.ಆರ್.ಎಲ್.ಎಂ ಯೋಜನೆ ಕೃಷಿ ತಾಲ್ಲೂಕು ವ್ಯವಸ್ಥಾಪಕ ಮುದ್ದಾನೇಶ.

10 ನಿಮಿಷದಲ್ಲಿ 1 ಎಕರೆಗೆ ಔಷಧಿ ಸಿಂಪಡಣೆ ಮಾಡಲಾಗುತ್ತದೆ. ಒಬ್ಬ ಕೆಲಸಗಾರ 2 ದಿನಗಳಲ್ಲಿ ಮಾಡುವ ಕೆಲಸವನ್ನು ಡ್ರೋನ್ 45 ನಿಮಿಷದಲ್ಲಿ ಮಾಡಲಿದೆ.



ರೈತರು ಔಷಧಿ ಸಿಂಪಡಣೆಗೆ ಬಹಳ ಶ್ರಮ ಪಡಬೇಕಾಗಿಲ್ಲ. ಡ್ರೋನ್ ತಂತ್ರಜ್ಞಾನ ರೈತರ ಕೃಷಿ ಚಟುವಟಿಕೆಗೆ ಬಹಳ ಉಪಯುಕ್ತವಾಗಿದೆ. ಎಲ್ಲ ರೈತರು ಡ್ರೋನ್‌ಉಪಯೋಗ ಪಡೆದುಕೊಳ್ಳಬೇಕು - **ತುಳಸಿ ನೆಕ್ಕಂಟಿ ಡ್ರೋನ್ ಸಖಿ,** ಡಾಕ್ಟರ್ ಕ್ಯಾಂಪ್

ಗಂಗಾವತಿ ತಾಲ್ಲೂಕಿನಲ್ಲಿ ಭತ್ತಕ್ಕೆ ಔಷಧಿ ಸಿಂಪಡಣೆ ನಡೆಸಿದ ಕ್ಷಣ

ಎಕರೆಗೆ ₹ 400 ಸೇವಾ ಶುಲ್ಕ

ಒಂದು ಎಕರೆ ಭತ್ತಕ್ಕೆ ಔಷಧಿ ಸಿಂಪಡಣೆ ಮಾಡಲು ಡ್ರೋನ್ ಸಖಿಯರು ₹ 400 ಸೇವಾ ಶುಲ್ಕ ಪಡೆಯುತ್ತಾರೆ. ಒಂದು ದಿನಕ್ಕೆ 20ರಿಂದ 25 ಎಕರೆಗೆ ಔಷಧಿ ಸಿಂಪಡಿಸಬಹುದು. ಬೆಳೆಗಳ ಋತುವಿನ ಆಧಾರದ ಮೇಲೆ ಆದಾಯ ನಿರ್ಧಾರವಾಗುತ್ತದೆ. ತುಳಸಿ ನೆಕ್ಕಂಟಿ ಅವರು ಈಗಾಗಲೇ ಡ್ರೋನ್ ಮೂಲಕ ಔಷಧಿ ಸಿಂಪಡಿಸಿ ₹1 ಲಕ್ಷ ವರಮಾನ ಗಳಿಸಿದ್ದಾರೆ.

ಗಂಗಾವತಿ, ಕುಕನೂರ ತಾಲ್ಲೂಕಿನಿಂದ 12 ಡ್ರೋನ್ ಸಖಿಯರು ತರಬೇತಿ ಪಡೆದು, ಇದೀಗ ಡ್ರೋನ್ ಮೂಲಕ ಔಷಧಿ ಸಿಂಪಡಣೆ ಮಾಡಿ, ಆದಾಯಗಳಿಸುತ್ತಿದ್ದಾರೆ **ರಾಮರೆಡ್ಡಿ ಪಾಟೀಲ,** ತಾ.ಪಂ. ಇಒ, ಗಂಗಾವತಿ

1 ಎಕರೆ ಪ್ರದೇಶಕ್ಕೆ 8-10 ಲೀಟರ್ ನೀರು ಬಳಸಿ, ಔಷಧಿ ಸಿಂಪಡಿಸಬಹುದು. ನಾನೂ ಇಫ್ಕೋ ಸಂಸ್ಥೆಯಿದ ಡ್ರೋನ್ ತರಬೇತಿ ಪಡೆದು, ಆರ್ಥಿಕತೆ ಹೆಚ್ಚಿಸಿಕೊಂಡಿದ್ದೇನೆ **ನಾಗರತ್ನ.ಎ,** ಡ್ರೋನ್ ಸಖಿ, ಮರಳಿ

ನಿಂತ ಲಾರಿಗೆ ಟೆಂಪೊ ಡಿಕ್ಕಿ: ಐವರ ಸಾವು

ಪ್ರಜಾವಾಣಿ ವಾರ್ತೆ

ಜೇವರ್ಗಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಸೊನ್ನ ಕ್ರಾಸ್ ಸಮೀಪದ ರಾಷ್ಟ್ರೀಯ ಹೆದ್ದಾರಿ–50ರಲ್ಲಿ ಶನಿವಾರ ಬೆಳಿಗ್ಗೆ ರಸ್ತೆ ಬದಿಯಲ್ಲಿ ನಿಂತಿದ್ದ ಲಾರಿಗೆ ಟೆಂಪೊ ಟ್ರಾವೆಲರ್ ಡಿಕ್ಕಿ ಹೊಡೆದಿದ್ದು ಇಬ್ಬರು ಮಕ್ಕಳು ಸೇರಿ ಐವರು ಮೃತಪಟ್ಟಿದ್ದಾರೆ.

ಬಾಗಲಕೋಟೆ ನಗರದ ತೆಂಗಿನಮಠ ಬಡಾವಣೆ ನಿವಾಸಿಗಳಾದ ಮಹಿಬೂಬ್ ಉಸ್ಮಾನ್‌ಸಾಬ್ ಕಾಕನೂರ (30), ಮಹಿಬೂಬಿ ಉಸ್ಮಾನ್ ಸಾಬ್ (53), ಮಾಲನಾಬಿ ಮಹಿಬೂಬ್ ಗದ್ದನಕೇರಿ (50), ವಿದ್ಯಾರ್ಥಿನಿ ಪ್ರಿಯಾಂಕಾ ಮಂಜುನಾಥ ಉತ್ತೂರ್ (13) ಮತ್ತು ಎರಡು ವರ್ಷದ ಬಾಲಕ ವಾಜೀದ್ ಮಹಿಬೂಬ್ ಮೃತಪಟ್ಟವರು. ಏಳು ಮಕ್ಕಳು, ಟೆಂಪೊ ಚಾಲಕ ಸೇರಿ 18 ಮಂದಿ ಗಾಯಗೊಂಡಿದ್ದಾರೆ. ಅವರಲ್ಲಿ ಒಂಬತ್ತು ಮಂದಿ ಖಾಸಗಿ ಆಸ್ಪತ್ರೆಗಳ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಟೆಂಪೊ ಮುಂಬದಿಯಲ್ಲಿ ಕುಳಿತಿದ್ದವರ ಪೈಕಿ ಐವರು ಮೃತಪಟ್ಟಿದ್ದಾರೆ. ಸ್ಥಳೀಯರು ಬಂದು ಗಾಯಾಳುಗಳನ್ನು ರಕ್ಷಿಸಿದರು. ಬಳಿಕ ಪೊಲೀಸರ ನೆರವಿನೊಂದಿಗೆ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಟೆಂಪೊ ಹಾಗೂ ಲಾರಿ ಚಾಲಕರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಮಾಹಿತಿ ನಿಡಿದ್ದಾರೆ.

ವಕ್ಫ್ ತಿದ್ದುಪಡಿ ಮಸೂದೆ ಮುಸ್ಲಿಮರ ವಿರುದ್ಧವಲ್ಲ: ಜೋಶಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ವಕ್ಫ್ ತಿದ್ದುಪಡಿ ಮಸೂದೆ ಮುಸ್ಲಿಮರ ವಿರುದ್ಧವಲ್ಲ. ವಕ್ಫ್ ಆಸ್ತಿ ಸರಿಯಾಗಿ ಬಳಕೆಯಾಗಬೇಕು ಎನ್ನುವುದಷ್ಟೇ ನಮ್ಮ ಉದ್ದೇಶ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.



ಪ್ರಲ್ಹಾದ ಜೋಶಿ

‘ವಕ್ಫ್ ತಿದ್ದುಪಡಿ ಮಸೂದೆ ಅಂಗೀಕಾರವಾಗಿದ್ದು ಕಾನೂನಾಗಿ ಜಾರಿಗೆಯಾಗಲಿದೆ. ವಕ್ಫ್ ಆಸ್ತಿ ಎಲ್ಲೆಲ್ಲಿ ದುರ್ಬಳಕೆ ಆಗಿದೆ ಎಂಬುದು ಗೊತ್ತಾಗಲಿದೆ. ಆ ಮಂಡಳಿಯಲ್ಲಿ ನಾಲ್ವರು ಹಿಂದೂಗಳು ಸೇರಿ 22 ಮಂದಿ ಇರುತ್ತಾರೆ’ ಎಂದು ಅವರು ಶನಿವಾರ ತಿಳಿಸಿದರು.

‘ದೇಶದ ವಿವಿಧ ಭಾಗಗಳಲ್ಲಿ 39 ಲಕ್ಷ ಎಕರೆ ಭೂಮಿ ವಕ್ಫ್ ಹೆಸರಿನಲ್ಲಿದೆ. ಅದರಿಂದ ಬರುತ್ತಿರುವ ಆದಾಯ ₹168 ಕೋಟಿ. ಕರ್ನಾಟಕದಲ್ಲಿ 54 ಸಾವಿರ ಎಕರೆ ಆಸ್ತಿಯಿದೆ. ಈ ಎಲ್ಲ ಆಸ್ತಿಯನ್ನು ಸರಿಯಾಗಿ ಬಳಸಿದರೆ ₹12 ಸಾವಿರ ಕೋಟಿ ಬರುತ್ತದೆ ಎಂದು ಸಾಚಾರ್ ಸಮಿತಿ ಕಮಿಟಿ ವರದಿಯಲ್ಲಿ ತಿಳಿಸಲಾಗಿದೆ’ ಎಂದರು.

‘ವಕ್ಫ್‌ನ ಸಾಕಷ್ಟು ಆಸ್ತಿ ದುರ್ಬಳಕೆ ಆಗಿದೆ. ಕೆಲವರು ಆಸ್ತಿಯನ್ನು ಕಬಳಿಸಿ, ಬೇಕಾಬಿಟ್ಟಿ ಬಾಡಿಗೆ ನೀಡಿದ್ದಾರೆ. ಇವೆಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು ಮಸೂದೆಗೆ ಅಂಗೀಕಾರ ನೀಡಲಾಗಿದೆ’ ಎಂದರು.

ಮುಸ್ಲಿಮರಿಂದ ಸ್ವಾಗತ: ಬೊಮ್ಮಾಯಿ



ಬ್ಯಾಡಗಿ: ‘ವಕ್ಫ್ ತಿದ್ದುಪಡಿ ಮಸೂದೆಯ ಸಂಪೂರ್ಣ ವಿವರ ಹೊರಬಂದಾಗ ಮುಸ್ಲಿಮರು ಅದನ್ನು ಮುಕ್ತವಾಗಿ ಸ್ವಾಗತಿಸುವರು’ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಪಟ್ಟಣದಲ್ಲಿ ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ವಕ್ಫ್ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಬಡ ಮುಸ್ಲಿಂ ಕುಟುಂಬಗಳ ಆಸ್ತಿಗಳನ್ನು ಕಾಂಗ್ರೆಸ್ ಮುಖಂಡರು ಕಬಳಿಸಿದ್ದಾರೆ. ವಕ್ಫ್ ಆಸ್ತಿಗಳನ್ನು ಪಾರದರ್ಶಕವಾಗಿ ರಕ್ಷಣೆ ಮಾಡಲು ಮಸೂದೆ ಜಾರಿಗೆ ತರಲಾಗಿದೆ. ಇದು ಮುಸ್ಲಿಂ ಸಮುದಾಯದ ವಿರುದ್ಧವಾಗಿಲ್ಲ. ಈ ಮಸೂದೆಯಿಂದ ಬಡ ಮುಸ್ಲಿಂ ಕುಟುಂಬಗಳಿಗೆ ನ್ಯಾಯ ಸಿಗಲಿದೆ’ ಎಂದರು.

ಚಿತ್ರಾವಳಿ



ಬೆಂಗಳೂರು ಕರಗ ಮಹೋತ್ಸವ ಧ್ವಜಾರೋಹಣದ ನಂತರ ಶನಿವಾರ ಸ್ಯಾಂಕಿ ಕೆರೆಯಲ್ಲಿರುವ ಪೂಜಾ ಸ್ಥಳದಲ್ಲಿ ಗಂಗಾಪೂಜೆ ನೆರವೇರಿಸಿ ಧರ್ಮರಾಯಸ್ವಾಮಿ ದೇವಸ್ಥಾನಕ್ಕೆ ಮೆರವಣಿಗೆಯಲ್ಲಿ ಸಾಗಿದ ಈ ಸಾಲಿನ ಕರಗ ಹೊರುವ ಪೂಜಾರಿ ಎ. ಜ್ಞಾನೇಂದ್ರ ಪ್ರಜಾವಾಣಿ ಚಿತ್ರ



ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನ ಸ್ಫೂರ್ತಿ ಸಾಂಸ್ಕೃತಿಕ ಸಮಿತಿಯು, ವಿದ್ಯಾರ್ಥಿ ಪರಿಷತ್‌ನ ಸಹಯೋಗದಲ್ಲಿ ಆಯೋಜಿಸಿದ್ದ ‘ಹಳ್ಳಿ ಹಬ್ಬ–2025’ದಲ್ಲಿ ವಿದ್ಯಾರ್ಥಿಗಳು ನೃತ್ಯ ಮಾಡಿದರು



ಜಯನಗರದ ಜೋಯಾಲುಕ್ಕಾಸ್ ಆಭರಣ ಮಳಿಗೆಯಲ್ಲಿ ‘ಬ್ರಿಲಿಯನ್ಸ್ ಡೈಮಂಡ್ ಜ್ಯೂವೆಲರಿ ಪ್ರದರ್ಶನ’ವನ್ನು ಉದ್ಘಾಟಿಸಲಾಯಿತು. ನಟಿ ಕೃಷಿ ತಾಪಂಡ, ಆಭರಣ ಕಂಪನಿಯ ಮುಖ್ಯ ಕಾರ್ಯಾಚರಣೆ ಅಧಿಕಾರಿ ಹೆನ್ರಿ ಜಾರ್ಜ್ ಮತ್ತು ಗ್ರಾಹಕರು ಕಾರ್ಯಕ್ರಮದಲ್ಲಿ ಹಾಜರಿದ್ದರು

ಸಂತೋಷ್ ಹೆಗ್ಡೆ ಬೇಸರ • ಸಾಹಿತಿ ಅ.ರಾ. ಮಿತ್ರಗೆ ಕಸಾಪ ದತ್ತಿ ಪ್ರಶಸ್ತಿ ಪ್ರದಾನ

‘ಶ್ರೀಮಂತಿಕೆ, ಅಧಿಕಾರ ಪೋಷಿತ ಸಮಾಜ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಈ ಸಮಾಜದಲ್ಲಿ ಶ್ರೀಮಂತಿಕೆ, ಅಧಿಕಾರದ ತಿಕ್ಕಾಟ ಹಾಗೂ ಪೈಪೋಟಿಯಿಂದಾಗಿ ಪ್ರಾಮಾಣಿಕತೆಗೆ ಬೆಲೆ ಇಲ್ಲವಾಗಿದೆ’ ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಬೇಸರ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಮತ್ತು ವಿದ್ಯಾರಣ್ಯ ಪ್ರತಿಷ್ಠಾನ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಸಾಹಿತಿ ಅ.ರಾ.ಮಿತ್ರ ಅವರಿಗೆ ‘ಅ.ನ.ಕೃಷ್ಣರಾಯರ ಸ್ಮಾರಕ: ವಿದ್ಯಾರಣ್ಯ ಸಮಗ್ರ ಸಾಹಿತ್ಯ ಪ್ರಶಸ್ತಿ’ ಪ್ರದಾನ ಮಾಡಿ, ಮಾತನಾಡಿದರು. ಈ ಪ್ರಶಸ್ತಿಯು ₹1 ಲಕ್ಷ ನಗದು ಒಳಗೊಂಡಿದೆ.

‘ಹಿಂದೆ ತಪ್ಪು ಮಾಡಿದವರಿಗೆ ಕಾನೂನಿನಡಿ ಶಿಕ್ಷೆಯ ಜತೆಗೆ, ಸಮಾಜವು ಬಹಿಷ್ಕಾರದಂತಹ ಶಿಕ್ಷೆ ವಿಧಿಸುತ್ತಿತ್ತು. ಶ್ರೀಮಂತಿಕೆ, ಅಧಿಕಾರದ ಮೇಲೆ ನಿಂತಿರುವ ಈಗಿನ ಸಮಾಜದಲ್ಲಿ, ಪ್ರಾಮಾಣಿಕತೆ ಬಗ್ಗೆ ಮಾತನಾಡುವುದೇ ಅಪರಾಧವೆಂಬ ವಾತಾವರಣ ನಿರ್ಮಾಣವಾಗಿದೆ. ಜಾಮೀನಿನ ಮೇಲೆ ಜೈಲಿನಿಂದ ಹೊರಬರುವ ವ್ಯಕ್ತಿಗೂ ಸೇಬಿನ ಹಾರ ಹಾಕಿ ಬರಮಾಡಿಕೊಳ್ಳುವ ಸಮಾಜದಲ್ಲಿ ನಾವು ಬದುಕುತ್ತಿದ್ದೇವೆ.’ ಎಂದರು.

‘ಅಪರಾಧಗಳು ಹಾಗೂ ಭ್ರಷ್ಟಾಚಾರವನ್ನು ಹತ್ತಿರದಿಂದ ಕಂಡಿದ್ದೇನೆ. ಜೀಪ್ ಹಗರಣ, ಬೊಫೋರ್ಸ್ ಹಗರಣ, 2ಜಿ ಹಗರಣ, ಕಲ್ಲಿದ್ದಲು ಹಗರಣ ಸೇರಿ ವಿವಿಧ ಹಗರಣಗಳಲ್ಲಿ ಅಧಿಕಾರದಲ್ಲಿ ಇದ್ದವರು ಸಾವಿರಾರು ಕೋಟಿ ರೂಪಾಯಿ ಲೂಟಿ ಹೊಡೆದಿದ್ದಾರೆ. ರಾಜಕೀಯದಲ್ಲಿ ಆಡಳಿತದಲ್ಲಿರುವವರ ಸ್ವಾರ್ಥ-ದುರಾಸೆ ಇವುಗಳಿಗೆಲ್ಲಾ ಕಾರಣ. ಎಲ್ಲ ಕಾಯಿಲೆಗಳಿಗೂ ಮದ್ದಿದೆ. ಆದರೆ, ದುರಾಸೆಗೆ ಇಲ್ಲವಾಗಿದೆ. ಇಂತಹ ಸಮಾಜ ಬದಲಾಗಬೇಕಾದರೆ ಜೀವನದಲ್ಲಿ ತೃಪ್ತಿ ಮತ್ತು ಮಾನವೀಯ ಮೌಲ್ಯವನ್ನು ಅಳವಡಿಸಿಕೊಳ್ಳಬೇಕು’ ಎಂದು ಹೇಳಿದರು.

ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ, ‘ದತ್ತಿ ಪ್ರಶಸ್ತಿಗಳ ಮೊತ್ತಕ್ಕಿಂತ ಆಶಯ ಮುಖ್ಯವಾಗುತ್ತದೆ. ಅ.ರಾ. ಮಿತ್ರ ಅವರು ಹಾಸ್ಯದ ಜತೆಗೆ ಗಂಭೀರ ಸಂಶೋಧಕ ಹಾಗೂ ಭಾಷಾ ವಿಜ್ಞಾನಿ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಅ.ರಾ.ಮಿತ್ರ ಅವರ ಸಮಗ್ರ ಸಾಹಿತ್ಯ ಸಂಪುಟವನ್ನು ಹೊರತರಬೇಕು. ಕನ್ನಡ ಸಾಹಿತ್ಯ ಪರಿಷತ್ತು ಶಾಲಾ–ಕಾಲೇಜುಗಳಲ್ಲಿ ಅ.ರಾ. ಮಿತ್ರ ಅವರ ಸಂವಾದ–ಉಪನ್ಯಾಸಗಳನ್ನು ಏರ್ಪಡಿಸಬೇಕು’ ಎಂದು ಅಭಿಪ್ರಾಯಪಟ್ಟರು.



ಕಾರ್ಯಕ್ರಮದಲ್ಲಿ ಅ.ರಾ. ಮಿತ್ರ ಹಾಗೂ ಪತ್ನಿ ಲಲಿತಾ ದಂಪತಿಗೆ ‘ಅ.ನ.ಕೃಷ್ಣರಾಯರ ಸ್ಮಾರಕ: ವಿದ್ಯಾರಣ್ಯ ಸಮಗ್ರ ಸಾಹಿತ್ಯ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಗೊ.ರು. ಚನ್ನಬಸಪ್ಪ, ಮಹೇಶ ಜೋಶಿ, ಎನ್. ಸಂತೋಷ್ ಹೆಗ್ಡೆ, ಪದ್ಮಿನಿ ನಾಗರಾಜ್, ಎಂ.ವಿ. ಸತ್ಯನಾರಾಯಣ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಪ್ರಶಸ್ತಿ ಪುರಸ್ಕೃತ ಅ.ರಾ.ಮಿತ್ರ ಅವರು ಸಂತಸ ವ್ಯಕ್ತಪಡಿಸಿದರು. ಕಸಾಪ ಅಧ್ಯಕ್ಷ ಮಹೇಶ ಜೋಶಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಈಶ್ವರಪ್ಪ ವಿರುದ್ಧದ ಅಕ್ರಮ ಆಸ್ತಿ ಗಳಿಕೆ ಆರೋಪ: ವರದಿ ಸಲ್ಲಿಕೆಗೆ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆದಾಯ ಮೀರಿ ಅಕ್ರಮ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ವಿರುದ್ಧದ ಕ್ರಿಮಿನಲ್ ಪ್ರಕರಣದ ಬಗ್ಗೆ ಮೂರು ತಿಂಗಳಲ್ಲಿ ತನಿಖೆ ನಡೆಸಿ ವರದಿ ಸಲ್ಲಿಸಿ’ ಎಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಶಿವಮೊಗ್ಗ ಲೋಕಾಯುಕ್ತ ಪೊಲೀಸರಿಗೆ ಆದೇಶಿಸಿದೆ.



ಕೆ.ಎಸ್.ಈಶ್ವರಪ್ಪ

ಶಿವಮೊಗ್ಗದ ವಕೀಲ ಬಿ.ವಿನೋದ್ ಸಲ್ಲಿಸಿದ್ದ ಖಾಸಗಿ ದೂರಿಗೆ ಸಂಬಂಧಿಸಿದಂತೆ, ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು; ಹೈಕೋರ್ಟ್ ನಿರ್ದೇಶನದ ಅನುಸಾರ ಶನಿವಾರ ಈ ಕುರಿತಂತೆ ಆದೇಶಿಸಿದ್ದಾರೆ.

ವಿಚಾರಣೆಯನ್ನು ಜುಲೈ 5ಕ್ಕೆ ಮುಂದೂಡಲಾಗಿದೆ.

ಪ್ರಕರಣವೇನು?: ‘ಈಶ್ವರಪ್ಪ ಅವರು ಜಲಸಂಪನ್ಮೂಲ ಸಚಿವರಾಗಿದ್ದ ಸಂದರ್ಭದಲ್ಲಿ ಆದಾಯ ಮೀರಿ ಅಕ್ರಮ ಆಸ್ತಿ ಗಳಿಸಿದ್ದಾರೆ’ ಎಂಬುದು ಆರೋಪ. ಈ ಸಂಬಂಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ಕಲಂ 13(1)(ಡಿ) ಹಾಗೂ 13(1)(ಇ) ಮತ್ತು ಭಾರತೀಯ ದಂಡ ಸಂಹಿತೆ-1860ರ ಕಲಂ 420ರ ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು. ಫಿರ್ಯಾದುದಾರ ಬಿ.ವಿನೋದ್ ಅವರು 2016ರಲ್ಲಿ ಸಲ್ಲಿಸಿದ್ದ ಈ ಖಾಸಗಿ ದೂರನ್ನು ಲೋಕಾಯುಕ್ತ ಕೋರ್ಟ್ ವಜಾಗೊಳಿಸಿತ್ತು. ವಜಾ ಆದೇಶವನ್ನು ಪ್ರಶ್ನಿಸಿ ವಿನೋದ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್ ದೂರಿನ ಮರು ಪರಿಗಣನೆಗೆ ಆದೇಶಿಸಿತ್ತು.



ಸಿದ್ಧಲಿಂಗೇಶ್ವರ ರಥೋತ್ಸವ ತುಮಕೂರು ಜಿಲ್ಲೆಯ ಯಡೆಯೂರು ಸಿದ್ಧಲಿಂಗೇಶ್ವರ ರಥೋತ್ಸವ ಶನಿವಾರ ವಿಜೃಂಭಣೆಯಿಂದ ನಡೆಯಿತು

9 ಮಿತ್ರರಾಷ್ಟ್ರಗಳ ನಾವಿಕರಿಗೆ ತರಬೇತಿ ಜೊತೆಗೆ ಜಂಟಿ ಕಾರ್ಯಾಚರಣೆ

‘ಐಒಎಸ್ ಸಾಗರ’ ಗಸ್ತು ಆರಂಭ

ಪ್ರಜಾವಾಣಿ ವಾರ್ತೆ

ಕಾರವಾರ: ಇದೇ ಮೊದಲ ಬಾರಿಗೆ 9 ರಾಷ್ಟ್ರಗಳೊಂದಿಗೆ ಸೇರಿ ಭಾರತೀಯ ನೌಕಾದಳವು ಹಿಂದೂ ಮಹಾಸಾಗರದಲ್ಲಿ ‘ಐಎನ್‌ಎಸ್ ಸುನೈನಾ’ ಯುದ್ಧನೌಕೆ ಮೂಲಕ ಗಸ್ತು ಚಟುವಟಿಕೆ ನಡೆಸುವ ‘ಐಒಎಸ್ ಸಾಗರ’ಕ್ಕೆ (ಎಲ್ಲ ವಲಯಗಳ ಸುರಕ್ಷತೆ ಮತ್ತು ಬೆಳವಣಿಗೆಗೆ ಪೂರಕವಾದ ಭಾರತೀಯ ಸಮುದ್ರ ನೌಕೆ) ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಇಲ್ಲಿ ಕದಂಬ ನೌಕಾನೆಲೆಯಲ್ಲಿ ಶನಿವಾರ ಚಾಲನೆ ನೀಡಿದರು.

ಏಷ್ಯಾ ರಾಷ್ಟ್ರಗಳಾದ ಶ್ರೀಲಂಕಾ, ಮಾಲ್ಡಿವ್ಸ್, ಮಾರಿಷಸ್, ಪೂರ್ವ ಆಫ್ರಿಕಾ ದೇಶಗಳಾದ ಮೊಜಾಂಬಿಕ್, ಸೀಶೆಲ್ಸ್, ಮಡಗಾಸ್ಕರ, ಕೀನ್ಯಾ, ಟಾಂಜಾನಿಯಾ ಮತ್ತು ಕೊಮೊರೊಸ್ ದೇಶದ 44 ನಾವಿಕರು ಮತ್ತು 75ಕ್ಕೂ ಹೆಚ್ಚು ಭಾರತೀಯ ನೌಕಾ ಸಿಬ್ಬಂದಿ ಒಳಗೊಂಡ ಐಎನ್‌ಎಸ್ ಸುನೈನಾ, ಆಫ್ರಿಕಾದತ್ತ ಪ್ರಯಾಣ ಬೆಳೆಸಿತು.

‘ಐಎನ್‌ಎಸ್ ಸುನೈನಾ ಯುದ್ಧನೌಕೆಯಲ್ಲಿ 9 ಮಿತ್ರರಾಷ್ಟ್ರಗಳ ನಾವಿಕರಿಗೆ ಸಮುದ್ರ ಗಸ್ತು ಕುರಿತ ಪ್ರಾಯೋಗಿಕ ತರಬೇತಿ ನೀಡುವುದರ ಜೊತೆಗೆ ಅವರ ಸಹಯೋಗದೊಂದಿಗೆ ಭಾರತದ ಪಶ್ಚಿಮ ಕಡಲಿನಲ್ಲಿ ನಿರಂತರ ಗಸ್ತು ನಡೆಸಲಾಗುತ್ತದೆ. ಕಡಲ್ಗಳ್ಳತನ ಹೆಚ್ಚಿರುವ ಆಫ್ರಿಕಾದ ಪೂರ್ವ ಕರಾವಳಿ ಭಾಗ ಸೇರಿದಂತೆ ಹಿಂದೂ ಮಹಾಸಾಗರದಲ್ಲಿ ಸಾಗುವ ಪ್ರವಾಸಿ, ವಾಣಿಜ್ಯ ಹಡಗುಗಳಿಗೆ ಭದ್ರತೆ ಒದಗಿಸಲಾಗುವುದು. ಹಡಗುಗಳ ಪರಿಶೀಲನೆ ಜೊತೆಗೆ, ಅಗ್ನಿಶಮನ, ರಕ್ಷಣಾ ಕಾರ್ಯಾಚರಣೆ ನಡೆಸಲಿದೆ’ ಎಂದು ನೌಕಾದಳದ ಹಿರಿಯ ಅಧಿಕಾರಿಗಳು ವಿವರಿಸಿದರು.

‘ಭಾರತೀಯ ನೌಕಾದಳವು ಮಿತ್ರರಾಷ್ಟ್ರಗಳೊಂದಿಗೆ ಜಂಟಿ ಸಮಾರಾಭ್ಯಾಸ ನಡೆಸುವ, ಬೇರೆ ದೇಶಗಳ ನಾವಿಕರಿಗೆ ತರಬೇತಿ ನೀಡುವ ಕಾರ್ಯ ಮೊದಲಿನಿಂದಲೂ ಇದೆ. ಆದರೆ, ಮೊದಲ ಬಾರಿಗೆ ನಾವಿಕರಿಗೆ ಪ್ರಾಯೋಗಿಕ ತರಬೇತಿ ಜೊತೆಗೆ 9 ದೇಶಗಳ ನಾವಿಕರನ್ನು ಒಗ್ಗೂಡಿಸಿಕೊಂಡು ಗಸ್ತು ಚಟುವಟಿಕೆ ನಡೆಸುತ್ತಿದೆ’ ಎಂದರು.



ಕಾರವಾರದ ಕದಂಬ ನೌಕಾನೆಲೆಯಿಂದ ಹಿಂದೂ ಮಹಾಸಾಗರದಲ್ಲಿ ಗಸ್ತು ಚಟುವಟಿಕೆ ನಡೆಸಲು ತೆರಳುತ್ತಿರುವ ‘ಐಎನ್‌ಎಸ್ ಸುನೈನಾ’ ಯುದ್ಧನೌಕೆ

ಮಿತ್ರ ರಾಷ್ಟ್ರಗಳ ರಕ್ಷಣೆಗೂ ಬದ್ಧ

‘ಹಿಂದೂ ಮಹಾಸಾಗರದಲ್ಲಿ ಸುರಕ್ಷಿತ ವಲಯ ನಿರ್ಮಿಸುವ ಜೊತೆಗೆ ನೆರೆಹೊರೆಯ ರಾಷ್ಟ್ರಗಳೊಂದಿಗೆ ಸಂಬಂಧ ಬಲಪಡಿಸಲು ಐಒಎಸ್ ಸಾಗರ ನೆರವಾಗಲಿದೆ. ಕೇವಲ ಭಾರತದ ರಕ್ಷಣೆ ಅಲ್ಲದೆ ಮಿತ್ರರಾಷ್ಟ್ರಗಳ ರಕ್ಷಣೆಗೂ ಬದ್ಧರಾಗಿದ್ದೇವೆ’ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಹೇಳಿದರು.

‘ಸುಸಜ್ಜಿತ ನೌಕೆ, ಅತ್ಯಾಧುನಿಕ ಶಸ್ತ್ರಾಸ್ತ್ರ, ನುರಿತ ನಾವಿಕರನ್ನು ನೌಕಾದಳ ಒಳಗೊಂಡಿದೆ. ಐಒಎಸ್ ಸಾಗರ ಗಸ್ತು ಚಟುವಟಿಕೆ ಮೂಲಕ ಅಂತರರಾಷ್ಟ್ರೀಯ ಸರಕು ಸಾಗಣೆ, ಪ್ರವಾಸಿ ಹಡಗುಗಳು ಸುರಕ್ಷಿತವಾಗಿ ಸಾಗಲಿವೆ. ವಾಣಿಜ್ಯ ಮತ್ತು ಪ್ರವಾಸೋದ್ಯಮ ಕ್ಷೇತ್ರವು ಬಲಗೊಳ್ಳಲಿವೆ’ ಎಂದು ತಿಳಿಸಿದರು.

ಸಾವರ್ಕರ್‌ಗೆ ಬ್ರಿಟಿಷರ ನಂಟು ಇರಲಿಲ್ಲ: ವಿಕ್ರಮ್ ಸಂಪತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದುತ್ವದ ಪ್ರತಿಪಾದಕ ವಿನಾಯಕ ದಾಮೋದರ್ ಸಾವರ್ಕರ್, ತಮ್ಮನ್ನು ಬ್ರಿಟಿಷರಿಗೆ ಮಾರಾಟ ಮಾಡಿಕೊಂಡಿದ್ದರೆ ಕಾನೂನು ಸಚಿವರಾಗುವ ಅವಕಾಶ ಲಭಿಸುತ್ತಿತ್ತು’ ಎಂದು ಲೇಖಕ ವಿಕ್ರಮ್ ಸಂಪತ್ ಹೇಳಿದರು.

ನಗರದಲ್ಲಿ ಸಾಹಿತ್ಯ ಪ್ರಕಾಶನ ಶನಿವಾರ ಆಯೋಜಿಸಿದ್ದ ಪುಸ್ತಕಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಬ್ರಿಟಿಷರಿಂದ ಸಾವರ್ಕರ್ ಪಿಂಚಣಿ ಪಡೆಯುತ್ತಿದ್ದರು, ತಮ್ಮನ್ನು ಮಾರಾಟ ಮಾಡಿಕೊಂಡಿದ್ದರು ಎಂದೆಲ್ಲಾ ಹೇಳುತ್ತಾರೆ. ಆದರೆ, ಬ್ರಿಟಿಷರು ಅವರ ಸಂಪೂರ್ಣ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದರು. ಅವರಿಗೆ ಅಡುಗೆ ಮಾಡಲು ಪಾತ್ರೆ ಇರಲಿಲ್ಲ. ಭಿಕ್ಷೆ ಬೇಡಿ ಜೀವನ ನಡೆಸುವ ಪರಿಸ್ಥಿತಿ ಇತ್ತು. ಅವರ ಪದವಿಗಳನ್ನು ವಾಪಸ್ ಪಡೆದುಕೊಳ್ಳಲಾಗಿತ್ತು’ ಎಂದು ಹೇಳಿದರು.


‘ಕಾಲಾಪಾನಿ ಶಿಕ್ಷೆ ನಂತರ ಸಾವರ್ಕರ್ ರತ್ನಗಿರಿಗೆ ಬಂದರು. ಐದು ವರ್ಷ ರಾಜಕೀಯ ಪ್ರವೇಶಿಸುವಂತಿಲ್ಲ. ರತ್ನಗಿರಿ ಬಿಟ್ಟು ಹೊರಗೆ ಹೋಗುವಂತಿಲ್ಲ ಎಂಬ ನಿರ್ಬಂಧವನ್ನು ಅವರಿಗೆ ವಿಧಿಸಲಾಗಿತ್ತು. 13 ವರ್ಷ ಗೃಹಬಂಧನದಲ್ಲಿ ಇರಿಸಲಾಗಿತ್ತು’ ಎಂದು ಹೇಳಿದರು.

‘ಕ್ರಾಂತಿಕಾರಿಗಳ ಜತೆ ಅವರು ಸಂಪರ್ಕದಲ್ಲಿರುವ ಬಗ್ಗೆ ಬ್ರಿಟಿಷ್ ಗುಪ್ತಚರ ಸಂಸ್ಥೆ ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಹಾಗಾಗಿ ಅವರ ಮೇಲೆ ಬ್ರಿಟಿಷರಿಗೆ ವಿಶ್ವಾಸ ಇರಲಿಲ್ಲ. 1937ರಲ್ಲಿ ಬಿಡುಗಡೆಯಾದ ಬಳಿಕ ಕಾಂಗ್ರೆಸ್ ಸೇರುವಂತೆ ಸಾವರ್ಕರ್‌ಗೆ ಆಹ್ವಾನ ಬಂದಿತ್ತು. ಆದರೆ, ಅದನ್ನು ನಿರಾಕರಿಸಿದರು’ ಎಂದರು.

‘ಸಾವರ್ಕರ್ ಅವರಿಗೆ ಭಾರತರತ್ನ ನೀಡಬೇಕೋ ಬೇಡವೋ ಎಂಬುದರ ಬಗ್ಗೆ ಪರ–ವಿರೋಧ ಚರ್ಚೆ ನಡೆಯುತ್ತಿದೆ. ಭಗತ್ ಸಿಂಗ್ ಅವರ ಜೈಲು ಡೈರಿಯಲ್ಲಿ ಸಾವರ್ಕರ್ ಅವರ ಪುಸ್ತಕದ ಕುರಿತು ಬರೆದಿದ್ದಾರೆ. ಹವಾನಿಯಂತ್ರಿತ ಕಚೇರಿಯಲ್ಲಿ ಕುಳಿತು ಅವರ ವ್ಯಕಿತ್ತದ ಪ್ರಮಾಣಪತ್ರ ನೀಡುವ ಕೆಲಸ ಮಾಡಬಾರದು. ಅವರಿಗೆ ಆಗಿದ್ದ ಅನ್ಯಾಯದ ಬಗ್ಗೆ ಯಾರೂ ಮಾತನಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ವೇಳೆ ಲೇಖಕ ಬಾಬು ಕೃಷ್ಣಮೂರ್ತಿ ಅವರು ವಿಕ್ರಮ್ ಸಂಪತ್ ಅವರ ‘ಸಾವರ್ಕರ್ ವಿವಾದಾಸ್ಪದ ವಾರಸಿಕೆ: 1924–1966 ಭಾಗ–2’ (ಕನ್ನಡ ಅನುವಾದ: ನರೇಂದ್ರಕುಮಾರ್, ಮಂಜುಳಾ ಟೇಕಲ್) ಹಾಗೂ ವಾಗ್ಮಿ ಜಿ. ಬಿ.ಹರೀಶ ಅವರು ‘ಶಿವನಿಗಾಗಿ ಕಾಯುತ್ತ’ ಕೃತಿಯ ಮೂರನೇ ಮುದ್ರಣವನ್ನು ಬಿಡುಗಡೆ ಮಾಡಿ ಮಾತನಾಡಿದರು.

ಲೇಖಕ ಜಿ.ಎಲ್.ಶೇಖರ್, ಸಾಹಿತ್ಯ ಪ್ರಕಾಶನದ ಎಂ.ಎ.ಸುಬ್ರಹ್ಮಣ್ಯ ಹಾಜರಿದ್ದರು.



ನಗರದಲ್ಲಿ ಶನಿವಾರ ಆಯೋಜಿಸಿದ್ದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ನರೇಂದ್ರ ಕುಮಾರ್, ಬಾಬು ಕೃಷ್ಣಮೂರ್ತಿ, ವಿಕ್ರಮ್ ಸಂಪತ್ ಹಾಗೂ ಜಿ.ಬಿ. ಹರೀಶ್ ಪಾಲ್ಗೊಂಡಿದ್ದರು. ಪ್ರಜಾವಾಣಿ ಚಿತ್ರ

ಪ್ರತಿಸುಂಕ: ರಾಜ್ಯದಲ್ಲೂ ಕಂಪನ



ಚಿತ್ರ: ಕಣಕಾಲಮಠ

ಒಂದನೇ ಪುಟದಿಂದ...

ಕೋಟಿ ಮೌಲ್ಯದ ಉತ್ಪನ್ನಗಳನ್ನು ರಫ್ತು ಮಾಡಲಾಗಿತ್ತು. 2023-24ರಲ್ಲಿ ₹17,500 ಕೋಟಿಗೆ ಇಳಿದಿದೆ. ಒಟ್ಟಾರೆ ಶೇ 27ರಷ್ಟು ಕಡಿಮೆಯಾಗಿದೆ. ಟ್ರಂಪ್ ನೀತಿಯು ಮತ್ತಷ್ಟು ಪರಿಣಾಮ ಬೀರಲಿದೆ ಎಂದು ಕೃಷಿ ತಜ್ಞರು ಹೇಳುತ್ತಾರೆ.

ಕಾಫಿ ಕಥೆ ಏನು?: ರಾಜ್ಯದ ಪ್ರಮುಖ ವಾಣಿಜ್ಯ ಬೆಳೆಯಾದ ಉತ್ಕೃಷ್ಟ ಗುಣಮಟ್ಟದ ಕಾಫಿಗೆ ಜಾಗತಿಕ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಇದೆ.

ಕಳೆದ ವರ್ಷದ ಡಿಸೆಂಬರ್ ಅಂತ್ಯಕ್ಕೆ ಭಾರತದಿಂದ 3.82 ಲಕ್ಷ ಟನ್‌ನಷ್ಟು ಕಾಫಿ ರಫ್ತು ಮಾಡಲಾಗಿದೆ. ಇಟಲಿ, ರಷ್ಯಾ, ಬೆಲ್ಜಿಯಂ, ಯುಎಇ, ಟರ್ಕಿ, ಅಮೆರಿಕ ಸೇರಿ ಹಲವು ರಾಷ್ಟ್ರಗಳಿಗೆ ರಫ್ತಾಗಿದೆ. ಅಮೆರಿಕಕ್ಕೆ ಅರೇಬಿಕಾ, ರೊಬಸ್ಟಾ, ಕಾಫಿ ಪುಡಿ, ರೋಸ್ಟೆಡ್ ಕಾಫಿ ಬೀಜ ಸೇರಿ ಒಟ್ಟು 9,285 ಟನ್ ರವಾನಿಸಲಾಗಿದೆ.

ಈ ಮೊದಲು ಅಮೆರಿಕದಲ್ಲಿ ಭಾರತದ ಕಾಫಿಗೆ ಸುಂಕ ವಿನಾಯಿತಿ ಇತ್ತು. ಈಗ ಪ್ರತಿ ಸುಂಕ ಅನ್ವಯಿಸಲಿದೆ. ಹಾಗಾಗಿ, ಅಲ್ಪ ಪ್ರಮಾಣದಲ್ಲಿ ಪೂರೈಸುವ ರಫ್ತುದಾರರಿಗೆ ತೊಂದರೆಯಾಗಲಿದೆ. ಅಲ್ಲದೆ, ಮತ್ತಷ್ಟು ರಫ್ತು ವಿಸ್ತರಿಸುವ ಗುರಿಗೂ ಅಡ್ಡಿಯಾಗಲಿದೆ.

‘ಭಾರತದಿಂದ ಅತಿಹೆಚ್ಚು ಪ್ರಮಾಣದಲ್ಲಿ ಯುರೋಪ್ ರಾಷ್ಟ್ರಗಳಿಗೆ ಕಾಫಿ ರಫ್ತಾಗುತ್ತದೆ. ಇದಕ್ಕೆ ಹೋಲಿಸಿದರೆ ಅಮೆರಿಕಕ್ಕೆ ಪೂರೈಸುವ ಪ್ರಮಾಣ ಕಡಿಮೆ. ಹಾಗಾಗಿ, ಟ್ರಂಪ್ ನೀತಿಯು ಅತಿಹೆಚ್ಚು ಪರಿಣಾಮ ಬೀರುವುದಿಲ್ಲ ಎನ್ನುತ್ತಾರೆ ಕಾಫಿ ಮಂಡಳಿ ಅಧ್ಯಕ್ಷ ಎಂ.ಜೆ. ದಿನೇಶ್ ದೇವವೃಂದ.

ಸಂಬಾರ ಪದಾರ್ಥಗಳಿಗೆ ಬರೆ: ಕರ್ನಾಟಕದಲ್ಲಿ ಬೆಳೆಯುವ ಸಂಬಾರ ಪದಾರ್ಥಗಳಿಗೆ ಅಮೆರಿಕದ ಮಾರುಕಟ್ಟೆಯಲ್ಲಿ ಬಹು ಬೇಡಿಕೆಯಿದೆ. ಇಲ್ಲಿಂದ ಪ್ರಮುಖವಾಗಿ ಕಾಳುಮೆಣಸು, ಒಣಮೆಣಸಿನಕಾಯಿ, ಅರಿಸಿನ ಮತ್ತು ಶುಂಠಿ ರವಾನೆಯಾಗುತ್ತದೆ.

ಚಿಕ್ಕಮಗಳೂರು, ಕೊಡಗು, ಹಾಸನ ಜಿಲ್ಲೆ ಮತ್ತು ಶಿರಸಿ ಭಾಗದಲ್ಲಿ ಗುಣಮಟ್ಟದ ಕಾಳುಮೆಣಸು ಬೆಳೆಯಲಾಗುತ್ತದೆ. ಚಾಮರಾಜನಗರ, ಮೈಸೂರು, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳು ಉತ್ಕೃಷ್ಟ ದರ್ಜೆಯ ಅರಿಸಿನ ಬೆಳೆಯುವಲ್ಲಿ ಪ್ರಸಿದ್ಧಿ ಪಡೆದಿವೆ. ಮಲೆನಾಡು ಭಾಗದಲ್ಲಿ ಹೇರಳವಾಗಿ ಶುಂಠಿ ಬೆಳೆಯಲಾಗುತ್ತದೆ. ಈ ಪದಾರ್ಥಗಳನ್ನು ಖರೀದಿಸುವ ಸ್ಥಳೀಯ ವರ್ತಕರು ಅಮೆರಿಕಕ್ಕೆ ರಫ್ತು ಮಾಡುತ್ತಾರೆ.

ಬಳ್ಳಾರಿ, ಧಾರವಾಡ, ಗದಗ, ಹಾವೇರಿ ಜಿಲ್ಲೆಯಲ್ಲಿ ಒಣಮೆಣಸಿನಕಾಯಿ ಉತ್ಪಾದನೆ ಹೆಚ್ಚಿದೆ. ಈಗ ಮುಕ್ತ ಮಾರುಕಟ್ಟೆಯಲ್ಲಿ ಧಾರಣೆ ಕುಸಿದಿದೆ. ನೆರೆಯ ಆಂಧ್ರ ಪ್ರದೇಶದಲ್ಲಿ ಜಾರಿಗೊಳಿಸಿರುವ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯ ಸೌಲಭ್ಯವನ್ನು ರಾಜ್ಯದ ರೈತರಿಗೂ ವಿಸ್ತರಿಸಬೇಕು ಎಂಬ ರಾಜ್ಯ ಸರ್ಕಾರದ ಮನವಿಗೆ ಕೇಂದ್ರದಿಂದ ಇನ್ನೂ ಮನ್ನಣೆ ಸಿಕ್ಕಿಲ್ಲ.

ಈ ಮೊದಲು ಸಂಬಾರ ಪದಾರ್ಥಗಳ ಮೇಲೆ ಅಮೆರಿಕವು ಶೇ 5.29ರಷ್ಟು ಸುಂಕ ವಿಧಿಸುತ್ತಿತ್ತು. ಸದ್ಯ ಎಷ್ಟು ಸುಂಕ ವಿಧಿಸಲಾಗುತ್ತದೆ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ. ಆದರೆ, ಈ ಉತ್ಪನ್ನಗಳು ಪ್ರತಿ ಸುಂಕದ ಪಟ್ಟಿಯಲ್ಲಿದ್ದು, ಬೆಳೆಗಾರರು ಮತ್ತು ವರ್ತಕರಲ್ಲಿ ತಳಮಳ ಸೃಷ್ಟಿಸಿದೆ.

ಈಗಾಗಲೇ, ದಾಸ್ತಾನಿರುವ ಒಣಮೆಣಸಿನಕಾಯಿ ಖರೀದಿಯಾಗಿಲ್ಲ. ವರ್ತಕರು ಖರೀದಿಗೆ ಹಿಂದೇಟು ಹಾಕಿದರೆ ಮತ್ತಷ್ಟು ಸಮಸ್ಯೆಯಾಗಲಿದೆ ಎಂಬುದು ರೈತರ ಆತಂಕ.

‘ಟ್ರಂಪ್ ನೀತಿಯು ರಾಜ್ಯದ ಸಂಬಾರ ಪದಾರ್ಥಗಳ ರಫ್ತಿನ ಮೇಲೆ ಪರಿಣಾಮ ಬೀರಲಿದೆ. ಹಾಗಾಗಿ, ಮುಂದಿನ ದಿನಗಳಲ್ಲಿ ರಫ್ತಿಗೆ ಯುರೋಪಿಯನ್ ಒಕ್ಕೂಟ ಸೇರಿ ಬೇರೆ ದೇಶಗಳನ್ನು ಅವಲಂಬಿಸುವುದು ಅನಿವಾರ್ಯವಾಗಬಹುದು’ ಎಂದು ಹೇಳುತ್ತಾರೆ ಕರ್ನಾಟಕ ರಾಜ್ಯ ಸಂಬಾರ ಪದಾರ್ಥಗಳ ಅಭಿವೃದ್ಧಿ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಬಿ.ಆರ್. ಗಿರೀಶ್.

‘ಸದ್ಯ ಅಮೆರಿಕದ ಡಾಲರ್ ಮೌಲ್ಯ ಹೆಚ್ಚಿದೆ. ಹಾಗಾಗಿ, ರಫ್ತಿನ ಮೇಲೆ ಹೆಚ್ಚು ಪರಿಣಾಮ ಬೀರುವುದಿಲ್ಲ. ಆದರೆ, ಅಲ್ಪ ಪ್ರಮಾಣದಲ್ಲಿ ರಾಜ್ಯದ ರೈತರು ಮತ್ತು ವರ್ತಕರ ಮೇಲೆ ಪರಿಣಾಮ ಬೀರಲಿದೆ. ಟ್ರಂಪ್ ನೀತಿಯಿಂದ ಜಾಗತಿಕ ಮಟ್ಟದಲ್ಲಿ ಆರ್ಥಿಕ ಹಿಂಜರಿತ ಸೃಷ್ಟಿಯಾಗಿ ಡಾಲರ್ ಮೌಲ್ಯ ಕಡಿಮೆಯಾದರೆ ಹೆಚ್ಚು ಪರಿಣಾಮ ಬೀರಲಿದೆ’ ಎನ್ನುತ್ತಾರೆ ಅವರು.

ಐ.ಟಿ ವಲಯಕ್ಕೂ ಆತಂಕ: ಟ್ರಂಪ್ ಆಡಳಿತವು ಮಾಹಿತಿ ತಂತ್ರಜ್ಞಾನ (ಐ.ಟಿ) ವಲಯದ ಮೇಲೆ ಪ್ರತಿ ಸುಂಕ ವಿಧಿಸುವ ಬಗ್ಗೆ ಪ್ರಸ್ತಾಪಿಸಿಲ್ಲ. ಆದರೂ, ಸುಂಕ ನೀತಿಯಿಂದ ಆಗುವ ಪರಿಣಾಮ ತಪ್ಪಿದ್ದಲ್ಲ ಎಂದು ಐ.ಟಿ ತಜ್ಞರು ಹೇಳುತ್ತಾರೆ.

ಸುಂಕ ನೀತಿಯು ಅಮೆರಿಕದ ಆರ್ಥಿಕತೆ ಬೆಳವಣಿಗೆಯ ಕುಸಿತಕ್ಕೆ ಕಾರಣವಾಗುವ ಸಾಧ್ಯತೆಯಿದೆ ಎಂದು ಆರ್ಥಿಕ ತಜ್ಞರು ಅಂದಾಜಿಸಿದ್ದಾರೆ. ಇದು ಮಾಹಿತಿ ತಂತ್ರಜ್ಞಾನ ಸೇವೆಯ ಬೇಡಿಕೆ ಕುಗ್ಗಿಸುವ ಸಾಧ್ಯತೆಯಿದೆ.

ದೇಶದ ಐ.ಟಿ ಮಾರುಕಟ್ಟೆ ಮೌಲ್ಯ ₹21.31 ಲಕ್ಷ ಕೋಟಿ. ಕರ್ನಾಟಕದ ಸಾಫ್ಟ್‌ವೇರ್ ಕಂಪನಿಗಳಿಗೆ ವಿದೇಶಗಳೇ ಪ್ರಮುಖ ಆದಾಯದ ಮೂಲ. ಈ ಪೈಕಿ ಅಮೆರಿಕದಿಂದ ಅತಿಹೆಚ್ಚು ಆದಾಯ ಬರುತ್ತಿದೆ. ದೇಶದ ಎಲೆಕ್ಟ್ರಾನಿಕ್ಸ್ ಮತ್ತು ಸಾಫ್ಟ್‌ವೇರ್ ರಫ್ತಿನಲ್ಲಿ ರಾಜ್ಯವು ಮೂರನೇ ಒಂದು ಭಾಗಕ್ಕೂ ಹೆಚ್ಚು ಪಾಲು ಹೊಂದಿದೆ.

2024–25ನೇ ಆರ್ಥಿಕ ವರ್ಷದಲ್ಲಿ ಐ.ಟಿ ಕಂಪನಿಗಳ ತ್ರೈಮಾಸಿಕ ನಿವ್ವಳ ಲಾಭವು ನಿರೀಕ್ಷಿಸಿದಷ್ಟು ತೃಪ್ತಿಕರವಾಗಿಲ್ಲ. ಪ್ರಸಕ್ತ ಆರ್ಥಿಕ ವರ್ಷದಲ್ಲೂ ಇದೇ ಸ್ಥಿತಿ ಮುಂದುವರಿಯುವ ಸಾಧ್ಯತೆಯಿದೆ. ಹಾಗಾಗಿ, ಟ್ರಂಪ್ ನೀತಿಯು ಕಂಪನಿಗಳ ದೀರ್ಘಕಾಲದ ಲಾಭದ ಮೇಲೆ ಪರಿಣಾಮ ಬೀರುವುದನ್ನು ತಳ್ಳಿಹಾಕುವಂತಿಲ್ಲ ಎಂದು ಹೇಳುತ್ತಾರೆ ಮಾರುಕಟ್ಟೆ ತಜ್ಞರು.

ಎಚ್–1ಬಿ ವೀಸಾ ನಿಯಮಗಳನ್ನು ಮತ್ತಷ್ಟು ಬಿಗಿಗೊಳಿಸುವುದಾಗಿ ಟ್ರಂಪ್ ಘೋಷಿಸಿದ್ದಾರೆ. ಇದರಿಂದ ಈ ವೀಸಾ ಬಳಸಿಕೊಂಡು ಅಮೆರಿಕದ ಸಂಸ್ಥೆಗಳು ವಿದೇಶಿ ಉದ್ಯೋಗಿಗಳನ್ನು ನೇಮಿಸಿಕೊಳ್ಳಲು ಇದ್ದ ಅವಕಾಶಕ್ಕೆ ಅಡ್ಡಿಯಾಗಲಿದೆ. ಇದು ಐ.ಟಿ ಕಂಪನಿಗಳ ಆದಾಯವನ್ನು ಕುಗ್ಗಿಸಲಿದೆ.

ಯುರೋಪಿಯನ್ ಒಕ್ಕೂಟ ಕೂಡ ಆರ್ಥಿಕತೆ ಕುಸಿತದ ಒತ್ತಡಕ್ಕೆ ಸಿಲುಕಿದೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಮೊರೆ ಹೋಗಿದ್ದು, ಐ.ಟಿ ವೆಚ್ಚಕ್ಕೆ ಕಡಿವಾಣ ಹಾಕುತ್ತಿದೆ. ಇದು ರಾಜ್ಯದ ಐ.ಟಿ ವಲಯದ ಮೇಲೆ ಪರಿಣಾಮ ಬೀರಲಿದೆ.

ಆಟೊ ವಲಯಕ್ಕೆ ಪರಿಣಾಮ ಇಲ್ಲ: ಅಮೆರಿಕದಲ್ಲಿ ನಿಗದಿಪಡಿಸಿರುವ ಆಟೊಮೊಬೈಲ್ ಸುಂಕವು ಭಾರತದಲ್ಲಿ ಉಪಯೋಗಿಸುವ ಮಧ್ಯಮ ವರ್ಗದ ಟ್ಯಾಕ್ಸಿಗಳು ಮತ್ತು ವಾಣಿಜ್ಯ ಬಳಕೆಯ ವಾಹನಗಳ ಮೇಲೆ ಹೆಚ್ಚಿನ ಪರಿಣಾಮ ಬೀರುವುದಿಲ್ಲ ಎಂದು ಕರ್ನಾಟಕ ರಾಜ್ಯ ಟ್ರಾವೆಲ್ಸ್ ಮಾಲೀಕರ ಸಂಘ ಹೇಳಿದೆ.

‘ಟೊಯೊಟೊ, ಮಾರುತಿ, ಕಿಯಾ, ಬಿವೈಡಿ, ಎಂ.ಜಿ. ಹೆಕ್ಟರ್ ಕಂಪನಿಗಳು ದೇಶೀಯ ವಾಹನ ತಯಾರಿಕಾ ಸಾಮರ್ಥ್ಯ ಹೊಂದಿವೆ. ಈ ಕಂಪನಿಗಳ ವಾಹನಗಳು ಜನಸಾಮಾನ್ಯರ ಬಳಕೆಯ ವಾಹನಗಳಾಗಿವೆ. ದೇಶೀಯ ಮಾರುಕಟ್ಟೆ ಹಾಗೂ ದಕ್ಷಿಣ ಏಷ್ಯಾದ ವ್ಯಾಪಾರ ಮಾರುಕಟ್ಟೆಯ ವ್ಯಾಪ್ತಿಯಲ್ಲಿವೆ. ಇದರಿಂದ ಪ್ರವಾಸಿ ವಾಹನಗಳ ಮೇಲೆ ದೊಡ್ಡ ಪರಿಣಾಮ ಬೀರುವುದಿಲ್ಲ’ ಎಂದು ಸಂಘದ ಅಧ್ಯಕ್ಷ ಕೆ. ರಾಧಾಕೃಷ್ಣ ಹೊಳ್ಳ ಹೇಳುತ್ತಾರೆ.

ತಿಂಡಿ ತಿನಿಸು: ದಕ್ಷಿಣ ಭಾರತದ ತಿಂಡಿ ತಿನಿಸುಗಳು ಅಮೆರಿಕನ್ನರಿಗೆ ಅಚ್ಚುಮೆಚ್ಚು. ಕರ್ನಾಟಕದಿಂದ ‘ರೆಡಿ ಟು ಈಟ್’ ಇನ್‌ಸ್ಟಂಟ್ ಮಿಕ್ಸ್‌ಗಳು ಸಾಕಷ್ಟು ಪ್ರಮಾಣದಲ್ಲಿ ಅಲ್ಲಿಗೆ ರಫ್ತಾಗುತ್ತವೆ. ಇವುಗಳಿಗೆ ಶೇ 5.29ರಷ್ಟು ಸುಂಕ ಅನ್ವಯಿಸುತ್ತಿತ್ತು. ಈಗ ಪ್ರತಿ ಸುಂಕದ ಬಿಸಿ ತಟ್ಟಲಿದೆ. ಸುಂಕ ಹೆಚ್ಚಾದರೆ ಅಲ್ಲಿನ ಖರೀದಿದಾರರು ಹೆಚ್ಚಿನ ಡಾಲರ್ ವ್ಯಯಿಸಬೇಕಾಗುತ್ತದೆ. ಇಲ್ಲಿ ರಫ್ತುದಾರರು ಸುಂಕ ಭರಿಸಬೇಕಿದೆ.

ಔಷಧ, ಜವಳಿಗೆ ವರದಾನ: ಟ್ರಂಪ್ ನೀತಿಯಿಂದ ರಾಜ್ಯದ ಹಲವು ವಲಯಗಳಿಗೆ ಪ್ರಯೋಜನವೂ ಆಗಲಿದೆ. ಔಷಧ ವಲಯದ ಮೇಲೆ ಪ್ರತಿ ಸುಂಕ ಹೇರಿಲ್ಲ. ಇದರಿಂದ ರಾಜ್ಯದ ಔಷಧಗಳ ರಫ್ತಿಗೆ ಹೆಚ್ಚಿನ ಉತ್ತೇಜನ ಸಿಗಲಿದೆ.

ಭಾರತಕ್ಕೆ ಹೋಲಿಸಿದರೆ ಬಾಂಗ್ಲಾದೇಶಕ್ಕೆ ಶೇ 37ರಷ್ಟು ಮತ್ತು ಶ್ರೀಲಂಕಾಕ್ಕೆ ಶೇ 44ರಷ್ಟು ಪ್ರತಿ ಸುಂಕ ವಿಧಿಸಲಾಗಿದೆ. ಕರ್ನಾಟಕ ಸೇರಿ ದೇಶದ ಹಲವು ರಾಜ್ಯಗಳ ಉದ್ದಿಮೆದಾರರು ಬಾಂಗ್ಲಾಕ್ಕೆ ತೆರಳಿ ಸಿದ್ಧ ಉಡುಪುಗಳ ಘಟಕ ತಯಾರಿಸಿ ಅಲ್ಲಿಂದ ಅಮೆರಿಕಕ್ಕೆ ರಫ್ತು ಮಾಡುತ್ತಿದ್ದರು. ಈಗ ಅಲ್ಲಿ ರಾಜಕೀಯ ಅಸ್ಥಿರತೆ ತಲೆದೋರಿದೆ. ಮತ್ತೊಂದೆಡೆ ಸುಂಕದ ಬಿಸಿ ತಟ್ಟಿದೆ. ಹಾಗಾಗಿ, ಬಳ್ಳಾರಿಯ ಜೀನ್ಸ್, ಬೆಂಗಳೂರಿನ ಸಿದ್ಧಉಡುಪು ಘಟಕಗಳಿಗೆ ಉತ್ತೇಜನ ಸಿಗಲಿದೆ ಎಂಬುದು ಕೈಗಾರಿಕಾ ವಲಯ ಅಂದಾಜಿಸಿದೆ.

‘ಆ ಉದ್ಯಮಿಗಳು ತಾಯ್ನಾಡಿಗೆ ಮರಳುವ ಸಾಧ್ಯತೆಯಿದೆ. ಇದರಿಂದ ಸ್ಥಳೀಯ ಸಿದ್ಧಉಡುಪು ವಲಯದ ಬೆಳವಣಿಗೆಗೆ ನೆರವಾಗಲಿದೆ. ಜೊತೆಗೆ, ಉದ್ಯೋಗಗಳ ಸೃಷ್ಟಿ ಮತ್ತು ರಫ್ತಿಗೂ ಸಹಕಾರಿಯಾಗಲಿದೆ’ ಎನ್ನುತ್ತಾರೆ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷ ಎಂ.ಜಿ. ರಾಜಗೋಪಾಲ್.

ಗ್ರಾನೈಟ್ ಉತ್ಪನ್ನಗಳಿಗೆ ಬಿಸಿ: ಭಾರತವು ಅಮೆರಿಕಕ್ಕೆ ರಫ್ತು ಮಾಡುವ ವಸ್ತುಗಳಲ್ಲಿ ಗ್ರಾನೈಟ್ ಮತ್ತು ಅದರ ಉತ್ಪನ್ನಗಳು ಸೇರಿವೆ. ಕರ್ನಾಟಕದಿಂದಲೂ ಪಾಲಿಶ್ ಮಾಡಿದ ಗ್ರಾನೈಟ್‌ಗಳು, ಸ್ಲ್ಯಾಬ್‌ಗಳನ್ನು ಅಮೆರಿಕಕ್ಕೆ ರಫ್ತು ಮಾಡಲಾಗುತ್ತಿದೆ.

ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ, ರಾಜಸ್ಥಾನಕ್ಕೆ ಹೋಲಿಸಿದರೆ ರಾಜ್ಯದಿಂದ ಮಾಡುವ ರಫ್ತಿನ ಪ್ರಮಾಣ ಕಡಿಮೆ. ಬೆಂಗಳೂರು, ಚಾಮರಾಜನಗರದಲ್ಲಿ ಕಾರ್ಯಾಚರಿಸುವ ಕೆಲವು ಕಂಪನಿಗಳು ಪಾಲಿಶ್ ಮಾಡಿದ ಗ್ರಾನೈಟ್ ಮತ್ತು ಸ್ಲ್ಯಾಬ್‌ಗಳನ್ನು ನೇರವಾಗಿ ಅಮೆರಿಕಕ್ಕೆ ಕಳುಹಿಸುತ್ತವೆ.

ಭಾರತೀಯ ಗ್ರಾನೈಟ್ ಮತ್ತು ಕಲ್ಲು ಉದ್ಯಮದ ಒಕ್ಕೂಟದ ಪ್ರಕಾರ, ಪ್ರತಿ ತಿಂಗಳು 100 ಕಂಟೈನರ್‌ನಷ್ಟು ಗ್ರಾನೈಟ್ ಅಮೆರಿಕಕ್ಕೆ ರಫ್ತಾಗುತ್ತದೆ. ಸರಿ ಸುಮಾರು 2,000 ಟನ್‌ನಿಂದ 4,000 ಟನ್‌ನಷ್ಟು ರವಾನೆಯಾಗುತ್ತದೆ. ಪ್ರತಿ ತಿಂಗಳು ₹10 ಕೋಟಿ ಮೌಲ್ಯದ ಗ್ರಾನೈಟ್, ಸ್ಲ್ಯಾಬ್‌ಗಳನ್ನು ಕಳುಹಿಸಲಾಗುತ್ತದೆ. ವಾರ್ಷಿಕವಾಗಿ ₹120 ಕೋಟಿ ವಹಿವಾಟು ನಡೆಯುತ್ತದೆ. ಚಾಮರಾಜನಗರದಿಂದ ರಫ್ತಾಗುವ ಕರಿಕಲ್ಲು ಸ್ಮಾರಕಗಳ ನಿರ್ಮಾಣದಲ್ಲಿ ಬಳಕೆಯಾಗುತ್ತದೆ.

‘ಇಲ್ಲಿಯವರೆಗೂ ಅಮೆರಿಕವು ಗ್ರಾನೈಟ್, ಕಲ್ಲಿನ ಉತ್ಪನ್ನಗಳ ಮೇಲೆ ಸುಂಕ ವಿಧಿಸುತ್ತಿರಲಿಲ್ಲ. ಈಗ ಪ್ರತಿ ಸುಂಕ ಹೇರಲು ನಿರ್ಧರಿಸುವುದರಿಂದ ನಮ್ಮ ಉತ್ಪನ್ನಗಳ ಮೇಲೆ ಸುಂಕ ಬೀಳುವುದು ಖಚಿತ’ ಎಂದು ಭಾರತೀಯ ಗ್ರಾನೈಟ್ ಮತ್ತು ಕಲ್ಲು ಉದ್ಯಮ ಒಕ್ಕೂಟದ ಅಧ್ಯಕ್ಷ ಎಸ್. ಕೃಷ್ಣಪ್ರಸಾದ್ ಹೇಳುತ್ತಾರೆ.

‘ನಿಖರವಾಗಿ ಎಷ್ಟು ಸುಂಕ ಹಾಕಬಹುದು ಎಂಬ ಸ್ಪಷ್ಟತೆ ಸಿಕ್ಕಿಲ್ಲ. ಸುಂಕ ಹಾಕಿದರೆ ಅಲ್ಲಿ ಗ್ರಾನೈಟ್ ಬೆಲೆ ಹೆಚ್ಚಾಗಬಹುದು. ಇದರಿಂದ ಬೇಡಿಕೆ ಕಡಿಮೆಯಾಗುವ ಸಾಧ್ಯತೆ ಇದೆ. ಆಗ ನಮಗೆ ಶೇ 30ರಿಂದ 40ರಷ್ಟು ನಷ್ಟವಾಗಬಹುದು’ ಎಂಬುದು ಅವರ ವಿವರಣೆ.


ಟ್ರಂಪ್ ಆಡಳಿತವು ಗ್ರಾನೈಟ್ ಮೇಲೆ ಸುಂಕ ವಿಧಿಸಲು ಮುಂದಾಗಿರುವುದು ನಷ್ಟ ಉಂಟು ಮಾಡಬಹುದು ಎಂದು ನಂಬಲಾಗಿದ್ದರೂ, ಅದು ರಾಜ್ಯದ ಪಾಲಿಗೆ ಅನುಕೂಲಕರ ಆಗುವ ಸಾಧ್ಯತೆಯಿದೆ.

ಗ್ರಾನೈಟ್, ಕಲ್ಲಿನ ಉದ್ಯಮದಲ್ಲಿ ನಮಗೆ ಪೈಪೋಟಿ ನೀಡುತ್ತಿರುವುದು ಚೀನಾ. ಅದರ ಮೇಲೆ ಶೇ 54ರಷ್ಟು ಸುಂಕ ವಿಧಿಸಲಾಗಿದೆ. ಹಾಗಾಗಿ, ಅಮೆರಿಕದಲ್ಲಿ ಚೀನಾದ ಗ್ರಾನೈಟ್ ಹಾಗೂ ಅದರ ಉತ್ಪನ್ನಗಳು ದುಬಾರಿಯಾಗಲಿವೆ. ಇದರಿಂದ ಭಾರತದ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚುವ ಸಾಧ್ಯತೆಯಿದೆ.

‘ಚೀನಾದ ಉತ್ಪನ್ನಗಳಿಗೆ ಹೋಲಿಸಿದರೆ ಕಡಿಮೆ ಪ್ರತಿ ಸುಂಕ ವಿಧಿಸಿರುವುದರಿಂದ ಭಾರತದ ಉತ್ಪನ್ನಗಳ ದರ ಕಡಿಮೆ ಇರಲಿವೆ. ಹಾಗಾಗಿ, ಅಲ್ಲಿನ ಗ್ರಾಹಕರು ಕರ್ನಾಟಕ ಸೇರಿ ಇತರೆ ರಾಜ್ಯಗಳ ಗ್ರಾನೈಟ್ ಮತ್ತು ಕಲ್ಲಿನ ಉತ್ಪನ್ನಗಳನ್ನು ಖರೀದಿಸಲು ಮುಂದಾಗಬಹುದು. ಹೀಗಾದರೆ, ನಮ್ಮ ಉದ್ಯಮಕ್ಕೆ ಅನುಕೂಲವಾಗಲಿದೆ’ ಎಂದು ವಿವರಿಸುತ್ತಾರೆ ಕೃಷ್ಣಪ್ರಸಾದ್.

ಪೂರಕ ಮಾಹಿತಿ: ಎಸ್. ರವಿಪ್ರಕಾಶ್, ಸೂರ್ಯನಾರಾಯಣ ವಿ., ಪ್ರವೀಣ್ ಪಾಡಿಗಾರ್
ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ

ರಫ್ತು ಆದಾಯ ಇಳಿಕೆ



ಭಾರತದಿಂದ ಅಮೆರಿಕಕ್ಕೆ ಔಷಧಗಳ ರಫ್ತು ಪ್ರಮಾಣವು ಶೇ 14ರಷ್ಟಿದ್ದು, ಪ್ರತಿ ಸುಂಕದಿಂದ ಈ ವಲಯವನ್ನು ಹೊರಗಿಡಲಾಗಿದೆ. ಹಾಗಾಗಿ, ಆಮದು ಚಟುವಟಿಕೆಯು ಮತ್ತಷ್ಟು ಬಲಗೊಳ್ಳಲಿದೆ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಅಧ್ಯಕ್ಷ ಎಂ.ಜಿ. ಬಾಲಕೃಷ್ಣ ಹೇಳುತ್ತಾರೆ.

ಈ ಮೊದಲು ಹರಳು ಮತ್ತು ಚಿನ್ನಾಭರಣ ವಲಯಕ್ಕೆ ಸುಂಕ ಇರಲಿಲ್ಲ. ಈಗ ಪ್ರತಿ ಸುಂಕದ ಬಿಸಿ ಮುಟ್ಟಲಿದೆ. ಇದು ರಫ್ತು ವಹಿವಾಟಿನ ಮೇಲೆ ಪೆಟ್ಟು ಬೀಳಲಿದೆ ಎಂಬುದು ಅವರ ವಿವರಣೆ.

2022–23ರಲ್ಲಿ ಭಾರತವು ಅಮೆರಿಕಕ್ಕೆ ₹5.55 ಲಕ್ಷ ಕೋಟಿ ಮೌಲ್ಯದ ಸಾಫ್ಟ್‌ವೇರ್ ರಫ್ತು ಮಾಡಿದೆ. ಈ ಪೈಕಿ ಕರ್ನಾಟಕದ ಪಾಲು ಶೇ 42ರಷ್ಟಿದೆ. ಇಲ್ಲಿಂದ ಕಾಫಿ, ಕಚ್ಚಾ ರೇಷ್ಮೆಯೂ ರವಾನೆಯಾಗುತ್ತದೆ. ಇವುಗಳಿಗೆ ಸುಂಕ ವಿನಾಯಿತಿ ಇತ್ತು. ಈಗ ಪ್ರತಿ ಸುಂಕ ಅನ್ವಯಿಸಲಿದೆ. ಇದರಿಂದ ರಾಜ್ಯದ ಆದಾಯಕ್ಕೆ ಬರೆ ಬೀಳಲಿದೆ ಎನ್ನುತ್ತಾರೆ ಅವರು.

ರಾಜ್ಯದಿಂದ ಪೆಟ್ರೋಲಿಯಂ ಉತ್ಪನ್ನಗಳು ಸಹ ಪೂರೈಕೆಯಾಗುತ್ತವೆ. ಇವುಗಳಿಗೆ ಶೇ 6.67ರಷ್ಟು ಸುಂಕ ವಿಧಿಸಲಾಗುತ್ತಿತ್ತು. ಈಗ ಪ್ರತಿ ಸುಂಕದ ವ್ಯಾಪ್ತಿಗೆ ಬರುವುದರಿಂದ ರಾಜ್ಯದ ರಫ್ತು ಆದಾಯ ಕಡಿಮೆಯಾಬಹುದು ಎಂಬುದು ಅವರ ವಿವರಣೆ.

ಅಂಕಿ ಅಂಶ

₹13.78 ಲಕ್ಷ ಕೋಟಿ
2023–24ನೇ ಸಾಲಿನಲ್ಲಿ ಕರ್ನಾಟಕದ ಒಟ್ಟು ರಫ್ತು ಮೌಲ್ಯ

20.5%
ದೇಶದ ಒಟ್ಟು ರಫ್ತಿನಲ್ಲಿ ರಾಜ್ಯದ ಪಾಲು

6.09%
ದೇಶದ ಒಟ್ಟು ಸರಕು ರಫ್ತಿನಲ್ಲಿ ರಾಜ್ಯದ ಕೊಡುಗೆ

41%
ದೇಶದ ಒಟ್ಟು ಸಾಫ್ಟ್‌ವೇರ್ ಮತ್ತು ಸೇವಾ ರಫ್ತಿನಲ್ಲಿ ರಾಜ್ಯದ ಪಾಲು

ಕರ್ನಾಟಕದ ರಫ್ತು ಎಷ್ಟು?

ಎಲೆಕ್ಟ್ರಾನಿಕ್ಸ್ ಮತ್ತು ಸಾಫ್ಟ್‌ವೇರ್	₹6.25 ಲಕ್ಷ ಕೋಟಿ
ಎಂಜಿನಿಯರಿಂಗ್ ಸರಕು	₹47,648 ಕೋಟಿ
ಪೆಟ್ರೋಲಿಯಂ	₹25,876 ಕೋಟಿ
ಮೂಲ ರಾಸಾಯನಿಕಗಳು, ಔಷಧ ಉತ್ಪನ್ನ ಮತ್ತು ಸೌಂದರ್ಯ ವರ್ಧಕ	₹11,477 ಕೋಟಿ
ಸಿದ್ಧ ಉಡುಪು	₹9,951 ಕೋಟಿ
ಕೃಷಿ ಮತ್ತು ಸಂಸ್ಕರಿಸಿದ ಆಹಾರ, ಬೀಜಗಳು ಮತ್ತು ಪಾನೀಯಗಳು	₹3,567 ಕೋಟಿ
ಕಾಫಿ	₹5,261 ಕೋಟಿ
ಸಾಗರೋತ್ಪನ್ನ	₹667 ಕೋಟಿ
ಸಂಬಾರ ಪದಾರ್ಥ	₹602 ಕೋಟಿ

(2024–25ನೇ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಸೆಪ್ಟೆಂಬರ್ ಅಂತ್ಯಕ್ಕೆ)



ಪಾಲಿಮರ್ ಉತ್ಪನ್ನಗಳ ಮೇಲಿನ ನಿರ್ದಿಷ್ಟ ಸುಂಕ ಕುರಿತು ಸ್ಪಷ್ಟವಾಗಿ ಹೇಳಿಲ್ಲ. ಆದರೆ, ಭಾರತದ ಪಾಲಿಮರ್ ಉತ್ಪನ್ನಗಳ ರಫ್ತಿನ ಮೇಲೆ ಪ್ರತಿ ಸುಂಕವು ಗಮನಾರ್ಹ ಪರಿಣಾಮ ಬೀರಲಿದೆ
ವಿ. ವಿಜಯಕುಮಾರ್, ಅಧ್ಯಕ್ಷ, ಕರ್ನಾಟಕ ರಾಜ್ಯ ಪಾಲಿಮರ್ಸ್ ಅಸೋಸಿಯೇಷನ್



ಭಾರತಕ್ಕೆ ಹೋಲಿಸಿದರೆ ಬಾಂಗ್ಲಾದೇಶಕ್ಕೆ ವಿಧಿಸಿರುವ ಪ್ರತಿ ಸುಂಕದ ಪ್ರಮಾಣ ಹೆಚ್ಚಿದೆ. ಇದು ಕರ್ನಾಟಕ ಸೇರಿ ದೇಶದ ಇತರೆ ರಾಜ್ಯಗಳಲ್ಲಿ ಸಿದ್ಧಉಡುಪುಗಳ ರಫ್ತು ಉತ್ತೇಜನಕ್ಕೆ ವರದಾನವಾಗಲಿದೆ
ಎಂ.ಜಿ. ರಾಜಗೋಪಾಲ್
ಅಧ್ಯಕ್ಷ, ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ)

ಶಿರಸಿಯ ಕಾಳುಮೆಣಸಿಗೆ ಜಾಗತಿಕ ಮಟ್ಟದಲ್ಲಿ ಬೇಡಿಕೆಯಿದೆ. ಅಮೆರಿಕದ ಪ್ರತಿ ಸುಂಕದಿಂದಾಗಿ ದೀರ್ಘಾವಧಿಯಲ್ಲಿ ಕಾಳುಮೆಣಸು ಹಾಗೂ ಅದರ ಮೌಲ್ಯವರ್ಧಿತ ಉತ್ಪನ್ನವಾದ ಬೋಳಕಾಳು (ಬಿಳಿಕಾಳು) ಮೇಲೆ ಆಗುವ ಪರಿಣಾಮವನ್ನು ತಳ್ಳಿಹಾಕುವಂತಿಲ್ಲ
ಗಜಾನನ ಹೆಗಡೆ, ಕಾಳುಮೆಣಸು ವರ್ತಕ, ಶಿರಸಿ

ಸಮುದ್ರ ಆಹಾರ ಉತ್ಪನ್ನ ವಹಿವಾಟಿಗೂ ಪ್ರಹಾರ

ಭಾರತದಿಂದ ವಿದೇಶಕ್ಕೆ ಸೀಗಡಿ, ಮೃದ್ವಂಗಿ, ಬೊಂಡಾಸ್ (ಸ್ಕ್ವಿಡ್), ವಿವಿಧ ಜಾತಿಯ ಮೀನುಗಳು ರಫ್ತಾಗುತ್ತಿವೆ. ಸಮುದ್ರದ ಮೀನುಗಳು ಹಾಗೂ ಅವುಗಳ ಉತ್ಪನ್ನಗಳನ್ನು ಭಾರತದಿಂದ ಆಮದು ಮಾಡಿಕೊಳ್ಳುವ ರಾಷ್ಟ್ರಗಳ ಪೈಕಿ ಅಮೆರಿಕವೂ ಒಂದಾಗಿದೆ.

2023–24ರಲ್ಲಿ 17.82 ಲಕ್ಷ ಟನ್ (ವಾರ್ಷಿಕ ವಹಿವಾಟು ಮೌಲ್ಯ ₹60,524 ಕೋಟಿ) ಉತ್ಪನ್ನಗಳು ರಫ್ತಾಗಿವೆ. ಈ ಪೈಕಿ 3.29 ಲಕ್ಷ ಟನ್ ಉತ್ಪನ್ನಗಳು ಅಮೆರಿಕಕ್ಕೆ ರಫ್ತಾಗಿದ್ದು, ಇದರ ಮೌಲ್ಯ ₹20,892 ಕೋಟಿ ಆಗಿದೆ.

ಮಂಗಳೂರಿನಿಂದ ಇದೇ ಅವಧಿಯಲ್ಲಿ 2.29 ಲಕ್ಷ ಟನ್‌ನಷ್ಟು ಉತ್ಪನ್ನಗಳು ರಫ್ತಾಗಿದ್ದು, ಇದರ ಮೌಲ್ಯ ₹3,720 ಕೋಟಿಯಾಗಿದೆ. ಅಮೆರಿಕದ ಸುಂಕ ನೀತಿಯು ಈ ಉತ್ಪನ್ನಗಳ ರಫ್ತಿನ ಮೇಲೂ ಪರಿಣಾಮ ಬೀರಲಿದೆ ಎನ್ನುತ್ತಾರೆ ಉದ್ಯಮಿಗಳು.

‘ನಾವು ಹಲವು ವರ್ಷಗಳಿಂದ ಮೀನಿನ ಉತ್ಪನ್ನಗಳ ರಫ್ತು ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದು, ಅಮೆರಿಕಕ್ಕೂ ರಫ್ತು ಮಾಡುತ್ತೇವೆ. ಪ್ರತಿ ಸುಂಕ ನೀತಿಯು ನಮ್ಮ ವಹಿವಾಟಿನ ಮೇಲೆ ಪರಿಣಾಮ ಬೀರುವುದು ನಿಶ್ಚಿತ. ಆದರೆ, ಎಷ್ಟರಮಟ್ಟಿಗೆ ಹೊಡೆತ ನೀಡುತ್ತದೆ ಎಂಬುದನ್ನು ಈಗಲೇ ಊಹಿಸಲಾಗದು’ ಎಂದು ಮಂಗಳೂರಿನ ಆಮ್ಸನ್ ಸೀಫುಡ್ಸ್ ಸಂಸ್ಥೆಯ ಆಡಳಿತ ಪಾಲುದಾರ ಸೋನಿತ್ ವಿವರಿಸುತ್ತಾರೆ.

‘ಪ್ರತಿ ಸುಂಕ ಜಾರಿಯ ಬಳಿಕ ಅಲ್ಲಿನ ಮಾರುಕಟ್ಟೆಯಲ್ಲಿ ನಮ್ಮ ಉತ್ಪನ್ನಗಳ ದರ ಹೆಚ್ಚಿಸಬೇಕಾಗುತ್ತದೆ. ಗುಣಮಟ್ಟ ಕಾಯ್ದುಕೊಂಡರೆ ದರ ಹೆಚ್ಚಾದ ಬಳಿಕವೂ ಅಲ್ಲಿನ ಗ್ರಾಹಕರು ಉತ್ಪನ್ನವನ್ನು ಇಷ್ಟಪಡಬಹುದು ಅಥವಾ ಖರೀದಿಗೆ ಹಿಂದೇಟು ಹಾಕಬಹುದು. ನಮ್ಮಿಂದ ಮೀನಿನ ಉತ್ಪನ್ನಗಳನ್ನು ಖರೀದಿಸುತ್ತಿರುವ ಸಂಸ್ಥೆಯು ಈಗಾಗಲೇ ಪ್ರತಿ ಸುಂಕದಿಂದ ಮಾರುಕಟ್ಟೆ ಮೇಲಾಗುವ ಪರಿಣಾಮ ತಗ್ಗಿಸಲು ಕೆಲವೊಂದು ಕ್ರಮಗಳನ್ನು ಕೈಗೊಂಡಿದೆ’ ಎನ್ನುತ್ತಾರೆ ಅವರು.



ಗುಂಡಣ್ಣ



50 ವರ್ಷಗಳ ಹಿಂದೆ

ಭಾನುವಾರ, 6-4-1975

● **ಹೋಟೆಲ್ ನೌಕರರಿಗೆ ಕನಿಷ್ಠ ವೇತನ: ತಿಂಗಳಲ್ಲಿ ಆಜ್ಞೆ**

ಬೆಂಗಳೂರು, ಏ. 5– ಹೋಟೆಲ್ ನೌಕರರಿಗೆ ಕನಿಷ್ಠ ವೇತನ ನೀಡಿಕೆ ಬಗ್ಗೆ ಸರ್ಕಾರ ಇನ್ನು ಹತ್ತು ದಿನಗಳಲ್ಲಿ ಆಜ್ಞೆ ಹೊರಡಿಸಲಿದೆ.

1948ರ ಕನಿಷ್ಠ ವೇತನ ಶಾಸನದ ರೀತ್ಯ ಈ ಕುರಿತು ಗೆಜೆಟ್‌ನಲ್ಲಿ ಪ್ರಕಟಣೆಯಾದ ನಂತರ ಈ ಆಜ್ಞೆ ಹೊರಡಿಸಲಾಗುವುದು ಎಂದು ಕಾರ್ಮಿಕ ಸಚಿವ ಎಸ್.ಎಂ. ಯಾಹ್ಯಾ ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

● **ಸಿಡುಬು ನಿರ್ಮೂಲನೆ ಸಾಧ್ಯ; ಎಚ್ಚರಿಕೆ ಬೇಕು, ಮಾರಮ್ಮ ಬೇಡ**

ಬೆಂಗಳೂರು, ಏ. 5– ‘ಸಿಡುಬು ಮರಳಿ ಬಾರದು’– ಆಶ್ವಾಸನೆ ನೀಡುವ ಪ್ರಚಾರ. ಬಾರದಂತೆ ತಡೆಯಲು ಹೊಸ ಕಾರ್ಯಕ್ರಮ– ‘ಹೊಸ ಪ್ರಕರಣವನ್ನು ಮೊದಲು ವರದಿ ಮಾಡಿದವರಿಗೆ ನೂರು ರೂ. ಗಳ ಬಹುಮಾನ’.

ರಾಜ್ಯದಲ್ಲಿ ಸಿಡುಬು ನಿವಾರಣೆ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂಬುದಕ್ಕೆ ಈ ಪ್ರಚಾರ ಒಂದು ನಿದರ್ಶನ. ಹಿಂದಿನ ವರ್ಷಗಳಿಗಿಂತ ಈ ವರ್ಷದ ಪ್ರಚಾರವೂ ವಿಭಿನ್ನ. ‘ಮಾರಮ್ಮನೇ ಕಾರಣ’ ಎಂಬ ಮೂಢನಂಬಿಕೆ ಕಡಿಮೆಯಾಗುತ್ತಿರುವಂತೆ, ವಿಶ್ವದಿಂದಲೇ ಈ ಭಯಂಕರ ಸಾಂಕ್ರಾಮಿಕ ರೋಗ ಕಣ್ಮರೆಯಾಗುತ್ತಿದೆ.

● **ತನಿಖೆಗೆ ಸರ್ಕಾರದ ನಕಾರ: ಸಭಾತ್ಯಾಗ**

ಬೆಂಗಳೂರು, ಏ. 5– ಬೆಂಗಳೂರು ಜಲಮಂಡಳಿಯಿಂದ ಮೂರು ಕೋಟಿ ರೂ.ಗಳ ಅವ್ಯವಹಾರ ನಡೆದಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಸಭೆಯ ಸಮಿತಿಯೊಂದನ್ನು ರಚಿಸಬೇಕೆಂಬ ಒತ್ತಾಯಕ್ಕೆ ಸರ್ಕಾರ ಮಣಿಯದಿದ್ದುದನ್ನು ಖಂಡಿಸಿ ಇಂದು ವಿಧಾನಸಭೆಯಲ್ಲಿ ವಿರೋಧ ಪಕ್ಷದವರು ಸಭಾತ್ಯಾಗ ಮಾಡಿದರು.

ಟಿ.ಆರ್. ರಾಮಣ್ಣನವರು ಬೆಂಗಳೂರು ನೀರು ದರ ನಿಗದಿ ಮಾಡಲು ಸಮಿತಿಯೊಂದನ್ನು ರಚಿಸಬೇಕೆಂದು ಮಂಡಿಸಿದ್ದ ಖಾಸಗಿ ನಿರ್ಣಯದ ಚರ್ಚೆಗೆ ಸಚಿವ ಡಿ.ಕೆ. ನಾಯ್ಕರ್ ಕೊಟ್ಟ ಉತ್ತರದಿಂದ ತೃಪ್ತರಾಗದ ವಿರೋಧ ಪಕ್ಷದವರು, ಸದನ ಸಮಿತಿ ರಚಿಸಿ, ಅವ್ಯವಹಾರದ ಬಗ್ಗೆ ತನಿಖೆ ಮಾಡಿ ಎಂದು ಪಟ್ಟು ಹಿಡಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಏಪ್ರಿಲ್ 6, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುದ್ಧ ನವಮಿ ಗಂ. 19-24 ನಕ್ಷತ್ರ: ಪುಷ್ಯ ಅಹೋರಾತ್ರ ಯೋಗ: ಸುಕರ್ಮ ಗಂ. 18-55 ಕರಣ: ಬಾಲವ ಗಂ. 07-20, ಮೀನ ಮಾಸದ 23 ನೇ ದಿನ, **ಮಳೆನಕ್ಷತ್ರ:** ರೇವತಿ 2.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-26 **ಸೂರ್ಯಾಸ್ತ:** 06-39
ಮುಸ್ಲಿಂ ದಿನಾಂಕ: 07 ಶವ್ವಾಲ್
ದಿನ ವಿಶೇಷ: ರಾಮ ನವಮಿ **ಅದೃಷ್ಟ ಸಂಖ್ಯೆ:** 5, 1

ಮೇಷ: ಪ್ರಭಾವಿ ವ್ಯಕ್ತಿಗಳನ್ನು ಭೇಟಿ ಮಾಡಿ, ಅವರಿಂದ ಉಪಯುಕ್ತ ಮಾಹಿತಿ ಪಡೆಯಲಿದ್ದೀರಿ. ಮರದ ವ್ಯಾಪಾರಿಗಳಿಗೆ ಹೆಚ್ಚಿನ ಅವಕಾಶಗಳೊಂದಿಗೆ ಉತ್ತಮ ಲಾಭವೂ ಇರುವುದು.

ವೃಷಭ: ಇಂದು ನಡೆಯಲಿರುವ ಘಟನೆಯಿಂದ, ಜೀವನದಲ್ಲಿ ಹಣಕ್ಕಿಂತಲೂ ಸ್ನೇಹ ಸಂಬಂಧವೇ ಮುಖ್ಯವೆಂಬುದು ಅರಿವಾಗಲಿದೆ. ಕುಟುಂಬದವರೊಂದಿಗೆ ಹೆಚ್ಚಿನ ಸಮಯ ಕಳೆಯುವಿರಿ. ಅಪರಿಚಿತರ ಮಾತಿಗೆ ಮರುಳಾಗದಿರಿ.

ಮಿಥುನ: ಮಕ್ಕಳಿಗಾಗಿ ನೀವು ಮಾಡಿದ ಖರ್ಚು ವ್ಯರ್ಥವಲ್ಲ ಎಂಬುದು ಅರಿವಾಗುವುದು. ಗೆಳೆಯರೊಂದಿಗೆ ಹಳೆಯ ನೆನಪುಗಳನ್ನು ಮೆಲುಕು ಹಾಕುವಿರಿ. ಹಾಸ್ಯ ಮನೋಭಾವದಿಂದಾಗಿ ವೈಶಿಷ್ಟ್ಯಪೂರ್ಣವಾಗಿ ಕಾಣುವಿರಿ.

ಕರ್ಕಾಟಕ: ತಂದೆ ತಾಯಿಯರು ನಿಮಗೆ ವಹಿಸಿರುವ ಜವಾಬ್ದಾರಿಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿ. ಗೃಹ ವಿನ್ಯಾಸ ವಿಷಯದಲ್ಲಿ ಪದವಿ ಪಡೆಯಬೇಕೆಂಬ ನಿಮ್ಮ ಆಸೆಗೆ ಸ್ಪಂದನೆ ಸಿಗಲಿದೆ.

ಸಿಂಹ: ಸ್ವ–ಸಾಮರ್ಥ್ಯದ ಅರಿವು ಉಂಟಾದಲ್ಲಿ ಯಾವುದೇ ವಿಚಾರದಲ್ಲಾದರೂ ನಿಮಗೆ ಜಯವಿರಲಿದೆ. ವಿಮಾ ಕ್ಷೇತ್ರದಲ್ಲಿ ಉತ್ತಮ ಸಾಧನೆ ತೋರಿದ್ದಕ್ಕಾಗಿ ಸಂಸ್ಥೆಯವರಿಂದ ವಿಶೇಷ ಪುರಸ್ಕಾರ ದೊರೆಯಲಿದೆ.

ಕನ್ಯಾ: ವೃತ್ತಿಯಲ್ಲಿ ಎದುರಾಗಬಹುದಾದ ಕಲಹಗಳು ನಿಮ್ಮ ಮಾತಿನ ಕುಶಲತೆ ಹಾಗೂ ಚತುರತೆಯಿಂದಾಗಿ ದೂರಾಗಲಿವೆ. ಕಾರ್ಯದೊತ್ತಡದಿಂದ ಹೊರ ಬರಲು ಪ್ರಯತ್ನಿಸುವಿರಿ. ಮಾನಸಿಕ ಯಾತನೆಗೆ ಒಳಗಾಗದಂತೆ ಕಾಳಜಿವಹಿಸಿ.

ತುಲಾ: ವೈವಾಹಿಕ ಸಂಬಂಧ ಬೆಳೆಸುವ ಮೊದಲು, ಅವರ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಕಲೆಹಾಕಿ, ಅವಲೋಕನ ನಡೆಸುವುದು ಒಳ್ಳೆಯದು. ಅನಿರೀಕ್ಷಿತವಾಗಿ ದೊರೆತ ಅವಕಾಶಗಳನ್ನು ಬಳಸಿಕೊಳ್ಳಲು ಮುಜುಗರ ಬೇಡ.

ವೃಶ್ಚಿಕ: ಎಲೆಕ್ಟ್ರಾನಿಕ್ ಉಪಕರಣಗಳ ಮಾರಾಟಗಾರರು ಹೆಚ್ಚು ಬಂಡವಾಳ ಹೂಡುವುದು ಸೂಕ್ತವಲ್ಲ. ಬಹುದಿನಗಳಿಂದ ಅಂದುಕೊಂಡಂತೆ, ಕೆಲಸದಲ್ಲಿ ಹೊಸ ಪರಿವರ್ತನೆ ಮಾಡಿಕೊಳ್ಳಲು ಸಕಾಲ.

ಧನು: ವಿಳಂಬ ನೀತಿಯಿಂದಾಗಿ ದೈನಂದಿನ ಬದುಕಿನ ಬಗ್ಗೆ ಬೇಸರವಾಗಲಿದೆ. ಮನೆಯಲ್ಲಿ ನಡೆಯಬೇಕಿರುವ ಮಂಗಳ ಕಾರ್ಯಕ್ಕೆ ವಿಘ್ನ ಸಂಭವಿಸದಂತೆ ವಿಘ್ನೇಶ್ವರನನ್ನು ಪ್ರಾರ್ಥಿಸಿ. ಮಕ್ಕಳ ಖರ್ಚುವೆಚ್ಚಗಳನ್ನು ಸರಿದೂಗಿಸುವಿರಿ.

ಮಕರ: ಭೂಮಿ ಖರೀದಿಗೆ ಸಂಬಂಧಿಸಿದಂತೆ ಈ ಹಿಂದೆ ತೆಗೆದುಕೊಂಡಿದ್ದ ನಿರ್ಧಾರವನ್ನು ಕಾರಣಾಂತರವಾಗಿ ಬದಲಿಸಬೇಕಾಗಬಹುದು. ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಬದ್ಧತೆ ಇರಲಿ.

ಕುಂಭ: ವಾದ–ವಿವಾದ, ಅಸಮಾಧಾನವು ನಿಮ್ಮ ಕಾರ್ಯಕ್ಕೆ ಅಡ್ಡಿಯಾಗದಂತೆ ಎಚ್ಚರ ವಹಿಸಿ. ಕಲುಷಿತ ನೀರಿನಿಂದ ಅನಾರೋಗ್ಯ ಉಂಟಾಗುವ ಸಂಭವವಿದ್ದು, ಜಾಗ್ರತೆ ವಹಿಸಿ. ಭೂ ವ್ಯವಹಾರದಲ್ಲಿ ಹೆಚ್ಚಿನ ಲಾಭವಿದೆ.


ಮೀನ: ಕಲಾವಿದರು ಹಾಗೂ ಪತ್ರಕರ್ತರಿಗೆ ಪ್ರಶಂಸೆಯ ಮಾತುಗಳು ಕೇಳಿ ಬರಲಿವೆ. ದಿನದ ಆರಂಭದಲ್ಲಿ ಉಂಟಾಗುವ ವಿಫಲತೆಯ ಬಗ್ಗೆ ನಿರಾಶೆಗೊಳ್ಳಬೇಡಿ. ಸಮಾಜದೊಂದಿಗೆ ಬೆರೆಯುವುದನ್ನು ರೂಢಿಸಿಕೊಳ್ಳಿ.

ಪದಬಂಧ 6003

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಗೃಹದಲ್ಲಿದ್ದ ಮಾತುಲನಾಡಿದ ನುಡಿ ಎಲ್ಲರಿಗೂ ತಿಳಿದ ವಿಷಯ (4)
3.ಮಾನವುಳ್ಳವನ ಮೇಲೆ ಸಂದೇಹವೇ? (4)
5.ಕಂಬದ ಬೋದಿಗೆಗೆ ಜೋಡಿಸಿರುವ ಅಲಂಕಾರದ ಸ್ತ್ರೀ ವಿಗ್ರಹ (4)
7.ದೇವಾಲಯದ ಸಭಾಮಂಟಪ (4)
9.ಎಳ್ಳು ನೀರು ಬಿಡುವಿಕೆ (4)
12.ರಥಿಕರಲ್ಲಿ ಅತ್ಯಂತ ಶ್ರೇಷ್ಠನಾದವನು (4)
15.ಬೆಲೆಬಾಳುವ ಮಣಿಗಳಿಗೆ ಆಶ್ರಯವಾದ ಸಮುದ್ರ (4)
16.ಹೂವಿನ ಬಾಣವಿಲ್ಲಿ ತಿರುವುಮುರುವಾಗಿದೆ (4)

ಮೇಲಿಂದ ಕೆಳಕ್ಕೆ
1.ಇದು ನಡುವಿನದು (3)
2.ಮಾವನಿಗೆ ಕೇಳಿಸಿದ ಪ್ರತಿಧ್ವನಿ (3)
3.ಕನ್ನಡಿಗನಿಗಾದ ಎಕ್ಸ್‌ಪಿರಿಯನ್ಸ್! (4)
4.ಕೈಯಲ್ಲಿರುವ ಹಣ (3)
6.ಈಕೆ ನಳನ ಪತ್ನಿ (4)
7.ಅಸಲಿ ಪದದ ವಿರುದ್ಧ ಪದ (3)
8.ಕಾಲಸೂಚಕ ಯಂತ್ರ (4)
10.ವಾರದ ಕೊನೆಗೆ ಧರಿಸಿದ ಯಜ್ಞೋಪವೀತವಿದು (4)
11.ಪರಿಹರಿಸಲಾಗದುದು (3)
13.ಹನುಮಂತನಿಲ್ಲಿ ಉಲ್ಟಾ ನಿಂತಿದ್ದಾನೆ (3)
14.ಕಾಂತಿ ಅಥವಾ ಬೆಡಗು (3)



6002ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಡಬಾಗ್ನಿ 2.ಪರಂಪರೆ
4.ಕನ್ನಡಕ 6.ಹವೀಜ
7.ಣಕ 9.ಖರಬೆ
11.ರವಿ 13.ಮೊಸರು
14.ಗೆಳೆತನ 16.ಕರೆಯೋಲೆ
17.ಋತುಮಾನ

ಮೇಲಿಂದ ಕೆಳಕ್ಕೆ:
1.ವಶೀಕರಣ 2.ಪವಿ
3.ಪದವೀಧರ 5.ಕರುಳು
8.ಕಲ್ಲುಸಕ್ಕರೆ 10.ಬೆಸುಗೆ
12.ವಿಮಾನಯಾನ 15.ಬಳೆ

ಸುಡೊಕು 6388

				8			6	7
	7		1		6			3
3		5		2		9		
	8	7					1	
		4	7	6	3	8		
5	9						7	4
		2		7		1		5
1	4		2		5		9	
	5			4		2		8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6387 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸರ್ಕಾರದ ಕಸ ಎತ್ತುವ ಟೆಂಡರ್ ಪಡೆದಿರುವೆ: ಕೇಂದ್ರ ಕೈಗಾರಿಕಾ ಸಚಿವ ಎಚ್‌.ಡಿ.ಕುಮಾರಸ್ವಾಮಿ

‘ಮಣ್ಣಿನ ಹೆಸರಲ್ಲಿ ಅದಿರು ಸಾಗಿಸಿದ್ದ ಡಿಕೆಶಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು 2003–04ರಲ್ಲಿ ನಗರಾಭಿವೃದ್ಧಿ ಸಚಿವರಾಗಿದ್ದಾಗ ಮಣ್ಣಿನ ಹೆಸರಿನಲ್ಲಿ ಸಾವಿರಾರು ಟನ್ ಕಬ್ಬಿಣದ ಅದಿರನ್ನು ಬಳ್ಳಾರಿಯಿಂದ ತರಿಸಿಕೊಂಡಿದ್ದಾರೆ’ ಎಂದು ಕೇಂದ್ರ ಕೈಗಾರಿಕಾ ಸಚಿವ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ನನ್ನನ್ನು ಪದೇ–ಪದೇ ಕೆಣಕುತ್ತಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಶಿವಕುಮಾರ್, ‘ಕನಕಪುರದಲ್ಲಿ ಮಾತ್ರ ಬಂಡೆ ಒಡೆದಿದ್ದೇನೆ. ಬಳ್ಳಾರಿಗೂ ನನಗೂ ಏನು ಸಂಬಂಧ’ ಎಂದಿದ್ದಾರೆ. ಅವರಿಗೂ ಬಳ್ಳಾರಿಗೂ ಸಂಬಂಧ ಇಲ್ಲವೇ? ಅವರು ಸಚಿವರಾಗಿದ್ದಾಗ ಗಣಿ ಮತ್ತು ಭೂವಿಜ್ಞಾನ ಇಲಾಖೆ, ರಾಜ್ಯ ಖನಿಜ ಅಭಿವೃದ್ಧಿ ನಿಗಮಕ್ಕೆ ಹತ್ತಾರು ಪತ್ರಗಳನ್ನು ಏಕೆ ಬರೆದಿದ್ದರು’ ಎಂದು ಪ್ರಶ್ನಿಸಿದರು.

‘ಶಿವಕುಮಾರ್ ತಮ್ಮ ಒಡೆತನದ ಏಳು ಕಂಪನಿಗಳ ಮೂಲಕ ಮಣ್ಣಿನ ಹೆಸರಿನಲ್ಲಿ ಉತ್ಕೃಷ್ಟ ಗುಣಮಟ್ಟದ ಕಬ್ಬಿಣದ ಅದಿರು ತರಿಸಿಕೊಂಡಿದ್ದಾರೆ. ಬಳ್ಳಾರಿಯಿಂದ ಎಷ್ಟು ಅದಿರು ಬಂತು, ಅದು ಎಲ್ಲಿಗೆ ಹೋಯಿತು, ರಸ್ತೆ ಮತ್ತು ನಿರ್ಮಾಣ ಕಾಮಗಾರಿಗೆ ಮಣ್ಣು ಎಲ್ಲಿಂದ ಬಂತು ಎಂಬೆಲ್ಲಾ ದಾಖಲೆ ನನ್ನ ಬಳಿ ಇದೆ. ನನ್ನನ್ನು ಕೆಣಕಿದ್ದೀರಿ. ಈ ಎಲ್ಲವನ್ನೂ ಬಯಲಿಗೆಳೆಯುತ್ತೇನೆ’ ಎಂದರು.



ರಾಮನಗರ ಪೊಲೀಸರು ಕೇತಗಾನಹಳ್ಳಿಯ ರೈತರಿಗೆ ನೀಡಿರುವ ನೋಟಿಸ್ ಅನ್ನು ಎಚ್‌.ಡಿ.ಕುಮಾರಸ್ವಾಮಿ ಸುದ್ದಿಗೋಷ್ಠಿಯಲ್ಲಿ ತೋರಿಸಿದರು

‘ನಿಮ್ಮ ಕಸ ಎತ್ತುತ್ತೇನೆ’: ‘ಕುಮಾರಸ್ವಾಮಿಯೂ ಕಸ ಎತ್ತುತ್ತಿದ್ದ ಎಂದು ಶಿವಕುಮಾರ್ ಹೇಳಿದ್ದಾರೆ. ಹೌದು ನಾನು ಬಿ.ಎಸ್‌ಸಿ ಓದುವಾಗ ಹೊಂಬೇಗೌಡನಗರ, ವಿಲ್ಸನ್‌ಗಾರ್ಡನ್ ಮತ್ತು ಸುಧಾಮನಗರ ವಾರ್ಡ್‌ಗಳಲ್ಲಿ ಕಸ ಎತ್ತುವ ಗುತ್ತಿಗೆ ಪಡೆದಿದ್ದೆ. ಆ ಬಗ್ಗೆ ಮಾತನಾಡಿದ್ದಕ್ಕೆ ಬೇಸರವಿಲ್ಲ. ಈಗ ನಿಮ್ಮ ಕಸ ಎತ್ತುವ ಟೆಂಡರ್ ತೆಗೆದುಕೊಂಡಿದ್ದೇನೆ’ ಎಂದು ಕುಮಾರಸ್ವಾಮಿ ಹೇಳಿದರು.

‘ಬಿಬಿಎಂಪಿಯಲ್ಲಿ ಕಸ ಎತ್ತಲು 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ಶಿವಕುಮಾರ್ ಹೊರಟಿದ್ದರು. ಪ್ರತಿ ಟನ್ ಕಸ ವಿಲೇವಾರಿಗೆ ₹6,000 ಶುಲ್ಕ ನಿಗದಿ ಮಾಡಿದ್ದರು. ಅದರಲ್ಲಿ ₹15,000 ಕೋಟಿಯಷ್ಟು ಅಕ್ರಮವಾಗುತ್ತಿದೆ ಎಂದು ನಾನು ಆಕ್ಷೇಪ ಎತ್ತಿದ ನಂತರ ಟೆಂಡರ್ ಬದಲಿಸಿದ್ದಾರೆ. ಈಗ ಪ್ರತಿ ಟನ್‌ಗೆ ₹3,000 ನಿಗದಿ ಮಾಡಿದ್ದಾರೆ. ಅಕ್ರಮ ಇಲ್ಲ ಎಂದಾದ ಮೇಲೆ ಟೆಂಡರ್ ಬದಲಿಸಿದ್ದು ಏಕೆ’ ಎಂದು ಪ್ರಶ್ನಿಸಿದರು.

> **2012ರಲ್ಲಿ ಯಡಿಯೂರಪ್ಪ ವಿರುದ್ಧ ದಾಖಲೆ ಬಿಡುಗಡೆ ಮಾಡಿದ್ದೆ ಎಂದು ನನ್ನ ವಿರುದ್ಧ ನಾಲ್ಕು ಪ್ರಕರಣ ದಾಖಲಿಸಿದ್ದರು. ಈಗ ಕಾಂಗ್ರೆಸ್ ಸರ್ಕಾರ ಸಹ ಅದನ್ನೇ ಮಾಡುತ್ತಿದೆ**
> **ಎಚ್‌.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

ಪೊಲೀಸರ ಅಧಿಕಾರವೇನು?: ‘ಕೇತಗಾನಹಳ್ಳಿ ತೋಟದ ಪ್ರಕರಣದಲ್ಲಿ ನಮ್ಮ ಪಕ್ಷದ ತೋಟದ ಚಂದ್ರಶೇಖರಯ್ಯ ಎಂಬ ವೈದ್ಯರ ಜಮೀನಿಗೆ ಸಂಬಂಧಿಸಿದಂತೆ ರಾಮನಗರ ಪೊಲೀಸರು ನೋಟಿಸ್ ನೀಡಿದ್ದಾರೆ. ದಾಖಲೆ ಪತ್ರಗಳೊಂದಿಗೆ ಬಂದು, ವಿಚಾರಣೆ ಎದುರಿಸಿ ಎಂದಿದ್ದಾರೆ. ಕಂದಾಯ ದಾಖಲೆಗಳನ್ನು ಪರಿಶೀಲಿಸುವ ಅಧಿಕಾರವನ್ನು ಪೊಲೀಸರಿಗೆ ಕೊಟ್ಟವರು ಯಾರು’ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

‘ಯುದ್ಧಕ್ಕೆ ಬಂದಿದ್ದೇನೆ’

‘ರಾಜ್ಯದಲ್ಲೀಗ ಒಬ್ಬ ಘಜ್ನಿ, ಒಬ್ಬ ಘೋರಿ ಮತ್ತೊಬ್ಬ ಮಲಿಕ್ ಕಾಫೂರ್ ಕೂತು ಲೂಟಿ ಹೊಡೆಯುತ್ತಿದ್ದಾರೆ. ವಾರಕ್ಕೊಂದರಂತೆ ಇವರ ಹಗರಣಗಳನ್ನು ಬಿಚ್ಚಿಡುತ್ತೇನೆ. ಇವರ ವಿರುದ್ಧ ಯುದ್ಧ ಸಾರಿದ್ದೇನೆ’ ಎಂದ ಕುಮಾರಸ್ವಾಮಿ ಅವರು, ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರಿಗೆ ಹಲವು ಪ್ರಶ್ನೆಗಳನ್ನು ಕೇಳಿದರು. ಅವುಗಳು ಇಂತಿವೆ:

- ‘ನನ್ನ ವಿರುದ್ಧದ ಸಾಯಿ ವೆಂಕಟೇಶ್ವರ ಮಿನರಲ್ಸ್ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು 17 ವರ್ಷಗಳಿಂದ ತನಿಖೆ ನಡೆಸುತ್ತಲೇ ಇದ್ದಾರೆ. ಮುಡಾ ಪ್ರಕರಣದಲ್ಲಿ ಕೆಲವೇ ತಿಂಗಳಲ್ಲಿ ತನಿಖೆ ನಡೆಸಿ, ಬಿ–ರಿಪೋರ್ಟ್ ಸಲ್ಲಿಸಿದ್ದಾರೆ. ಇದು ಯಾವ ರೀತಿಯ ತನಿಖೆ?
- ‘ಸಿದ್ದರಾಮಯ್ಯ ಅವರ ಬಾಮೈದ ಮಲ್ಲಿಕಾರ್ಜುನಸ್ವಾಮಿಯೇ ದೇವರಾಜು ಹೆಸರಿನಲ್ಲಿ ಡಿನೋಟಿಫಿಕೇಶನ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಆ ಅರ್ಜಿಯ ಮೇಲೆ ಡಿಸಿಎಂ ಎಂದು ಬರೆಯಲಾಗಿದೆ. ಅರ್ಜಿಯ ಕೈಬರಹ, ಡಿಸಿಎಂ ಎಂಬ ಕೈಬರಹ ತಾಳೆಯಾಗುತ್ತದೆಯೇ’ ಎಂಬ ಅಂಶ ಲೋಕಾಯುಕ್ತದ ಬಿ–ರಿಪೋರ್ಟ್‌ನಲ್ಲಿ ಇದೆ. ಈ ಆಯಾಮದಲ್ಲಿ ತನಿಖೆ ಏಕೆ ಮುಂದುವರೆಯಲಿಲ್ಲ?
- ‘ಸರ್ಕಾರಿ ಗುತ್ತಿಗೆಯಲ್ಲಿ ಸಾಬರಿಗೆ ಶೇ4ರಷ್ಟು ಮೀಸಲಾತಿ ನೀಡಲು ಹೊರಟಿದ್ದೀರಿ. ದಲಿತರಿಗೆ ಈ ಹಿಂದೆಯೇ ಮೀಸಲಾತಿ ನೀಡಿದ್ದೀರಿ. ಆ ಮೀಸಲಾತಿಯಂತೆ ಎಷ್ಟು ಮಂದಿ ದಲಿತರಿಗೆ ಗುತ್ತಿಗೆ ಸಿಕ್ಕಿದೆ? ಸಿದ್ದರಾಮಯ್ಯನವರೇ ಈ ಬಗ್ಗೆ ಶ್ವೇತಪತ್ರ ಹೊರಡಿಸಲು ಸಿದ್ಧರಿದ್ದೀರಾ?
- ‘ದೇವೇಗೌಡ ಪ್ರಧಾನಿಯಾದ ಮೇಲೆ ಮತ್ತು ರೇವಣ್ಣ ಅಧ್ಯಕ್ಷರಾದ ಕೆಎಂಎಫ್ ಅನ್ನು ಹೇಗೆ ಲಾಭಕ್ಕೆ ತಂದರು ಎಂಬುದು ನನಗೆ ಗೊತ್ತಿದೆ. ಆ ಬಗ್ಗೆ ಶಿವಕುಮಾರ್ ಅವರಿಂದ ನಾನು ಹೇಳಿಸಿಕೊಳ್ಳಬೇಕಿಲ್ಲ. ನೀವು ಮೊಸರಿನ ಬೆಲೆ ₹4 ಹೆಚ್ಚಿಸಿದ್ದೀರಲ್ಲಾ ಅದು ಎಲ್ಲಿಗೆ ಹೋಗುತ್ತದೆ ಎಂಬುದನ್ನು ತಿಳಿಸುತ್ತೀರಾ?

ಇನ್ನಷ್ಟು ಸುದ್ದಿಗೆ prajavani.net ನೋಡಿ



ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಪಟ್ಟಣದಲ್ಲಿ ಶನಿವಾರ ಸುರಿದ ಮಳೆಯಲ್ಲಿ ಯುವತಿಯರು ಕೊಡೆ ಹಿಡಿದು ಸಾಗಿದರು

ಶಿವಮೊಗ್ಗ: ಮಳೆ ಸಂಭ್ರಮ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಬಿಸಿಲ ಬೇಗೆಯಿಂದ ಬಸವಳಿದಿದ್ದ ನಗರದ ಜನರಿಗೆ ಶನಿವಾರ ಸಂಜೆ ಸುರಿದ ವರ್ಷದ ಮೊದಲ ದೊಡ್ಡ ಮಳೆ ತಂಪನೆರೆಯಿತು.

ಸಂಜೆ 6.30ರ ವೇಳೆಗೆ ಆರಂಭವಾದ ಮಳೆ ಒಂದೂವರೆ ಗಂಟೆ ಆರ್ಭಟಿಸಿತು. ಜಿಲ್ಲೆಯ ತೀರ್ಥಹಳ್ಳಿ ಹಾಗೂ ಸೊರಬ ತಾಲ್ಲೂಕುಗಳಲ್ಲಿ ಗುಡುಗು ಸಿಡಿಲಿನ ಸಹಿತ ವರುಣ ಅಬ್ಬರಿಸಿದರೆ, ಸೊರಬ ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಸಂಜೆ 5 ಗಂಟೆಗೆ ಶುರುವಾದ ವರ್ಷಧಾರೆ ಅರ್ಧ ಗಂಟೆ ಸುರಿಯಿತು.

ಆಲಿಕಲ್ಲು ಮಳೆ (ದಾವಣಗೆರೆ ವರದಿ): ದಾವಣಗೆರೆ ಜಿಲ್ಲೆಯ ಮಲೇಬೆನ್ನೂರು ಹೋಬಳಿ ವ್ಯಾಪ್ತಿಯಲ್ಲಿ ಬಿರುಗಾಳಿ, ಗುಡುಗು ಸಹಿತ ಆಲಿಕಲ್ಲು ಮಳೆಯಾಗಿದೆ. ನ್ಯಾಮತಿ ತಾಲ್ಲೂಕಿನಲ್ಲೂ ಗುಡುಗು ಸಹಿತ ಮಳೆ ಸುರಿದಿದೆ. ಹೊನ್ನಾಳಿ, ಕಡರನಾಯ್ಕನಹಳ್ಳಿ ಹಾಗೂ ಹರಿಹರದಲ್ಲೂ ಮಳೆಯ ಸಿಂಚನವಾಗಿದೆ.

ಉತ್ತಮ ಮಳೆ (ಮಂಗಳೂರು ವರದಿ): ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಬಹುತೇಕ ಕಡೆಗಳಲ್ಲಿ ಉತ್ತಮ ಮಳೆಯಾಗಿದೆ. ಮಂಗಳೂರು ನಗರದಲ್ಲೂ ಸಂಜೆ ತುಂತುರು ಮಳೆಯಾಯಿತು.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ವಿವಿಧೆಡೆ ಧಾರಾಕಾರ ಮಳೆಯಾಯಿತು. ಅಜ್ಜಂಪುರ ಪಟ್ಟಣದಲ್ಲಿ ಸಾಧಾರಣ ಮಳೆ ಸುರಿಯಿತು.

ಕಲಬುರಗಿ ಸೇರಿದಂತೆ ಜಿಲ್ಲೆಯ ಶಹಾಬಾದ್, ಜೇವರ್ಗಿ ತಾಲ್ಲೂಕಿನ ಹಲವೆಡೆ ಶನಿವಾರ ಗುಡುಗು ಮಿಂಚು ಸಹಿತ ಜೋರು ಮಳೆ ಸುರಿಯಿತು.

ಬಿ.ವೈ. ವಿಜಯೇಂದ್ರ ಕಾರ್ಯವೈಖರಿಗೆ ಅತೃಪ್ತಿ

ವರಿಷ್ಠರ ಭೇಟಿಯಾದ ಬೆಲ್ಲದ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಅವರನ್ನು ಇಲ್ಲಿ ಭೇಟಿ ಮಾಡಿ ಸಮಾಲೋಚಿಸಿದರು.

‘ಕುಟುಂಬ ಹಾಗೂ ಹೊಂದಾಣಿಕೆ ರಾಜಕಾರಣ ಮಾಡುತ್ತಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಬದಲಿಸಬೇಕು’ ಎಂದು ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣ ಪಟ್ಟು ಹಿಡಿದಿದೆ. ಪಕ್ಷದ ಆಂತರಿಕ ವಿಷಯಗಳ ಬಗ್ಗೆ ಹೇಳಿಕೆ ನೀಡಿ ಶಿಸ್ತು ಉಲ್ಲಂಘಿಸಿದ ಕಾರಣಕ್ಕೆ ಯತ್ನಾಳ ಅವರನ್ನು ಪಕ್ಷದಿಂದ ಆರು ವರ್ಷಗಳ ಅವಧಿಗೆ ಹೊರಹಾಕಲಾಗಿದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆ ಕೆಲವೇ ದಿನಗಳಲ್ಲಿ ಪೂರ್ಣಗೊಳ್ಳುವ ಸಂಭವ ಇದೆ. ಅದೇ ಹೊತ್ತಿನಲ್ಲಿ, ಬೆಲ್ಲದ ಅವರು ವರಿಷ್ಠರನ್ನು ಭೇಟಿ ಮಾಡಿರುವುದು ಚರ್ಚೆಗೆ ಗ್ರಾಸವಾಗಿದೆ. ಎಲ್ಲ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವ ನಾಯಕರನ್ನು ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಡಬೇಕು ಎಂಬುದು ಪಕ್ಷದ ತಟಸ್ಥ ಬಣದ ಒತ್ತಾಯ. ತಟಸ್ಥ ಬಣದಲ್ಲಿಬೆಲ್ಲದಗುರುತಿಸಿಕೊಂಡಿದ್ದಾರೆ.

‘ಮುಡಾ ಹಗರಣ, ವಾಲ್ಮೀಕಿ ಹಗರಣ, ವಕ್ಫ್ ಹಾಗೂ ಸರ್ಕಾರಿ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ವಿರುದ್ಧ ಹೋರಾಟ ನಡೆಸಿ ಸರ್ಕಾರದ ವಿರುದ್ಧ ಜನಾಭಿಪ್ರಾಯ ರೂಪಿಸಲು ಅವಕಾಶಗಳಿದ್ದವು. ಪದೇ ಪದೇ ಅವಕಾಶಗಳನ್ನು ಕೈಚೆಲ್ಲಲಾಗುತ್ತಿದೆ. ರಾಜ್ಯ ಸರ್ಕಾರದ ಬೆಲೆ ಏರಿಕೆ ವಿರುದ್ಧವೂ ನಡೆದಿರುವುದು ಕಾಟಾಚಾರದ ಹೋರಾಟ. ಪಕ್ಷದ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ವಿಜಯೇಂದ್ರ ರಣತಂತ್ರ ಹೆಣೆಯುತ್ತಿಲ್ಲ. ಇದರಿಂದಾಗಿ, ಕಾರ್ಯಕರ್ತರಲ್ಲೂ ಗೊಂದಲ ಸೃಷ್ಟಿಯಾಗಿದೆ’ ಎಂದು ಅವರು ವರಿಷ್ಠರ ಗಮನಕ್ಕೆ ತಂದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ಮಾಡುವುದಿದ್ದರೆ ತಮ್ಮನ್ನು ಪರಿಗಣಿಸಬೇಕು ಎಂದು ಅವರು ಕೋರಿದರು.

‘ಖಾಸಗಿ ಕಾರ್ಯನಿಮಿತ್ತ ನವದೆಹಲಿಗೆ ಬಂದಿದ್ದೇನೆ’ ಎಂದು ಬೆಲ್ಲದ ‘ಪ್ರಜಾವಾಣಿ’ಗೆ ತಿಳಿಸಿದರು.

‘ಯತ್ನಾಳ ಹೊಸ ಪಕ್ಷ ಕಟ್ಟಿದರೆ ಹೋಗಲ್ಲ’

ದಾವಣಗೆರೆ: ‘ಪಕ್ಷದಿಂದ ಉಚ್ಚಾಟನೆಗೊಂಡಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಬಿಜೆಪಿಗೆ ಮರಳಿ ಕರೆತರುತ್ತೇವೆಯೇ ಹೊರತು ಹೊಸ ಪಕ್ಷ ಕಟ್ಟಲು ಬಿಡುವುದಿಲ್ಲ. ಅವರು ಹೊಸ ಪಕ್ಷ ಕಟ್ಟಿದರೆ ನಾವು ಅವರ ಜೊತೆ ಹೋಗದೆ ಬಿಜೆಪಿಯಲ್ಲೇ ಉಳಿಯುತ್ತೇವೆ’ ಎಂದು ಶಾಸಕ ಬಿ.ಪಿ.ಹರೀಶ್ ಮತ್ತು ಕೇಂದ್ರದ ಮಾಜಿ ಸಚಿವ ಜಿ.ಎಂ.ಸಿದ್ದೇಶ್ವರ ಸ್ಪಷ್ಟಪಡಿಸಿದರು.

‘ಈಗಲೂ ಯತ್ನಾಳ ಅವರೇ ನಮ್ಮ ನಾಯಕ. ಅವರು ಹೊಸ ಪಕ್ಷ ಕಟ್ಟುತ್ತಾರೆ ಎಂಬುದು ಮಾಧ್ಯಮಗಳ ಸೃಷ್ಟಿ. ಪಕ್ಷ ಕಟ್ಟುವ ಆಲೋಚನೆ ಇಲ್ಲ ಎಂಬುದನ್ನು ಅವರು ನಮ್ಮ ತಂಡಕ್ಕೆ ಸ್ಪಷ್ಟಪಡಿಸಿದ್ದಾರೆ. ಅವರನ್ನು ಪಕ್ಷಕ್ಕೆ ಮರಳಿ ಕರೆತರಲು ದೆಹಲಿಗೆ ನಿಯೋಗ ತೆರಳಲಿದ್ದೇವೆ’ ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮೇಕೆದಾಟಿಗೆ ತಮಿಳುನಾಡು ಒಪ್ಪಿಗೆ: ಡಿಕೆಶಿ ವಿಶ್ವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೇಕೆದಾಟು ಯೋಜನೆಗೆ ತಮಿಳುನಾಡಿನ ಒಪ್ಪಿಗೆ ಪಡೆದರೆ ಎತ್ತಿನಹೊಳೆಗೆ ಕೇಂದ್ರ ಪರಿಸರ ಇಲಾಖೆಯಿಂದ ಅನುಮತಿ ಕೊಡಿಸುವುದಾಗಿ ಬಿಜೆಪಿ ನೀಡಿರುವ ಸಲಹೆ ಸ್ವೀಕರಿಸುವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.



ಶಿವಕುಮಾರ್

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಎತ್ತಿನಹೊಳೆಗೆ ಸ್ವಾಧೀನಪಡಿಸಿಕೊಂಡ ಭೂಮಿಗೆ ಬದಲಿ ಭೂಮಿ ನೀಡಿದ್ದೇವೆ. ಯೋಜನೆಗೆ ಕೇಂದ್ರ ಪರಿಸರ ಇಲಾಖೆ ಅನುಮತಿ ನೀಡಲೇಬೇಕು. ಇದರಲ್ಲಿ ಕೊಡಿಸುವುದೇನಿದೆ? ಅದು ಕೇಂದ್ರದ ಕರ್ತವ್ಯ’ ಎಂದರು.

‘ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ಅನುದಾನ ಬಿಡುಗಡೆ ವಿಚಾರ ಕೇಂದ್ರ ಸಚಿವ ಸಂಪುಟದ ಮುಂದೆ ಇದೆ ಎಂದು ಕೇಂದ್ರ ಜಲಶಕ್ತಿ ಸಚಿವರು ತಿಳಿಸಿದ್ದಾರೆ. ಯೋಜನೆಗೆ ರಾಜ್ಯ ಸರ್ಕಾರ ಮಾಡಿರುವ ಖರ್ಚು, ಕೇಂದ್ರ ನೀಡಬೇಕಿರುವ ಹಣದ ವಿವರವನ್ನು ಸಲ್ಲಿಸಲಾಗಿದೆ. ಮಹದಾಯಿ, ಮೇಕೆದಾಟು, ಕಳಸಾ–ಬಂಡೂರಿ ವಿಚಾರಗಳನ್ನು ಕೇಂದ್ರಕ್ಕೆ ಮನವರಿಕೆ ಮಾಡಿಕೊಟ್ಟಿದ್ದೇವೆ’ ಎಂದು ಹೇಳಿದರು.

ಏ.8 ರಂದು ವಿಹಿಂಪ ಪ್ರತಿಭಟನೆ

ಬೆಂಗಳೂರು: ರಾಜ್ಯ ಸರ್ಕಾರ, ಸರ್ಕಾರಿ ಕಾಮಗಾರಿಗಳ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ಕಲ್ಪಿಸಿರುವುದನ್ನು ವಿರೋಧಿಸಿ ಏಪ್ರಿಲ್ 8 ರಂದು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗುವುದು ಎಂದು ವಿಶ್ವ ಹಿಂದೂ ಪರಿಷತ್ ದಕ್ಷಿಣ ಪ್ರಾಂತ ಕಾರ್ಯದರ್ಶಿ ಜಗನ್ನಾಥ ಶಾಸ್ತ್ರಿ ಹೇಳಿದರು.

ಸಂವಿಧಾನದ ಪರಿಚ್ಛೇದ 15ರ ಪ್ರಕಾರ ಧರ್ಮ ಮತ್ತು ಜಾತಿಯ ಆಧಾರದ ಮೇಲೆ ನಾಗರಿಕರ ಮಧ್ಯೆ ತಾರತಮ್ಯ ಮಾಡುವುದನ್ನು ನಿಷೇಧಿಸುತ್ತದೆ. ಸಂವಿಧಾನ ರಚಿಸುವಾಗಲೇ ಅಂಬೇಡ್ಕರ್ ಅವರು ಧರ್ಮಾಧಾರಿತ ಮೀಸಲಾತಿ ವಿರೋಧಿಸಿದ್ದರು ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಎರಡು ತಿಂಗಳ ನಂತರ ಒಳ ಮೀಸಲಾತಿ: ಸಿ.ಎಂ

ಒಂದನೇ ಪುಟದಿಂದ...

ಮೀಸಲಾತಿ ವಿರುದ್ಧ ಮಾತಾಡುತ್ತಿದ್ದವರೂ ಮೀಸಲಾತಿ ಸವಲತ್ತುಗಳನ್ನು ಅನುಭವಿಸುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಆರ್ಥಿಕ ದುರ್ಬಲ ವರ್ಗಗಳ ಹೆಸರಲ್ಲಿ ಶೇ 10 ಮೀಸಲಾತಿ ಕಲ್ಪಿಸಿದ ಬಳಿಕ ಎಲ್ಲರೂ ಮೀಸಲಾತಿ ಫಲಾನುಭವಿಗಳಾಗಿದ್ದಾರೆ. ಹಾಗಾಗಿ, ಮೀಸಲಾತಿ ವಿರೋಧಿಸುವವರು ಈಗ ಯಾರೂ ಇಲ್ಲ ಎಂದು ಪ್ರತಿಪಾದಿಸಿದರು.

ಬಾಬೂ ಜಗಜೀವನ್ ರಾಮ್ ಅವರು ಸಾಮಾಜಿಕ ನ್ಯಾಯದ ಹರಿಕಾರ. ಜಾತಿ ವ್ಯವಸ್ಥೆ ಕಾರಣಕ್ಕೆ ಸಮಾಜದಲ್ಲಿ ಅಸಮಾನತೆ ಇದೆ. ಜಾತಿ ಇರುವವರೆಗೂ ಮೀಸಲಾತಿ ಇರಬೇಕು ಎಂಬ ಸ್ಪಷ್ಟವಾದ ನಿಲುವು ಹೊಂದಿದ್ದರು ಎಂದು ಸ್ಮರಿಸಿದರು.

‘ಜಾತಿ ಸೃಷ್ಟಿಸಿದವರು ನಾವಲ್ಲ. ಆದರೆ, ಜಾತಿಯ ಅಸಮಾನತೆಗೆ ಬಲಿ ಆಗಿದ್ದೇವೆ. ಜಾತಿ ವ್ಯವಸ್ಥೆಗೆ ಚಲನೆ ಇಲ್ಲ. ಜಾತಿ ವ್ಯವಸ್ಥೆ ಜೀವಂತವಾಗಿರುವರೆಗೂ ಸಮಾನ ಅವಕಾಶಗಳು ಸಿಗಲು ಸಾಧ್ಯವಿಲ್ಲ. ಜಗಜೀವನ್ ರಾಮ್ ಮತ್ತು ಅಂಬೇಡ್ಕರ್ ಇಬ್ಬರಿಗೂ ಸಮಾಜದ ಕಷ್ಟ ಗೊತ್ತಿತ್ತು. ಈ ಕಷ್ಟಗಳಿಗೆ ಪರಿಹಾರವಾಗಿ ಸಂವಿಧಾನ ಬಂತು. ನಮಗೆಲ್ಲಾ ಶಿಕ್ಷಣ ಸಿಕ್ಕಿತು. ಮತ್ತೊಬ್ಬ ಅಂಬೇಡ್ಕರ್, ಜಗಜೀವನ್ ರಾಮ್ ನಮಗೆ ಸಿಗುವುದಿಲ್ಲ. ಅವರು ಬಿಟ್ಟು ಹೋಗಿರುವ ಚಿಂತನೆ ಮತ್ತು ಕಾಳಜಿಗಳನ್ನು ಪಾಲಿಸುವ ಮೂಲಕ ಅವರ ಹಾದಿಯಲ್ಲಿ ನಡೆಯಬೇಕು’ ಎಂದರು.

ಹೊರಗುತ್ತಿಗೆ ಮೀಸಲಾತಿ ನಿರ್ಬಂಧ ತೆರವು

‘ಸರ್ಕಾರಿ ಹೊರಗುತ್ತಿಗೆಯಲ್ಲಿ ಕನಿಷ್ಠ 20 ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವಾಗ ಮಾತ್ರ ಮೀಸಲಾತಿ ಅನ್ವಯವಾಗುತ್ತದೆ’ ಎಂಬ ಷರತ್ತನ್ನು ರಾಜ್ಯ ಸರ್ಕಾರ ಕೈಬಿಟ್ಟಿದೆ. ಖಾಲಿ ಇರುವ ಹುದ್ದೆಗಳಿಗೆ ನೇಮಕ ಮಾಡುವಾಗ ಶೇ 10ರವರೆಗೆ ಮೀಸಲಾತಿ ಕಲ್ಪಿಸಲು ಅವಕಾಶ ನೀಡಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿ ವಿದ್ಯಾವಂತರಿಗೆ ಸರ್ಕಾರದ ಹೊರಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿ ತರುವ ಸಂಬಂಧ 2024ರ ಮೇ 20ರಂದು ರಾಜ್ಯ ಸರ್ಕಾರವು ಸುತ್ತೋಲೆ ಹೊರಡಿಸಿತ್ತು. ಸ್ವಚ್ಛತಾ ಸಿಬ್ಬಂದಿ, ವಾಹನ ಚಾಲಕರು, ಡಾಟಾ ಎಂಟ್ರಿ ಆಪರೇಟರ್‌ಗಳು, ಮತ್ತು ಗ್ರೂಪ್‌–ಡಿ ಹುದ್ದೆಗಳಲ್ಲಿ ಮೀಸಲಾತಿ ಒದಗಿಸಬೇಕು ಎಂದು ಸುತ್ತೋಲೆ ವಿವರಿಸಿತ್ತು.

ಆದರೆ, 20 ಮತ್ತು ಅದಕ್ಕಿಂತ ಹೆಚ್ಚು ಹುದ್ದೆಗಳಿಗೆ ನೇಮಕಾತಿ ಮಾಡುವಾಗ ಮಾತ್ರ ಮೀಸಲಾತಿ ಅನ್ವಯವಾಗುತ್ತದೆ ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿತ್ತು. ಈ ಷರತ್ತಿಗೆ ಆಕ್ಷೇಪ ವ್ಯಕ್ತವಾಗಿತ್ತು.

‘ಮೀಸಲಾತಿ ತಪ್ಪಿಸಲೆಂದೇ 20ಕ್ಕಿಂತ ಕಡಿಮೆ ಹುದ್ದೆಗಳಿಗೆ ನೇಮಕಾತಿ ನಡೆಸಲಾಗುತ್ತಿದೆ. ಈ ಮೂಲಕ ಮೀಸಲಾತಿ ದೊರೆಯದೇ ಇರುವಂತೆ ನೋಡಿಕೊಳ್ಳಲಾಗುತ್ತಿದೆ. ಈ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಬೇಕು’ ಹಲವು ಸಂಘಸಂಸ್ಥೆಗಳು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಪತ್ರ ಬರೆದಿದ್ದವು.

ಈ ಸಂಬಂಧ ರಾಜ್ಯ ಸರ್ಕಾರವು ಸುತ್ತೋಲೆಗೆ ತಿದ್ದುಪಡಿ ತಂದು, ಬದಲಾದ ನಿಯಮವನ್ನು ಇದೇ 3ರಂದು ರಾಜ್ಯಪತ್ರದಲ್ಲಿ ಪ್ರಕಟಿಸಿದೆ. ‘ಮಂಜೂರಾದ ಒಟ್ಟು ಹುದ್ದೆಗಳಲ್ಲಿ ಹೊರಗುತ್ತಿಗೆ ನೌಕರರ ಸಂಖ್ಯೆ ಶೇ 10ನ್ನು ಮೀರಬಾರದು’ ಎಂದೂ ಸುತ್ತೋಲೆಗೆ ತಿದ್ದುಪಡಿ ತರಲಾಗಿದೆ.

ನಿಪ್ಪಾಣಿಗೆ ಬಂದ ಕುಳ್ಳ ‘ರಾಧಾ’ ಎಮ್ಮೆ

ಪ್ರಜಾವಾಣಿ ವಾರ್ತೆ

ನಿಪ್ಪಾಣಿ (ಬೆಳಗಾವಿ ಜಿಲ್ಲೆ): ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಜೊಲ್ಲೆ ಸಮೂಹದ ವತಿಯಿಂದ ನಡೆದಿರುವ ಕೃಷಿ ಉತ್ಸವದಲ್ಲಿನ ಜಾನುವಾರುಗಳ ಪ್ರದರ್ಶನಕ್ಕೆ 2 ವರ್ಷದ 9 ತಿಂಗಳಿನ 3 ಅಡಿ ಎತ್ತರದ ಅತಿ ಕುಳ್ಳ ‘ರಾಧಾ’ ಎಮ್ಮೆ ಪ್ರದರ್ಶನಕ್ಕೆ ತರಲಾಗಿದೆ. ಈ ಎಮ್ಮೆ ಮಹಾರಾಷ್ಟ್ರದ ಸಾತಾರಾ ಜಿಲ್ಲೆಯದ್ದು.

ಅತಿ ಚಿಕ್ಕ ಹಸು ಮತ್ತು ಒಂದೂವರೆ ಟನ್ ತೂಕದ ‘ಗಜೇಂದ್ರ’ ಕೋಣ, 6 ಕೆ.ಜಿ ತೂಕದ ಹುಂಜ, ₹41 ಲಕ್ಷ ಮೌಲ್ಯದ ಅತಿ ಎತ್ತರದ ‘ಸೋನ್ಯಾ’ ಎಂಬ ಎತ್ತು ಸಹ ಜಾನುವಾರು ಪ್ರದರ್ಶನದಲ್ಲಿವೆ.

ಏ. 15ರಂದು ಲಾರಿ ಮಾಲೀಕರ ಮುಷ್ಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೀಸೆಲ್ ದರ ಇಳಿಸುವುದು, ಸಾಮಾನ್ಯ ಅರ್ಹತಾ ಪತ್ರ (ಎಫ್‌.ಸಿ) ಶುಲ್ಕವನ್ನು ಕಡಿತಗೊಳಿಸುವುದು, ಗಡಿ ಭಾಗದಲ್ಲಿರುವ ಚೆಕ್‌ಪೋಸ್ಟ್‌ಗಳನ್ನು ತೆರವುಗೊಳಿಸುವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರವನ್ನು ಆಗ್ರಹಿಸಿ ರಾಜ್ಯ ಲಾರಿ ಮಾಲೀಕರು ಮತ್ತು ಏಜೆಂಟ್‌ಗಳ ಸಂಘವು ಇದೇ 15ರಂದು ಬೆಳಿಗ್ಗೆ 6ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ನಿರ್ಧರಿಸಿದೆ.

ಈ ಕುರಿತು ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಜಿ.ಆರ್‌.ಷಣ್ಮುಗಪ್ಪ, ‘ಸರ್ಕಾರ, ಆರು ತಿಂಗಳಲ್ಲಿ ಡೀಸೆಲ್ ಬೆಲೆ ₹5 ಏರಿಸಿದೆ. ಇದರಿಂದ ವಾಹನ ಮಾಲೀಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ರಸ್ತೆ ತೆರಿಗೆ, ಸೆಸ್ ಪಾವತಿಸುತ್ತಿದ್ದರೂ ಟೋಲ್ ಶುಲ್ಕ ತೆಗೆದುಕೊಳ್ಳಲಾಗುತ್ತಿದೆ. ಇವೆಲ್ಲವನ್ನೂ ವಿರೋಧಿಸಿ ಮುಷ್ಕರಕ್ಕೆ ಕರೆ ನೀಡಲಾಗಿದೆ’ ಎಂದು ತಿಳಿಸಿದ್ದಾರೆ.

‘ಬೇಡಿಕೆಗಳ ಈಡೇರಿಕೆಗಾಗಿ ಏ.14ರವರೆಗೆ ಗಡುವು ನೀಡಿದ್ದೇವೆ. ಈಡೇರಿಸದಿದ್ದರೆ 14ರ ರಾತ್ರಿಯಿಂದಲೇ ಹೋರಾಟ ಆರಂಭಿಸುತ್ತೇವೆ. ಹೋರಾಟ ಶುರುವಾದ ಬಳಿಕ ಯಾವುದೇ ರಾಜ್ಯದಿಂದ ಕರ್ನಾಟಕದ ಒಳಗೆ ವಾಣಿಜ್ಯ ವಾಹನ ಸಂಚಾರ ಮಾಡುವುದಿಲ್ಲ. ಚೆಕ್‌ಪೋಸ್ಟ್‌ಗಳಲ್ಲಿ ವಾಣಿಜ್ಯ ವಾಹನಗಳನ್ನು ನಿರ್ಬಂಧಿಸುತ್ತೇವೆ’ ಎಂದು ಎಚ್ಚರಿಸಿದ್ದಾರೆ.



ಸಂಕ್ಷಿಪ್ತ ಸುದ್ದಿ

ಜಿಎಸ್‌ಟಿ ಬಾಕಿ: ಮಧ್ಯಂತರ ತಡೆ

ಮುಂಬೈ (ಪಿಟಿಐ): ಕೇಂದ್ರ ತೆರಿಗೆ ಇಲಾಖೆಯು ಸುಮಾರು ₹2,500 ಕೋಟಿ ಜಿಎಸ್‌ಟಿ ಬಾಕಿಗೆ ಸಂಬಂಧಿಸಿದಂತೆ ಹಿಂದುಸ್ತಾನ್ ಕೋಕಾ ಕೋಲಾ ಬೆವರೇಜಸ್ ಕಂಪನಿಗೆ ನೀಡಿದ್ದ ಷೋಕಾಸ್ ನೋಟಿಸ್‌ಗೆ, ಬಾಂಬೆ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿದೆ.

ಏಳು ಮೌಲ್ಯಮಾಪನ ವರ್ಷಗಳಲ್ಲಿ ಕಂಪನಿಯು ವಿತರಕರಿಗೆ ನೀಡಿರುವ ರಿಯಾಯಿತಿಯಲ್ಲಿ ಲೋಪ ಕಂಡುಬಂದಿದೆ ಎಂದು ಇಲಾಖೆಯು ಜನವರಿಯಲ್ಲಿ ನೋಟಿಸ್ ನೀಡಿತ್ತು. ತೆರಿಗೆ ವಂಚಿಸುವ ಉದ್ದೇಶದಿಂದಲೇ ಈ ರಿಯಾಯಿತಿ ಸೌಲಭ್ಯ ಕಲ್ಪಿಸಲಾಗಿದೆ ಎಂದು ಹೇಳಿತ್ತು. ನೋಟಿಸ್ ಪ್ರಶ್ನಿಸಿ ಕಂಪನಿಯು ಹೈಕೋರ್ಟ್ ಮೆಟ್ಟಿಲೇರಿತ್ತು.

ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ಪಿ. ಕೊಲಬಾವಲ್ಲ ಮತ್ತು ಫಿರ್ದೋಶ್ ಪೂನಿವಾಲಾ ಅವರಿದ್ದ ವಿಭಾಗೀಯ ನ್ಯಾಯಪೀಠ, ಈ ತಡೆಯಾಜ್ಞೆ ನೀಡಿದೆ.

ಯುಬಿಐ ಸಾಲ ನೀಡಿಕೆ ಹೆಚ್ಚಳ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹9.82 ಲಕ್ಷ ಕೋಟಿ ಸಾಲ ನೀಡಲಾಗಿದೆ. ಒಟ್ಟಾರೆ ಸಾಲ ನೀಡಿಕೆಯಲ್ಲಿ ಶೇ 8.6ರಷ್ಟು ಹೆಚ್ಚಳವಾಗಿದೆ ಎಂದು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ (ಯುಬಿಐ) ತಿಳಿಸಿದೆ.

₹13.09 ಲಕ್ಷ ಕೋಟಿ ಠೇವಣಿ ಸಂಗ್ರಹಿಸಿದೆ. 2023–24ರಲ್ಲಿ ₹12.21 ಲಕ್ಷ ಕೋಟಿ ಸಂಗ್ರಹಿಸಿತ್ತು. ಇದಕ್ಕೆ ಹೋಲಿಸಿದರೆ ಶೇ 7.22ರಷ್ಟು ಹೆಚ್ಚಳವಾಗಿದೆ ಎಂದು ಬ್ಯಾಂಕ್, ಷೇರುಪೇಟೆಗೆ ಮಾಹಿತಿ ನೀಡಿದೆ.

ಟನ್‌ಗೆ ₹27,500 ಧಾರಣೆ ● ಒಂದೇ ವರ್ಷದಲ್ಲಿ ನಾಲ್ಕು ಪಟ್ಟು ದರ ಹೆಚ್ಚಳ

ತೆಂಗಿನ ಚಿಪ್ಪಿಗೂ ಬಂತು ಶುಕ್ರದೆಸೆ

ಪ್ರಜಾವಾಣಿ ವಾರ್ತೆ

ತುಮಕೂರು: ಕೊಬ್ಬರಿ, ತೆಂಗಿನಕಾಯಿ, ಎಳನೀರು ದುಬಾರಿಯಾದಂತೆ ತೆಂಗಿನ ಕಾಯಿ ಚಿಪ್ಪಿಗೆ (ಕೊಬ್ಬರಿ ಕಂಟ) ದಾಖಲೆ ಬೆಲೆ ಸಿಗುತ್ತಿದೆ. ಒಂದು ಟನ್ ಚಿಪ್ಪು ₹27,500ರ ವರೆಗೂ ಮಾರಾಟವಾಗುತ್ತಿದೆ.

ಹಿಂದಿನ ವರ್ಷಗಳಲ್ಲಿ ಟನ್‌ಗೆ ₹7 ಸಾವಿರದಿಂದ ₹8 ಸಾವಿರದವರೆಗೂ ಸಿಗುತ್ತಿತ್ತು. ಎರಡು ವರ್ಷದ ಹಿಂದೆ ಟನ್ ₹18 ಸಾವಿರಕ್ಕೆ ಹೆಚ್ಚಳವಾಗಿತ್ತು. ಇದು ಈವರೆಗಿನ ದಾಖಲೆಯಾಗಿತ್ತು. ಆದರೆ, ಈ ಬಾರಿ ಹೊಸ ದಾಖಲೆ ಬರೆದಿದೆ.

ಬೇಡಿಕೆಯಷ್ಟು ಚಿಪ್ಪು ಸಿಗದಿರುವುದು ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ. ಇತ್ತೀಚಿನ ದಿನಗಳಲ್ಲಿ ಉತ್ತಮ ಬೆಲೆ ಸಿಗುತ್ತಿರುವುದರಿಂದ ರೈತರು ತೆಂಗಿನ ಕಾಯಿ, ಎಳನೀರು ಮಾರಾಟ ಮಾಡುತ್ತಿದ್ದಾರೆ. ಇದರಿಂದಾಗಿ ಕೊಬ್ಬರಿ ಉತ್ಪಾದನೆ ಕಡಿಮೆಯಾಗಿದ್ದು, ಚಿಪ್ಪಿನ ಕೊರತೆ ಎದುರಾಗಿದೆ.

‘ವರ್ಷದಲ್ಲಿ 4 ಪಟ್ಟು ದರ ಹೆಚ್ಚಳವಾಗಿದೆ. ಚಿಪ್ಪಿಗೆ ಬೇಡಿಕೆ ಹೆಚ್ಚುತ್ತಲೇ ಇದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ದುಬಾರಿಯಾಗಬಹುದು’ ಎಂದು ವರ್ತಕ ಸೋಮಶೇಖರ್ ಹೇಳುತ್ತಾರೆ.

ಸೌಂದರ್ಯವರ್ಧಕ ತಯಾರಿಕೆಯಲ್ಲಿ ಬಳಕೆ ಹೆಚ್ಚು

ತೆಂಗು ಬೆಳೆಯುವ ತಮಿಳುನಾಡು, ಕೇರಳ ರಾಜ್ಯದಲ್ಲೂ ಚಿಪ್ಪಿನ ಉತ್ಪಾದನೆ ಕಡಿಮೆಯಾಗಿದ್ದು, ರಾಜ್ಯದ ಚಿಪ್ಪಿಗೆ ಬೇಡಿಕೆ ಬಂದಿದೆ. ಹೊರ ರಾಜ್ಯದ ಇದ್ದಿಲಿನಲ್ಲಿ ಕಾರ್ಬನ್ ಪ್ರಮಾಣ ಶೇ 80ಕ್ಕಿಂತ ಕಡಿಮೆ ಇರುತ್ತದೆ.



ರಾಜ್ಯದ ಚಿಪ್ಪಿನಿಂದ ತಯಾರಿಸಿದ ಇದ್ದಿಲಿನಲ್ಲಿ ಕಾರ್ಬನ್ ಅಂಶ ಶೇ 85ರಿಂದ 95ರ ವರೆಗೂ ಇರುತ್ತದೆ. ಹಾಗಾಗಿ ರಾಜ್ಯದ ಇದ್ದಿಲಿಗೆ ಹೆಚ್ಚು ಬೆಲೆ ಸಿಗುತ್ತದೆ. ‘ಕಾಯಿ ಚಿಪ್ಪು ತಂದು ಕೊಡಿ, ಹಣ ಗಳಿಸಿ’ ಎಂಬ ಅಭಿಯಾನವೂ ಜಿಲ್ಲೆಯಲ್ಲಿ ನಡೆದಿದೆ. ಅಷ್ಟರ ಮಟ್ಟಿಗೆ ಬೇಡಿಕೆ ಕಂಡುಕೊಂಡಿದೆ.

ಹೊರ ರಾಜ್ಯಕ್ಕೆ: ಸ್ಥಳೀಯವಾಗಿ ಖರೀದಿಸಿದ ಚಿಪ್ಪನ್ನು ಸುಟ್ಟು ಇದ್ದಿಲು ಮಾಡುತ್ತಾರೆ. ನಂತರ ಕೇರಳ, ತಮಿಳುನಾಡಿನ ಕಾರ್ಖಾನೆಗಳಿಗೆ ಕಳುಹಿಸಲಾಗುತ್ತದೆ. ರಾಜಸ್ಥಾನ, ಗುಜರಾತ್ ಕಾರ್ಖಾನೆಗಳಿಂದಲೂ ಬೇಡಿಕೆ ಬರುತ್ತಿದೆ. ಕಾರ್ಖಾನೆಗಳಲ್ಲಿ ಇದ್ದಿಲನ್ನು ಚೆನ್ನಾಗಿ ತೊಳೆದು, ಒಣಗಿಸಿ, ಗಾತ್ರಕ್ಕೆ ಅನುಗುಣವಾಗಿ ಕತ್ತರಿಸಲಾಗುತ್ತದೆ. ನಂತರ ಪ್ಯಾಕ್ ಮಾಡಿ ರಫ್ತು ಮಾಡಲಾಗುತ್ತದೆ.

ಪ್ರಮುಖವಾಗಿ ಕಾರ್ಬನ್ ತಯಾರಿಕೆ ವಲಯದಲ್ಲಿ ಇದ್ದಿಲು ಬಳಸಲಾಗುತ್ತಿದೆ. ಸೌಂದರ್ಯವರ್ಧಕ ತಯಾರಿಕೆ, ಮುಖದ ಕ್ರೀಮ್, ವಾಟರ್ ಪೇಂಟ್ ತಯಾರಿಕೆಗೂ ಬಳಸಲಾಗುತ್ತದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹480
12 ಕ್ಕೆ	₹66
ಮೈಸೂರು	
100ಕ್ಕೆ	₹470

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹201
ಆರ್‌ಎಸ್‌ಎಸ್-5	₹196
ಗುಡ್ ಲಾಟ್	₹187

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹27000
ಎಸಿ	₹16520
ಆರ್‌ಪಿ	₹22000
ಆರ್‌ಸಿ	₹12475

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹255-590
ದ್ವಿತಳಿ (ಬಿ.ವಿ)	₹288-675



ಪ್ರತಿ ಸುಂಕ: ಅಕ್ಕಿ ರಫ್ತಿಗೆ ಅಡ್ಡಿ

ಕೋಲ್ಕತ್ತ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರತಿ ಸುಂಕ ನೀತಿಯು ದೇಶದ ಅಕ್ಕಿ ಉತ್ಪಾದನಾ ವಲಯದ ರಫ್ತು ಚಟುವಟಿಕೆಗಳಿಗೆ ತಾತ್ಕಾಲಿಕವಾಗಿ ಅಡ್ಡಿ ಉಂಟು ಮಾಡಲಿದೆ ಎಂದು ಭಾರತೀಯ ಅಕ್ಕಿ ರಫ್ತುದಾರರ ಒಕ್ಕೂಟ (ಐಆರ್‌ಇಎಫ್) ಹೇಳಿದೆ.

ಸುಂಕ ಹೇರಿಕೆಯಿಂದ ಅಲ್ಪಾವಧಿ ವರೆಗೆ ಮಾರುಕಟ್ಟೆಯಲ್ಲಿ ಬೆಲೆ ಏರಿಳಿತವಾಗುವ ಸಾಧ್ಯತೆಯಿದೆ. ಆದರೆ, ಮುಂದಿನ ಮೂರು ತಿಂಗಳ ಬಳಿಕ ಸ್ಥಿರತೆ ಕಾಣುವ ನಿರೀಕ್ಷೆಯಿದ್ದು, ಕಾದುನೋಡುವ ತಂತ್ರ ಅನುಸರಿಸಲಾಗುತ್ತಿದೆ ಎಂದು ಒಕ್ಕೂಟದ ಅಧ್ಯಕ್ಷ ಪ್ರೇಮ್ ಗಾರ್ಗ್ ಅವರು, ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ರಫ್ತು ದಾರಿಗೆ ಸಂಪೂರ್ಣ ತಡೆಯೊಡ್ಡುವ ಸಾಧ್ಯತೆ ಕಡಿಮೆ. ಹಾಗಾಗಿ, ರಫ್ತುದಾರರು ಕೂಡ ದಿಗಿಲುಗೊಂಡಿಲ್ಲ. ಅಲ್ಲದೆ, ಅಮೆರಿಕವು ಬಾಸ್ಮತಿ ಅಕ್ಕಿಗೆ ಅತಿದೊಡ್ಡ ಮಾರುಕಟ್ಟೆಯೂ ಅಲ್ಲ. ಆದರೆ, ಅಲ್ಲಿನ ಮಾರುಕಟ್ಟೆಯಲ್ಲಿ ಮತ್ತಷ್ಟು ವಹಿವಾಟು ವಿಸ್ತರಿಸುವ ನಿಟ್ಟಿನಲ್ಲಿ ಅಗತ್ಯವಿರುವ ಕಾರ್ಯತಂತ್ರ ರೂಪಿಸಲಾಗುತ್ತಿದೆ ಎಂದು ಹೇಳಿದ್ದಾರೆ.

2023–24ರಲ್ಲಿ ದೇಶದಿಂದ ವಿದೇಶಗಳಿಗೆ 52.4 ಲಕ್ಷ ಟನ್ ಬಾಸ್ಮತಿ ಅಕ್ಕಿ ರಫ್ತು ಮಾಡಲಾಗಿದೆ. ಈ ಪೈಕಿ 2.34 ಲಕ್ಷ ಟನ್ ಅಮೆರಿಕಕ್ಕೆ ರಫ್ತಾಗಿದೆ. ಕಳೆದ ವರ್ಷದ ಏಪ್ರಿಲ್‌ನಿಂದ ನವೆಂಬರ್‌ವರೆಗೆ ಒಟ್ಟು 42 ಲಕ್ಷ ಟನ್ ಅಕ್ಕಿ ರಫ್ತು ಮಾಡಲಾಗಿದೆ. ಇದರಲ್ಲಿ 2.04 ಲಕ್ಷ ಟನ್ ಅಮೆರಿಕಕ್ಕೆ ರವಾನೆಯಾಗಿದೆ. ದೇಶದಿಂದ ಅತಿಹೆಚ್ಚು ಪ್ರಮಾಣದಲ್ಲಿ ಪಶ್ಚಿಮ ಏಷ್ಯಾ ರಾಷ್ಟ್ರಗಳಿಗೆ ಅಕ್ಕಿ ಪೂರೈಕೆಯಾಗುತ್ತದೆ ಎಂದು ವಿವರಿಸಿದ್ದಾರೆ.

ಭಾರತಕ್ಕೆ ಹೋಲಿಸಿದರೆ ಚೀನಾ, ವಿಯೆಟ್ನಾಂ, ಪಾಕಿಸ್ತಾನ, ಥೈಲ್ಯಾಂಡ್ ಮೇಲೆ ವಿಧಿಸಿರುವ ಪ್ರತಿ ಸುಂಕದ ಪ್ರಮಾಣ ಹೆಚ್ಚಿದೆ. ಅಮೆರಿಕದ ಮಾರುಕಟ್ಟೆಯಲ್ಲಿನ ಸ್ಪರ್ಧಾತ್ಮಕತೆಯ ಲಾಭ ಪಡೆಯಲು ಭಾರತ ಎದುರು ನೋಡುತ್ತಿದೆ ಎಂದು ಹೇಳಿದ್ದಾರೆ.


‘ಟ್ರಂಪ್ ಆಡಳಿತ ನೀತಿಯು ದೇಶದ ಅಕ್ಕಿ ರಫ್ತು ಚಟುವಟಿಕೆ ಮೇಲೆ ದೀರ್ಘಕಾಲದಲ್ಲಿ ಹೆಚ್ಚಿನ ಪರಿಣಾಮ ಬೀರುವುದಿಲ್ಲ’ ಎಂದು ಕೋಲ್ಕತ್ತದ ರಫ್ತುದಾರ ಸೂರಜ್ ಅಗರ್ವಾಲ್ ಹೇಳಿದ್ದಾರೆ. ‘ಬಾಸ್ಮತಿ ಅಕ್ಕಿ ಮೇಲೆ ಅಮೆರಿಕನ್ನರಲ್ಲಿ ವಿಶ್ವಾಸ ಬೆಸೆದುಕೊಂಡಿದೆ. ಖರೀದಿ ಒಪ್ಪಂದ ಮತ್ತು ಬೆಲೆ ಸ್ಥಿರತೆ ಬಗ್ಗೆ ಮರು ಮಾತುಕತೆ ನಡೆಯಬಹುದು. ಆದರೆ, ಇಲ್ಲಿನ ಗುಣಮಟ್ಟದ ಅಕ್ಕಿಗೆ ಅಲ್ಲಿನ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿದೆ’ ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಸಕ್ಕರೆ ಉತ್ಪಾದನೆ: ರಾಜ್ಯಕ್ಕೆ 3ನೇ ಸ್ಥಾನ

ಬೆಳಗಾವಿ: ‘ರಾಜ್ಯವು ಈ ಬಾರಿ ಸಕ್ಕರೆ ಉತ್ಪಾದನೆಯಲ್ಲಿ ದೇಶದಲ್ಲೇ ಮೂರನೇ ಸ್ಥಾನದಲ್ಲಿದೆ. ಮಳೆ ಕೊರತೆಯಿದ್ದರೂ ಉತ್ಪಾದನೆ ಹೆಚ್ಚಾಗಿದ್ದು ವಿಶೇಷ’ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ಹೇಳಿದರು.

‘ಮುಂಬರುವ ಹಂಗಾಮಿನಲ್ಲಿ 6 ಲಕ್ಷ ಮೆಟ್ರಿಕ್ ಟನ್ ಸಕ್ಕರೆ ಉತ್ಪಾದಿಸುವ ಗುರಿಯಿದ್ದು, ಹೊಸ ಆವಿಷ್ಕಾರಗಳ ಕುರಿತು ತಜ್ಞರು ತಾಂತ್ರಿಕ ಸಮಾವೇಶ ನಡೆಸಿ ಮಾರ್ಗದರ್ಶನ ಮಾಡಿದ್ದಾರೆ. ರಾಜ್ಯದಲ್ಲಿ 80 ಸಕ್ಕರೆ ಕಾರ್ಖಾನೆಗಳಿವೆ. ಮುಚ್ಚಿದ ಸಕ್ಕರೆ ಕಾರ್ಖಾನೆಗಳನ್ನು ಪುನರಾರಂಭಕ್ಕೆ ಪ್ರಯತ್ನಿಸಲಾಗುವುದು’ ಎಂದು ಅವರು ಶನಿವಾರ ತಿಳಿಸಿದರು.



‘ಕಬ್ಬು ಪೂರೈಸಿದ ರೈತರಿಗೆ ₹18 ಸಾವಿರ ಕೋಟಿ ಬಿಲ್ ನೀಡಲಾಗಿದೆ. ಬಹುಪಾಲು ಪಾವತಿಯಾಗಿದ್ದು, ₹700 ಕೋಟಿ ಬಾಕಿ ಇದೆ. ಅದನ್ನೂ ಬೇಗ ಪಾವತಿಸುವಂತೆ ಕಾರ್ಖಾನೆಗಳಿಗೆ ಸೂಚಿಸಲಾಗುವುದು’ ಎಂದರು.

‘ಎಂ.ಕೆ. ಹುಬ್ಬಳ್ಳಿಯ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ₹77 ಕೋಟಿ ಮೌಲ್ಯದ ಸಕ್ಕರೆ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ, ಆರೋಪ ಪಟ್ಟಿ ಸಲ್ಲಿಸಬೇಕಿದೆ. ಚಳಿಗಾಲದ ಅಧಿವೇಶನ ವೇಳೆ ಪಂಚಮಸಾಲಿ ಮುಖಂಡರ ಮೇಲೆ ಲಾಠಿ ಚಾರ್ಜ್ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆಯೂ ತನಿಖೆ ನಡೆಯುತ್ತಿದೆ. ಅದು ಪೂರ್ಣಗೊಂಡ ಬಳಿಕವೇ ಎಲ್ಲವೂ ತಿಳಿಯಲಿದೆ’ ಎಂದರು.

₹10, ₹500 ಹೊಸ ನೋಟು ಬಿಡುಗಡೆ ಶೀಘ್ರ: ಆರ್‌ಬಿಐ

ಮುಂಬೈ (ಪಿಟಿಐ): ಶೀಘ್ರವೇ ಮಹಾತ್ಮ ಗಾಂಧಿ ಅವರ ಭಾವಚಿತ್ರ ಮತ್ತು ಗವರ್ನರ್ ಸಂಜಯ್ ಮಲ್ಹೋತ್ರಾ ಅವರ ಸಹಿ ಇರುವ ₹10 ಮತ್ತು ₹500 ಮುಖಬೆಲೆಯ ಹೊಸ ನೋಟುಗಳ ಸರಣಿಯನ್ನು ಚಲಾವಣೆಗೆ ಬಿಡುಗಡೆ ಮಾಡಲಾಗುವುದು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತಿಳಿಸಿದೆ.

ಮಹಾತ್ಮ ಗಾಂಧಿ (ಹೊಸ) ಸರಣಿಯ ನೋಟುಗಳ ಮಾದರಿಯಲ್ಲಿಯೇ ಈ ಹೊಸ ನೋಟುಗಳು ಇರಲಿವೆ ಎಂದು ಹೇಳಿದೆ.

ಗವರ್ನರ್ ಮಲ್ಹೋತ್ರಾ ಅವರ ಸಹಿ ಇರುವ ₹100 ಮತ್ತು ₹200 ಮುಖಬೆಲೆಯ ಹೊಸ ನೋಟುಗಳನ್ನೂ ಚಲಾವಣೆಗೆ ಬಿಡುಗಡೆ ಮಾಡುವುದಾಗಿ ಕಳೆದ ತಿಂಗಳು ಆರ್‌ಬಿಐ ತಿಳಿಸಿತ್ತು.

ದ್ವೀಪ ರಾಷ್ಟ್ರದ ಪ್ರವಾಸದಲ್ಲಿ ಪ್ರಧಾನಿ ನರೇಂದ್ರ ಮೋದಿ ● ಅಭಿವೃದ್ಧಿ ಕಾಮಗಾರಿಗಳಿಗೆ ನೆರವು ಘೋಷಣೆ

ರಕ್ಷಣಾ ಒಪ್ಪಂದ: ಭಾರತ, ಶ್ರೀಲಂಕಾ ಅಂಕಿತ

ಕೊಲಂಬೊ (ಪಿಟಿಐ): ಇದೇ ಮೊದಲ ಬಾರಿಗೆ ಭಾರತ ಹಾಗೂ ಶ್ರೀಲಂಕಾ ಪ್ರಮುಖ ರಕ್ಷಣಾ ಒಪ್ಪಂದಕ್ಕೆ ಸಹಿ ಹಾಕಿವೆ.

ರಕ್ಷಣಾ ಕ್ಷೇತ್ರದಲ್ಲಿನ ಪಾಲುದಾರಿಕೆಯನ್ನು ಗಟ್ಟಿಗೊಳಿಸುವ ಉದ್ದೇಶದಿಂದ ರೂಪಿಸಿರುವ ಚೌಕಟ್ಟಿಗೆ ಸಾಂಸ್ಥಿಕ ರೂಪ ನೀಡುವುದು ಸೇರಿದಂತೆ ಮಹತ್ವದ ಅಂಶಗಳನ್ನು ಒಪ್ಪಂದ ಒಳಗೊಂಡಿದೆ.

ಪ್ರಧಾನಿ ನರೇಂದ್ರ ಮೋದಿ ಹಾಗೂ ಅಧ್ಯಕ್ಷ ಅನುತಾ ಕುಮಾರ ಡಿಸ್ಸನಾಯಕೆ ಅವರು ಸುದೀರ್ಘ ಮಾತುಕತೆ ನಡೆಸಿದ ಬಳಿಕ, ಉಭಯ ದೇಶಗಳು 7 ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಿದವು.

ಮೋದಿ ಹಾಗೂ ಡಿಸ್ಸನಾಯಕೆ ನಡುವಿನ ಮಾತುಕತೆ ನಂತರ ಒಟ್ಟು 10 ವಿಷಯಗಳ ಕುರಿತು ಎರಡೂ ದೇಶಗಳು ಒಪ್ಪಂದಕ್ಕೆ ಬಂದಿದ್ದರೂ, ರಕ್ಷಣಾ ಕ್ಷೇತ್ರವೇ ಪ್ರಮುಖ ವಿಚಾರವಾಗಿ ಹೊರಹೊಮ್ಮಿದೆ.

35 ವರ್ಷಗಳ ಹಿಂದೆ, ಶ್ರೀಲಂಕಾದಲ್ಲಿ ನಿಯೋಜನೆಗೊಂಡಿದ್ದ ಶಾಂತಿಪಾಲನಾ ಪಡೆಗಳನ್ನು ಭಾರತ ಹಿಂಪಡೆದಿತ್ತು. ಈ ಬೆಳವಣಿಗೆ ನಂತರ ತಾನು ಎದುರಿಸಿದ್ದ ಕಹಿ ದಿನಗಳಿಂದ ಹೊರಬಂದಂತಿರುವ ಶ್ರೀಲಂಕಾ, ರಕ್ಷಣಾ ಸಂಬಂಧ ಕುರಿತಂತೆ ಭಾರತದೊಂದಿಗೆ ಹೊಸ ಹೆಜ್ಜೆ ಹಾಕುವ ಸಂದೇಶ ರವಾನಿಸಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಮಾತುಕತೆ ವೇಳೆ, ಮೀನುಗಾರರ ವಿಚಾರ ಪ್ರಸ್ತಾಪಿಸಿದ ಮೋದಿ, ‘ಮೀನುಗಾರರ ಸಮಸ್ಯೆ ಬಗೆಹರಿಸಲು ಎರಡೂ ದೇಶಗಳು ಮಾನವೀಯ ನೆಲೆಯಲ್ಲಿ ಪರಿಹಾರ ಕಂಡುಕೊಳ್ಳಬೇಕು’ ಎಂದರು.

‘ದೇಶದಲ್ಲಿನ ತಮಿಳು ಜನರ ಬೇಡಿಕೆಗಳನ್ನು ಶ್ರೀಲಂಕಾ ಸರ್ಕಾರ ಈಡೇರಿಸಲಿದೆ ಹಾಗೂ ಪ್ರಾಂತೀಯ ಪರಿಷತ್ತು ಚುನಾವಣೆಗಳನ್ನು ನಡೆಸಲಿದೆ ಎಂಬ ಭರವಸೆ ಹೊಂದಿರುವೆ’ ಎಂದು ಮೋದಿ ಹೇಳಿದರು.

‘ನನ್ನ ತವರು ರಾಜ್ಯ ಗುಜರಾತ್‌ನ ಅರಾವಳಿ ಪ್ರದೇಶದಲ್ಲಿ 1960ರಲ್ಲಿ ಬುದ್ಧನಿಗೆ ಸಂಬಂಧಿಸಿದ ಅವಶೇಷಗಳು ಪತ್ತೆಯಾಗಿದ್ದವು. ಹೆಚ್ಚಿನ ಅಧ್ಯಯನ ಉದ್ದೇಶದಿಂದ ಈ ಅವಶೇಷಗಳನ್ನು ಶ್ರೀಲಂಕಾಕ್ಕೆ ಕಳುಹಿಸಲಾಗುತ್ತದೆ’ ಎಂದೂ ಮೋದಿ ಘೋಷಿಸಿದರು.

ತಮಿಳು ಮುಖಂಡರ ಭೇಟಿ: ಶ್ರೀಲಂಕಾದ ಉತ್ತರ ಮತ್ತು ಪೂರ್ವ ಪ್ರಾಂತ್ಯಗಳ ತಮಿಳು ನಾಯಕರು ಮೋದಿ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ, ಮಾತುಕತೆ ನಡೆಸಿದರು.



ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶ್ರೀಲಂಕಾ ಅಧ್ಯಕ್ಷ ಅನುರಾ ಕುಮಾರ ಡಿಸ್ಸನಾಯಕೆ ಅವರು ‘ಮಿತ್ರ ವಿಭೂಷಣ’ ಪ್ರಶಸ್ತಿಯನ್ನು ಶನಿವಾರ ಪ್ರದಾನ ಮಾಡಿದರು ಪಿಟಿಐ ಚಿತ್ರ

ಹಲವು ಯೋಜನೆಗೆ ಸಹಾಯಹಸ್ತ

- ಟ್ರಿಂಕಾಮಲಿಯನ್ನು ಇಂಧನ ಹಬ್ ಆಗಿ ಅಭಿವೃದ್ಧಿಪಡಿಸುವುದು. ಟ್ರಿಂಕಾಮಲಿಯಲ್ಲಿನ ತಿರುಕೋಣೇಶ್ವರಮ್ ದೇವಸ್ಥಾನ ಜೀರ್ಣೋದ್ಧಾರಕ್ಕೆ ನೆರವು
- ಪವಿತ್ರ ನಗರ ಅನುರಾಧಾಪುರದಲ್ಲಿ ಮಹಾಬೋಧಿ ದೇಗುಲ ಸಂಕೀರ್ಣ ಹಾಗೂ ನುವಾರಾ ಎಳಿಯದಲ್ಲಿ ಸೀತಾ ಎಳಿಯ ದೇವಸ್ಥಾನ ನಿರ್ಮಾಣಕ್ಕೆ ನೆರವು
- ಪವರ್ ಗ್ರಿಡ್ ಸಂಪರ್ಕಕ್ಕೆ ಒತ್ತು.
- ಸಾಲ ಮರುಹೊಂದಾಣಿಕೆಗೆ ಭಾರತ ಒಪ್ಪಿಗೆ. ಆರ್ಥಿಕ ನೆರವಿನ ಭಾಗವಾಗಿ, ಶ್ರೀಲಂಕಾಕ್ಕೆ ನೀಡಿರುವ ಸಾಲದ ಬಡ್ಡಿ ದರ ಇಳಿಸಲು ನಿರ್ಧಾರ
- ಶ್ರೀಲಂಕಾದ ಪೂರ್ವಭಾಗದ ಪ್ರಾಂತ್ಯಗಳ ಆರ್ಥಿಕ ಅಭಿವೃದ್ಧಿಗೆ 2.4 ಶತಕೋಟಿ ಶ್ರೀಲಂಕಾ ರೂಪಾಯಿ ಒದಗಿಸುವುದಾಗಿ ಘೋಷಣೆ
- ಶ್ರೀಲಂಕಾದ ‘ಯುನಿಕ್ ಡಿಜಿಟಲ್ ಐಡೆಂಟಿಟಿ ಪ್ರಾಜೆಕ್ಟ್’ಗೆ ನೆರವು ಘೋಷಣೆ

> ಭಾರತದ ಭದ್ರತೆ ಹಿತಾಸಕ್ತಿಗಳಿಗೆ ಹಾನಿ ಉಂಟು ಮಾಡುವಂತಹ ಯಾವುದೇ ಚಟುವಟಿಕೆಗಳಿಗೆ ತನ್ನ ನೆಲವನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಶ್ರೀಲಂಕಾ ಅನುಮತಿ ನೀಡುವುದಿಲ್ಲ
>
> **ಅನುರಾ ಕುಮಾರ ಡಿಸ್ಸನಾಯಕೆ,** ಶ್ರೀಲಂಕಾ ಅಧ್ಯಕ್ಷ

> ಭಾರತದ ‘ನೆರೆ ದೇಶ ಮೊದಲ ನೀತಿ’ಯಲ್ಲಿ ಶ್ರೀಲಂಕಾಕ್ಕೆ ವಿಶೇಷ ಸ್ಥಾನ ಇದೆ. ಅಧ್ಯಕ್ಷ ಡಿಸ್ಸನಾಯಕೆ ಭಾರತಕ್ಕೆ ಭೇಟಿ ನೀಡಿದ ನಂತರ ಉಭಯ ದೇಶಗಳ ನಡುವಿನ ಸಹಕಾರ ಮತ್ತಷ್ಟು ವೃದ್ಧಿಸಿದೆ
>
> **ನರೇಂದ್ರ ಮೋದಿ,** ಪ್ರಧಾನಿ

ಮೋದಿಗೆ ‘ಮಿತ್ರ ವಿಭೂಷಣ’ ಗೌರವ

ಕೊಲಂಬೊ (ಪಿಟಿಐ): ನರೇಂದ್ರ ಮೋದಿ ಅವರಿಗೆ ದ್ವೀಪ ರಾಷ್ಟ್ರ ಶ್ರೀಲಂಕಾದ ಅತ್ಯುನ್ನತ ನಾಗರಿಕ ಗೌರವ ‘ಮಿತ್ರ ವಿಭೂಷಣ’ ಪ್ರಶಸ್ತಿಯನ್ನು ಶನಿವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ಅನುರಾ ಕುಮಾರ ಡಿಸ್ಸನಾಯಕೆ ಪ್ರದಾನ ಮಾಡಿದರು.

ಪ್ರಶಸ್ತಿಯು ರಜತ ಪದಕ ಹಾಗೂ ಪ್ರಶಸ್ತಿಪತ್ರ ಒಳಗೊಂಡಿದೆ. ಶ್ರೀಲಂಕಾದ ಒಂಬತ್ತು ಬಗೆಯ ರತ್ನಗಳಿಂದ ಅಲಂಕೃತ ಈ ಪದಕವು ಕಮಲ, ಭೂಮಿ, ಸೂರ್ಯ, ಚಂದ್ರ ಹಾಗೂ ಭತ್ತದ ತೆನೆಗಳ ಸೂಡಿನ ಚಿಹ್ನೆಗಳನ್ನು ಒಳಗೊಂಡಿದೆ.

ಭಾರತ ಮತ್ತು ಶ್ರೀಲಂಕಾದ ಸಾಂಸ್ಕೃತಿಕ ಮೌಲ್ಯಗಳನ್ನು ಬೆಸೆದಿರುವ ಬೌದ್ಧ ಪರಂಪರೆ ಪ್ರತಿಬಿಂಬಿಸುವ ಧರ್ಮ ಚಕ್ರವೂ ಪದಕದಲ್ಲಿದೆ.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಮೋದಿ,‘ಶ್ರೀಲಂಕಾ ಅಧ್ಯಕ್ಷ ಡಿಸ್ಸನಾಯಕೆ ಅವರಿಂದ ‘ಮಿತ್ರ ವಿಭೂಷಣ’ ಪ್ರಶಸ್ತಿ ಸ್ವೀಕರಿಸುತ್ತಿರುವುದು ಸಂತಸ ತಂದಿದೆ. ಇದು 140 ಕೋಟಿ ಭಾರತೀಯರಿಗೆ ಸಂದ ಗೌರವ’ ಎಂದರು.

ದ್ವಿಪಕ್ಷೀಯ ಸಂಬಂಧಗಳ ವೃದ್ಧಿಗೆ ಶ್ರಮಿಸಿದ್ದನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗುತ್ತದೆ. ಈ ಹಿಂದೆ ಅಧ್ಯಕ್ಷರಾಗಿದ್ದ ಮಹಿಂದ ರಾಜಪಕ್ಸ ಅವರು 2008ರಲ್ಲಿ ಈ ಪ್ರಶಸ್ತಿ ಸ್ಥಾಪಿಸಿದ್ದಾರೆ. ಮಾಲ್ದೀವ್ಸ್‌ನ ಮಾಜಿ ಅಧ್ಯಕ್ಷ ಮೌಮೂನ್ ಅಬ್ದುಲ್ ಗಯೂಮ್, ಪ್ಯಾಲೆಸ್ಟೀನ್ ನಾಯಕ, ದಿವಂಗತ ಯಾಸರ್ ಅರಾಫತ್ ಅವರು ಈ ಗೌರವಕ್ಕೆ ಪಾತ್ರರಾಗಿರುವ ಪ್ರಮುಖರು.

ಥಾಯ್ಲೆಂಡ್ ರಾಜಧಾನಿ ಬ್ಯಾಂಕಾಕ್‌ನಲ್ಲಿ ನಡೆದ ‘ಬಿಮ್‌ಸ್ಟೆಕ್’ ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದ ಮೋದಿ, ನಂತರ ಇಲ್ಲಿಗೆ ಭೇಟಿ ನೀಡಿದ್ದಾರೆ.

‘ಇಂಡಿಪೆಂಡೆನ್ಸ್ ಸ್ಕ್ವೇರ್’ನಲ್ಲಿ ಭವ್ಯ ಸ್ವಾಗತ

ರಾಜಧಾನಿ ಕೊಲಂಬೊ ಹೃದಯಭಾಗದಲ್ಲಿರುವ ಐತಿಹಾಸಿಕ ‘ಇಂಡಿಪೆಂಡೆನ್ಸ್ ಸ್ಕ್ವೇರ್’ನಲ್ಲಿ (ಸ್ವಾತಂತ್ರ್ಯ ಚೌಕ) ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶ್ರೀಲಂಕಾದ ಮೂರು ಪಡೆಗಳು ಭವ್ಯ ಸ್ವಾಗತ ಕೋರಿದವು.

ವಿದೇಶಿ ಗಣ್ಯರೊಬ್ಬರಿಗೆ ಇದೇ ಮೊದಲ ಬಾರಿಗೆ ಈ ಸ್ಥಳದಲ್ಲಿ ಇಂತಹ ಭವ್ಯ ಸ್ವಾಗತ ಕೋರಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಧ್ಯಕ್ಷ ಅನುರಾ ಕುಮಾರ ಡಿಸ್ಸನಾಯಕೆ ಅವರು ‘ಇಂಡಿಪೆಂಡೆನ್ಸ್ ಸ್ಕ್ವೇರ್’ನಲ್ಲಿ ಮೋದಿ ಅವರನ್ನು ಬರಮಾಡಿಕೊಂಡರು.

‘ಉಭಯ ನಾಯಕರು ನಡೆಸುವ ಮಾತುಕತೆಗಳು, ಎರಡೂ ದೇಶಗಳಲ್ಲಿನ ಜನರ ಏಳಿಗೆ ಹಾಗೂ ಪಾಲುದಾರಿಕೆ ವೃದ್ಧಿಗೆ ಇಂಬು ನೀಡಲಿವೆ’ ಎಂದು ವಿದೇಶಾಂಗ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ಶ್ರೀರಾಮ: ಎಂದೂ ಕೆಡದ ಧರ್ಮದ ಹೊಳಪು


● ಎಸ್. ಸೂರ್ಯಪ್ರಕಾಶ ಪಂಡಿತ್

ಇಂದು ಶ್ರೀರಾಮ ನವಮಿ

ಶ್ರೀರಾಮ ನಮಗೆ ಸಾವಿರಾರು ವರ್ಷಗಳಿಂದ ಆದರ್ಶಪ್ರಾಯನಾಗಿದ್ದಾನೆ. ಆದರ್ಶ ಎನ್ನುವುದು ನಾವು ಈಗಿರುವ ಸ್ಥಿತಿಯ ಸೂಚಕ ಅಲ್ಲ, ಅದು ನಾವು ತಲುಪಬೇಕಾದ ಸ್ಥಿತಿ. ಶ್ರೀರಾಮನು ಆದರ್ಶಗಳಿಗೇ ಆದರ್ಶನಾಗಿದ್ದಾನೆ. ಋಜುಮಾರ್ಗದ ಜೀವನವಿಧಾನದ ಪರಿಪೂರ್ಣತೆಯನ್ನು ಅವನಲ್ಲಿ ಮಾತ್ರವೇ ನಾವು ಕಾಣುವುದು. ಪರಿಪೂರ್ಣತೆ ಎಂಬುದು ಯಾರೂ ಮುಟ್ಟಲಾರದ ಸ್ಥಿತಿ; ಆದರೆ ಆ ಸ್ಥಿತಿಯಲ್ಲೇ ಹುಟ್ಟಿರುವವನು ಶ್ರೀರಾಮ. ರಾಮಾಯಣದ ಆರಂಭದಲ್ಲಿಯೇ ನಾವು ಈ ಪೂರ್ಣತೆಯ ದರ್ಶನವನ್ನು ಮಾಡಬಹುದು. ನಾರದರನ್ನು ವಾಲ್ಮೀಕಿ ಮಹರ್ಷಿಗಳು ‘ಲೋಕದಲ್ಲಿ ಈಗ ಗುಣವಂತ ಯಾರಿದ್ದಾರೆ’ – ಎಂದೋ, ಅಥವಾ ‘ಧರ್ಮಿಷ್ಠ ಯಾರಿದ್ದಾರೆ’ ಎಂದೋ ಕೇಳಬಹುದಿತ್ತು. ಆದರೆ ಗುಣಗಳ ರಸಮಾಲೆಯನ್ನೇ ವಾಲ್ಮೀಕಿಗಳ ಪ್ರಶ್ನೆ ಪೋಣಿಸಿದೆ; ಧರ್ಮದ ವ್ಯಾಪಕ ಲಕ್ಷಣವನ್ನೇ ಅವರ ಪ್ರಶ್ನೆ ಸ್ಥಿರೀಕರಿಸಿದೆ. ಸುಗುಣಗಳ ಎಲ್ಲ ನಿಲುವುಗಳ ವಿಗ್ರಹವಾಗಿಯೂ, ಧರ್ಮದ ಎಲ್ಲ ಅಭಿವ್ಯಕ್ತಿಗಳ ಉತ್ಸವವಾಗಿಯೂ ’ರಾಮ’ ಎಂಬ ಮಹಾತತ್ತ್ವವು ರಾಮಾಯಣ ಎಂಬ ನುಡಿಗುಡಿಯಲ್ಲಿ ಪ್ರತಿಷ್ಠಾಪಿತವಾಗಿದೆ. ರಾಮನು ಧರ್ಮದ ವಿಗ್ರಹರೂಪ – ಎಂಬ ವಾಲ್ಮೀಕಿಗಳ ಹೇಳಿಕೆ ಸಾಧಾರಣವಾದುದಲ್ಲ.

ಧರ್ಮ ಎಂದರೆ ಏನು – ಎಂದು ವಿವರಿಸುವುದು ಸುಲಭವಲ್ಲ. ಅಂಥದ್ದರಲ್ಲಿ ವಾಲ್ಮೀಕಿಗಳು ರಾಮನನ್ನು ಧರ್ಮದ ವಿಗ್ರಹರೂಪವಾಗಿಯೇ ಕಾಣಿಸಿದ್ದಾರೆ. ‘ಧರ್ಮದ ವ್ಯಾಖ್ಯೆಯು ಮಾತಿಗೂ ಸಿಗುವಷ್ಟು ಆಕಾರನಿಷ್ಠವಾದುದಲ್ಲ ಎನ್ನುತ್ತೀರಲ್ಲವೆ? ನಾನು ಧರ್ಮದ ಭೌತಿಕರೂಪವನ್ನು, ಅಷ್ಟೇಕೆ ಜೀವಂತರೂಪವನ್ನೇ ತೋರಿಸಿಕೊಡುವೆ’ ಎಂಬ ಸಂಕಲ್ಪದಿಂದ ವಾಲ್ಮೀಕಿಗಳು ರಾಮನ ಕಥೆಯನ್ನು ರಾಮಾಯಣದಲ್ಲಿ ಕಂಡರಿಸಿದ್ದಾರೆ. ಧರ್ಮವೇ ರಾಮನ ರೂಪದಲ್ಲಿ ಅವತರಿಸಿ ಬಂದಿದೆ – ಎನ್ನುತ್ತಾರೆ, ಅವರು. ಈ ಮಾತನ್ನು ಪ್ರಜೆಗಳ ಮೂಲಕ ಹೇಳಿಸಿರುವುದೂ ವಿಶಿಷ್ಟವಾಗಿದೆ. ನಮಗೂ ಧರ್ಮ ಎಂದರೇನು ಎಂದು ಸ್ಫುರಣೆಯಾಗುತ್ತಿರುತ್ತದೆ. ಆದರೆ ಅದರ ದಾರಿಯಲ್ಲಿ ನಡೆಯುವ ಸಾಹಸವನ್ನು ನಾವು ಮಾಡಲಾರೆವು; ರಾಮ ಅವನ ಜೀವನದುದ್ದಕ್ಕೂ ಇಂಥ ಸಾಹಸವನ್ನೇ ಮಾಡಿದವನು. ಹೀಗಾಗಿಯೇ ರಾಮನನ್ನು ವಾಲ್ಮೀಕಿಗಳು ಕೇವಲ ‘ಪರಾಕ್ರಮಿ’ ಎಂದಷ್ಟೆ ಹೇಳುವುದಿಲ್ಲ, ಅವನು ‘ಸತ್ಯಪರಾಕ್ರಮಿ’ ಎಂದು ಮತ್ತೆ ಮತ್ತೆ ಕೊಂಡಾಡುತ್ತಾರೆ. ಶ್ರೀರಾಮನು ಕೋದಂಡದಿಂದ ಹೊರಗಿನ ರಕ್ಕಸರನ್ನಷ್ಟೆ ಕೊಂದವನಲ್ಲ; ಅದಕ್ಕೂ ಮೊದಲು ಅವನು ತನ್ನೊಳಗೆ ಯಾವ ರಾಕ್ಷಸಬುದ್ಧಿಯ ಪ್ರವೇಶಕ್ಕೂ ಅವಕಾಶವನ್ನೇ ಕೊಟ್ಟವನಲ್ಲ; ಶತ್ರುಗಳ ಪ್ರವೇಶಕ್ಕೇ ಅವಕಾಶ ಕೊಡದಷ್ಟು ಅವನು ತನ್ನ ಅಂತರಂಗವನ್ನು ಹುಟ್ಟಿನಿಂದಲೇ ಕಾಪಾಡಿಕೊಂಡಿದ್ದ. ಇದು ಅವನ ಸತ್ಯಪರಾಕ್ರಮದ ಶಕ್ತಿ. ರಾಮನು ಧರ್ಮದ ವ್ಯಾಖ್ಯೆಯನ್ನಷ್ಟೆ ಮಾಡಿದವನಲ್ಲ, ಅದರಂತೆ ನಡೆದವನು. ಧರ್ಮ ತನ್ನ ಸ್ವರೂಪವನ್ನು ಕಂಡುಕೊಂಡದ್ದೇ ರಾಮನ ಮೂಲಕ.

‘ಧರ್ಮವನ್ನು ರಕ್ಷಿಸಿದವರನ್ನು ಧರ್ಮ ರಕ್ಷಿಸುತ್ತದೆ’ ಎಂಬ ಸೂತ್ರವೊಂದಿದೆಯಲ್ಲವೆ? ಶ್ರೀರಾಮನು ಧರ್ಮವನ್ನು ತನ್ನ ಹೃದಯದಲ್ಲೇ ಇಟ್ಟುಕೊಂಡು, ಅದನ್ನು ಪ್ರೀತಿಯಿಂದ ಕಾಪಾಡಿ ಪೋಷಿಸಿದವನು. ಹಾಗಾದರೆ ಧರ್ಮ ಅವನನ್ನು ಹೇಗೆ ರಕ್ಷಿಸಿತು? ಶ್ರೀರಾಮ ಎಂದಿಗೂ ಸಂತೋಷದಿಂದ ವಂಚಿತನಾಗಲಿಲ್ಲ. ಶಾಶ್ವತ ಸೌಖ್ಯ; ಇದೇ ಧರ್ಮ ಅವನಿಗೆ ಕೊಟ್ಟ ಬಳುವಳಿ. ಅವನನ್ನು ಎಂದೂ ಉದ್ವೇಗ, ವಿಷಾದಗಳಂಥವು ಕಾಡಲಿಲ್ಲ; ಅವನು ಸದಾ ತನ್ನಲ್ಲಿ ತಾನು, ಎಂದರೆ ತನ್ನ ಧರ್ಮದಲ್ಲಿ ತಾನು, ನೆಮ್ಮದಿಯಿಂದ ಇದ್ದವ. ತನ್ನನ್ನು ಅಯೋಧ್ಯೆಗೆ ಹಿಂದಕ್ಕೆ ಕರೆದುಕೊಂಡು ಹೋಗಲು ಬಂದಿದ್ದ ಭರತನಿಗೆ ಅವನು ಹೇಳುವ ಮಾತೊಂದನ್ನು ಮೆಲುಕು ಹಾಕಬಹುದು: ‘ನೀನು ಅಯೋಧ್ಯೆಯಲ್ಲಿ ರಾಜನಾಗಿ ಬೆಳಗು; ನಾನಿಲ್ಲಿ ಕಾಡಿನಲ್ಲಿ ರಾಜನಾಗಿ ವಿಹರಿಸುವೆ. ನೀನು ಅಲ್ಲಿ ಶ್ವೇತಚ್ಛತ್ರದ ನೆರಳಿನಲ್ಲಿ ಸುಖವಾಗಿರು; ನಾನಿಲ್ಲ ಮರದ ನೆರಳಿನಲ್ಲಿ ಹಾಯಾಗಿರುವೆ.’ ಧರ್ಮವನ್ನು ನಾವು ಕಾಪಾಡಿದರೆ, ಅದು ನಮ್ಮನ್ನು ಕಾಪಾಡುವ ಪರಿ ಹೀಗೆ; ಅದು ನಮ್ಮ ನೆಮ್ಮದಿಯನ್ನು ಎಲ್ಲಿದ್ದರೂ ಹೇಗಿದ್ದರೂ ಎಂದಿಗೂ ಕೆಡಲು ಬಿಡದು. ಶ್ರೀರಾಮನಲ್ಲಿ ನಾವು ಕಾಣುವ ಧರ್ಮದ ಹೊಳಪು ಇಂಥದ್ದು: ಎಂದೂ ಕೆಡದ ಧರ್ಮದ ಹುರುಪು. ❖



ಮೈಕ್ರೊಸಾಫ್ಟ್ 50ನೇ ವರ್ಷಾಚರಣೆಗೆ ಪ್ರತಿಭಟನೆ ಬಿಸಿ

ವಾಷಿಂಗ್ಟನ್ (ಎಪಿ): ಮೈಕ್ರೊಸಾಫ್ಟ್ ಉದ್ಯೋಗಿಗಳು ಪ್ಯಾಲೆಸ್ಟೀನಿಯರ ಪರ ನಡೆಸಿದ ಪ್ರತಿಭಟನೆ ಶುಕ್ರವಾರ ಕಂಪನಿಯ 50ನೇ ವಾರ್ಷಿಕೋತ್ಸವ ಆಚರಣೆಗೆ ಅಡ್ಡಿಪಡಿಸಿತು. ಇಸ್ರೇಲ್ ಸೇನೆಗೆ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಪೂರೈಸಲು ‘ಮೈಕ್ರೊಸಾಫ್ಟ್ ಟೆಕ್’ ಮಾಡಿಕೊಂಡಿರುವ ಒಪ್ಪಂದಕ್ಕೆ ಉದ್ಯೋಗಿಗಳು ವಿರೋಧಿಸಿದರು.


ಮೈಕ್ರೊಸಾಫ್ಟ್ ಎಐ ಸಿಇಒ ಮುಸ್ತಫಾ ಸುಲೇಮಾನ್ ಅವರು, ಕಂಪನಿಯ ದೀರ್ಘಾವಧಿಯ ಯೋಜನೆಗಳ ಬಗ್ಗೆ ವಿಷಯ ಮಂಡಿಸುತ್ತಿದ್ದಾಗ ಪ್ರತಿಭಟನೆ ಶುರುವಾಯಿತು. ಸಭಾಂಗಣದಲ್ಲಿ ಮೈಕ್ರೊಸಾಫ್ಟ್ ಸಹ ಸಂಸ್ಥಾಪಕ ಬಿಲ್ ಗೇಟ್ಸ್ ಮತ್ತು ಮಾಜಿ ಸಿಇಒ ಸ್ಟೀವ್ ಬಾಲ್ಮರ್ ಕೂಡ ಇದ್ದರು.

ವೇದಿಕೆಯತ್ತ ತೆರಳಿದ ಉದ್ಯೋಗಿ ಇಬ್ತಿಹಾಲ್ ಅಬೌಸಾದ್, ‘ಮುಸ್ತಫಾ ನಿಮಗೆ ನಾಚಿಕೆಯಾಗಬೇಕು’ ಎಂದು ಕೂಗಿದರು. ಆಗ ಮುಸ್ತಾಫಾ ಭಾಷಣ ನಿಲ್ಲಿಸಿದರು. ‘ನೀವು ಒಳ್ಳೆಯದಕ್ಕಾಗಿ ಎಐ ಬಳಸುತ್ತೇವೆ ಎಂದು ಹೇಳಿಕೊಳ್ಳುತ್ತೀರಿ. ಆದರೆ, ಇಸ್ರೇಲ್ ಸೇನೆಗೆ ಎಐ ಶಸ್ತ್ರಾಸ್ತ್ರಗಳನ್ನು ಮಾರಾಟ ಮಾಡಿ, ನಮ್ಮ ಪ್ರದೇಶದಲ್ಲಿ ನರಮೇಧಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ’ ಎಂದು ಇಬ್ತಿಹಾಲ್ ಆಕ್ರೋಶ ವ್ಯಕ್ತಪಡಿಸಿದರು.

'ಆರ್ಗನೈಸರ್' ವೆಬ್‌ಸೈಟ್‌ನಲ್ಲಿದ್ದ ಲೇಖನ ಉಲ್ಲೇಖಿಸಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪ

ಕ್ರೈಸ್ತರ ಮೇಲೂ ಆರ್‌ಎಸ್‌ಎಸ್ 'ವಕ್ರದೃಷ್ಟಿ'

ಪ್ರಜಾವಾಣಿ ವಾರ್ತೆ



ರಾಹುಲ್ ಗಾಂಧಿ

ನವದೆಹಲಿ: 'ಭವಿಷ್ಯದಲ್ಲಿ ಇತರ ಸಮುದಾಯಗಳನ್ನು ಗುರಿಯಾಗಿಸಲು ವಕ್ಫ್ ತಿದ್ದುಪಡಿ ಮಸೂದೆ ಒಂದು ಮಾದರಿಯಾಗಿ ನಿಲ್ಲಲಿದೆ. ದೇಶದ ಕ್ರೈಸ್ತರ ಮೇಲೆ ತನ್ನ ದೃಷ್ಟಿ ತಿರುಗಿಸಲು ಆರ್‌ಎಸ್‌ಎಸ್ ಬಹಳ ಸಮಯ ತೆಗೆದುಕೊಂಡಿಲ್ಲ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶನಿವಾರ ಹೇಳಿದ್ದಾರೆ.

ಆರ್‌ಎಸ್‌ಎಸ್ ಮುಖವಾಣಿ 'ಆರ್ಗನೈಸರ್' ನಿಯತಕಾಲಿಕೆ ವೆಬ್‌ಸೈಟ್‌ನಲ್ಲಿ ಪ್ರಕಟವಾಗಿದ್ದ 'ಹೂ ಹ್ಯಾಸ್ ಮೋರ್ ಲ್ಯಾಂಡ್ ಇನ್ ಇಂಡಿಯಾ? ದಿ ಕ್ಯಾಥೋಲಿಕ್ ಚರ್ಚ್ ವರ್ಸಸ್ ವಕ್ಫ್ ಬೋರ್ಡ್ ಡಿಬೇಟ್' ಎಂಬ ಲೇಖನ ಉಲ್ಲೇಖಿಸಿ, ರಾಹುಲ್ ಗಾಂಧಿ ಈ ಮಾತು ಹೇಳಿದ್ದಾರೆ.

ಈಲೇಖನದಆಧಾರದಲ್ಲಿಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿ ಉಲ್ಲೇಖಿಸಿ, ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ರಾಹುಲ್,'ವಕ್ಫ್ ತಿದ್ದುಪಡಿ ಮಸೂದೆ ಮುಸ್ಲಿಮರನ್ನು ಗುರಿಯಾಗಿಸುತ್ತದೆ ಎಂದು ನಾನು ಹೇಳಿದ್ದೆ. ಆದರೆ, ಈ ಮಸೂದೆ ಭವಿಷ್ಯದಲ್ಲಿ ಇತರ ಸಮುದಾಯಗಳನ್ನು ಗುರಿಯಾಗಿಸಲು ಒಂದು ಪೂರ್ವನಿದರ್ಶನವಾಗಲಿದೆ' ಎಂದು ಹೇಳಿದ್ದಾರೆ.

ಲೇಖನದಲ್ಲಿದ್ದ ಪ್ರಮುಖ ಅಂಶಗಳು

- ಕ್ಯಾಥೋಲಿಕ್ ಚರ್ಚ್ ಹಾಗೂ ಅದರ ಅಂಗಸಂಸ್ಥೆಗಳು ಅಂದಾಜು 7 ಕೋಟಿ ಹೆಕ್ಟೇರ್ ಜಮೀನು ಹೊಂದಿವೆ. ಈ ಜಮೀನುಗಳ ಮೌಲ್ಯ ಅಂದಾಜು ₹20 ಸಾವಿರ ಕೋಟಿ
- ಇಷ್ಟೊಂದು ಪ್ರಮಾಣದ ಜಮೀನು ಹೊಂದಿರುವ ಕ್ಯಾಥೋಲಿಕ್ ಚರ್ಚ್, ದೇಶದ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಪ್ರಮುಖ ಪಾತ್ರ ಹೊಂದಿದೆ
- ತನ್ನ ಒಡೆತನದ ಜಮೀನುಗಳ ಕುರಿತಂತೆ ಸರ್ಕಾರದ ವೆಬ್‌ಸೈಟ್‌ನಲ್ಲಿ 2021ರ ಫೆಬ್ರುವರಿಯಲ್ಲಿ ಲಭ್ಯವಿದ್ದ ಪ್ರಕಾರ, ಸರ್ಕಾರವು 15,531 ಚದರ ಕಿ.ಮೀ.ನಷ್ಟು ಜಮೀನು ಹೊಂದಿದೆ. ಕ್ಯಾಥೋಲಿಕ್ ಚರ್ಚ್ ಹೊಂದಿರುವಷ್ಟು ಜಮೀನನ್ನು ವಕ್ಫ್ ಮಂಡಳಿ ಕೂಡ ಹೊಂದಿಲ್ಲ
- 2012ರ ಮಾಹಿತಿ ಪ್ರಕಾರ ಕ್ಯಾಥೋಲಿಕ್ ಚರ್ಚ್ 2,457 ಆಸ್ಪತ್ರೆಗಳು, 240 ಮೆಡಿಕಲ್/ನರ್ಸಿಂಗ್ ಕಾಲೇಜುಗಳು, 28 ಕಾಲೇಜುಗಳು, 5 ಎಂಜಿನಿಯರಿಂಗ್ ಕಾಲೇಜುಗಳು, 3765 ಪ್ರೌಢಶಾಲೆಗಳು, 7,319 ಪ್ರಾಥಮಿಕ ಶಾಲೆಗಳು ಹಾಗೂ 3,187 ನರ್ಸರಿ ಶಾಲೆಗಳನ್ನು ಹೊಂದಿವೆ
- ಬಹುತೇಕ ಜಮೀನನ್ನು ಬ್ರಿಟಿಷರ ಆಳ್ವಿಕೆಯಲ್ಲಿ ಪಡೆದಿರುವುದಾಗಿದೆ. ಚರ್ಚ್‌ಗೆ ಭಾರಿ ಪ್ರಮಾಣದ ಜಮೀನು ನೀಡುವುದಕ್ಕೆ ಅನುಕೂಲವಾಗಲು, ಬ್ರಿಟಿಷ್ ಆಡಳಿತವು 1927ರಲ್ಲಿ ಭಾರತೀಯ ಚರ್ಚ್ ಕಾಯ್ದೆ ಅಂಗೀಕರಿಸಿತ್ತು
- ಬ್ರಿಟಿಷ್ ಸರ್ಕಾರವು ಯಾವುದೇ ಜಮೀನನ್ನು ಲೀಸ್ ಆಧಾರದಲ್ಲಿ ಮಂಜೂರು ಮಾಡಿದ್ದಲ್ಲಿ, ಅಂತಹ ಜಮೀನನ್ನು ಚರ್ಚ್ ಸ್ವತ್ತು ಎಂಬುದಾಗಿ ಮಾನ್ಯ ಮಾಡಲಾಗುವುದಿಲ್ಲ ಎಂದು 1965ರಲ್ಲಿ ಕೇಂದ್ರ ಸರ್ಕಾರ ಸುತ್ತೋಲೆ ಹೊರಡಿಸಿತ್ತು. ಆದರೆ, ಈ ಸುತ್ತೋಲೆ ಮೂಲಕ ನೀಡಿದ್ದ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಜಾರಿ ಮಾಡದ ಕಾರಣ, ಚರ್ಚ್ ಒಡೆತನದ ಜಮೀನು ಕುರಿತ ಸಮಸ್ಯೆ ಇತ್ಯರ್ಥವಾಗದೇ ಉಳಿದಿದೆ.

ಏ. 3ರಂದು ನಿಯತಕಾಲಿಕೆ ವೆಬ್‌ಸೈಟ್‌ನಲ್ಲಿ ಈ ಲೇಖನ ಪ್ರಕಟವಾಗಿತ್ತು. ಈಗ, ಈ ಲೇಖನ ಲಭ್ಯ ಇಲ್ಲ.

ದತ್ತಾಂಶಗಳ ಪ್ರಕಾರ, ದೇಶದಲ್ಲಿ ಕ್ಯಾಥೋಲಿಕ್ ಚರ್ಚ್ ಭಾರಿ ಪ್ರಮಾಣದ ಜಮೀನು ಹೊಂದಿದೆ. ವಕ್ಫ್ ಮಂಡಳಿಗಿಂತಲೂ ಹೆಚ್ಚು ಜಮೀನನ್ನು ಚರ್ಚ್ ಹೊಂದಿದೆ ಎಂದು ಉಲ್ಲೇಖಿಸಲಾಗಿತ್ತು.

ವಕ್ಫ್ ತಿದ್ದುಪಡಿ ಮಸೂದೆಗೆ ಕ್ಯಾಥೋಲಿಕ್ ಬಿಷಪ್ಸ್ ಕಾನ್ಫರೆನ್ಸ್ ಆಫ್ ಇಂಡಿಯಾ(ಸಿಬಿಸಿಐ) ಹಾಗೂ ಕೇರಳ ಕ್ಯಾಥೋಲಿಕ್ ಬಿಷಪ್ಸ್ ಕೌನ್ಸಿಲ್ (ಕೆಸಿಬಿಸಿ) ಬೆಂಬಲ ಇದೆ ಎಂದು ಬಿಜೆಪಿ ಹೇಳುತ್ತಿದ್ದ ಸಂದರ್ಭದಲ್ಲಿಯೇ, ಆರ್ಗನೈಜರ್‌ನಲ್ಲಿ ಲೇಖನ ಪ್ರಕಟವಾಗಿತ್ತು ಎಂಬುದು ಗಮನಾರ್ಹ.

ಅಲ್ಲದೆ, 'ತಮ್ಮ ಜಮೀನನ್ನು ವಕ್ಫ್ ಮಂಡಳಿ ತನ್ನದೆಂದು ಹೇಳಿ, ನಮ್ಮನ್ನು ಒಕ್ಕಲೆಬ್ಬಿಸುತ್ತಿದೆ' ಎಂದು ದೂರಿ ಕೇರಳದ ಮುನಂಬಮ್‌ನಲ್ಲಿ ಕ್ರೈಸ್ತ ಕುಟುಂಬಗಳು ಪ್ರತಿಭಟನೆ ನಡೆಸುತ್ತಿದ್ದವು. ಈ ಹಿನ್ನೆಲೆಯಲ್ಲಿ, ವಕ್ಫ್ ತಿದ್ದುಪಡಿ ಮಸೂದೆಗೆ ಬೆಂಬಲಿಸುವಂತೆ ಬಿಜೆಪಿಯು ಸಂಸದರಿಗೆ ಮನವಿ ಮಾಡಿತ್ತು.

'ಅರಣ್ಯ ನ್ಯಾಯಕ್ಕಿಂತ ಅಪಾಯಕಾರಿ'

ಮುಂಬೈ (ಪಿಟಿಐ): 'ಅರಣ್ಯ ನ್ಯಾಯ'ಕ್ಕಿಂತಲೂ ವಕ್ಫ್ ತಿದ್ದುಪಡಿ ಮಸೂದೆಯು ಹೆಚ್ಚು ಅಪಾಯಕಾರಿ ಎಂದು ಅಖಿಲ ಭಾರತ ಉಲೇಮಾ ಮಂಡಳಿಯು ಹೇಳಿದೆ. ಈ ಮಸೂದೆಯು ಮಸೀದಿ, ಮದರಸಾಗಳಂತಹ ಇಸ್ಲಾಮಿಕ್ ಆಸ್ತಿಗಳಿಗೆ ಅಪಾಯ ತರುತ್ತದೆ ಎಂದು ಕಳವಳ ವ್ಯಕ್ತಪಡಿಸಿದೆ.

'ಸರ್ಕಾರಿ ನೌಕರನೊಬ್ಬ ವಕ್ಫ್‌ನ ಆಸ್ತಿಯ ಮೇಲೆ ಹಕ್ಕು ಪ್ರತಿಪಾದಿಸಿದರೆ, ಸರ್ಕಾರದ ಇನ್ನೊಬ್ಬ ನೌಕರ ಅದರ ಕುರಿತು ತೀರ್ಮಾನಿಸುತ್ತಾನೆ. ಇದು ಈ ಮಸೂದೆಯಲ್ಲಿ ಇರುವ ಮುಖ್ಯ ಸಮಸ್ಯೆ' ಎಂದು ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಅಲ್ಲಾಮಾ ಬನಿ ನಯೀಂ ಹಸನಿ ಅವರು ಸುದ್ದಿಗಾರರಿಗೆ ತಿಳಿಸಿದರು.

'ಸರ್ಕಾರಿ ನೌಕರ ತೆಗೆದುಕೊಳ್ಳುವ ತೀರ್ಮಾನವನ್ನು ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲು ಆಗುವುದಿಲ್ಲ' ಎಂದು ಅವರು ವಿವರಿಸಿದರು.

'ಈ ಮೂಲಕ ಎಲ್ಲ ಇಸ್ಲಾಮಿಕ್ ಆಸ್ತಿಗಳನ್ನು ಇನ್ನಿಲ್ಲವಾಗಿಸಲಾಗುತ್ತದೆ, ಸಿಖ್ಖರು, ಕ್ರೈಸ್ತರು ಹಾಗೂ ಇತರ ಧರ್ಮಗಳ ಜನರಿಗೆ ಸೇರಿದ ಆಸ್ತಿಗಳಿಗೂ ಭವಿಷ್ಯದಲ್ಲಿ ಇದೇ ಸ್ಥಿತಿ ಬರುತ್ತದೆ' ಎಂದರು.

'ಇದು ಹಿಂದೂ–ಮುಸ್ಲಿಂ ವಿಷಯ ಅಲ್ಲ, ಇದು ನ್ಯಾಯಕ್ಕೆ ಸಂಬಂಧಿಸಿದ ವಿಚಾರ' ಎಂದು ಅವರು ಹೇಳಿದರು.

'ವಕ್ಫ್ (ತಿದ್ದುಪಡಿ) ಮಸೂದೆಯನ್ನು ಕರಾಳ ಶಾಸನ, ಅರಣ್ಯ ನ್ಯಾಯ ಅಥವಾ ಅವುಗಳಿಗಿಂತ ಹೆಚ್ಚು ಅಪಾಯಕಾರಿ ಎಂದು ಕರೆಯಬಹುದು' ಎಂದು ಹೇಳಿದರು. ಆದರೆ 'ಕರಾಳ ಶಾಸನ', 'ಅರಣ್ಯ ನ್ಯಾಯ'ದ ಬಗ್ಗೆ ಹೆಚ್ಚು ವಿವರ ನೀಡಲಿಲ್ಲ.

ಸುಪ್ರೀಂಕೋರ್ಟ್‌ಗೆ ಎಎಪಿ ಶಾಸಕ ಅರ್ಜಿ



ಅಮಾನತ್ ಉಲ್ಲಾ ಖಾನ್

ನವದೆಹಲಿ(ಪಿಟಿಐ): ಸಂಸತ್‌ನಲ್ಲಿ ಅಂಗೀಕಾರವಾಗಿರುವ, ವಕ್ಫ್ (ತಿದ್ದುಪಡಿ) ಮಸೂದೆ–2025ರ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಆಮ್ ಆದ್ಮಿ ಪಕ್ಷದ (ಎಎಪಿ) ಶಾಸಕ ಅಮಾನತ್ ಉಲ್ಲಾ ಖಾನ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

'ವಕ್ಫ್ ತಿದ್ದುಪಡಿ ಮಸೂದೆಯು ಅಸಾಂವಿಧಾನಿಕ ಹಾಗೂ ಸಂವಿಧಾನದ 14, 15, 21, 25, 26, 29, 30 ಹಾಗೂ 300–ಎ ವಿಧಿಗಳ ಉಲ್ಲಂಘನೆ ಎಂಬುದಾಗಿ ಘೋಷಿಸಬೇಕು' ಎಂದು ಅರ್ಜಿಯಲ್ಲಿ ಕೋರಿದ್ದಾರೆ.

ವಕ್ಫ್ ತಿದ್ದುಪಡಿ ಮಸೂದೆಯ ಸಿಂಧುತ್ವ ಪ್ರಶ್ನಿಸಿ ಕಾಂಗ್ರೆಸ್ ಸಂಸದ ಮೊಹಮ್ಮದ್ ಜಾವೇದ್ ಹಾಗೂ ಎಐಎಂಐಎಂ ಸಂಸದ ಅಸಾದುದ್ದೀನ್ ಓವೈಸಿ ಅವರು ಸುಪ್ರೀಂ ಕೋರ್ಟ್‌ಗೆ ಶುಕ್ರವಾರ ಅರ್ಜಿ ಸಲ್ಲಿಸಿದ್ದರು.

ನಮ್ಮ ಜನರನ್ನು ಇಂತಹ ದಾಳಿಗಳಿಂದ ಸಂವಿಧಾನ ಮಾತ್ರ ರಕ್ಷಿಸಬಲ್ಲದು. ಹೀಗಾಗಿ ಸಂವಿಧಾನ ರಕ್ಷಣೆ ನಮ್ಮೆಲ್ಲರ ಸಾಮೂಹಿಕ ಕರ್ತವ್ಯ

ರಾಹುಲ್ ಗಾಂಧಿ
ಕಾಂಗ್ರೆಸ್ ನಾಯಕ

ಕ್ಯಾಥೋಲಿಕ್ ಚರ್ಚ್ ಹೊಂದಿದ ಜಮೀನು ಬಗ್ಗೆ ಲೇಖನ ಆರ್‌ಎಸ್‌ಎಸ್‌ನ ಮನಸ್ಥಿತಿ ಹಾಗೂ ಅದು ಅನುಸರಿಸುವ ಕೋಮುವಾದ ತೋರಿಸುತ್ತದೆ

ಪಿಣರಾಯಿ ವಿಜಯನ್
ಕೇರಳ ಮುಖ್ಯಮಂತ್ರಿ

'ಮೈತೇಯಿ –ಕುಕಿ ಸಭೆ ತೋರಿಕೆಯದ್ದು'

ಇಂಫಾಲ್(ಪಿಟಿಐ): ಕೇಂದ್ರ ಸರ್ಕಾರವು ದೆಹಲಿಯಲ್ಲಿ ಶನಿವಾರ ಕರೆದಿದ್ದ ಮೈತೇಯಿ ಮತ್ತು ಕುಕಿ ಸಮುದಾಯ ಸಂಘಟನೆಗಳ ಸಭೆ ಮಣಿಪುರದ ಜನಾಂಗೀಯ ಸಂಘರ್ಷಗಳ ಸಮಸ್ಯೆಗಳನ್ನು ಪರಿಹರಿಸುವ ವಿಚಾರದಲ್ಲಿ ಮತ್ತೊಂದು ತೋರಿಕೆಯ ಸಭೆಯಾಯಿತು ಎಂದು ಇಂಫಾಲ್ ಕಣಿವೆಯ ಹಲವು ನಾಗರಿಕ ಸಮಾಜ ಸಂಘಟನೆಗಳ ಒಕ್ಕೂಟವಾದ ಮಣಿಪುರ ಸಮಗ್ರತೆಯ ಸಮನ್ವಯ ಸಮಿತಿ (ಸಿಒಸಿಒಎಂಐ–ಕೊಕೊಮಿ) ಟೀಕಿಸಿದೆ.

ಆಲ್ ಮಣಿಪುರ ಯುನೈಟೆಡ್ ಕ್ಲಬ್ಸ್ ಆರ್ಗನೈಸೇಶನ್ ಮತ್ತು ಫೆಡರೇಶನ್ ಆಫ್ ಸಿವಿಲ್ ಸೊಸೈಟಿ ಆರ್ಗನೈಸೇಶನ್ಸ್‌ನ ಪ್ರತಿನಿಧಿಗಳನ್ನು ಒಳಗೊಂಡ ಆರು ಸದಸ್ಯರ ಮೈತೇಯಿ ನಿಯೋಗ ಮತ್ತು ಒಂಬತ್ತು ಪ್ರತಿನಿಧಿಗಳಿದ್ದ ಕುಕಿ ನಿಯೋಗ ಈ ಸಭೆಯಲ್ಲಿ ಭಾಗಿಯಾಗಿದ್ದವು.

ದೆಹಲಿಯಲ್ಲಿ ಸಭೆ ನಡೆದ ದಿನವೇ ಇಲ್ಲಿ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ಕೊಕೊಮಿ, ಸಭೆಯನ್ನು ತರಾತುರಿಯಲ್ಲಿ ಕರೆದಿದ್ದು, ಎರಡೂ ಕಡೆಯ ಬೆರಳೆಣಿಕೆಯಷ್ಟು ವ್ಯಕ್ತಿಗಳಿಗೆ ಭಾಗವಹಿಸಲು ಅವಕಾಶ ನೀಡಲಾಗಿದೆ. ಕೇಂದ್ರ ಸರ್ಕಾರವು ಈ ಬಿಕ್ಕಟ್ಟಿನ ಮೂಲ ಕಾರಣಗಳನ್ನು ಪತ್ತೆ ಮಾಡಿ, ಆ ಸಮಸ್ಯೆಗಳನ್ನು ಪರಿಹರಿಸಲು ಯಾವುದೇ ಪ್ರಾಮಾಣಿಕ ಅಥವಾ ವಾಸ್ತವಿಕ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ. ಪದೇ ಪದೇ ತೋರಿಕೆಯ ಸಭೆಗಳನ್ನು ನಡೆಸುತ್ತಿದೆ ಎಂದು ಆರೋಪಿಸಿದೆ.

ಸಂಸತ್ತಿನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನೀಡಿದ ಹೇಳಿಕೆಯನ್ನು ದೃಢೀಕರಿಸುವ 'ತಂತ್ರ'ದ ಸಭೆಯಾಗಿದ್ದರಿಂದ ಅದರಲ್ಲಿ ಭಾಗವಹಿಸಲಿಲ್ಲ ಎಂದು ಮೈತೇಯಿಯ ಒಂದು ಗುಂಪು ಹೇಳಿದೆ.

ವಿದೇಶಿ ಪದವಿಗೆ ಮಾನ್ಯತೆ ನೀಡಲು ಯುಜಿಸಿಯಿಂದ ಹೊಸ ನಿಯಮ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿದೇಶದ ಉನ್ನತ ಶಿಕ್ಷಣ ಸಂಸ್ಥೆಗಳಿಂದ ಪಡೆದ ವಿದ್ಯಾರ್ಹತೆಗಳಿಗೆ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದ ಹೊಸ ನಿಯಮಗಳನ್ನು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಶನಿವಾರ ಘೋಷಿಸಿದೆ.

ವಿದೇಶದಲ್ಲಿನ ಶೈಕ್ಷಣಿಕ ಸಂಸ್ಥೆಗಳಿಂದ ಪಡೆದ ವಿದ್ಯಾರ್ಹತೆಗೆ ಸಮಾನ ಪದವಿ ನೀಡುವುದಕ್ಕೆ ಕೂಡ ಈ ನಿಯಮಗಳಲ್ಲಿ ಅವಕಾಶ ಇದೆ ಎಂದು ಮೂಲಗಳು ಹೇಳಿವೆ.

ಅಂತರರಾಷ್ಟ್ರೀಯ ಪದವಿ ಪಡೆದು ದೇಶಕ್ಕೆ ಮರಳುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿರುವ ಕಾರಣ ಯುಜಿಸಿ ಈ ನಿಯಮಗಳನ್ನು ರೂಪಿಸಿದೆ. ಇಂತಹ ವಿದ್ಯಾರ್ಥಿಗಳು ದೇಶದ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ಅಥವಾ ಉದ್ಯೋಗ ಗಿಟ್ಟಿಸಲು ಎದುರಿಸುತ್ತಿದ್ದ ಸಮಸ್ಯೆಗೂ ಈ ನಿರ್ಧಾರ ಪರಿಹಾರ ಒದಗಿಸಲಿದೆ.

'2034ರ ನಂತರ ಒಂದು ದೇಶ ಒಂದು ಚುನಾವಣೆ'

ಚೆನ್ನೈ (ಪಿಟಿಐ): 'ಮುಂಬರುವ ಚುನಾವಣೆಯಲ್ಲಿ 'ಒಂದು ದೇಶ ಒಂದು ಚುನಾವಣೆ'ಯನ್ನು ಅನುಷ್ಠಾನ ಮಾಡುವುದಿಲ್ಲ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ. 'ಒಂದು ದೇಶ ಒಂದು ಚುನಾವಣೆಯನ್ನು 2034ರ ನಂತರದಲ್ಲಿ ಜಾರಿಗೊಳಿಸುವ ಉದ್ದೇಶವಿದೆ, ಇದಕ್ಕಾಗಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಕೆಲವು ಪಕ್ಷಗಳು ತಿಳಿದುಕೊಳ್ಳದೆ ವಿರೋಧಿಸುತ್ತಿವೆ' ಎಂದರು.

ಕಾಮ್ರಾ ಕಾರ್ಯಕ್ರಮಕ್ಕೆ 'ಬುಕ್‌ಮೈಶೋ' ಕೊಕ್



ಕುನಾಲ್ ಕಾಮ್ರಾ

ಮುಂಬೈ (ಪಿಟಿಐ): ಟಿಕೆಟ್ ಬುಕ್ಕಿಂಗ್ ವೇದಿಕೆಯಾದ 'ಬುಕ್‌ಮೈಶೋ' ತನ್ನ ಕಾರ್ಯಕ್ರಮಗಳ ಪಟ್ಟಿಯಿಂದ ಹಾಸ್ಯ ಕಲಾವಿದ ಕುನಾಲ್ ಕಾಮ್ರಾ ಅವರ ಕಾರ್ಯಕ್ರಮಗಳನ್ನು ಕೈಬಿಟ್ಟಿದೆ.

ಜತೆಗೆ, ತನ್ನ ವೆಬ್‌ಸೈಟ್ ಮತ್ತು ಆ್ಯಪ್‌ನಲ್ಲಿದ್ದ ಕಾಮ್ರಾ ಅವರ ಕುರಿತಾದ ಎಲ್ಲ ವಿವರಗಳನ್ನು ಶನಿವಾರ ಅಳಿಸಿ ಹಾಕಿದೆ. ಈ ಬಗ್ಗೆ ಶಿವಸೇನಾದ ರಾಹುಲ್ ಕನಾಲ್ ಅವರು 'ಬುಕ್‌ಮೈಶೋ'ಗೆ ಪತ್ರ ಬರೆದು ಧನ್ಯವಾದ ತಿಳಿಸಿದ್ದಾರೆ.

'ಕಾಮ್ರಾ ಅವರಿಗೆ 'ಬುಕ್‌ಮೈಶೋ' ತನ್ನ ವೇದಿಕೆಯಲ್ಲಿ ಅವಕಾಶ ನೀಡಬಾರದು' ಎಂದು ಒತ್ತಾಯಿಸಿ, ಶಿವಸೇನಾದ ಸಾಮಾಜಿಕ ಜಾಲತಾಣ ಉಸ್ತುವಾರಿ ರಾಹುಲ್ ಅವರು 'ಬುಕ್‌ಮೈಶೋ'ನ ಸಿಇಒ ಆಶೀಶ್ ಹೇಮರಾಜಾನಿ ಅವರಿಗೆ ಪತ್ರ ಬರೆದಿದ್ದರು. ಪತ್ರ ಬರೆದ ಒಂದು ದಿನದಲ್ಲಿ 'ಬುಕ್‌ಮೈಶೋ' ಈ ಕ್ರಮ ಕೈಗೊಂಡಿದೆ. 'ಈ ಬೆಳವಣಿಗೆ ಕುರಿತು ಹೇಳಲು ಏನೂ ಇಲ್ಲ ಎಂದು 'ಬುಕ್‌ಮೈಶೋ' ತಿಳಿಸಿದೆ.

'ಕಾಮ್ರಾ ಅವರ ಕಾರ್ಯಕ್ರಮಗಳನ್ನು ನಿಮ್ಮ ಪಟ್ಟಿಯಿಂದ ಕೈಬಿಟ್ಟಿದ್ದಕ್ಕೆ, ಅವರಿಗೆ ನೀಡಲಾಗುತ್ತಿದ್ದ ಪ್ರಚಾರಕ್ಕೆ ತಡೆ ನೀಡಿದ್ದಕ್ಕೆ ಮತ್ತು ನಿಮ್ಮ ವೇದಿಕೆಯ ಹುಡುಕಾಟದ ಇತಿಹಾಸದಿಂದ ಅವರ ಹೆಸರನ್ನು ಅಳಿಸಿ ಹಾಕಿದ್ದಕ್ಕೆ ನಾವು ನಿಮಗೆ ಆಭಾರಿಯಾಗಿದ್ದೇವೆ' ಎಂದು ಆಶೀಶ್ ಅವರಿಗೆ ರಾಹುಲ್ ಪತ್ರ ಬರೆದಿದ್ದಾರೆ.

ವಿಚಾರಣೆಗೆ ಗೈರು: ಕುನಾಲ್ ಕಾಮ್ರಾ ತಮ್ಮ ಕಾರ್ಯಕ್ರಮದಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರನ್ನು ಉದ್ದೇಶಿಸಿ 'ದ್ರೋಹಿ' ಎಂದು ಹಾಡು ಹಾಡಿದ್ದಾರೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿ, ಕಾಮ್ರಾ ಅವರು ಪೊಲೀಸರ ವಿಚಾರಣೆಗೆ ಶನಿವಾರವೂ ಹಾಜರಾಗಲಿಲ್ಲ.

'ಯುಸಿಸಿ ಜಾರಿಗೆ ಕ್ರಮ ವಹಿಸಿ'

ಒಂದನೇ ಪುಟದಿಂದ...

'ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್, ಸರ್ದಾರ್ ವಲ್ಲಭಭಾಯ್ ಪಟೇಲ್, ಬಾಬು ರಾಜೇಂದ್ರ ಪ್ರಸಾದ್, ಟಿ.ಟಿ. ಕೃಷ್ಣಮಾಚಾರಿ ಅಂತಹವರೆಲ್ಲಾ ಯುಸಿಸಿ ಬೆಂಬಲಿಸಿದ್ದರು' ಎಂದು ಪೀಠವು ಹೇಳಿದೆ.

'ಸಂವಿಧಾನದ ಮೂಲಭೂತ ಅಂಶಗಳಾದ ಪ್ರಜಾಪ್ರಭುತ್ವ, ಏಕತೆ, ಸಮಗ್ರತೆ ಮತ್ತು ಸರ್ವರಿಗೂ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಕಾರ್ಯಗತಗೊಳಿಸಲು ಸಂವಿಧಾನದ ಕಲಂ 44ನೇ ವಿಧಿಯ ಆಶಯದಂತೆ ಯುಸಿಸಿ ಜಾರಿಗೊಳಿಸಬೇಕಾದ ಅಗತ್ಯವಿದೆ' ಎಂದೂ ನ್ಯಾಯಪೀಠ ಹೇಳಿದೆ.



ಒಡಿಶಾದ ಭುವನೇಶ್ವರದಲ್ಲಿ ಅಶೋಕಷ್ಟಾಮಿ ಪ್ರಯುಕ್ತ ವಾರ್ಷಿಕ ರುಕುನಾ ರಥಯಾತ್ರೆಯಲ್ಲಿ ಸೇರಿದ್ದ ಭಕ್ತರು –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಹೊಸ ಪಂಬನ್ ಸೇತುವೆ ಇಂದು ಲೋಕಾರ್ಪಣೆ



ನೂತನ ಪಂಬನ್ ಸೇತುವೆ

ನವದೆಹಲಿ (ಪಿಟಿಐ): ತಮಿಳುನಾಡಿನ ರಾಮೇಶ್ವರ ದ್ವೀಪವನ್ನು ರೈಲು ಮೂಲಕ ಸಂಪರ್ಕಿಸುವ ಏಷ್ಯಾದಲ್ಲಿಯೇ ಮೊದಲ 'ವರ್ಟಿಕಲ್ ಲಿಫ್ಟ್ ಸೇತುವೆ'ಯನ್ನು (ಲಂಬವಾಗಿ ಮೇಲೆತ್ತಲಾಗುವ ಸೇತುವೆ) ಪ್ರಧಾನಿ ನರೇಂದ್ರ ಮೋದಿ ಅವರು ರಾಮನವಮಿ ದಿನವಾದ ಭಾನುವಾರ ಉದ್ಘಾಟಿಸಲಿದ್ದಾರೆ.

ಈ ನೂತನ ಸೇತುವೆಯ ಕಾರಣದಿಂದ ಈ ಪ್ರದೇಶಕ್ಕೆ ಹೆಚ್ಚಿನ ಭಕ್ತರು, ಪ್ರವಾಸಿಗರು ಬರುವ ನಿರೀಕ್ಷೆ ಇದೆ. ಇದರಿಂದ ಈ ಪ್ರದೇಶದ ಆರ್ಥಿಕತೆ ಹೆಚ್ಚಳವಾಗುತ್ತದೆ ಎನ್ನಲಾಗಿದೆ.

ಈ ಸೇತುವೆಯ ಎಂಜಿನಿಯರಿಂಗ್ ಚಾತುರ್ಯವನ್ನು ಅಮೆರಿಕದ ಗೋಲ್ಡನ್ ಗೇಟ್ ಸೇತುವೆ, ಲಂಡನ್‌ನ ಟವರ್ ಬ್ರಿಡ್ಜ್‌ನೊಂದಿಗೆ ಹೋಲಿಕೆ ಮಾಡಲಾಗುತ್ತಿದೆ. ಈ ಸೇತುವೆಯನ್ನು ರೈಲ್ವೆ ಇಲಾಖೆಯ ರೈಲ್ ವಿಕಾಸ್ ನಿಗಮ್ ಲಿ. ನಿರ್ಮಿಸಿದೆ. ₹550 ಕೋಟಿ ವೆಚ್ಚದಲ್ಲಿ ಸೇತುವೆಯನ್ನು ನಿರ್ಮಿಸಲಾಗಿದೆ.

₹ 1.5 ಕೋಟಿ ನಗದು ವಶಕ್ಕೆ ಪಡೆದ ಇ.ಡಿ

ನವದೆಹಲಿ: ನಟ ಮೋಹನಲಾಲ್ ಅಭಿನಯದ 'ಎಲ್2: ಎಂಪುರಾನ್' ಚಿತ್ರದ ನಿರ್ಮಾಪಕ, ಕೇರಳದ ಉದ್ಯಮಿ ಗೋಕುಲಂ ಗೋಪಾಲನ್ ಅವರ ಚಿಟ್ ಫಂಡ್ ಕಂಪನಿಯ ಕಚೇರಿಗಳಲ್ಲಿ ಶುಕ್ರವಾರದಿಂದ ಶನಿವಾರದವರೆಗೆ ಶೋಧ ಕಾರ್ಯ ನಡೆಸಿದ ಜಾರಿ ನಿರ್ದೇಶನಾಲಯ (ಇ.ಡಿ) ₹ 1.5 ಕೋಟಿ ನಗದನ್ನು ವಶಕ್ಕೆ ಪಡೆದಿದೆ.

ವಿದೇಶಿ ವಿನಿಮಯ ಕಾನೂನಿನ ಉಲ್ಲಂಘನೆ ಆರೋಪದ ಮೇಲೆ ಈ ಶೋಧ ಕೈಗೊಳ್ಳಲಾಗಿತ್ತು ಎಂದು ಇ.ಡಿ ಶನಿವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಕೇರಳದ ಕೋಯಿಕ್ಕೋಡ್ ಮತ್ತು ತಮಿಳುನಾಡಿನ ಚೆನ್ನೈನ ಎರಡು ಸ್ಥಳಗಳಲ್ಲಿನ ಶ್ರೀ ಗೋಕುಲಂ ಚಿಟ್ಸ್ ಮತ್ತು ಹಣಕಾಸು ಕಂಪನಿ ಕಚೇರಿಗಳು ಮತ್ತು ಸಂಬಂಧಿಸಿದವರ ವಸತಿಗಳ ಮೇಲೆ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯಡಿ (ಎಫ್‌ಇಎಂಎ) ಶೋಧ ನಡೆಸಲಾಯಿತು ಎಂದು ಇ.ಡಿ ಹೇಳಿದೆ.

ಈ ವೇಳೆ ಎಫ್‌ಇಎಂಎ ಉಲ್ಲಂಘನೆಗೆ ಸಂಬಂಧಿಸಿದಂತೆ ಆಪಾದಿತ ದಾಖಲೆಗಳು ಮತ್ತು ₹ 1.50 ಕೋಟಿ ನಗದನ್ನು ವಶಕ್ಕೆ ಪಡೆಯಲಾಗಿದೆ ಎಂದು ಅದು ವಿವರಿಸಿದೆ.

ಜಾರಿ ನಿರ್ದೇಶನಾಲಯದ ಆರೋಪಗಳಿಗೆ ಸಂಬಂಧಿಸಿದಂತೆ ಗೋಪಾಲನ್ ಅಥವಾ ಅವರ ಕಂಪನಿಯಿಂದ ತಕ್ಷಣದ ಪ್ರತಿಕ್ರಿಯೆ ಬಂದಿಲ್ಲ.

ತೆಲಂಗಾಣ: 86 ನಕ್ಸಲರ ಶರಣಾಗತಿ

ಹೈದರಾಬಾದ್: ಛತ್ತೀಸಗಢದಲ್ಲಿ ಸಕ್ರಿಯರಾಗಿದ್ದ 20 ಮಹಿಳೆಯರು ಸೇರಿದಂತೆ 86 ನಕ್ಸಲರು, ತೆಲಂಗಾಣದ ಭದ್ರಾದ್ರಿ ಕೊತ್ತಗೂಡೆಂ ಜಿಲ್ಲೆಯಲ್ಲಿ ಶನಿವಾರ ಪೊಲೀಸರಿಗೆ ಶರಣಾಗಿದ್ದಾರೆ.

ಹಿಂಸಾತ್ಮಕ ಮಾರ್ಗ ತ್ಯಜಿಸಿ, ತಮ್ಮ ಕುಟುಂಬಗಳೊಂದಿಗೆ ಶಾಂತಿಯುತ ಜೀವನ ನಡೆಸಲು ಐಜಿಪಿ ಎಸ್. ಚಂದ್ರಶೇಖರ ರೆಡ್ಡಿ ಮುಂದೆ ನಕ್ಸಲರು ಶರಣಾಗಿದ್ದಾರೆ.

ಶಸ್ತ್ರಾಸ್ತ್ರ ತ್ಯಜಿಸಲು ನಕ್ಸಲರಿಗೆ ಸಚಿವ ಅಮಿತ್ ಶಾ ಸಲಹೆ


ದಂತೆವಾಡಾ (ಪಿಟಿಐ): 'ಶಸ್ತ್ರಾಸ್ತ್ರಗಳನ್ನು ತ್ಯಜಿಸಿ, ಮುಖ್ಯವಾಹಿನಿಗೆ ಬನ್ನಿ. ನೀವು ಕೂಡ ನಮ್ಮವರೇ ಆಗಿದ್ದೀರಿ. ನಿಮ್ಮನ್ನು ಕೊಲ್ಲುವುದರಿಂದ ನಮಗೆ ಖುಷಿ ಸಿಗುವುದಿಲ್ಲ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನಕ್ಸಲರನ್ನು ಉದ್ದೇಶಿಸಿ ಶನಿವಾರ ಮಾತನಾಡಿದರು.

'ಬಸ್ತರ್ ಪಂಡುಮ್' ಹಬ್ಬದ ಪ್ರಯುಕ್ತ ಛತ್ತೀಸಗಢ ಸರ್ಕಾರವು ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, '2026ರ ಮಾರ್ಚ್ ಒಳಗಾಗಿ ನಾವು ದೇಶವನ್ನು ನಕ್ಸಲ್ ಮುಕ್ತ ಮಾಡುತ್ತೇವೆ. ನಕ್ಸಲರು ಬಸ್ತರ್ ಪ್ರದೇಶದಲ್ಲಿರುವ ಬುಡಕಟ್ಟು ಜನರ ಅಭಿವೃದ್ಧಿಯನ್ನು ತಡೆಯಲು ಸಾಧ್ಯವಿಲ್ಲ' ಎಂದರು.

'ನಕ್ಸಲ್ ಚಳವಳಿ ತೊರೆದು ಅಭಿವೃದ್ಧಿ ಪ್ರಕ್ರಿಯೆಯ ಭಾಗವಾಗಿ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನಿಮಗೆ ರಕ್ಷಣೆ ದೊರೆಯುತ್ತದೆ. ಈ ಪ್ರದೇಶವು ಅಭಿವೃದ್ಧಿಯನ್ನು ಬಯಸುತ್ತಿದೆ' ಎಂದರು.

ಹೈಕೋರ್ಟ್ ನ್ಯಾಯಮೂರ್ತಿಯಾಗಿ ವರ್ಮಾ ಅಧಿಕಾರ ಸ್ವೀಕಾರ

ಪ್ರಜಾವಾಣಿ ವಾರ್ತೆ/ಪಿಟಿಐ




ನ್ಯಾ.ಯಶವಂತ್ ವರ್ಮಾ

ಲಖನೌ: ನ್ಯಾಯಮೂರ್ತಿ ಯಶವಂತ್ ವರ್ಮಾ ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ಶನಿವಾರ ಅಧಿಕಾರ ವಹಿಸಿಕೊಂಡರು. ವರ್ಮಾ ಅವರ ವಿರುದ್ಧ ನಡೆಯುತ್ತಿರುವ ವಿಚಾರಣೆ ಪೂರ್ಣಗೊಳ್ಳುವವರೆಗೆ ಅವರಿಗೆ ನ್ಯಾಯಾಂಗಕ್ಕೆ ಸಂಬಂಧಿಸಿದ ಯಾವುದೇ ಕೆಲಸವನ್ನು ವಹಿಸುವುದಿಲ್ಲ ಎಂದು ಮೂಲಗಳು ಹೇಳಿವೆ. ನ್ಯಾಯಮೂರ್ತಿ ವರ್ಮಾ ಅವರು ಖಾಸಗಿ ಕೊಠಡಿಯಲ್ಲಿ ಅಧಿಕಾರ ವಹಿಸಿಕೊಂಡರು ಎಂದು ಗೊತ್ತಾಗಿದೆ.

ನ್ಯಾ. ವರ್ಮಾ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಬೇಕು ಎಂಬ ಕೋರಿಕೆ ಇರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ಕೆಲವು ದಿನಗಳ ಹಿಂದೆ ವಜಾಗೊಳಿಸಿದೆ. ವಿಚಾರಣೆ ಮುಗಿದ ನಂತರ ಎಫ್‌ಐಆರ್ ಬಗ್ಗೆ ತೀರ್ಮಾನ ಕೈಗೊಳ್ಳಬಹುದು ಎಂದು ಹೇಳಿದೆ.

ಅಲಹಾಬಾದ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅರುಣ್ ಭನ್ಸಾಲಿ ಅವರಿಗೆ ಶನಿವಾರ ಪತ್ರ ಬರೆದಿರುವ ಅಲಹಾಬಾದ್ ಹೈಕೋರ್ಟ್ ವಕೀಲರ ಸಂಘದ ಕಾರ್ಯದರ್ಶಿ ವಿಕ್ರಾಂತ್ ಪಾಂಡೆ ಅವರು, 'ನ್ಯಾ.ವರ್ಮಾ ಅವರಿಗೆ ಪ್ರಮಾಣ ವಚನ ಬೋಧಿಸಿರುವ ಕ್ರಮವು ಕಾನೂನು ಹಾಗೂ ಹಿಂದಿನಿಂದ ನಡೆದು ಬಂದ ಪದ್ಧತಿಯ ಪ್ರಕಾರ ಸ್ವೀಕಾರಾರ್ಹ ಅಲ್ಲ' ಎಂದು ಹೇಳಿದ್ದಾರೆ.



'ಕಣ್ಣಂತೆ ಕಾಣ್ಕೆಯಯ್'!'ಗೆ ಅನ್ವರ್ಥ 'ದಶಾನನ ಸ್ವಪ್ನಸಿದ್ಧಿ' 11



ವಿದ್ಯಾರ್ಥಿಗಳ ಯಕ್ಷೋತ್ಸವ ನಿರಂತರ ಯಾನ 12



ಇವರಿಗೆ ಸೈಕಲ್ ಸವಾರಿ ಬಲು ಇಷ್ಟ 13



ಕಕ್ಕೆಕಾನು

ಬೆದರಿದ ಕಾಡಿಗೆ ಬೇಕು ರಕ್ಷಣೆ



ಮಂಗಟ್ಟೆ
ಚಿತ್ರ: ಹರೀಶ್ ಟಿ.ಎಸ್.

ಆರ್.ವಾಸುದೇವ

ಕಾಡೆಂದರೆ ಕೇವಲ ಮರ, ಗಿಡ, ಮುಳ್ಳು, ಕಂಠಿಗಳಿಂದ, ಖಗ-ಮೃಗಗಳಿಂದ ಕೂಡಿದ ಸಮೂಹವೆಂದು ಅರ್ಥೈಸಲಾಗದು. ಭೂಪರಿಸರದ ಸಂಕೀರ್ಣ ವ್ಯವಸ್ಥೆಯನ್ನು ಕಾಲಾತೀತವಾಗಿ ಬೆಳೆಸಿ, ಪೋಷಿಸಿಕೊಂಡು ಬಂದ ಪ್ರಕೃತಿ ನಿರ್ಮಿತ ಭವ್ಯವಾದ ಪವಾಡಗಳೇ ಕಾಡು.

ಕಾಡೆಂದರೆ ಏನು? ಎಂದು ವಿಭಿನ್ನ ದೃಷ್ಟಿಕೋನಗಳಿಂದ ಪ್ರಶ್ನಿಸಿದಾಗ, ಪ್ರತಿಯೊಬ್ಬರಿಗೂ ಆಪ್ಯಾಯಮಾನವಾಗುವ ವೈವಿಧ್ಯಮಯ ಮೌಲ್ಯಗಳನ್ನು ನೀಡುವ ಉದಾತ್ತ ನೋಟವೊಂದು ತೆರೆದುಕೊಳ್ಳುತ್ತದೆ. ಪರಿಸರಶಾಸ್ತ್ರಜ್ಞರಿಗೆ ಕಾಡು ಎಂದರೆ ಸಂಕೀರ್ಣ ಪರಿಸರ ವ್ಯವಸ್ಥೆಯಾಗಿದ್ದು, ತನ್ನೊಳಗೆ ಸೂಕ್ಷ್ಮ ಸಾಮರಸ್ಯದಿಂದ ಸಹಬಾಳ್ವೆ ನಡೆಸುತ್ತಿರುವ ಜೀವಿಗಳು ಕಾಣುತ್ತವೆ. ಹೊರ ಜಗತ್ತಿಗೆ ಕಾಡಿನಲ್ಲಿರುವ ಪ್ರತಿಯೊಂದು ಮರವು ಬೇರೆ ಬೇರೆಯಾಗಿ ಕಂಡರೂ ಭೂಗತ ಬೇರುಗಳಲ್ಲಿರುವ ಅಗಾಧ ಶಿಲೀಂಧ್ರ ಜಾಲದ ಮೂಲಕ ಪರಸ್ಪರ ಸಂಪರ್ಕ ಹೊಂದಿ ಇಡೀ ಕಾಡಿಗೆ ಕಾಡೇ ಒಂದು ಬೃಹತ್ ಜೀವಿಯಂತೆ ವರ್ತಿಸುತ್ತದೆ. ವಿಜ್ಞಾನಿಗಳು ಇದನ್ನು ಈಗ 'ವುಡ್ ವೈಡ್ ವೆಬ್' ಎಂದು ಕರೆಯುತ್ತಾರೆ. ಈ ಜಾಲದ ಮೂಲಕ ಮರಗಳು ಸಂವಹನ ನಡೆಸುತ್ತವೆ, ಸಂಪನ್ಮೂಲಗಳನ್ನು ಹಂಚಿಕೊಳ್ಳುತ್ತವೆ ಮತ್ತು ಪರಸ್ಪರ ಬೆಳೆಯಲು ಸಹಕರಿಸುತ್ತವೆ. ತಾಯಿ ಮರಗಳು ತಮ್ಮ ಸಸಿಗಳನ್ನು ಪೋಷಿಸುತ್ತವೆ, ಕೀಟಗಳಿಂದ ದಾಳಿಗೆ ಒಳಗಾದ ತಮ್ಮ ನೆರೆಹೊರೆಯ ಮರಗಳಿಗೆ ಮುನ್ನೆಚ್ಚರಿಕೆಯನ್ನು ನೀಡುತ್ತವೆ. ಬಲವಾದ ಮರಗಳು ದುರ್ಬಲ ಮರಗಳೊಂದಿಗೆ ಪೋಷಕಾಂಶಗಳನ್ನು ಹಂಚಿಕೊಳ್ಳುತ್ತವೆ. ಈ ಅತಿ ಸೂಕ್ಷ್ಮ ಸಂವಹನ ಮತ್ತು ಸಹಕಾರವನ್ನು ಮಾನವನು ಇನ್ನೂ ಆಧುನಿಕ ವಿಜ್ಞಾನದ ಮೂಲಕ ಕೃತಕವಾಗಿ ವಿನ್ಯಾಸಗೊಳಿಸಲಾಗಿಲ್ಲ. ಇದು ಲಕ್ಷಾಂತರ ವರ್ಷದ ಜೀವ ವಿಕಸನದ ಮೂಲಕ ಹೊರಹೊಮ್ಮಿರುವ ನೈಸರ್ಗಿಕ ಕೊಡುಗೆ.

ಹವಾಮಾನ ವಿಜ್ಞಾನಿಗಳು ಕಾಡನ್ನು ಆಮ್ಲಜನಕವನ್ನು ಉತ್ಪಾದಿಸಿ ಭೂಗ್ರಹಕ್ಕೆ ಜೀವ ತುಂಬುವ, ಇಂಗಾಲದ ಡೈ ಆಕ್ಸೈಡ್‌ನಂತಹ ಕೆಟ್ಟ ಹಸಿರುಮನೆ ಅನಿಲಗಳನ್ನು ಹೀರಿಕೊಳ್ಳುವ ಮೂಲಕ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ತಗ್ಗಿಸುವ ಅತ್ಯುತ್ತಮ ವ್ಯವಸ್ಥೆಯೆಂದು ಅರ್ಥೈಸುತ್ತಾರೆ.

> ಕಾಡು ಎಂದರೆ ಕಣ್ಣಿಗೆ ಕಾಣುವ ಮರ ಗಿಡ ಬಳ್ಳಿ ಹೂವು ಹಣ್ಣು ಪ್ರಾಣಿ ಪಕ್ಷಿಸಂಕುಲ ಅಷ್ಟೇ ಅಲ್ಲ. ಅದು ನಿಸರ್ಗದೊಂದಿಗೆ ಅಂತರ್ಗತವಾಗಿ ಹೆಣೆದುಕೊಂಡ ಜೀವಜಾಲ. ಏಕೆ ಮತ್ತು ಹೇಗೆ ಎನ್ನುವುದು ಇಲ್ಲಿ ಅನಾವರಣಗೊಂಡಿದೆ.

ಜನ ಸಮುದಾಯಗಳಿಗೆ ಕಾಡು ಪವಿತ್ರ ಪೂರ್ವಜರ ಭೂಮಿಯಾಗಿದ್ದು ಸಾಂಸ್ಕೃತಿಕ, ಸಾಂಪ್ರದಾಯಿಕ ಮತ್ತು ಆಧ್ಯಾತ್ಮಿಕ ನಂಬಿಕೆಗಳೊಂದಿಗೆ ಅವರ ಜೀವನ ಬೆಸೆದುಕೊಂಡಿರುವುದನ್ನು ನೋಡುತ್ತೇವೆ. ನಮ್ಮ ರಾಜ್ಯದ ಉತ್ತರ ಕನ್ನಡ ಮತ್ತು ಕೊಡಗಿನಲ್ಲಿರುವ ಸಾವಿರಾರು ದೇವರ ಕಾಡುಗಳನ್ನು ಜನ ಸಮುದಾಯಗಳೇ ಸಂರಕ್ಷಿಸುತ್ತಿರುವುದು ಇದಕ್ಕೊಂದು ಅದ್ಭುತ ಉದಾಹರಣೆ.

ಕಾಡನ್ನು ನವೀಕರಿಸಬಹುದಾದ ಸಂಪನ್ಮೂಲಗಳಾಗಿ ಅರ್ಥಶಾಸ್ತ್ರಜ್ಞರು ನೋಡಬಹುದು. ಇದು ಸುಸ್ಥಿರ ಅಭಿವೃದ್ಧಿ ಮತ್ತು ವನವಾಸಿ ಜನರ ಜೀವನೋಪಾಯಕ್ಕೆ ಅತಿ ಅವಶ್ಯವಾಗಿದೆ. ಕವಿಗಳು ಕಾಡಿನಿಂದ ಕೂಡಿದ ಭೂದೃಶ್ಯಗಳ ಶಾಂತ ಸೌಂದರ್ಯದಲ್ಲಿ ಅನಂತ ಸ್ಫೂರ್ತಿಯನ್ನು ಕಂಡುಕೊಳ್ಳುತ್ತಾರೆ. ಚಾರಣಿಗರು, ಸಾಹಸಿಗರು ಮತ್ತು ಪ್ರಕೃತಿ ಪ್ರೇಮಿಗಳು ಕಾಡಿನ ಪಚ್ಚೆ ಮೇಲ್ಹಾವಣಿಯಲ್ಲಿ ಅವರ್ಣನೀಯ ಸಾಂತ್ವನ ಮತ್ತು ಅಚ್ಚರಿಯನ್ನು ಹುಡುಕುತ್ತಾರೆ.

ಕರ್ನಾಟಕದ ವನ ಸಂಪತ್ತು ಭವ್ಯ, ವೈವಿಧ್ಯಮಯ ಮತ್ತು ಜಗತ್ಪ್ರಸಿದ್ಧ. ರಾಜ್ಯದ ಒಟ್ಟಾರೆ ಭೌಗೋಳಿಕ ಪ್ರದೇಶದ ಶೇಕಡ 22 ರಷ್ಟರಲ್ಲಿ ಅಸಾಧಾರಣ ಜೀವ ವೈವಿಧ್ಯ ಹಾಗೂ ಪರಿಸರ ಪ್ರಾಮುಖ್ಯತೆ ಇರುವ ವಿವಿಧ ಬಗೆಯ ಕಾಡು ಪ್ರಕಾರಗಳಿವೆ. ಪಶ್ಚಿಮ ಸಮುದ್ರ ತೀರದ ಗಡಿಯುದ್ದಕ್ಕೂ ವಿಶ್ವ ನೈಸರ್ಗಿಕ ಪರಂಪರೆಯ ಮುಕುಟ ರತ್ನದಂತಿರುವ ಪಶ್ಚಿಮ ಘಟ್ಟದ ಶ್ರೇಣಿಗಳಲ್ಲಿ ತೇವಭರಿತ ನಿತ್ಯಹರಿದ್ವರ್ಣ ಕಾಡುಗಳು ಇವೆ. ಕೊಡಗಿನ ಪುಷ್ಪಗಿರಿ, ಬ್ರಹ್ಮಗಿರಿ, ತಲಕಾವೇರಿಯಲ್ಲಿ ಇರುವ ಕಾಡು, ಕುದುರೆಮುಖದ ಹುಲ್ಲುಗಾವಲಿನ ಶೋಲಾ ಕಾಡು, ಆಗುಂಬೆಯ ಮಳೆಯ ಕಾಡು, ಉತ್ತರ ಕನ್ನಡ ಜಿಲ್ಲೆಯ ಶರಾವತಿ ಕಣಿವೆ ಕಾಡಲ್ಲಿರುವ ಹಚ್ಚ ಹಸಿರಿನ ವೃಕ್ಷ ಸಂಪತ್ತು ಮೋಡಗಳಿಂದ ತೇವ ಪಡೆದು ನದಿಗಳಿಗೆ ಜೀವ ತುಂಬುವ ಕೆಲಸ ಮಾಡುತ್ತದೆ. ಕಾಡಿನ ಮಧ್ಯದಲ್ಲಿ ವರ್ಷವಿಡಿ ನೀರಿನ ಹೊರತೆಯನ್ನು ಸೂಸುತ್ತಾ ನದಿ ಮೂಲಗಳು ಬತ್ತದಂತೆ ಕಾಯುವ ಜಲಕಲ್ಪವೃಕ್ಷಗಳು ಇವು. ಜಗತ್ತಿನಲ್ಲಿಯೇ ಅತಿ ಹೆಚ್ಚು ಸಂಖ್ಯೆಯಲ್ಲಿ ವಿನಾಶದ ಅಂಚಿನಲ್ಲಿರುವ ಸಿಂಗಳಿಕ ಮಂಗಗಳಿರುವ ಕಾಡು ಎಂದು ಶರಾವತಿ ಕಣಿವೆ ಗುರುತಿಸಲ್ಪಟ್ಟಿದೆ. ಈಚೆಗೆ ಆಗುಂಬೆಯ ಕಾಡುಗಳಲ್ಲಿ ಹೊಸ ಪ್ರಭೇದದ ಕಾಳಿಂಗಸರ್ಪವನ್ನು ವಿಜ್ಞಾನಿಗಳು ಪತ್ತೆ ಮಾಡಿದ್ದಾರೆ. ಕಾವೇರಿ ಅಭಯಾರಣ್ಯದಲ್ಲಿ ಇತ್ತೀಚೆಗೆ ಮುಳ್ಳುಹಂದಿಯನ್ನು ಹೋಲುವ 'ಹನಿ ಬ್ಯಾಡ್ಜರ್' ಎಂಬ ಅತ್ಯಂತ ಅಪರೂಪದ ಪ್ರಾಣಿಯನ್ನು ಕ್ಯಾಮೆರಾ ಟ್ರ್ಯಾಪ್ ಮೂಲಕ ಸೆರೆ ಹಿಡಿಯಲಾಗಿದೆ. ಈ ಸಹ್ಯಾದ್ರಿ ಬೆಟ್ಟಗಳು ಭೂಮಿಯ ಮೇಲಿನ 32 ಅನನ್ಯ ಜೀವ ವೈವಿಧ್ಯದ 'ಹಾಟ್ ಸ್ಪಾಟ್'ಗಳಲ್ಲಿ ಒಂದಾಗಿ ಯುನೆಸ್ಕೋ ವಿಶ್ವ ನೈಸರ್ಗಿಕ ಪಾರಂಪರಿಕ ತಾಣವೆಂದು ವಿಜ್ಞಾನಿಗಳು ಗುರುತಿಸಿದ್ದಾರೆ.

ಬಂಡೀಪುರ, ನಾಗರಹೊಳೆ, ಭದ್ರಾ, ದಾಂಡೇಲಿ- ಅಣಶಿಯ ಎಲೆ ಉದುರಿಸುವ ಕಾಡುಗಳು ಅಪರೂಪದ ವನ್ಯಜೀವಿಗಳಾದ ಆನೆ, ಹುಲಿ, ಕಪ್ಪು ಚಿರತೆ, ಸೀಳುನಾಯಿ, ಮಲಬಾರ್ ಕೆಂದಳಿಲುಗಳಿಗೆ ಆಶ್ರಯ ತಾಣವಾಗಿದ್ದು, ಪರಿಸರ ಪ್ರವಾಸೋದ್ಯಮ ಮತ್ತು ಸಂರಕ್ಷಣೆಗೆ ಹೆಸರುವಾಸಿಯಾಗಿವೆ. ದಾಂಡೇಲಿಯ ಕಾಡುಗಳಲ್ಲಿರುವ ವಿವಿಧ ಬಗೆಯ ಕೊಂಬಿನಂತಿರುವ ಕೊಕ್ಕುಗಳನ್ನು ಹೊಂದಿರುವ ದೈತ್ಯ ಹಾರ್ನಬಿಲ್ (ಮಂಗಟ್ಟೆ) ಮತ್ತು ಹಲವು ಹತ್ತು ಬಗೆಯ ಮರಕುಟಿಕ ಪಕ್ಷಿ ವೈವಿಧ್ಯ ಜಗತ್ತು ವಿವಿಡೆಡೆಯಿಂದ ಪಕ್ಷಿ ವೀಕ್ಷಕರನ್ನು ಆಕರ್ಷಿಸುತ್ತದೆ.

ತುಮಕೂರಿನ ಮೈದನಹಳ್ಳಿ, ಸಿದ್ದರಬೆಟ್ಟ ಸುಂದರ ಕೃಷ್ಣಮೃಗಗಳಿಗೆ, ನಿಶಾಚರ ಸಸ್ತನಿಯಾದ 'ಕಾಡು ಪಾಪ'ಗಳಿಗೆ, ಜಗತ್ತಿನಿಂದ ಕಣ್ಮರೆಯಾಗುತ್ತಿರುವ ತೋಳಗಳಿಗೆ ಆಶ್ರಯ ತಾಣವಾಗಿದೆ. ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶವಾದ ಚಿತ್ರದುರ್ಗದ ಜೋಗಿಮಟ್ಟಿಯ ಗುಡ್ಡಗಳಲ್ಲಿ ಒಣ ನಿತ್ಯಹರಿದ್ವರ್ಣ ಕಾಡುಗಳೆಂಬ ಅಪರೂಪದ ಕಾಡು ಪ್ರಕಾರಗಳು ಬೆಳೆಯುತ್ತವೆ. ಇವು ಸ್ಥಳೀಯ ಆರೋಗ್ಯ ಪರಂಪರೆಯ ಔಷಧಿ ಸಸ್ಯಗಳ ಆಗರವಾಗಿವೆ. ಹಂಪಿ ಸುತ್ತಮುತ್ತಲಿನ ಕುರುಚಲು ಅರಣ್ಯ ಏಷ್ಯಾದಲ್ಲಿ ಅತಿ ಹೆಚ್ಚು ಸಂಖ್ಯೆಯ ಕರಡಿಗಳ ಆವಾಸಸ್ಥಾನವಾಗಿದೆ.

ಪ್ರತಿಯೊಂದು ಕಾಡು ಹೇಳಲು ನಿಗೂಢ ಕಥಾನಕವನ್ನು ಹೊಂದಿದ್ದು ಪ್ರಾಕೃತಿಕ ಚರಿತ್ರೆಯನ್ನು ರಕ್ಷಿಸುತ್ತದೆ. ಬಹುಶಃ ಡೈನೋಸಾರ್‌ಗಳು ಬದುಕಿದ್ದ ಕಾಲದಲ್ಲಿ ವಿಕಸನಗೊಂಡು ಬೆಳೆದ ರಾಮಪತ್ರೆ ಕಾಡು ಇಂತಹ ನಿಗೂಢ 'ಪಳೆಯುಳಿಕೆ ಕಾಡು'ಗಳಿಗೆ ಉತ್ತಮ ಉದಾಹರಣೆ. ಆಗುಂಬೆ, ಸುಬ್ರಹ್ಮಣ್ಯ, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾಣಬರುವ ಈ ಅನನ್ಯ ಕಾಡುಗಳಿಗೆ 'ಕೊಕ್ಕೆ ಕಾಡು' 'ಕೊಕ್ಕೆ ಜಡ್ಡಿ' ಎಂದೂ ಕರೆಯುತ್ತಾರೆ. ಬೃಹತ್ ವೃಕ್ಷಗಳಾದ ಕಾನ್ ಹೊಳಗೇರು, ರಾಮಪತ್ರೆ, ಎಡಮಂಗಲ, ನೀರತ್ತಿ, ಒಂದಂಕಿ ಮರಗಳು ಕನ್ನಡದ ಒಂದು ಸಂಖ್ಯೆಯನ್ನು ಹೋಲುವ ಅರ್ಧಚಂದ್ರಾಕೃತಿಯ ವಿಶಿಷ್ಟ ಬೇರುಗಳನ್ನು ಸುತ್ತಲೂ ಮೇಲ್ಮುಖವಾಗಿ ಬೆಳೆಸಿ ಬೇರೆಯದೆ ಲೋಕವನ್ನು ಸೃಷ್ಟಿಸಿವೆ. ಇದು ಕಾಡಿಗೆ ವಿಶಿಷ್ಟ ಅಭೂತಪೂರ್ವ ದೃಶ್ಯವನ್ನು ನೀಡುತ್ತವೆ.

11ನೇ ಪುಟಕ್ಕೆ...

ಭೂಗತ ಪಾತಕಿ ಲಖನ್‌ನ ಗಾಂಧಿವಾದಿ ಕಥನ

ಎಚ್.ಎಸ್. ನಾಗಭೂಷಣ

ಲಕ್ಷ್ಮಣ್ ತುಕಾರಾಂ ಗೋಲೆ ತನ್ನ 16ನೇ ವಯಸ್ಸಿನಲ್ಲಿಯೇ ಪಾತಕ ಜಗತ್ತಿಗೆ ಕಾಲಿರಿಸುತ್ತಾನೆ. ಅಲ್ಲಿಂದ ಆರಂಭವಾದ ಕತ್ತಲ ಜಗತ್ತಿನ ಪಯಣದಲ್ಲಿ ಅಪರಾಧಗಳನ್ನು ಎಸಗುತ್ತಾ, ಪೊಲೀಸರಿಂದ ತಪ್ಪಿಸಿಕೊಳ್ಳುತ್ತಾ ಆತ ಬದುಕಿದ ರೀತಿಯೇ ರೋಚಕ. ಈತ ಒಂಬತ್ತು ಮಂದಿಯ ತಂಡ ಕಟ್ಟಿಕೊಂಡು ಪಿಕ್‌ಪಾಕೆಟ್, ಸರಗಳ್ಳತನದಿಂದ ಹಿಡಿದು ಕೈ-ಕಾಲು ಕತ್ತರಿಸುವ ಸುಪಾರಿ ಪಡೆದು ಮುಂಬೈನ ಜನ ಹಾಗೂ ಪೊಲೀಸರಿಗೆ ದೊಡ್ಡ ತಲೆನೋವಾಗಿರುತ್ತಾನೆ.

ಗೋಲೆ ಒಮ್ಮೆ ಸ್ನೇಹಿತರೊಂದಿಗೆ ರಸ್ತೆಬದಿಯ ಗೂಡಂಗಡಿಯಲ್ಲಿ ವಡಾಪಾವ್ ತಿನ್ನುತ್ತಾ ನಿಂತಿದ್ದಾಗ, ಹತ್ತಿರದ ನಲ್ಲಿಯಲ್ಲಿ ನೀರು ಹಿಡಿಯಲು ಜಗಳ ಶುರುವಾಗಿತ್ತು. ರೌಡಿಯೊಬ್ಬ ನೀರಿಗಾಗಿ ಬಂದಿದ್ದ ಯುವತಿಯನ್ನು ಛೇಡಿಸತೊಡಗಿದ. ಕೋಪಗೊಂಡ ಆಕೆ ಏನೂ ತೋಚದೆ ವಡಾಪಾವ್ ತಿನ್ನುತ್ತಿದ್ದವರ ಬಳಿ ಬಂದು 'ನಿಮಗೆ ಏನೂ ಅನ್ನಿಸುತ್ತಿಲ್ಲವೇ' ಎಂದು ಕೇಳಿದಾಗ, ಲಕ್ಷ್ಮಣ್ ಪಕ್ಕದ ಸಲೂನ್‌ನಿಂದ ರೇಜರ್ ತಂದು ಆವೇಶಭರಿತನಾಗಿ ಆ ರೌಡಿಯ ಮೇಲೆ ಚಂಗನೆ ಹಾರಿ ಕಿವಿಗೆ ಹೊಡೆದ. ಆ ಹೊಡೆತಕ್ಕೆ ಕಿವಿಯೇ ಕತ್ತರಿಸಿ ಬಿತ್ತು. ಅವನ ಹೊಟ್ಟೆಗೂ ತಿವಿಯ ತೊಡಗಿದ. ಅಲ್ಲಿದ್ದ ಜನ ದೂರ ಸರಿದರು. ಹೆಂಗಸರು ಬೆದರಿ ತಮ್ಮ ಜೋಪಡಿ ಸೇರಿಕೊಂಡರು. ಅಂದಿನಿಂದ ಪಾತಕಲೋಕದಲ್ಲಿ 'ರೇಜರ್ ಲಖನ್' ಎಂದೇ ಹೆಸರಾದ.



ಲಕ್ಷ್ಮಣ್ ತುಕಾರಾಂ ಗೋಲೆ

ಬಂಧನಕ್ಕೊಳಗಾಗಿ ಜೈಲು ಸೇರಿದಾಗ ಅವನೆದುರಿಗೆ ತೆರೆದುಕೊಂಡದ್ದು ವಿಚಿತ್ರ ಹಾಗೂ ಅಷ್ಟೇ ಭಯಾನಕ ಪಾತಕ ಜಗತ್ತು. ಛೋಟಾ ರಾಜನ್, ಅಮರ ನಾಯಕ್, ದಾವೂದ್ ಮುಂತಾದವರು ತಮ್ಮ ಗುಂಪುಗಳಿಗೆ ಹುಡುಗರನ್ನು ಸೇರಿಸಿಕೊಳ್ಳಲು ಜೈಲು ಸೂಕ್ತ ಸ್ಥಳವಾಗಿತ್ತು. ಚಾಕುವಿನಿಂದ ಇರಿಯುವ ವಿಧಾನ, ಎಲ್ಲಿ, ಹೇಗೆ, ಎಷ್ಟು ಆಳಕ್ಕೆ ಇರಿಯಬೇಕು, ಚಾಕುವಿನ ಉದ್ದ, ಅಗಲ, ಹರಿತ... ಇವೆಲ್ಲವನ್ನು ಕೈದಿಗಳು ಲಕ್ಷ್ಮಣ್‌ಗೆ ಹೇಳಿಕೊಟ್ಟರು!

ಇಲ್ಲಿ ಪಳಗಿದ ನಂತರ ಎಸಗಿದ ಅಪರಾಧಗಳಿಗೆ ಲೆಕ್ಕವಿಲ್ಲ. ಹಲ್ಲೆ, ಇರಿತ, ಧಮ್ಕಿ, ಲೂಟಿ, ಹಫ್ತಾ ವಸೂಲಿ, ನಿಯಮ ಬಾಹಿರ ವಿದ್ಯುತ್ ಸಂಪರ್ಕ, ಮಾದಕ ವಸ್ತು ಕಳ್ಳ ಸಾಗಣೆ, ಸಿನಿಮಾ ಟಿಕೆಟ್ ಬ್ಲಾಕ್ ಮಾರಾಟ... ಹೀಗೆ ಹತ್ತಾರು ಕೃತ್ಯಗಳು. ಕೊಲೆ ಹಾಗೂ ಅತ್ಯಾಚಾರ ಇವೆರಡನ್ನು ಹೊರತುಪಡಿಸಿ ಮಾಡದ ಅಪರಾಧಗಳೇ ಇಲ್ಲ. ಜೈಲಿಗೆ ಹೋಗುವುದು, ಬಿಡುಗಡೆ ಹೊಂದುವುದು ಮಾಮೂಲಿ ಆಯಿತು. ಅಪರಾಧಕ್ಕೆ ಸಂಬಂಧಿಸಿದ ಕಾನೂನುಗಳು ಹಾಗೂ ವಿವಿಧ ಸೆಕ್ಷನ್‌ಗಳು ಈತನ ನಾಲಗೆ ತುದಿಯಲ್ಲಿದ್ದವು! ಈ ಕಾನೂನುಗಳ ಬಗ್ಗೆ ಪೊಲೀಸರಿಗೇ ಅನುಮಾನ ಬಂದಾಗ ಸ್ಪಷ್ಟತೆಗಾಗಿ ಅವರು ಕೇಳುತ್ತಿದ್ದುದು ಗೋಲೆಯನ್ನೇ!

ಗಾಂಧಿ ಪಥ ನಾಟಕ

ದೇಶದ ಪ್ರಥಮ ಸ್ವಾತಂತ್ರ ಗ್ರಾಮ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರಿನಲ್ಲಿ ರಾಜ್ಯ ಸರ್ವೋದಯ ಮಂಡಳಿಯ ವಾರ್ಷಿಕ ಸರ್ವ ಸದಸ್ಯರ ಸಭೆ ನಡೆಯಿತು. ಈ ಸಂದರ್ಭದಲ್ಲಿ ಶಿವಮೊಗ್ಗದ ಸರಂತ ರಂಗತಂಡದವರು ಕಾಂತೇಶ್ ಕದರಮಂಡಲಗಿ ನಿರ್ದೇಶನದಲ್ಲಿ ಎಚ್.ಎಸ್.ಸುರೇಶ್ ರಚಿಸಿರುವ 'ಗಾಂಧಿ ಪಥ' ನಾಟಕದ ಪ್ರಥಮ ಪ್ರದರ್ಶನ ನೀಡಿದರು. ವಿಶೇಷ ಅತಿಥಿಯಾಗಿದ್ದ ಲಕ್ಷ್ಮಣ್ ಗೋಲೆ ನಾಟಕ ವೀಕ್ಷಿಸಿ ಸಂತಸಗೊಂಡು 'ಈ ನಾಟಕವನ್ನು ಮುಖ್ಯವಾಗಿ ಯುವಜನತೆ ಹಾಗೂ ಕೈದಿಗಳಿಗೆ ತೋರಿಸಬೇಕು' ಎಂದು ಅಭಿಪ್ರಾಯಪಟ್ಟರು. ನಾಟಕ ಪ್ರದರ್ಶನಕ್ಕೆ (9448414752) ಸಂಪರ್ಕಿಸಬಹುದು.

ಬಾಳೇಕರ್ ತೋರಿದ ಗಾಂಧಿ ಪಥ

ಜೈಲಿನಲ್ಲಿದ್ದ ಮತ್ತೊಬ್ಬ ಕೈದಿ ಬಾಳೇಕರ್ ಈತನಿಗೆ ಪರಿಚಯವಾದರು. ಗಾಂಧೀಜಿ ಪ್ರಭಾವಕ್ಕೊಳಗಾಗಿದ್ದ ಬಾಳೇಕರ್, ಸಹಚರರನ್ನು ಸೇರಿಸಿಕೊಂಡು ಜೈಲಿನ ಅಮಾನವೀಯ ನಿಯಮಗಳ ವಿರುದ್ಧ ಉಪವಾಸ ಸತ್ಯಾಗ್ರಹ ಶುರುಮಾಡಿದ್ದರು. ಇದು ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗಿ ಚರ್ಚೆಗೆ ಗ್ರಾಸವಾಗಿತ್ತು. ಲಖನ್, ಬಾಳೇಕರ್ ಜೊತೆ ಕೈ ಜೋಡಿಸಿದ. ಇದೇ ಸಂದರ್ಭದಲ್ಲಿ ಲಖನ್‌ಗೆ ಸಿಕ್ಕಿದ್ದು ಗಾಂಧೀಜಿ ಆತ್ಮಕಥನ 'ಸತ್ಯಾಚೆ ಪ್ರಯೋಗ್'. ಇದು ಲಖನ್ ಜೀವನದ ಪರಿವರ್ತನೆಯ ಅಮೃತ ಗಳಿಗೆ. ಚಾಕು-ಚೂರಿ ಹಿಡಿದಿರುತ್ತಿದ್ದ ಕೈಗಳಲ್ಲಿ ಗಾಂಧೀಜಿಯ ಸತ್ಯ-ಅಹಿಂಸೆಯ ಪುಸ್ತಕಗಳು!

ಅಲ್ಲಿಂದ ಆರಂಭವಾದುದು ಲಖನ್‌ನ ಪರಿವರ್ತನೆಯ ಪರ್ವ. ಮಾಂಸಾಹಾರ-ಮದ್ಯಪಾನವನ್ನು ಸಂಪೂರ್ಣ ತ್ಯಜಿಸಿದರು. ಜೈಲಿನಲ್ಲಿ ಸ್ವಯಂಪ್ರೇರಿತರಾಗಿ ಕಸಗುಡಿಸುವ ಹಾಗೂ ಶೌಚಾಲಯ ಸ್ವಚ್ಛಗೊಳಿಸುವ ಕಾಯಕದಲ್ಲಿ ತೊಡಗಿದರು.

11ನೇ ಪುಟಕ್ಕೆ...

ಕೊರಗರ ದಿಟ್ಟ ದನಿ ಸುಶೀಲಾ

ಕೊರಗರು ಹುಟ್ಟಿರುವುದೇ ಕೊರಗುವುದಕ್ಕಾಗಿ ಎನ್ನುವಂತೆ ಸಮಾಜ ಮಾಡಿದ ಗಾಯಗಳು ಇನ್ನೂ ವಾಸಿಯಾಗಿಲ್ಲ. ಆದರೆ ಇದೇ ಸಮುದಾಯದ ಸುಶೀಲಾ ಮಾತ್ರ ಧೈರ್ಯವಾಗಿ ನಿಂತು ಅನಿಷ್ಟ ಪದ್ಧತಿ ವಿರುದ್ಧ ಹೋರಾಡಿ, ಹಸನಾದ ಬದುಕಿನ ಕನಸಿಗೆ ರೆಕ್ಕೆ ಕಟ್ಟಿದ್ದಾರೆ.

ಅನಿತಾ ಪೈಲೂರು

ಸುಶೀಲಾ ನಾಡ ಬಾಲ್ಯದಲ್ಲಿ ಅನುಭವಿಸಿದ ಜಾತಿ ತಾರತಮ್ಯ ಮತ್ತು ಕಿರುಕುಳವು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಆಯೋಜಿಸಲಾಗುವ ಸಾಂಪ್ರದಾಯಿಕ ಕಂಬಳದೊಂದಿಗೆ ತಳುಕುಹಾಕಿಕೊಂಡಿದೆ. ಬಾಲ್ಯದಲ್ಲಿ ಅವರು ಕುಂದಾಪುರ ತಾಲ್ಲೂಕಿನಲ್ಲಿರುವ ನಾಡದಲ್ಲಿ ನಡೆಯುವ ವಾರ್ಷಿಕ ಕಂಬಳ ಓಟಕ್ಕೆ ತಮ್ಮ ಕುಟುಂಬದೊಂದಿಗೆ ಹೋಗುತ್ತಿದ್ದರು.

ಕರಾವಳಿಯಲ್ಲಿ ಆ ಸಮಯದಲ್ಲಿ 'ಅಜಲು' ಪದ್ಧತಿ ಚಾಲ್ತಿಯಲ್ಲಿತ್ತು. ಅಸ್ಪೃಶ್ಯತೆ ಸೇರಿ ಹಲವು ಕಟ್ಟಲೆಗಳನ್ನು ವಿಧಿಸುವ ಮೂಲಕ ಕೊರಗ ಬುಡಕಟ್ಟು ಸಮುದಾಯದವರನ್ನು ನಿಕೃಷ್ಟವಾಗಿ ನಡೆಸಿಕೊಳ್ಳುವ ಪದ್ಧತಿ ಇದಾಗಿತ್ತು.

'ಕೊರಗ ಸಮುದಾಯದವರು 'ಪನಿ ಕುಲ್ಲುನು' (ತುಳು ಭಾಷೆಯಲ್ಲಿ ಇಬ್ಬನಿಯಲ್ಲಿ ಕುಳಿತುಕೊಳ್ಳುವುದು) ಎಂಬ ಸಂಪ್ರದಾಯವನ್ನು ಆಚರಿಸಬೇಕಿತ್ತು. ಕಂಬಳಕ್ಕೂ ಮೊದಲು ಕೊರೆಯುವ ಚಳಿಯಲ್ಲಿಯೇ ಇಡೀ ರಾತ್ರಿ ಕಂಬಳದ ಗದ್ದೆಯನ್ನು ಕಾಯಬೇಕಿತ್ತು. ಕಂಬಳ ಕಾರ್ಯಕ್ರಮಗಳಲ್ಲಿ ಕೊರಗ ಸಮುದಾಯದವರು ವಂಶಪಾರಂಪರ್ಯವಾಗಿ ಈ ಕಾರ್ಯ ಮಾಡಲೇಬೇಕಿತ್ತು, ಬೇರೆ ದಾರಿಯೇ ಇರಲಿಲ್ಲ' ಎಂದು ಸುಶೀಲಾ ಆ ದಿನಗಳನ್ನು ನೆನಪಿಸಿಕೊಂಡರು.

ಕಂಬಳವು ಪ್ರತಿಷ್ಠಿತ ಸ್ಪರ್ಧೆಯಾದ್ದರಿಂದ ಕೆಸರುಗದ್ದೆಯನ್ನು ಯಾರಾದರೂ ಹಾಳು ಮಾಡಬಹುದು ಎಂಬ ಕಾರಣಕ್ಕಾಗಿ ಈ ರೀತಿ ಕಾಯುವ ವ್ಯವಸ್ಥೆ ಇತ್ತು. ಕೋಣಗಳಿಗೆ ಗದ್ದೆಯು ಸುರಕ್ಷಿತವೇ ಎಂದು ಪರಿಶೀಲಿಸಲು ಮತ್ತು ಕಂಬಳದ ಗದ್ದೆಯಲ್ಲಿ ಗಾಜಿನ ಚೂರುಗಳು ಅಥವಾ ಕಲ್ಲುಗಳು ಇವೆಯೇ ಎಂದು ಪರೀಕ್ಷಿಸಲು ಸ್ಪರ್ಧೆ ನಡೆಯುವ ಒಂದೆರಡು ತಾಸುಗಳ ಮೊದಲು ಕಂಬಳ ಗದ್ದೆಯಲ್ಲಿ ಬರಿಗಾಲಲ್ಲಿ ಕೊರಗರು ಓಡಬೇಕಿತ್ತು. 1990ರಲ್ಲಿ ಈ ಪದ್ಧತಿಯನ್ನು ಅವರ ಊರಲ್ಲಿ



ಸುಶೀಲಾ ನಾಡ

ನಿಲ್ಲಿಸಲಾಯಿತು. ಆದರೆ ಹಲವು ರೀತಿಯ 'ಅಜಲು' ಪದ್ಧತಿಗಳು ಈಗಲೂ ಚಾಲ್ತಿಯಲ್ಲಿವೆ ಎನ್ನುತ್ತಾರೆ 45 ವರ್ಷ ವಯಸ್ಸಿನ ಸುಶೀಲಾ.

ಸುಶೀಲಾ ಏಳನೇ ವಯಸ್ಸಿನಲ್ಲಿಯೇ ಇಂಥ ತಾರತಮ್ಯಗಳನ್ನು ಗಮನಿಸಲು ಆರಂಭಿಸಿದ್ದರು. 12ನೇ ವಯಸ್ಸಿನಲ್ಲಿ ಒಮ್ಮೆ ಗ್ರಾಮದ ಪ್ರಬಲ ವರ್ಗದ ವ್ಯಕ್ತಿಯೊಬ್ಬರು ಕಾಯಿ ಗೆರಟೆಯಲ್ಲಿ ಕುಡಿಯುವ ನೀರು ನೀಡಿದ್ದರು. ಇದೊಂದು ಅಸ್ಪೃಶ್ಯತೆ ಆಚರಣೆ ಎಂದು ತಿಳಿದ ಸುಶೀಲಾ ಬಾಯಾರಿದ್ದರೂ ನೀರು ಕುಡಿಯದೆ ವಾಪಸ್ ಬಂದಿದ್ದರು.

2011ರ ಜನಗಣತಿಯ ಪ್ರಕಾರ ಸುಮಾರು 16,000 ಜನಸಂಖ್ಯೆಯನ್ನು ಹೊಂದಿರುವ ಈ ಸಮುದಾಯವು ಉಡುಪಿ, ದಕ್ಷಿಣ ಕನ್ನಡ ಮತ್ತು ಕೇರಳದ ಕಾಸರಗೋಡು ಜಿಲ್ಲೆಗಳಲ್ಲಿ ಹರಡಿಕೊಂಡಿದೆ.

ಕೊರಗರನ್ನು ಅಮಾನವೀಯವಾಗಿ ನಡೆಸಿಕೊಳ್ಳುವ ಸುಮಾರು 60 'ಅಜಲು' ಪದ್ಧತಿಗಳಿವೆ. ಆದರೆ ಕರ್ನಾಟಕ ಕೊರಗರ (ಅಜಲು ಪದ್ಧತಿ ನಿಷೇಧ) ಕಾಯ್ದೆ–2000 ಜಾರಿಗೆ ಬರುವವರೆಗೂ ಇವುಗಳನ್ನು ಬಹಿರಂಗವಾಗಿ ಆಚರಿಸಲಾಗುತ್ತಿತ್ತು. ಆದರೆ ಅಜಲು ನಿಷೇಧವಾಗಿ ಎರಡೂವರೆ ದಶಕಗಳ ನಂತರವೂ ಬಹುಪಾಲು ಕೊರಗರು ಗುಲಾಮಗಿರಿ, ಸಾಮಾಜಿಕ ಪ್ರತ್ಯೇಕತೆ ಮತ್ತು ತಾರತಮ್ಯದ ಸರಪಳಿಗಳಿಂದ ಮುಕ್ತರಾಗಲು ಇನ್ನೂ ಹೆಣಗಾಡುತ್ತಿದ್ದಾರೆ.

ಒಕ್ಕೂಟ ರಚನೆ

ಕೊರಗರು ಘನತೆಯ ಜೀವನವನ್ನು ನಡೆಸಲು ಅನುವು ಮಾಡಿಕೊಡಲು 1998ರಲ್ಲಿ ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟ ಎಂಬ ರಾಜ್ಯ ಒಕ್ಕೂಟವನ್ನು ರಚಿಸಲಾಯಿತು. ಪರಿಣಾಮವಾಗಿ ಜಾತಿ ತಾರತಮ್ಯ, ಹಿಂಸಾಚಾರದ ಘಟನೆಗಳು ಗಣನೀಯವಾಗಿ ಕಡಿಮೆಯಾಗಿವೆ. ಆದರೆ ಅಜಲುಗಳನ್ನು ರಹಸ್ಯವಾಗಿ ಆಚರಿಸುವ ಹಲವು ನಿದರ್ಶನಗಳಿವೆ.

ಇತ್ತೀಚೆಗೆ ಪ್ರಬಲ ವರ್ಗದ ಕುಟುಂಬವೊಂದು ವೃದ್ಧ ಕೊರಗ ದಂಪತಿಯನ್ನು ಪಂಚಮ ದಾನ ಮಾಡುವಂತೆ ಒತ್ತಾಯಿಸಿತ್ತು. ಪ್ರಬಲ ವರ್ಗದ ಕುಟುಂಬಗಳಲ್ಲಿ ಯಾರಾದರೂ ಅನಾರೋಗ್ಯದಿಂದ ಬಳಲುತ್ತಿದ್ದರೆ, ಅವರ ಕೂದಲು ಮತ್ತು ಉಗುರುಗಳನ್ನು ಆಹಾರದೊಂದಿಗೆ ಬೆರೆಸಿ ಅದನ್ನು ಕೊರಗ ವ್ಯಕ್ತಿಗೆ ನೀಡಲಾಗುತ್ತದೆ. ಹೀಗೆ ಮಾಡುವುದರಿಂದ ರೋಗದಿಂದ ಗುಣಮುಖರಾಗುತ್ತಾರೆ ಎಂಬ ನಂಬಿಕೆ ಇದೆ. ಈ ಅನಿಷ್ಟ ಪದ್ಧತಿಗೆ ಕೊನೆ ಹಾಡಲು ದಿನವೂ ಹೋರಾಟ ನಡೆಸುತ್ತಿದ್ದೇವೆ ಎನ್ನುತ್ತಾರೆ ಸುಶೀಲಾ.

ತಮ್ಮ ಹಳ್ಳಿಯಲ್ಲಿ ಕೈಯಿಂದ ಮಲಗುಂಡಿ ಸ್ವಚ್ಛ ಮಾಡುವ ಪದ್ಧತಿ ವಿರುದ್ಧ ಏಕಾಂಗಿಯಾಗಿ ಹೋರಾಟ ನಡೆಸಿ ಈ ಅಮಾನವೀಯ ಪದ್ಧತಿಗೆ ಕೊನೆ ಹಾಡಿದರು. ದಶಕದ ಹಿಂದೆ, ತನ್ನ ಕುಟುಂಬದ ಸದಸ್ಯರು ಶ್ರೀಮಂತ ಕುಟುಂಬದ ಮನೆಯ ಮಲಗುಂಡಿ ಸ್ವಚ್ಛತೆಯಲ್ಲಿ ತೊಡಗಿದ್ದರು ಎಂದು ಕೇಳಿದ ಸುಶೀಲಾ ಪೊಲೀಸರಿಗೆ ದೂರು ನೀಡಿದರು. ಈ ಪ್ರಕರಣವು ಮುಚ್ಚಿಹೋಗಿದ್ದರೂ, ಒಳಚರಂಡಿ, ಶೌಚಗುಂಡಿಗಳ ಸ್ವಚ್ಛತೆಗೆ ಪಂಚಾಯಿತಿಯು ಯಂತ್ರಗಳನ್ನು ಖರೀದಿಸುವವರೆಗೂ ಪಟ್ಟು ಹಿಡಿದು ಸಾಧಿಸಿದರು.

1994ರಲ್ಲಿ ಕೊರಗ ಸಮುದಾಯದ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳ ಅಧ್ಯಯನಕ್ಕಾಗಿ ರಚನೆಯಾದ ಮಹಮ್ಮದ್ ಪೀರ್ ಸಮಿತಿಯು ಪ್ರತಿ ಕುಟುಂಬಕ್ಕೆ 2.5 ಎಕರೆ ಮಂಜೂರು ಮಾಡಲು ಶಿಫಾರಸು ಮಾಡಿತ್ತು. ಶಿಫಾರಸು ಮಾಡಿ ಮೂರು ದಶಕಗಳು ಕಳೆದರೂ ಭೂಮಿಯ ಹಕ್ಕು ವಿವಾದಾಸ್ಪದವಾಗಿಯೇ ಉಳಿದಿದೆ. ಸುಶೀಲಾ ಅವರ ನಿರಂತರ ಹೋರಾಟಕ್ಕೆ ಇದೂ ಪ್ರಮುಖ ಕಾರಣವಾಗಿದೆ. 'ಉಡುಪಿ ಜಿಲ್ಲೆಯಲ್ಲಿ ಮಂಜೂರಾದ 400 ಎಕರೆ ಜಮೀನಿನ ಪೈಕಿ 100 ಎಕರೆ ಮಾತ್ರ ಕೃಷಿಗೆ ಯೋಗ್ಯವಾಗಿದೆ. ಹಲವು ಪ್ರದೇಶಗಳಲ್ಲಿ ಭೂಮಿ ವಾಸಕ್ಕೂ ಯೋಗ್ಯವಾಗಿಲ್ಲ' ಎಂದು ಅವರು ಹೇಳುತ್ತಾರೆ.

ಮೂಲ್ಕಿ ತಾಲ್ಲೂಕಿನಲ್ಲಿ 30 ಕುಟುಂಬಗಳಿಗೆ ಮಂಜೂರಾಗಿದ್ದ ಜಮೀನು ಭೂಕುಸಿತ ಪೀಡಿತ ಪ್ರದೇಶದಲ್ಲಿತ್ತು. ಪರ್ಯಾಯ ಜಮೀನು ಮಂಜೂರು ಮಾಡುವಂತೆ ಜಿಲ್ಲಾಡಳಿತಕ್ಕೆ ಹಲವು ಬಾರಿ ಮನವಿ ಮಾಡಿದರೂ ಫಲ ಸಿಗದ ಕಾರಣ ಸುಶೀಲಾ ಮತ್ತು ಅವರ ತಂಡ ಸರ್ಕಾರಿ ಭೂಮಿಯನ್ನು ಸಾಂಕೇತಿಕವಾಗಿ ಒತ್ತುವರಿ ಮಾಡಿತ್ತು.


11ನೇ ಪುಟಕ್ಕೆ...

‘ಕಣ್ಣಂತೆ ಕಾಣ್ಕೆಯಯ್!’ಗೆ ಅನ್ವರ್ಥ ‘ದಶಾನನ ಸ್ವಪ್ನಸಿದ್ಧಿ’

ಜ.ನಾ.ತೇಜಶ್ರೀ

ಕುವೆಂಪು ಅವರ ‘ಶ್ರೀರಾಮಾಯಣ ದರ್ಶನಂ’ ಮಹಾಕಾವ್ಯದ ಅಧ್ಯಾಯಗಳಲ್ಲಿ ಒಂದಾದ ‘ದಶಾನನ ಸ್ವಪ್ನಸಿದ್ಧಿ’ಯು ಕನ್ನಡದಲ್ಲಿ ಮಾಂತ್ರಿಕ ವಾಸ್ತವವಾದದ ಮೊದಲ ಮಾದರಿ. ವಾಸ್ತವತೆ ಮತ್ತು ಭ್ರಾಮಕ ಕಲ್ಪನೆಗಳ ಸಂಯೋಜನೆಯ ಹೆಣಿಗೆ ಇಲ್ಲಿದೆ: ರಾಮನ ತಪಸ್ಸಿನ ಶಕ್ತಿಯ ಅಗ್ನಿಜ್ವಾಲೆಯಲ್ಲಿ ರಾವಣನ ಮೂಲಬಲದ ಬಹುಭಾಗ ನಿರ್ನಾಮವಾಗಿದೆ. ಅವನು ದುರ್ಗಿಯನ್ನು ತಣಿಸಿ ಶತ್ರುನಾಶಕ ವರ ಪಡೆಯುವ ಸಂಕಲ್ಪದಿಂದ ತಪಸ್ಸು ಮಾಡುತ್ತಾನೆ. ರಾವಣನ ಅಭೀಪ್ಸೆಯನ್ನು ನೆರವೇರಿಸದಂತೆ ಕಾಳಿಯನ್ನು ಇತರೆ ದೇವತೆಗಳು ತಡೆಹಿಡಿಯುತ್ತಾರೆ. ಹತಾಶನಾದ ರಾವಣ ತನ್ನ ತಲೆಗಳನ್ನು ದೇವಿಗೆ ನಿವೇದಿಸುವ ನಿರ್ಣಯ ಮಾಡಿದಾಗ ಶಿಲಾಮೂರ್ತಿ ಕಂಪಿಸತೊಡಗುತ್ತದೆ. ಆಗ ರಾವಣನು ಸ್ವಪ್ನಸಮಾಧಿಯನ್ನು ತಲುಪುತ್ತಾನೆ. ಅಲ್ಲಿ ಅವನಿಗೆ ಕಾಣಿಸುವ ಧ್ಯಾನಮಾಲಿನಿ ಮತ್ತು ಲಂಕಾಲಕ್ಷ್ಮಿಯರ ದೈನ್ಯಸ್ಥಿತಿಯು ರಾವಣನನ್ನು ಪಶ್ಚಾತ್ತಾಪಕ್ಕೆ ದೂಡುತ್ತದೆ. ಅವನು ರಾಮನೊಡನೆ ಏಕಾಂಗಿಯಾಗಿ ಯುದ್ಧ ಮಾಡಲು ತೀರ್ಮಾನಿಸಿದಾಗ ದುರ್ಗಾದೇವಿಯು ಪ್ರತ್ಯಕ್ಷಳಾಗಿ ‘ಮರುಹುಟ್ಟಿ’ನಲ್ಲಿ ರಾವಣನು ರಾಮನನ್ನು ಸೋಲಿಸುವ ಮತ್ತು ಸೀತೆಯು ಅವನಿಗೆ ವಶವಾಗುವ ಭರವಸೆ ಕೊಡುತ್ತಾಳೆ. ದೇವಿಯು ಮಾಯವಾದ ಬಳಿಕ ಪರಿಶುದ್ಧನಾಗುವ ಅವನಿಗೆ ಒಂದು ನೋಟ ಕಾಣುತ್ತದೆ. ಅದರಲ್ಲಿ ಅವನು ದೋಣಿಯನ್ನೇರುತ್ತಾನೆ. ಅಲೆಯೆದ್ದು ದೋಣಿ ಮಗುಚಿ ಅವನು ಪ್ರವಾಹದಲ್ಲಿ ಮುಳುಗಿ ಮೇಲೇಳುವಾಗ ಕುಂಭಕರ್ಣ ಕಾಣುತ್ತಾನೆ. ಇಬ್ಬರೂ ಹೋಳಿಯೊಡನೆ ಹೋರಾಡಿ, ಶಿಖರೋಪವನ್ನು ತಳದು ದಡ ಸೇರುತ್ತಾರೆ. ಅಲ್ಲೊಂದು ಆಶ್ರಮ. ಶಿಖರೋಪದ ರಾವಣ, ಕುಂಭಕರ್ಣರು ಅಳುತ್ತಿದ್ದಾರೆ. ಸೀತೆ ಬಂದು ತನ್ನ ಆ ಅವಳಿ ಮಕ್ಕಳನ್ನೆತ್ತಿಕೊಂಡು ಮುದ್ದಾಡಿ ಮೊಲೆಯೂಡುತ್ತಾಳೆ. ಈ ಸ್ವಪ್ನದೃಶ್ಯಕ್ಕೆ ವಿಸ್ಮಿತನಾಗಿ ಎಚ್ಚರಗೊಂಡಾಗ ರಾವಣ ಮಂಡೋದರಿಯ ತೊಡೆಯ ಮೇಲಿದ್ದಾನೆ. ಅವನನ್ನು ಸಂತೈಸುವ ಮಂಡೋದರಿಯು ರಾವಣನನ್ನು ಸೀತೆಗೊಪ್ಪಿಸುವಂತೆ ಹೇಳುತ್ತಾಳೆ. ಕಾಳಗದಲ್ಲಿ ರಾಮನನ್ನು ಸೋಲಿಸಿ, ತನ್ನನ್ನು ಗೆದ್ದ ಸೀತೆಗೆ ರಾಮನನ್ನು ಗೆದ್ದು ಕಪ್ಪ ಸಲ್ಲಿಸುತ್ತೇನೆ ಅನ್ನುತ್ತಾನೆ ರಾವಣ.





ನಾಟಕದ ದೃಶ್ಯ

> ಇತ್ತೀಚೆಗೆ ಜರುಗಿದ ರಾಷ್ಟ್ರೀಯ ರಂಗಭೂಮಿ ಪ್ರಶಸ್ತಿ ಸಮಾರಂಭದಲ್ಲಿ ದಕ್ಷಿಣ ಭಾರತದಿಂದ ಪ್ರಶಸ್ತಿ ಪಡೆದ ಏಕೈಕ ನಾಟಕ ಮಂಜು ಕೊಡಗು ನಿರ್ದೇಶನದ ದಶಾನನ ಸ್ವಪ್ನಸಿದ್ಧಿ.

ಕನಸು-ವಾಸ್ತವಗಳ ಈ ಸಂಕೀರ್ಣ ಎಳೆಯನ್ನು ರಂಗದ ಮೇಲೆ ಅದೇ ಸಂಕೀರ್ಣತೆಯಲ್ಲಿ ತಂದಿರುವವರು ನಿರ್ದೇಶಕ ಮಂಜು ಕೊಡಗು. ‘ರಂಗಭೂಮಿಯು ಸಿನಿಮಾ, ಸೀರಿಯಲ್ ಮೋಡ್‌ಗೆ ಹೋಗುತ್ತಿದೆಯೇನೋ ಅನ್ನಿಸುತ್ತಿದ್ದಾಗ ಇದಕ್ಕೊಂದು ದಾರಿಯಾಗಿ ಕಂಡಿದ್ದು ‘ದಶಾನನ ಸ್ವಪ್ನಸಿದ್ಧಿ’. ಕಡಿಮೆ ಸ್ಥಳಾವಕಾಶದಲ್ಲಿ, ಕೆಲವೇ ಕಲಾವಿದರೊಟ್ಟಿಗೆ, ಈಗಿರುವುದಕ್ಕಿಂತ ಭಿನ್ನ ರಂಗ ಮಾದರಿಯೊಂದನ್ನು ಸೃಷ್ಟಿಸಲು ಸಾಧ್ಯವಾ? ಅಂತ ಪ್ರಯತ್ನ ಮಾಡಿದೆವು. ಕಾವ್ಯದ ಮೊತೆ ಕೆಲಸ ಮಾಡುವಾಗ ಸೃಜನಶೀಲತೆಯ ಸಾಧ್ಯತೆ ಹೆಚ್ಚಿರುತ್ತದೆ. ಭಾವ ವಿಸ್ತಾರ, ದೇಹ ಚಲನೆಯ ವಿಸ್ತಾರದ ಮೂಲಕ ಮಾತನ್ನು ಮೀರಿದ ಮತ್ತೇನನ್ನೋ ತೋರಿಸಲು ಸಾಧ್ಯವಿದೆಯೇ ಅಂತ ಸತತವಾಗಿ ಯೋಚಿಸುತ್ತ ಇದು ಮೂಡಿಬಂತು...’ ಎನ್ನುತ್ತಾರೆ ನಿರ್ದೇಶಕ ಮಂಜು ಕೊಡಗು.

ದ್ರಾವಿಡ ಕ್ರಿಯಾವಿಧಿಯಲ್ಲಿ ಬಳಸುವ ತಮಟೆ ಪದ್ಯವನ್ನು ನಾಟಕದ ಆರಂಭದಲ್ಲಿ ಬಳಸಿಕೊಂಡಿರುವುದು ಪರಂಪರಾಗತ ವೇದ ಶ್ಲೋಕ ಪಠಣದ ರೂಢಿಯನ್ನು ಮುರಿದಿದೆ. ರಾವಣ ಪಾತ್ರಧಾರಿ ಅನಿಕೇತ್ ರೈ ಮಂತ್ರಪಠಣವನ್ನು ಉಚ್ಚರಿಸುವ ಪರಿಯಲ್ಲಿ ನಟ, ಮಾತು ಮತ್ತು ಚಲನೆಯ ಈ ಪಠಣದಿಂದಲೇ ಹುಟ್ಟಿದೆಯೇನೋ ಅನ್ನಿಸುವಷ್ಟು ತೀವ್ರವಾಗಿ ನೋಡುಗರನ್ನು ಸೆಳೆದು, ನಾಟಕದ ನೋಡುವಿಕೆಗೆ ಸಿದ್ಧಗೊಳಿಸುತ್ತದೆ. ಜಾಗೃತ-ಸ್ವಪ್ನದ ಐದು ಅವಸ್ಥೆಗಳನ್ನು ತೋರಿಸಲು ಭಿನ್ನ ನೃತ್ಯಪ್ರಕಾರಗಳನ್ನು ಬಳಸಿಕೊಳ್ಳಲಾಗಿದೆ. ಕಾಳಿ, ಲಂಕಿಣಿ, ದುರ್ಗೆ, ಸೀತೆ ಮತ್ತು ಮಂಡೋದರಿ- ಈ ಐದೂ ಪಾತ್ರಗಳನ್ನು ಅದ್ಭುತವಾಗಿ ನಿಭಾಯಿಸಿರುವ ಶ್ವೇತಾ ಅರೆಹೊಳೆಯವರು. ರಾವಣ, ಕುಂಭಕರ್ಣರು ಸೀತೆಯ ಮಗುವಾಗಿ ಮೊಲೆಹಾಲು ಕುಡಿಯುವ ದೃಶ್ಯವು ಎಲ್ಲ ಮೀರಿದ ಧ್ವನಿಪೂರ್ಣವಾಗಿ ಮೂಡಿ, ವಾತ್ಸಲ್ಯವು ಭಕ್ತಿಯಾಗಿ ಪರಿವರ್ತನೆಯಾಗುವ ಸೋಜಿಗವನ್ನು ನೋಡಿದವರಿಗೆ ‘ಇವರಿಬ್ಬರ ಮಾತಿನ ಧ್ವನಿಯ ಅರಿವಾಗುತ್ತದೆ.

‘ಇತ್ತೀಚೆಗೆ ಜರುಗಿದ ರಾಷ್ಟ್ರೀಯ ರಂಗಭೂಮಿ ಪ್ರಶಸ್ತಿ ಸಮಾರಂಭದಲ್ಲಿ ಈ ನಾಟಕದ ವಸ್ತ್ರವಿನ್ಯಾಸಕಿ ರಾಜೇಶ್ವರಿ ಕೊಡಗು ‘ಅತ್ಯುತ್ತಮ ವಸ್ತ್ರವಿನ್ಯಾಸ’ ಪ್ರಶಸ್ತಿಯನ್ನು ಪಡೆದಿದ್ದಾರೆ. ದೇಶದಾದ್ಯಂತ ಬಂದ 367 ನಾಟಕಗಳ ಪೈಕಿ ಈ ನಾಟಕವು ಅತ್ಯುತ್ತಮ ಹತ್ತು ನಾಟಕಗಳಲ್ಲಿ ಒಂದಾಗಿ ಆಯ್ಕೆಯಾಗಿತ್ತು. ಐದು ವಿಭಾಗದಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದ ಇದು, ದಕ್ಷಿಣ ಭಾರತದಿಂದ ಆಯ್ಕೆಯಾಗಿದ್ದ ಐದು ನಾಟಕಗಳಲ್ಲಿ ಪ್ರಶಸ್ತಿ ಪಡೆದ ಏಕೈಕ ನಾಟಕ. ನಾಟಕದ ಸಂಗೀತವನ್ನು ಅರುಣ್‌ಕುಮಾರ್, ಭರತ್, ಸುಮಿಥ್ ಕಶ್ಯಪ್, ಬೆಳಕು ವಿನ್ಯಾಸವನ್ನು ಮಂಜು ಹಿರೇಮಠ ನಿರ್ವಹಿಸಿದ್ದಾರೆ. ರಂಗದ ಮೇಲೆ ಚೈತ್ರಾ ಕೋಟ್ಯಾನ್ ಮತ್ತು ಚರಿತ್ ಸುವರ್ಣ ಕೂಡ ಇದ್ದಾರೆ.

‘ಶ್ರೀರಾಮಾಯಣ ದರ್ಶನಂ’ ಮಹಾಕಾವ್ಯದಲ್ಲಿ ಲೌಕಿಕ-ಅಲೌಕಿಕದ ಸಂಯೋಗವು ಉತ್ತಮ ಸ್ಥಿತಿಯಲ್ಲಿ ಕಾಣಿಸುವುದು ‘ದಶಾನನ ಸ್ವಪ್ನಸಿದ್ಧಿ’ ಭಾಗದಲ್ಲಿ. ಇದನ್ನು ರಂಗಪ್ರಯೋಗಿಸಿ ರಂಗಭೂಮಿಯ ಸಾಧ್ಯತೆಗಳನ್ನು ನಾಟಕ ತಂದಿದ್ದು ವಿಸ್ತರಿಸಿದೆ. ಈ ಬಗೆಯ ಪ್ರಯೋಗಗಳು ಕಾವ್ಯವನ್ನು ಮನಸ್ಸಿಗೆ ಹತ್ತಿರವಾಗಿಸುತ್ತವೆ. ಕಾವ್ಯಗ್ರಹಿಕೆಯ ಹೊಸಕಿಂಡಿಗಳನ್ನೂ ಈ ನಾಟಕವು ತೆರೆದಿದ್ದು, ಕುವೆಂಪು ಹೇಳುವ ‘ಕಣ್ಣಂತೆ ಕಾಣ್ಕೆಯಯ್!’ ಮಾತಿಗೆ ಅನ್ವರ್ಥವಾಗಿದೆ.

ಬೆದರಿದ ಕಾಡಿಗೆ...

10ನೇ ಪುಟದಿಂದ...

ಅದೇ ರೀತಿ ಕರ ಒಕ್ಕಲಿಗರು ಪೂಜಿಸುವ ಬಿಳಿ ದೂಪದ ದೇವ ವೃಕ್ಷ, ಬಿಳಿಗಿರಿರಂಗ ಬೆಟ್ಟದ ಸೋಲಿಗರು ಆರಾಧಿಸುವ ದೊಡ್ಡ ಸಂಪಿಗೆ, ಶಿರಸಿಯ ಸಮೀಪವಿರುವ ‘ಮುಗಲು ಕಪ್ಪು ಕಾನು’ ಎಂಬ ಜಾಗದಲ್ಲಿ ಸುಮಾರು 400ಕ್ಕೂ ಮಿಕ್ಕ ಆಣಧಗಾತ್ರದ ಅಪರೂಪದ ಅಶೋಕ ಮರಗಳಿರುವ ವನ, ಕೌತುಕ ಮೂಡಿಸುತ್ತದೆ. ಇಲ್ಲಿಂದಲೇ ಅಶೋಕ ಸಾಮ್ರಾಟನ ಮಗನ ಪಟ್ಟಾಭಿಷೇಕಕ್ಕೆ ಸಾವಿರ ಸಂಖ್ಯೆಯ ಬೌದ್ಧಭಿಕ್ಕುಗಳು ಈಗಿನ ಶ್ರೀಲಂಕಾಗೆ ಭೇಟಿ ನೀಡಿದ್ದು, ಅಶೋಕ ವೃಕ್ಷದ ಬೀಜಗಳನ್ನು ತೆಗೆದುಕೊಂಡು ಹೋಗಿದ್ದರು ಎಂದು ಚರಿತ್ರೆ ತಿಳಿಸುತ್ತದೆ.

‘ಇಂದಿಗೂ ಸಹ ಕಾಡು ರಾಷ್ಟ್ರದ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ನಮ್ಮ ದೇಶದ ಒಟ್ಟು ಉತ್ಪನ್ನದ ಮಾಣದಂಡವಾದ ಜಿಡಿಪಿಯ ಶೇಕಡ ಎಂಟರಷ್ಟು ಕಾಡಿನಿಂದಲೇ ದೊರೆಯುವಂತಹದು.

ನಮ್ಮ ದೇಶದ ಮೂಲ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುವ ಒಟ್ಟು ಸಂಪತ್ತನ್ನು ಕಾಡು ಪ್ರತಿ ವರ್ಷ ಸೃಷ್ಟಿಸುತ್ತದೆ. ಕಾಡು ನಮಗೆ ಪರೋಕ್ಷವಾಗಿ ನೀಡುವ ವಾತಾವರಣ ಅನುಕೂಲಗಳು ಸಾಕಷ್ಟಿವೆ. ಜೀವ ಪರಿಸರಕ್ಕೆ, ಜೀವವೈವಿಧ್ಯ ಸಂರಕ್ಷಣೆಗೆ ಕಾಡು ಎಷ್ಟು ಮುಖ್ಯವೋ ದೇಶದ ಆರ್ಥಿಕ ಸಮೃದ್ಧತೆಗೂ ಅಷ್ಟೇ ಮುಖ್ಯ.

ಆದರೆ ಇಂದು ಪ್ರಕೃತಿ ನಿರ್ಮಿತ ಕಾಡು ಬೆದರಿ ನಿಂತಿದೆ. ವೃಕ್ಷ ಸಂಪನ್ಮೂಲಗಳ ಮೇಲಿನ ಹುಖಿನ ಗರಗಸ ಮೈಲುಗಟ್ಟಲೆ ಅರಣ್ಯಗಳಲ್ಲಿ ಬೆಳೆದು ನಿಂತ ಬೃಹತ್ ವೃಕ್ಷಗಳನ್ನು ಸರಸರ ಧರೆಗೆ ಉರುಳಿಸುತ್ತಿದೆ. ಕಾಡಿನ ಬೆಂಕಿಯ ಕೆನ್ನಾಲಿಗೆ ಶತಮಾನಗಳ ಬೆಳವಣಿಗೆಯನ್ನು ಕ್ಷಣಾರ್ಧದಲ್ಲಿ ಬೂದಿಯಾಗಿಸುತ್ತಿದೆ. ನಾಗರಿಕತೆಯ ‘ಅಮಲು’ ಕೊಡುಗೆ’ಗಳಲ್ಲಿ ಒಂದಾದ ಜಾಗತಿಕ ವಾತಾವರಣ ಬದಲಾವಣೆಯು ಹಿಂದೆ ಎಂದೂ ಕಂಡರಿಯದ ಪೀಡೆಗಳನ್ನು ಸೃಷ್ಟಿಸಿ ಕಾಡನ್ನು ವಿನಾಶದ ಅಂಚಿಗೆ ನೂಕುತ್ತಿದೆ.

ನಮ್ಮ ರಾಜ್ಯದಲ್ಲಿಯೂ ಇಂತಹ ಅನಾಹುತಗಳು ಸಂಭವಿಸುತ್ತಿರುವ ಕುರುಹು ಸಿಕ್ಕಿದೆ. ಉಳ್ಳಾಪುರದ ಭಗವತಿ ಕಾಡಿನಲ್ಲಿ ಒಣಗುತ್ತಿರುವ ಮತ್ತಿಮರಗಳು, ಇತ್ತೀಚೆಗೆ ಶಿರಸಿಯ ಹತ್ತಿರವಿರುವ ಭೈರುಂಬೆ ಗ್ರಾಮದಲ್ಲಿ ಕೀಟಗಳ ದಾಳಿಗೆ ನಲುಗಿ ಸತ್ತ ನೂರಾರು ಭಾರಿ ಗಾತ್ರದ ಜಾಲರಿ ಮರಗಳು, ಕ್ಯಾಸಲ್ ರಾಕ್ ಕಾಡಲ್ಲಿ ಒಣಗುತ್ತಿರುವ ವನ್ಯ ಜಾಯಿಕಾಯಿ ಮರಗಳು ಈ ಬಗೆಯ ವೃಕ್ಷಗಳ ಸಾಮೂಹಿಕ ಸಾವಿನ ಮುನ್ಸೂಚನೆ ನೀಡುತ್ತಿವೆ. ಸಾವಿರಾರು ವರ್ಷಗಳಿಂದ ಪರಿಸರ ಸಮತೋಲನ ಕಾಯ್ದುಕೊಂಡು ಬಂದ ಈ ಕಾಡು ಒಮ್ಮೆಲೇ ಬರಡಾದರೆ ನದಿಗಳಿಗೆ ಜೀವನಾಡಿಯಾದ ಜಲಮೂಲಗಳು ಬತ್ತುತ್ತವೆ. ವಿನಾಶದ ಹಾದಿಯಲ್ಲಿರುವ ಕಾಡನ್ನು ಪುನಶ್ಚೇತನ ಗೊಳಿಸುವುದು ಈಗ ತುರ್ತಾಗಿ ಆಗಬೇಕಾದ ಕೆಲಸ.

ಬಹುಶಃ ನೈಜ ಕಾಡಿನ ಅದ್ಭುತ ಶಕ್ತಿ ಎಂದರೆ ಸ್ವಯಂ ನವೀಕರಣ. ಯಾವುದೇ ನೈಸರ್ಗಿಕ ಕಾಡನ್ನು ಹಾನಿಯಾದ ನಂತರವೂ ಅದರ ತಂಟೆಗೆ ಹೋಗದೆ ದೀರ್ಘಕಾಲದವರೆಗೆ ಹಾಗೆಯೇ ಬಿಟ್ಟರೆ ಅದು ತನ್ನನ್ನು ತಾನು ಗುಣಪಡಿಸಿಕೊಳ್ಳುತ್ತದೆ. ದಶಕಗಳಿಂದ ಮಣ್ಣಿನಲ್ಲಿ ಸುಪ್ತವಾಗಿರುವ ಬೀಜಗಳು ಇದ್ದಕ್ಕಿದ್ದಂತೆ ಮೊಳಕೆ ಒಡೆಯುತ್ತವೆ. ಪಕ್ಷಿಗಳು ಪ್ರಾಣಿಗಳು ಹಿಂತಿರುಗುತ್ತವೆ. ನೆರಳು ಪ್ರದೇಶಗಳಿಂದ ವೀಚಿಗಳನ್ನು ಹೊತ್ತು ತಂದು ಪುನರುತ್ಪತ್ತಿಗೆ ಸಹಾಯ ಮಾಡುತ್ತವೆ. ಯಾವುದೇ ಕೃತಕ ನಿಲುವಳಿಕೆಗಳಿಲ್ಲದೆ ಅಥವಾ ಬಾಹ್ಯ ಮಾರ್ಗದರ್ಶನವಾಗಲಿ ಇಲ್ಲದೆ ಕಾಡು ತನ್ನದೇ ಆದ ಪುನರುತ್ಪಾದನೆಯನ್ನು ನಿಖರವಾಗಿ ಸಂಯೋಜಿಸಿಕೊಳ್ಳುತ್ತದೆ. ಈ ಪ್ರಕ್ರಿಯೆಯನ್ನು ವಿಜ್ಞಾನಿಗಳು ‘ಐನ್ನೂ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವಲ್ಲಿ ವಿಫಲರಾಗಿದ್ದಾರೆ.



ಹನಿ ಬ್ಯಾಡ್ಜರ್

ಈ ಸ್ವಯಂ ಸಂಪ್ರಕಟನಾ ಗುಣವು ನೈಸರ್ಗಿಕ ಕಾಡು ಮತ್ತು ಕೃತಕ ಕಾಡುಗಳ ನಡುವಿನ ಮೂಲಭೂತ ವ್ಯತ್ಯಾಸವನ್ನು ತೋರಿಸುತ್ತದೆ. ಮಾನವನಿಗೆ ನೈಸರ್ಗಿಕ ಕಾಡನ್ನು ಕೃತಕವಾಗಿ ರೂಪಿಸಲು ಸಾಧ್ಯವಿಲ್ಲದಿದ್ದರೂ ಕನಿಷ್ಠ ಯಾವುದೇ ಹಸ್ತಕ್ಷೇಪ ಮಾಡದೆ ಅದ್ಭುತ ನೈಸರ್ಗಿಕ ಚಕ್ರಗಳಿಗೆ ಅಡ್ಡಿಪಡಿಸದೆ ನೈಸರ್ಗಿಕ ಪುನರುತ್ಪಾದನೆಗೆ ಸಹಾಯ ಮಾಡುವುದೇ ಮೇಲೆಂದು ತಿಳಿಯುವುದು ಲೇಸು. ವಿಶ್ವದಾದ್ಯಂತ ಅತ್ಯಂತ ಯಶಸ್ವಿ ಅರಣ್ಯ ಪುನರುಜ್ಜೀವನ ಯೋಜನೆಗಳು ಈ ವಾಸ್ತವವನ್ನು ಒಪ್ಪಿಕೊಳ್ಳುತ್ತವೆ. ನೈಸರ್ಗಿಕ ಪುನರುತ್ಪಾದನೆಗೆ ಇರುವ ಅಡೆತಡೆಗಳನ್ನು ತೆಗೆದುಹಾಕುವುದು, ವಿನಾಶಕಾರಿಯಾದ ಪ್ರಮುಖ ಅಧಾರ ಪ್ರಭೇದಗಳನ್ನು ಕಾಡು ಪ್ರದೇಶಕ್ಕೆ ಮರುಪರಿಚಯಿಸುವುದು, ಮತ್ತು ನಂತರ ಪ್ರಕೃತಿಯ ಪ್ರಕ್ರಿಯೆಗಳು ಪುನರಾರಂಭಗೊಳ್ಳಲು ಸಹಾಯ ಮಾಡುವುದೇ ಇಂದಿನ ಜಾಗತಿಕ ಕಾಡು ಸಂರಕ್ಷಣೆಯ ಗುರಿ.

ಭೂಗತ ಪಾತಕಿ ...

10ನೇ ಪುಟದಿಂದ...

ರೌಡಿಗಳಿಗೆ ಆಗತ್ತವೆಂದು ತಿಳಿದಿದ್ದ ಗಡ್ಡಮೀಸೆ ತೆಗೆಸಿದರು. ಸರ್ವಧರ್ಮ ಪ್ರಾರ್ಥನೆ, ಯೋಗಾಭ್ಯಾಸವನ್ನು ಆರಂಭಿಸಿದರು. ಇವೆಲ್ಲಾ ಬಾಹ್ಯದ ಬದಲಾವಣೆಗಳಾದರೆ, ಅಂತರಂಗದಲ್ಲಾಗಿ ಸಮಚಿತ್ತ ಕಾಪಾಡುವ ಪ್ರಯತ್ನ ನಡೆಸಿದರು. ಮಾತು ಕಡಿಮೆ ಮಾಡಿ ಓದು ಹಾಗೂ ಧ್ಯಾನದಲ್ಲಿ ಗಮನ ಹರಿಸತೊಡಗಿದರು. ತಮಗೇ ಅಚ್ಚರಿ ಎನ್ನುವಂತೆ ಶಾಂತಚಿತ್ತರಾದರು. ಎಲ್ಲವನ್ನು ನಗುನಗುತ್ತಲೇ ಸ್ವೀಕರಿಸತೊಡಗಿದರು. ಈ ಬದಲಾವಣೆಯಿಂದ ಜೈಲು ಅಧಿಕಾರಿಗಳಿಗೆ ಲಖನ್ ಬಗ್ಗೆ ಒಂದಡೆ ಅನುಮಾನವಾದರೆ ಮತ್ತೊಂದೆಡೆ ಅಚ್ಚರಿ.

ಜೂನ್ 8, 2006 ಲಖನ್ ಜೀವನದಲ್ಲಿ ನಿರ್ಣಾಯಕ ದಿನ. ಅವರ ಮೇಲಿದ್ದುದು ಒಟ್ಟು 19 ಆರೋಪಗಳು. ನ್ಯಾಯಾಧೀಶರಿಗೆ ಕೈಮುಗಿದು ತನ್ನೆಲ್ಲಾ ತಪ್ಪುಗಳನ್ನು ಒಪ್ಪಿಕೊಂಡು ಯಾವುದೇ ಶಿಕ್ಷೆಗೆ ತಯಾರಿದ್ದೇನೆ ಎಂದು ನಿವೇದಿಸಿಕೊಂಡರು. ‘ಹೊಡೆಯಲು, ಬಡಿಯಲು, ಹೊಡಿಸಿಕೊಳ್ಳಲು, ಚೂರಿ ಹಾಕಲು ನನಗೆ ಧೈರ್ಯದ ಅಗತ್ಯ ಇರಲಿಲ್ಲ. ಆದರೆ ನ್ಯಾಯಾಧೀಶರ ಮುಂದೆ ಸತ್ಯ ನುಡಿಯಲು, ತಪ್ಪು ಒಪ್ಪಿಕೊಳ್ಳಲು ಅಪಾರವಾದ ಧೈರ್ಯಬೇಕು’ ಎಂದರು.

ಲಖನ್ ಸನ್ನಡತೆ ಹಾಗೂ ತಪ್ಪೊಪ್ಪಿಗೆಗಾಗಿ ಏಳು ವರ್ಷಗಳ ಸಜೆಯನ್ನು ನಾಲ್ಕು ವರ್ಷಗಳಿಗೆ ಇಳಿಸಲಾಯಿತು. ನಾಸಿಕ್ ಜೈಲಿನಲ್ಲಿ ತನ್ನ ಸಹಚರರ ಮನಪರಿವರ್ತನೆಯಲ್ಲಿ ಮಹತ್ವದ ಪಾತ್ರ ವಹಿಸಿದರು. ಮುಂಬೈನ ಸರ್ವೋದಯ ಮಂಡಳಿಯ ಸಹಾಯದಿಂದ ಗಾಂಧಿ ಸಾಹಿತ್ಯ ಪಡೆದು ಅವರಿಗೆಲ್ಲ ಪರಿಚಯಿಸಿ ಅವರಲ್ಲಿ ಹಲವರ ಮನಪರಿವರ್ತನೆ ಮಾಡಿದರು. ಇವರ ಸನ್ನಡತೆ ಹಾಗೂ ಕೈದಿಗಳ ಮನಪರಿವರ್ತನೆ ಕಾರ್ಯಗಳಿಗಾಗಿ ಶಿಕ್ಷೆ ಅವಧಿಯನ್ನು ಇಳಿಸಲಾಯಿತು. ಲಖನ್ ಯಾರಿಗೆಲ್ಲಾ ತೊಂದರೆ ಕೊಟ್ಟಿದ್ದರೋ ಅವರಿಗೆಲ್ಲಾ ಜೈಲಿನಿಂದಲೇ ಕ್ಷಮಾಪಣಾ ಪತ್ರ ಬರೆದರು.

‘ಇವರು ಬಿಡುಗಡೆಯಾದದ್ದು 2006 ರ ಫೆಬ್ರುವರಿ 28 ರಂದು. ಹೊಸ ಜೀವನ ಕಣ್ಮುಂದೆ. ಪರಿವರ್ತನೆಯ ಪ್ರತಿ ಹಂತದಲ್ಲೂ ಸಹಕಾರ ನೀಡಿದ್ದ ಮುಂಬೈ ಸರ್ವೋದಯ ಮಂಡಳಿಯ ಸೋಮಯ್ಯನವರನ್ನು ಕಾಣಲು ರೈಲು ಹತ್ತುತ್ತಾರೆ. ಅದೇ ರೈಲಿನಲ್ಲಿ ಅವರಿಷ್ಟೂ ಬಾರಿ ಟಿಕೆಟ್ ಇಲ್ಲದೆ, ಅಧಿಕಾರಿಗಳ ಕಣ್ಣು ತಪ್ಪಿಸಿ, ಶೌಚಾಲಯದಲ್ಲಿ ಬಚ್ಚಿಟ್ಟುಕೊಂಡು ಪ್ರಯಾಣಿಸಿದರಲ್ಲ! ಈಗ ಯಾವುದೇ ಆತಂಕವಿಲ್ಲದೆ ಆರಾಮಾಗಿ ಕುಳಿತು ಪ್ರಯಾಣ. ಸ್ವಾತಂತ್ರ್ಯ ಅಂದರೆ ಇದೇ ತಾನೆ? ನಿರ್ಭೀತಿ!

ಗಾಂಧಿ ತತ್ವ ಪ್ರಚಾರಕ: ಸರ್ವೋದಯ ಮಂಡಳಿಯ ಪುಸ್ತಕದ ಅಂಗಡಿಯ ಕೆಲಸದ ಜೊತೆಗೆ ಮಂಡಳಿ ನಡೆಸುತ್ತಿದ್ದ ‘ಗಾಂಧಿ ಪರಿಚಯ’ ಪರೀಕ್ಷಾ’ಗಳನ್ನು ನಡೆಸುವ ಉಸ್ತುವಾರಿ! ಲಖನ್ ಪರಿವರ್ತನೆ ತಿಳಿದ ಮಿಲ್ಲನ್ ಪ್ಲಾಸ್ಟಿಕ್ ಕಂಪನಿಯಿಂದ ಕೆಲಸದ ಅವಕಾಶ. ಸುಪ್ರಸಿದ್ಧ ರಾಜಕುಮಾರ್ ಹಿರಾನಿ 2015 ರಲ್ಲಿ ‘ಜಿಂದಗಿ ಲೈವ್’ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಿತು. ಫೈಟರ್ ಹಸ್ತದವರ ನಿರ್ದೇಶನದಲ್ಲಿ ಇವರ ಜೀವನಾಧಾರಿತ ಬಯೋಪಿಕ್ ‘ಲಕ್ಷ್ಮಣ್ ಗೋಲೆ’ ಸಿನಿಮಾವಾಗಿದೆ. ‘ಅಪರಾಧವನ್ನು ದ್ವೇಷ ಮಾಡಿ, ಅಪರಾಧಿಯನ್ನಲ್ಲ’ ಎಂಬ ಸಂದೇಶದೊಂದಿಗೆ ಲಕ್ಷ್ಮಣ್ ದೇಶದಾದ್ಯಂತ ಗಾಂಧಿ ವಿಚಾರಗಳನ್ನು ಯುವಜನತೆಗೆ ಹಾಗೂ ಮುಖ್ಯವಾಗಿ ಬಂದಿಖಾನೆಯಲ್ಲಿರುವ ಅಪರಾಧಿಗಳಿಗೆ ತಲುಪಿಸಲು ಉಪನ್ಯಾಸಗಳನ್ನು ನೀಡುತ್ತಾ ಸಂಚರಿಸುತ್ತಿದ್ದಾರೆ.



ಗಾಂಧಿ ಪಾತ್ರ ನಾಟಕದ ದೃಶ್ಯ

ಕರ್ನಾಟಕದ ಹಲವು ಜೈಲುಗಳಲ್ಲಿ ಉಪನ್ಯಾಸ ನೀಡಿದ್ದಾರೆ. ರಾಜ್ಯ ಸರ್ವೋದಯ ಮಂಡಳಿ ಅಧ್ಯಕ್ಷ ಎ.ಎಸ್.ಸುರೇಶ್ ಅವರು ಲಕ್ಷ್ಮಣ್ ಜೀವನಾಧಾರಿತ ಪುಸ್ತಕ ‘ಗಾಂಧಿಯಾದನೆಡೆಗೆ...’ ಹೊರತಂದಿದ್ದಾರೆ.

ಲಕ್ಷ್ಮಣ್, ಕೈದಿಗಳ ಮನಪರಿವರ್ತನೆ ಮಾತ್ರ ಮಾಡುವುದಿಲ್ಲ, ಅವರಿಗೆ ಸೂಕ್ತ ಕೆಲಸ ದೊರಕಿಸುವಲ್ಲೂ ನೆರವು ನೀಡುತ್ತಿದ್ದಾರೆ. ಗಾಂಧಿವಾದದ ಮೂರ್ತರೂಪದಂತಿರುವ ಗೋಲೆ ತಮ್ಮ ಕಾರ್ಯಗಳನ್ನು ಮುಂದುವರಿಸಲು ಸರ್ಕಾರ, ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರ ಸಹಕಾರ ಅಗತ್ಯವಿದೆ. ಏಕೆಂದರೆ ನಮ್ಮ ಬಂದಿಖಾನೆಗಳಲ್ಲೂ ನೂರಾರು ಲಕ್ಷ್ಮಣ್ ಗೋಲೆಗಳಿದ್ದಾರೆ. ಅವರೂ ರೂಪಾಂತರಗೊಳ್ಳಬೇಕು ಅಲ್ಲವೆ, ಚಿಟ್ಟೆಯಂತೆ!

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಮಿಣಿವಲೆ, ಮಿಣಿಬಲೆ

ಮಿಣಿವಲೆ, ಮಿಣಿಬಲೆ (ನಾ). ಚರ್ಮದ ನೂಲಿನಿಂದ ತಯಾರಿಸಿದ ಬಲೆ.

[ಮಿಣಿ (< ಮಿಣ್) + ಬಲೆ]

ಸಮುದ್ರವನ್ನು ದಾಟಿ ಬಂದ ರಾಮಚಂದ್ರನ ವಾನರ ಸೇನೆ ಲಂಕಾದ ಸುವೇಲಾದ್ರಿಯಲ್ಲಿ ಬೀಡುಬಿಟ್ಟಿತು. ಸುಗ್ರೀವನು ಮಹಾದಂಡ ನಾಯಕನಾಗಿ ಸೇನಾ ವ್ಯವಸ್ಥೆ ನೋಡಿಕೊಂಡನು. ವಿಭೀಷಣನು ರಾಮನಿಗೆ ವೇಲಾದ್ರಿ ಶಿಖರದಿಂದ ರಾವಣನ ಲಂಕೆಯನ್ನು ವಿವರಿಸಿದನು. ಆ ಸಂದರ್ಭದ ದರ್ಶನೀಯ ಭಾವವನ್ನು ಕುವೆಂಪು ಅವರು ಒಂದು ಮಹೋಪಮೆಯಲ್ಲಿ ಚಿತ್ರಿಸಿದ್ದಾರೆ.

ಗವಿಯಲ್ಲಿ ಸಿಂಹಿಣಿಯೊಡನೆಯಿದ್ದ ಸಿಂಹವನ್ನು ಬೇಡರೊಡೆಯ ದೀವದ ಪ್ರಾಣಿಯಿಂದ(ಬೇಟೆಯಲ್ಲಿ ಕ್ರೂರ ಮೃಗಗಳನ್ನು ಆಕರ್ಷಿಸುವುದಕ್ಕಾಗಿ ಬಳಸುವ ಪ್ರಾಣಿ)ದೂರಕ್ಕೆ ಕರೆದೊಯ್ಯುತ್ತಾನೆ. ಇತ್ತ ಮರೆಯಲ್ಲಿದ್ದ ಬೇಡರ ಪಡೆಯವರು ತಮ್ಮಲ್ಲಿದ್ದ ‘ಮಿಣಿವಲೆ’ ಒಡ್ಡಿ ಸೆರೆ ಹಿಡಿದು ಅರಸನ ಬಳಿಗೆ ಕೊಂಡೊಯ್ಯುವರು. ಕಚ್ಚಿನಿಂದ ಕಚ್ಚಿನಿಂದ ಕಟ್ಟುಗೊಂಡ ಅದರ ಸುತ್ತಲೂ ಚಿನ್ನದ ಜೀನುಗಳಿಂದ ಅಲಂಕೃತವಾದ ಬನಗಳು ಬೆಳೆಯಾಗಿರುತ್ತವೆ. ಹಾಗೆ ಕಟ್ಟಿ ಹಾಕಿದ ಹೆಣ್ಣು ಸಿಂಹ ತನ್ನ ಮನದನ್ನನನ್ನು ನೆನೆದು ಕಾಡೇ ಗೋಳಿಡುವಂತೆ ಒರಲುತ್ತದೆ.

ದೀವದೆರೆಯ ಮೋಸವನ್ನು ಅರಿತ ಸಿಂಹ ಹಿಂತಿರುಗಿ ಬರುತ್ತದೆ. ಕೋಡುಗಲ್ಲನ್ನು ಹತ್ತಿ ಸಿಂಹಿಣಿಯನ್ನು ನೋಡಿದ ಅದಕ್ಕೆ ರೋಷ ಉಕ್ಕಿ ಬರುತ್ತದೆ. ಅದು ನಿಂತ ಬಂಡೆಯನ್ನೆ ಆನೆಯ ಮಂಡೆ ಎಂದು ಭಾವಿಸಿ ವಜ್ರನಖದಿಂದ ಅಪ್ಪಳಿಸುತ್ತದೆ. ಅದರ ಹೊಡೆತ ಗರ್ಜನೆಗೆ ಬೆದರಿ ಬೆಟ್ಟದ ಎದೆ ಒಡೆಯಿತೊ ಎಂಬಂತೆ ಕಲ್ಲು ಬಿರಿಯುತ್ತದೆ.

ಅದರಂತೆ ರಾಮಚಂದ್ರನು ನಿಟ್ಟುಸಿರು ಬಿಡುತ್ತ ಹಲ್ಲುಕಚ್ಚಿ ಉಗ್ರರೋಷದಿಂದ ಸಿಟ್ಟಿನ ಅಂಕುಶವನ್ನು ಕೊಂಡಯದಿಂದ ಒತ್ತಿದನು. ಆಗ ಭೂಮಿಯು ಮಿಂಚಿನ ಚಾವಟಿಗೆ ಬೆಚ್ಚಿಗೊಂಡಂತೆ ಕಂಪಿಸಿತು.

ಈ ಮೇಲಿನ ಮಹೋಪಮೆಯಲ್ಲಿ ಕುವೆಂಪು ಅವರು ಸಿಂಹಿಣಿಯನ್ನು ಬಂಧಿಸಿದ ಚರ್ಮದ ನೂಲಿನಿಂದ ತಯಾರಿಸಿದ ಮಿಣಿಬಲೆಯನ್ನು ಬಳಸಿದ್ದಾರೆ. ಅವರು ತಮ್ಮ ಕಾಡಿನ ಬೇಟೆಯಲ್ಲಿ ಬಳಸಿದ ಪದ ‘ಮಿಣಿವಲೆ’ಯನ್ನು ಕನ್ನಡ ಕಾವ್ಯದಲ್ಲಿ ಪ್ರಥಮವಾಗಿ ಪ್ರಯೋಗಿಸಿರುವುದು ಕಂಡುಬರುತ್ತದೆ. ಹೀಗೆ ಅವರ ಜೀವನಾನುಭವದ ನುಡಿಗಳಿಂದ ಕನ್ನಡ ಕಾವ್ಯ ಸಮೃದ್ಧವಾಗಿದೆ.

ಮಲೆಯೊಳ್

ಕಲ್ಪನಿಯೊಳಿಸಿಯೊಳೊಡನಿರ್ದ ಮೃಗರಾಜನಂ ಬೇಡರೊಡೆಯಂ ದೀವದದೆರೊಡೀಆತೆಳೆತಟಂ ಮಾಡಿ ಗೆಂಟುಗಳುನ್ನುತ್ತಲ್, ಇತ್ತಲ್ ಮರೆಯ ಬಿಯದ ಪಡೆ ಮಿಣಿವಲೆಯನೊಡ್ಡಿ ಸೆರೆವಿಡಿಯುತಾ ಸಿಂಹಿಣಿಯನಯ್ದುದರಸನ ಬೇಂಟೆವೀಡಿರ್ಪ ಕಂದರಕೆ.

ಕೊರಗರ ದಿಟ್ಟ ದನಿ....

10ನೇ ಪುಟದಿಂದ...

ಬಳಿಕ ಎಚ್ಚೆತ್ತ ತಾಲ್ಲೂಕು ಆಡಳಿತ ಕೊರಗ ಕುಟುಂಬಗಳಿಗೆ ಮನೆ ನಿರ್ಮಿಸಿಕೊಳ್ಳಲು ಪರ್ಯಾಯ ಜಮೀನು ಮಂಜೂರು ಮಾಡಿದೆ.

1998ರಲ್ಲಿ ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಪಡೆದ ಸುಶೀಲಾ ಅಂಗನವಾಡಿಯಲ್ಲಿ ಉದ್ಯೋಗ ಪಡೆದ ಮೊದಲ ಕೊರಗ ಮಹಿಳೆಯರಲ್ಲಿ ಒಬ್ಬರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ‘ನಾನು ಉದ್ಯೋಗಕ್ಕೆ ಸೇರುವವರೆಗೂ ಕೊರಗ ಮಕ್ಕಳು ಅಂಗನವಾಡಿಗೆ ದಾಖಲಾಗುತ್ತಿರಲಿಲ್ಲ. ಈಗ ಅಂಗನವಾಡಿ ಕೇಂದ್ರವು ಸಮುದಾಯದ ಕಲಿಕಾ ಕೇಂದ್ರವಾಗಿ ಪರಿವರ್ತನೆಯಾಗಿದೆ’ ಎಂದು ಹೇಳುವಾಗ ಸುಶೀಲಾ ಅವರ ಮುಖದಲ್ಲಿ ಹೆಮ್ಮೆಯ ಭಾವ ಕಾಣುತ್ತಿತ್ತು.

ಒಕ್ಕೂಟದ ಸದಸ್ಯರು ಸಂಘಟನೆಯಲ್ಲಿ ಸುಶೀಲಾ ಅವರ ಕ್ಷಿಪ್ರ ಬೆಳವಣಿಗೆಗೆ ಸಾಕ್ಷಿಯಾಗಿದ್ದಾರೆ. ಸುಶೀಲಾ ಎರಡನೇ ಅವಧಿಗೆ ಒಕ್ಕೂಟದ ಅಧ್ಯಕ್ಷೆಯಾಗಿರುವುದು ಅವರ ಸಾಮರ್ಥ್ಯ ಮತ್ತು ಒಕ್ಕೂಟದ ಸದಸ್ಯರಿಗೆ ಅವರ ಮೇಲೆ ಇರುವ ನಂಬಿಕೆಯನ್ನು ಪ್ರತಿಫಲಿಸುತ್ತದೆ.

‘ಅನಾದಿಕಾಲದಿಂದ ಸಮುದಾಯವು ಶೋಷಣೆಗೆ ಒಳಗಾಗಿರುವುದರಿಂದ ಸಮುದಾಯದ ಜನರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಪರಿಣಾಮ ಅವರಲ್ಲಿ ಕ್ಷಯ, ಚರ್ಮರೋಗಗಳಂತಹ ಆರೋಗ್ಯ ಸಮಸ್ಯೆಗಳು ಸಾಮಾನ್ಯವಾಗಿವೆ. ಹೀಗಾಗಿ ಕೊರಗ ಸಮುದಾಯದ ಆರೋಗ್ಯ ಮತ್ತು ಜೀವನಮಟ್ಟ ಸುಧಾರಣೆಗಾಗಿ ಸರ್ಕಾರ ಜಾರಿಗೆ ತಂದಿರುವ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸುಶೀಲಾ ಶ್ರಮ ವಹಿಸುತ್ತಿದ್ದಾರೆ’ ಎಂದು ಉಡುಪಿಯ ಐಟಿಡಿಪಿಯ ಸಮನ್ವಯ ಅಧಿಕಾರಿ ನಾರಾಯಣಸ್ವಾಮಿ ಎಂ. ತಿಳಿಸಿದರು.

ಕೊರಗರ ಸಾಂಪ್ರದಾಯಿಕ ಉದ್ಯೋಗವಾದ ಬುಟ್ಟಿ ನೇಯ್ಗೆಗಾಗಿ ಸ್ಥಾಪನೆಯಾದ ಸಹಕಾರಿ ಸಂಘವನ್ನು ಪುನರುಜ್ಜೀವನಗೊಳಿಸಲು ಸುಶೀಲಾ ಸತತ ಪ್ರಯತ್ನ ಮಾಡುತ್ತಿದ್ದಾರೆ. ‘ನಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಚ್ಚಾ ವಸ್ತುಗಳನ್ನು ಬೆಳೆಯಲು ಸಮುದಾಯವನ್ನು ಪ್ರೋತ್ಸಾಹಿಸುತ್ತಿದ್ದೇವೆ’ ಎಂದು ಅವರು ಹೇಳುತ್ತಾರೆ.

ಕೊರಗ ಸಮುದಾಯವು ಒಂದು ಮಹತ್ವದ ಘಟ್ಟದಲ್ಲಿದೆ, ಸಮುದಾಯದ ಜನರಲ್ಲಿ ಸಕಾರಾತ್ಮಕ ಬದಲಾವಣೆ ತರಲು ಮತ್ತು ಅವರ ಅಸ್ಮಿತೆಯನ್ನು ಹಾಗೆಯೇ ಉಳಿಸಿಕೊಳ್ಳಲು ಸುಶೀಲಾ ಕಾರ್ಯೋನ್ಮುಖರಾಗಿದ್ದಾರೆ. ಇದನ್ನು ಸಾಧಿಸಲು ಪ್ರತಿರೋಧ ಮತ್ತು ಸಬಲೀಕರಣ ಎಂಬ ಪಥಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ.

ಅನುವಾದ: ಶೇಷಗಿರಿ ಎಂ.

ಮುನ್ನೋಟ 06-04-2025 ರಿಂದ 12-04-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಮನಸ್ಸಿನಲ್ಲಿ ಸಂತೋಷ ಇರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಹೈನುಗಾರಿಕೆ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಆನುವಂಶೀಯ ಕಾಯಿಲೆಗಳು ಕೆಲವರನ್ನು ಕಾಡಬಹುದು. ಸಂಗಾತಿಗಾಗಿ ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ. ವ್ಯವಹಾರಗಳಲ್ಲಿದ್ದ ತೊಂದರೆಗಳು ದೂರವಾಗುವ ಸಾಧ್ಯತೆಗಳಿವೆ. ಸ್ತ್ರೀಯರ ಜೊತೆ ಮಾಡಿದ ವ್ಯವಹಾರಗಳು ನಷ್ಟಕ್ಕೆ ಕಾರಣವಾಗಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಗೌರವ ಹೆಚ್ಚುತ್ತದೆ. ಆದಾಯ ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಯಲ್ಲಿ ಬಿರುಸುತನವನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಇರುವುದಿಲ್ಲ. ಮಹಿಳೆಯರಿಗೆ ಗುಪ್ತ ರೋಗಗಳು ಕಾಡಬಹುದು. ಸಂಗಾತಿಗೆ ಕೃಷಿ ಭೂಮಿ ಒದಗುವ ಸಾಧ್ಯತೆ ಇದೆ. ವಿದೇಶಿ ವ್ಯವಹಾರಗಳಲ್ಲಿ ಹೆಚ್ಚು ಲಾಭವಿರುತ್ತದೆ. ರಾಜಕಾರಣಿಗಳಿಗೆ ಈಗ ಉತ್ತಮ ಅವಕಾಶ ಲಭಿಸುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಆದಾಯ ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಬಂಧುಗಳಿಂದ ಅಡ್ಡಿಬರಬಹುದು. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ದೊರೆಯುತ್ತದೆ. ಮಹಿಳೆಯರ ಜೊತೆ ನಡೆಸುವ ವ್ಯವಹಾರ ನಷ್ಟಕ್ಕೆ ಕಾರಣವಾಗುತ್ತದೆ. ಆಹಾರ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಲಾಭ ಹೆಚ್ಚುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಮನಸ್ಸಿನಲ್ಲಿ ದ್ವಂದ್ವತೆ ಇರುತ್ತದೆ. ಆದಾಯವು ಕಡಿಮೆ ಇರುತ್ತದೆ. ನಿಮ್ಮ ಒಳ್ಳೆಯ ಕೆಲಸ ಕಾರ್ಯಗಳಿಗೆ ಬೆಂಬಲ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶ ಇರುತ್ತದೆ. ಕ್ರೀಡಾಪಟುಗಳಿಗೆ ಕಲೆಯಲ್ಲಿ ಉತ್ತಮ ಸೌಲಭ್ಯ ದೊರೆಯುತ್ತದೆ. ಉದರ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಸಂಗಾತಿಗೆ ಕೆಲವು ಸಂಕಷ್ಟಗಳು ಎದುರಾಗಬಹುದು. ಆದಾಯದಷ್ಟೇ ಖರ್ಚು ಇರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಕೆಲವೊಂದು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವಿರಿ. ಆದಾಯವು ಕಡಿಮೆ ಇರುತ್ತದೆ. ಆಸ್ತಿ ವ್ಯವಹಾರಗಳಲ್ಲಿ ನಷ್ಟವಾಗುವ ಸಾಧ್ಯತೆಗಳಿವೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ದೊರೆಯುತ್ತದೆ. ಕಾಯಿಲೆಯಿಂದ ಬಳಲುತ್ತಿರುವವರ ಆರೋಗ್ಯ ಸುಧಾರಿಸುತ್ತದೆ. ಹಿರಿಯರ ಆರೋಗ್ಯಕ್ಕಾಗಿ ಹಣ ಖರ್ಚಾಗುತ್ತದೆ. ವೃತ್ತಿಯಲ್ಲಿ ಅಭಿವೃದ್ಧಿಯನ್ನು ಕಾಣಬಹುದು. ಆದಿರು ವ್ಯಾಪಾರ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಬಂಧುಗಳ ಸಹಕಾರ ದೊರೆಯುತ್ತದೆ. ಭೂಮಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚಿರುತ್ತದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ಕಾಣಬಹುದು. ಸಂಗಾತಿಯ ಸಂಪಾದನೆ ಹೆಚ್ಚುತ್ತದೆ. ಕೃಷಿ ಬೆಳೆ ಕಡಿಮೆಯಾದರೂ, ಸಿಕ್ಕಿರುವ ಬೆಳೆಯಿಂದ ನಿಮಗೆ ಲಾಭವಿರುತ್ತದೆ. ಹಿರಿಯರ ಸಹಕಾರದಿಂದ ನಿಮ್ಮ ಉದ್ಯೋಗದಲ್ಲಿ ಸ್ಥಿರತೆಯನ್ನು ಕಾಣಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಕಷ್ಟಪಟ್ಟು ಎಲ್ಲರೊಡನೆ ಹೊಂದಿಕೊಳ್ಳಲು ಪ್ರಯತ್ನಪಡುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲವು ಕೆಲಸ ಕಾರ್ಯಗಳಿಗೆ ಹಿರಿಯರಿಂದ ವಿರೋಧ ಬರಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಸಂಗಾತಿಯ ಖರ್ಚು ಬಹಳ ಹೆಚ್ಚಿರುತ್ತದೆ. ಕೃಷಿ ಭೂಮಿ ದೊರೆಯುವ ಸಾಧ್ಯತೆಗಳಿವೆ. ಸರ್ಕಾರಿ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಆದಿರು ಮಾರಾಟಗಾರರಿಗೆ ಮಾರಾಟ ಹೆಚ್ಚುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಸಮಾಜಮುಖಿ ಕೆಲಸ ಮಾಡುವವರಿಗೆ ಗೌರವ ದೊರೆಯುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಬಂಧುಗಳಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿ ಬರುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಹಿರಿಯರ ಕೃಷಿ ಭೂಮಿಯನ್ನು ಕೊಳ್ಳಬಹುದು. ಅವಿವಾಹಿತರಿಗೆ ವಿವಾಹ ಸಂಬಂಧಗಳು ಒದಗುವ ಸಾಧ್ಯತೆಗಳಿವೆ. ಹಿರಿಯರಿಂದ ವೃತ್ತಿಯಲ್ಲಿ ಅಭಿವೃದ್ಧಿಯನ್ನು ಕಾಣಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಉದರ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಸಂಗಾತಿಯಿಂದ ನಿಮ್ಮ ವ್ಯವಹಾರಗಳಿಗೆ ಸಹಕಾರ ದೊರೆಯುತ್ತದೆ. ಧರ್ಮಕಾರ್ಯಗಳಿಂದ ಲಾಭವನ್ನು ಪಡೆಯಬಹುದು. ಹಿರಿಯರಿಂದ ನಿಮಗೆ ಉದ್ಯೋಗದಲ್ಲಿ ಸಹಾಯ ಲಭಿಸುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಶ್ರಮಪಟ್ಟು ಕೆಲಸ ಮಾಡುವಿರಿ. ಆದಾಯವು ಕಡಿಮೆ ಇರುತ್ತದೆ. ನಿಮ್ಮ ಶತ್ರುಗಳು ಕೂಡ ನಿಮಗೆ ಸಹಕಾರ ನೀಡುವರು. ವಿದ್ಯಾರ್ಥಿಗಳಿಗೆ ಅತಿ ಹೆಚ್ಚಿನ ಫಲಿತಾಂಶ ಪಡೆಯುವ ಯೋಗವಿದೆ. ಪಾಲುದಾರಿಕೆಯ ವ್ಯವಹಾರಗಳಲ್ಲಿ ಅವಕಾಶ ದೊರೆಯುತ್ತದೆ. ಸಂಗಾತಿಯ ಜೊತೆ ಸೇರಿ ಮಾಡಿದ ಕೃಷಿ ವ್ಯವಹಾರಗಳಲ್ಲಿ ಲಾಭ ತರುತ್ತದೆ. ಆದಾಯ ಏರಿಕೆ ಇರುವುದಿಲ್ಲ. ಸರ್ಕಾರಿ ಕೆಲಸಗಳಲ್ಲಿ ಲಾಭ ಹೆಚ್ಚುತ್ತದೆ.

ಕುಂಭ — ಧನಿಷ್ಠ 3,4 ಶತಭಿಷ, ಪೂರ್ವಾಭಾದ್ರ 1,2,3

ಹಿರಿಯರಿಗೆ ಸಮಾಜದಲ್ಲಿ ಸಾಕಷ್ಟು ಗೌರವ ದೊರೆಯುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಕೆಲವರು ಅಡ್ಡಿಪಡಿಸುವರು. ಭೂಮಿ ವ್ಯವಹಾರ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ಪಾಲುದಾರಿಕೆ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಸಂಗಾತಿ ಜೊತೆ ಮಾಡಿದ ವ್ಯವಹಾರಗಳಿಂದ ಲಾಭವಿರುತ್ತದೆ. ಶಿಕ್ಷಣ ಸಂಸ್ಥೆಗಳ ಆದಾಯ ಹೆಚ್ಚುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಅತಿಯಾದ ಸ್ವಾಭಿಮಾನ ನಿಮ್ಮಲ್ಲಿ ಇರುತ್ತದೆ. ಆದಾಯವು ಮಧ್ಯಮಗತಿಯಲ್ಲಿ ಇರುತ್ತದೆ. ಹಿರಿಯರನ್ನು ಒಲ್ಲಿಸುವಲ್ಲಿ ಯಶಸ್ವಿಯಾಗುವಿರಿ. ಪಾಲುದಾರಿಕೆಯ ವ್ಯವಹಾರಗಳಲ್ಲಿ ನಿಮಗೆ ಅವಕಾಶ ದೊರೆಯುತ್ತದೆ. ಕಲ್ಲಿನ ತೊಂದರೆ ಇರುವವರು ಎಚ್ಚರವಾಗಿರಿ. ಗಣಿಗಾರಿಕೆ ಮಾಡುವವರಿಗೆ ಇದ್ದ ತೊಡಕುಗಳು ನಿವಾರಣೆಯಾಗುತ್ತವೆ.

ಪದಬಂಧ 2886



ಮೇಲಿಂದ ಕೆಳಕ್ಕೆ

1. ಎಂದೆಂದೂ ಉಳಿಯುವಂತದ್ದು 3
2. ವಿಜಯ ಮೊಳಕಾಗಿ ನಂಜನಗುಡುವುದು 2
3. ಏರಿಗೆ ಎಳೆಯುವ ಪ್ರಾಣಿ 2
4. ಪ್ರಾಚೀನ ವಸ್ತುಗಳನ್ನು ಹುಡುಕಿ ತೆಗೆಯುವ ಕಾರ್ಯ 3
6. ಬಿಡುವಿನಲ್ಲಿ ಬಟ್ಟೆ ತೊಳೆಯುವ ಆಗಸ 3
8. ಮನೆತನಕ್ಕೆ ಮೀಸಲಾದ ದೇವರು 4
9. ಚಂದ್ರನ ಪರಿಕಲ್ಪನೆ ಹದಿನೈದು ದಿನಗಳು 2
11. ಟಾಕಿ ಚಿತ್ರಗಳನ್ನು ಪ್ರದರ್ಶಿಸುವ ಚಿತ್ರಮಂದಿರ 3
13. ಮಧುರವಾದ ಹಾಡಿನ ದನಿ 3
14. ಕಾಸಿಗೆ ಬೆಳಗುವ ದೀಪ 3
16. ಮುಂಬೆಳಕು ಸುಖದ 3
18. ಮತ್ತೇರಿದ ಆನೆ 4
21. ಮೇಲಿಂದ ಕೆಳಕ್ಕೆ ಮೂರರ ಪ್ರಾಣಿ ಏರಿಗೆ ಎಳೆದರೆ ಇದು ನೀರಿಗೆಳೆಯುತ್ತದೆ 2
22. ಪ್ರಯೋಗಿಸಲು ರೇಗಿಸು 3
23. ಉತ್ತರಭಾರತದಲ್ಲಿ ಮಾತ್ರ ಸ್ವರೂಪಿ ಕೃಷ್ಣ ಪ್ರೇಯಸಿ 3
25. ವ್ಯಾಪಾರಿಗೊಂದು ಪರ್ಯಾಯ 3
26. ಸಾಯಂಕಾಲದ ಸಮಯ 2
27. ನೂರು ಸಾವಿರ 2

ಎಡದಿಂದ ಬಲಕ್ಕೆ

1. ವಿದ್ಯಾಧಿದೇವತೆ, ಪರಮಹಂಸರ ಪೂಜ್ಯ ಪತ್ನಿ 5
3. ದ್ವಂದ್ವ ಉಂಟುಮಾಡುವ ಪರಿಯಿಟ್ಟ ಚಹಲ 5
5. ಸಂಧಿ ಸಂಧಾನಗಳಲ್ಲಿ ಪೂರ್ಣಕ್ಕೆ ಒಪ್ಪುವ ನಿಯಮ 3
7. ಪಕ್ಷಿ ನೋಡಿ ಬಿಡು 4
9. ಕೆಸರಲ್ಲಿ ಹುಟ್ಟುವ ಕಮಲದ ಪೀಠ 4
10. ಹಾಡೊಡೆತೆಯ ಕೃಪಾದೃಷ್ಟಿ 5
12. ಗಂಟುಗೊಂಡು ಪರ್ಯಾಯ 2
14. ಚಿಂದಿಮಾಡುವ ವಿಷ್ಣು 2
15. ತಾನೆ ಮದುಮಗನನ್ನು ಆಯ್ಕೆ ಮಾಡಿಕೊಳ್ಳುವ ವಿವಾಹ ಪದ್ಧತಿ 4
17. ಮನ್ನುತ ಎಸೆಯುವ ಹೂವಿನ ಅಂಬು 4
19. ಅಚಲವಾದದ್ದು 2
20. ಕಲ್ಲಿಗೆ ಕಾಣದಂತೆ ಹಾಕುವ ಪರದೆ 2
21. ಕೈಲಾಸಂರವರ ಪ್ರಹಸನ ‘ಕೋಣುಕೆ ಸುಕೇಸರಾನು ಸೊಸ್ಸೆ’ 5
23. ಮನ ಮನೆಯೊಳಗೆ ನಡೆಯುವ ದರಬಾರದ ಕಥೆ 4
24. ರಾಧಾ ಕೃಷ್ಣರ ಪ್ರೇಮವನ್ನು ಕೃತಿ ಮೂಲಕ ಅಮರವಾಗಿಸಿದ ಸಂಸ್ಕೃತ ಕವಿ 4
26. ಸಾಮಾನ್ಯ ಪ್ರಾಣಿ ಪಕ್ಷಿಗಳ ಗುಂಪು 3
28. ದೇವಿಯ ಅನುಗ್ರಹಕ್ಕೆ ಅಂತರ್ಯಾದಲ್ಲೇ ನಲ್ಲಿಸುವ ಭಕ್ತಿಯ ತಂತ್ರ 5
29. ಕ್ರಮೇಣ ನಶಿಸುವಂತೆ ಮಾಡುವವ 5

ಪದಬಂಧ ಉತ್ತರ -2885

ಮೇಲಿಂದ ಕೆಳಕ್ಕೆ

1.ಯುವಜನಾಂಗ 2.ತರುಕಾನನ 4.ಮನುಮಂತ 5.ರಾಜವಿಧಾನ 7.ಕಾಕಂಬಿ 8.ನೀರಾವ 11.ಗಹನ 12.ಬುಂಬಾನ 14.ಸಂಚರ 15.ಮಾರೀಕಾ 16.ಐಯನಾರ 17.ಮಾತನಾನ 18.ಸಮತೆ 19. ಸರಯು 20.ವರದಿಗಾರ 21.ಶಕಟಾಸುರ

ಎಡದಿಂದ ಬಲಕ್ಕೆ

1.ಯುಗಾಂತರ 3.ಮಮಕಾರ 6.ಕಾಳಿಕಾ 8.ನೀರಜ 9.ಕಂಬಾರ 10. ಗಗನಕುಂಬಿ 13.ವನಂಶಮಾಸ 16. ಐನಮಾನಸ 19. ಸದವಕಾಶ 22.ಮಧುರ 23.ನವ್ಯತೆ 24.ಯುಗಾದಿ 25.ಕಿರುನೆಲೆ 26. ಸರಸರ

ವಿದ್ಯಾರ್ಥಿಗಳ ಯಕ್ಷೋತ್ಸವ ನಿರಂತರ ಯಾನ



'ಯಕ್ಷೋತ್ಸವ'ದಲ್ಲಿ ನಿಟ್ಟೆ ಎನ್‌ಎಂಎಎಂ ಕಾಲೇಜು ವಿದ್ಯಾರ್ಥಿಗಳ 'ತರಣಿಸೇನ ಕಾಳಗ'ದ ಭಾಗ
ಚಿತ್ರ: ಫಕ್ರುದ್ದೀನ್ ಎಚ್

ಮಂಗಳೂರಿನ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಕಾನೂನು ಕಾಲೇಜಿನಲ್ಲಿ ಮೂರು ದಶಕಗಳಿಂದ ವಿದ್ಯಾರ್ಥಿಗಳ ಯಕ್ಷಗಾನ ಸ್ಪರ್ಧೆ 'ಯಕ್ಷೋತ್ಸವ' ನಡೆಯುತ್ತಿದೆ. ಶೈಕ್ಷಣಿಕ ಒತ್ತಡದ ನಡುವೆ ಭಾವಗಳಲ್ಲಿ ಲೀನವಾಗಿ ರಸದೀಪ್ತಿ ಸೂಸಲು ನೆರವಾಗುವ ಈ ಸ್ಪರ್ಧೆ ವಿದ್ಯಾರ್ಥಿಗಳ ಕಲೋತ್ಸಾಹ ಬಿಂಬಿಸುವ ಕನ್ನಡಿಯೂ ಅನೇಕರಿಗೆ ಕಲಾಕ್ಷೇತ್ರದಲ್ಲಿ ಬೆಳೆಯಲು ಹೊಸದಾರಿಯೂ ಆಗಿದೆ.



ಯಕ್ಷೋತ್ಸವದಲ್ಲಿ ಬಂಟಕಲ್ ಕಾಲೇಜು ವಿದ್ಯಾರ್ಥಿ

ವಿಕ್ರಂ ಕಾಂತಿಕೆರೆ

ಕೃಷ್ಣನ ಚಾಣಾಕ್ಷತನ, ಹನುಮಂತನ ಶೌರ್ಯ, ಲಕ್ಷ್ಮಣನ ದಿಟ್ಟತನ, ರಾಮನ ಶಾಂತಭಾವ, ಮೋಹಿನಿಯ ಲಾಸ್ಯ, ಸುಭದ್ರೆಯ ದೈನ್ಯ, ಪಾರ್ಥನ ಧೀರತ್ವ...ಪುರಾಣ ಪಾತ್ರಗಳ ಗುಣಸ್ವಭಾವಗಳೆಲ್ಲವೂ ಮಂಗಳೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ (ಎಸ್‌ಡಿಎಂ) ಕಾನೂನು ಕಾಲೇಜಿನ ಆವರಣದಲ್ಲಿ ಎರಡು ದಿನ ಪ್ರತಿಫಲಿಸಿದವು.

ಚೆಂಡೆಯ ಗಂಭೀರ ನಾದ, ಮದ್ದಲೆಯ ಝೇಂಕಾರ, ಚಕ್ರತಾಳದ ಲಯಕಾರಿಯಲ್ಲಿ ಭಾಗವತಿಕೆಯ ಸೊಗಸುಗಾರಿಕೆ ಚಿತ್ತೋದ್ರೇಕ ಉಂಟುಮಾಡಿದರೆ ಪಾತ್ರಗಳ ಶಾಂತ, ಶೃಂಗಾರ, ಹಾಸ್ಯ, ಧೀರ ಭಾವಗಳು ನಗರ ಮಧ್ಯದಲ್ಲಿ ರಸದೀಪ್ತಿಯನ್ನು ಸೂಸಿದವು. ವೃತ್ತಿಪರ ಹಿಮ್ಮೇಳ ಕಲಾವಿದರು ಸೃಷ್ಟಿಸಿದ ಭೂಮಿಕೆಯಲ್ಲಿ ಪಾತ್ರಗಳಿಗೆ ಜೀವ ತುಂಬಿದವರೆಲ್ಲರೂ ಪದವಿ ವಿದ್ಯಾರ್ಥಿಗಳು. ಯಾಕೆಂದರೆ ಇದು ವಿದ್ಯಾರ್ಥಿಗಳ ಕಲೋತ್ಸಾಹದ ಯಕ್ಷಗಾನ ಸ್ಪರ್ಧೆ, ಯಕ್ಷೋತ್ಸವ.

ಎಸ್‌ಡಿಎಂ ಕಾಲೇಜಿಗೆ ಯಕ್ಷೋತ್ಸವ ಹೊಸತಲ್ಲ. ತೊಂಬತ್ತರ ದಶಕದಲ್ಲಿ ಆರಂಭಗೊಂಡ ವಿದ್ಯಾರ್ಥಿಗಳ ಯಕ್ಷೋತ್ಸವ ಮೂವತ್ತೂರು ವರ್ಷಗಳನ್ನು ಪೂರೈಸಿದೆ. ಇಷ್ಟು ವರ್ಷಗಳಿಂದ ಸ್ಪರ್ಧಾ ವೇದಿಕೆಯಲ್ಲಿ ರಾಮ, ಕೃಷ್ಣ, ಸುದರ್ಶನ, ವಿಭೀಷಣ, ಹನುಮಂತ, ಲಕ್ಷ್ಮಣ, ಕುಂಭಕರ್ಣ, ಮೇಘನಾದ, ತರಣಿಸೇನ, ಸುಭದ್ರಾ, ದಾರುಕ, ಮೋಹಿನಿ, ಪಾರ್ಥ, ಭರತ, ಧರ್ಮಾಂಗದ, ನಾರದ, ಸುಧನ್ವ, ಬಬ್ರುವಾಹನ, ಶತ್ರುಪ್ರಸಾದನ, ನರಕಾಸುರ... ಹೀಗೆ ನಾನಾ ಪಾತ್ರಗಳನ್ನು ನಿರ್ವಹಿಸಿದವರ ಪೈಕಿ ಅನೇಕರು ಈಗ ಪ್ರಮುಖ ಮೇಳಗಳಲ್ಲಿ ವೇಷ ಹಾಕುತ್ತಿದ್ದಾರೆ. ಯಕ್ಷೋತ್ಸವ ಇದೆ ಎಂಬ ಕಾರಣದಿಂದಲೇ ಯಕ್ಷಗಾನ ಕಲಿಕೆಗೆ ಆಸಕ್ತಿ ತೋರಿದ ಎಂಜಿನಿಯರಿಂಗ್, ಮೆಡಿಕಲ್, ಮ್ಯಾನೇಜ್‌ಮೆಂಟ್ ಸೇರಿದಂತೆ ವಿವಿಧ ಕೋರ್ಸ್‌ಗಳ ವಿದ್ಯಾರ್ಥಿಗಳೂ ಇದ್ದಾರೆ.

> **ದಶಕದಿಂದ ಯಕ್ಷಗಾನದಲ್ಲಿ ತೊಡಗಿಸಿಕೊಂಡಿದ್ದೇನೆ. ಚೆಂಡೆ, ಮದ್ದಲೆ ವಾದನದ ಜೊತೆಯಲ್ಲಿ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ಯಕ್ಷೋತ್ಸವದಲ್ಲಿ ಸಾಂಘಿಕವಾದ ಪ್ರಯತ್ನದ ಮೇಲೆಯೂ ಗಮನ ಇರಬೇಕಾಗುತ್ತದೆ. ಅದಕ್ಕೆ ತಕ್ಕಂತೆ ಅಭ್ಯಾಸ ಮಾಡಬೇಕಾಗುತ್ತದೆ.**
> **ಅಜೇಯ ಸುಬ್ರಹ್ಮಣ್ಯ ಮೂಡುಬಿದಿರೆ,** ಇಂದ್ರಜಿತು ಪಾತ್ರ ನಿರ್ವಹಿಸಿದ ವಿದ್ಯಾರ್ಥಿ

> **ಯಕ್ಷಗಾನ ಮೇಳಗಳಲ್ಲಿ ಮಹಿಳೆಯರಿಗೆ ಅವಕಾಶವಿಲ್ಲ. ನಾನು ಮರೋಳಿ ಶ್ರೀ ಸೂರ್ಯನಾರಾಯಣ ಮಹಿಳಾ ಯಕ್ಷಗಾನ ಮಂಡಳಿಯ ಸದಸ್ಯೆ. ಅದರ ಮೂಲಕ ಪ್ರದರ್ಶನಗಳಲ್ಲಿ ಭಾಗವಹಿಸುತ್ತೇನೆ. ಯಕ್ಷೋತ್ಸವವದಲ್ಲಿ ಹಲವು ವರ್ಷಗಳಿಂದ ಪಾಲ್ಗೊಳ್ಳುತ್ತಿದ್ದೇನೆ. ಸಾರ್ವಜನಿಕವಾಗಿ ವೇಷ ಹಾಕಿ ಕುಣಿಯಲು ಈ ಸ್ಪರ್ಧೆ ನನಗೆ ಮತ್ತೊಂದು ಅವಕಾಶದ ಬಾಗಿಲು ತೆರೆದಿದೆ.**
> **ರಶ್ಮಿತಾ ಮರೋಳಿ,** ರಾಮನ ಪಾತ್ರ ಮಾಡಿದ ಎಲ್‌ಎಲ್‌ಎಂ ವಿದ್ಯಾರ್ಥಿನಿ

ಯಕ್ಷೋತ್ಸವ ಆರಂಭಗೊಂಡದ್ದು 1992ರಲ್ಲಿ. ಅಂದಿನಿಂದ ಇಲ್ಲಿಯ ವರೆಗೆ ಹಲವು ಪ್ರಯೋಗಗಳನ್ನು ಕಂಡಿರುವ ಸ್ಪರ್ಧೆಯ 'ಕಾಲಮಿತಿ' ಎರಡು ವರ್ಷಗಳಿಂದ ತಂಡವೊಂದಕ್ಕೆ ಒಂದು ತಾಸು ಎಂಬ ಹಂತಕ್ಕೆ ತಲುಪಿದೆ. 'ವಿದ್ಯಾರ್ಥಿಗಳ ಯಕ್ಷಗಾನ ಸ್ಪರ್ಧೆಯೊಂದು ಮೂರು ದಶಕಗಳಿಂದ ನಿರಂತರವಾಗಿ ನಡೆಯುತ್ತಿರುವುದು ಇಲ್ಲಿ ಮಾತ್ರ' ಎನ್ನುತ್ತಾರೆ ಯಕ್ಷೋತ್ಸವದ ಸಂಚಾಲಕ ಪುಷ್ಪರಾಜ್.

'ವಿದ್ಯಾರ್ಥಿಗಳು ಯಕ್ಷಗಾನದಿಂದ ವಿಮುಖರಾಗುತ್ತಿದ್ದಾರೆಂಬ ಆತಂಕದಿಂದ 1992ರಲ್ಲಿ ಅಂದಿನ ವಿದ್ಯಾರ್ಥಿ ನಾಯಕರಾಗಿದ್ದ ಕೆ.ಎಂ ನಟರಾಜ್ ಮತ್ತು ಮಹೇಶ ಕಜೆ ಆರಂಭಿಸಿದ್ದು ಯಕ್ಷೋತ್ಸವ. ಸತತ ಇಪ್ಪತ್ತೈದು ವರ್ಷಗಳ ಉತ್ಸವದ ನಂತರ ಇದನ್ನು ನಿಲ್ಲಿಸುವ ಯೋಚನೆಯೂ ಮೂಡಿತ್ತು. ಆಗ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು ಮುಂದುವರಿಸಲು ಸೂಚಿಸಿದರು. ಮೊದಲು ತಂಡವೊಂದರ ಗರಿಷ್ಠ ವೇಷಗಳ ಸಂಖ್ಯೆ ಎಂಟಕ್ಕೆ ಸೀಮಿತವಾಗಿತ್ತು. ಈಗ ಅದನ್ನು ಹತ್ತಕ್ಕೆ ಏರಿಸಲಾಗಿದೆ. ಪ್ರತಿ ವರ್ಷ ಕನಿಷ್ಠ ಹತ್ತು ತಂಡಗಳು ಭಾಗವಹಿಸುತ್ತಿವೆ. ಹಾಗೆ ಲೆಕ್ಕ ಹಾಕಿದರೆ ಇಲ್ಲಿಯವರೆಗೆ ಕಡಿಮೆ ಎಂದರೂ ಮೂರು ಸಾವಿರ ಕಲಾವಿದರಿಗೆ ಇಲ್ಲಿ ಅವಕಾಶ ಲಭಿಸಿದೆ' ಎನ್ನುತ್ತಾರೆ ಪುಷ್ಪರಾಜ್.


ಚೀಟಿ ಎತ್ತುವ ಮೂಲಕ ಪ್ರತಿ ತಂಡಕ್ಕೆ ಪ್ರಸಂಗವನ್ನು ಯಕ್ಷೋತ್ಸವ ಸಮಿತಿಯೇ ಕೊಡುತ್ತದೆ. ಸ್ತ್ರೀ ವೇಷದ ಬೌಸ್ ಹೊರತುಪಡಿಸಿ ಉಳಿದೆಲ್ಲ ವೇಷಗಳಿಗೆ ಪೋಷಾಕು ಸಮಿತಿಯದ್ದೇ. ಹಿಮ್ಮೇಳಕ್ಕೆ ಹೊರಗಿನ ಕಲಾವಿದರನ್ನು ಬಳಸಿಕೊಳ್ಳಲಾಗುತ್ತದೆ. ರಾಜವೇಷ, ಸ್ತ್ರೀ ವೇಷ, ಪುಂಡುವೇಷ, ಹಾಸ್ಯಗಾರ ಮತ್ತು ಬಣ್ಣದ ವೇಷ ಇರಲೇಬೇಕು. ಕಾಲೇಜುಗಳು ಮತ್ತು ಯಕ್ಷಗಾನ ತಜ್ಞರ ಸಭೆ ನಡೆಸಿ ಎಲ್ಲವನ್ನೂ ನಿರ್ಧರಿಸಲಾಗುತ್ತದೆ. ಬದಲಾವಣೆಗಳಿಗೆ ತಜ್ಞರ ಒಪ್ಪಿಗೆ ಪಡೆಯುವುದು ಕಡ್ಡಾಯ.

ಈ ಎಲ್ಲ ಸಿದ್ಧತೆ, ನಿರ್ಬಂಧಗಳ ತರುವಾಯ ಪ್ರದರ್ಶನಗೊಳ್ಳುವ ಪ್ರಸಂಗಗಳಲ್ಲಿ ವಿದ್ಯಾರ್ಥಿಗಳು ವೃತ್ತಿಪರ ಕಲಾವಿದರಂತೆಯೇ ಆಂಗಿಕಾಭಿನಯ, ಮಾತುಗಾರಿಕೆ, ನೃತ್ಯ ಮುಂತಾದ ಯಕ್ಷಗಾನದ ಎಲ್ಲ ಅಂಗಗಳನ್ನು ಪ್ರದರ್ಶಿಸಿ ಬೆರಗುಗೊಳಿಸುತ್ತಾರೆ. ಈ ಬಾರಿ ಸುದರ್ಶನ ವಿಜಯ, ತರಣಿಸೇನ ಕಾಳಗ, ಕೃಷ್ಣಾರ್ಜುನ ಕಲಾಪ, ರುಕ್ಮಾಂಗದ ಚರಿತ್ರೆ, ಸುಧನ್ವ ಮೋಕ್ಷ, ಬಬ್ರುವಾಹನ ಕಾಳಗ, ನರಕಾಸುರ ಮೋಕ್ಷ ಮುಂತಾದ ಪ್ರಸಂಗಗಳಲ್ಲಿ ಅದು ಬಿಂಬಿಸಿತ್ತು.

'ಕಾಲೇಜು ಕಲಿಕೆಯ ಹೊರತಾದ ಕಲಾಪ್ರೀತಿ, ಯಕ್ಷಗಾನದ ಮೇಲಿನ ಸ್ವಯಂ ಅಭಿಮಾನ, ಸಜ್ಜಾಗಲು ಹಾಕುವ ಶ್ರಮ ಎಲ್ಲವೂ ಪ್ರತಿ ತಂಡದ ಪ್ರದರ್ಶನದ ಹಿಂದೆ ಲೆಕ್ಕಣಿಕೆಯಾಗಿ ನಿಲ್ಲುತ್ತದೆ. ಎಲ್ಲ ತಂಡಗಳೂ ಹತ್ತರಲ್ಲಿ ಹತ್ತು ಅಂಕಗಳನ್ನು ಗಳಿಸಲು ಸಮರ್ಥವಾಗಿವೆ. ಇಂಥ ಸ್ಪರ್ಧೆ ಯಕ್ಷಗಾನಕ್ಕೆ ಸಂಬಂಧಿಸಿ ದೊಡ್ಡ ಭಾಗ್ಯವೇ ಸರಿ' ಎಂದು ತೀರ್ಪುಗಾರರಲ್ಲಿ ಒಬ್ಬರಾಗಿದ್ದ ನಾ.ಕಾರಂತ ಪೆರಾಜೆ ಅವರು ಆಡಿದ ಮಾತಿನಲ್ಲಿ ಯಕ್ಷೋತ್ಸವದ ಸಕಲವೂ ಅಡಗಿತ್ತು.

ಮೊದಲ ಓದು

ತಲೆಮಾರಿನ ಬದುಕಿನ ಶೋಧ



ಪು: 160
₹200

ಮಾರ ಮಿಂದನು
ಲೇ: ಶ್ರೀಧರ ಬಳಗಾರ
ಪ್ರ: ಅಮೂಲ್ಯ ಪುಸ್ತಕ, ಬೆಂಗಳೂರು.
ಸಂ: 9448676770

'ಮಾರ ಮಿಂದನು' ಶ್ರೀಧರ ಬಳಗಾರರ ಏಳನೇ ಕಥಾಸಂಕಲನ. ಕಳೆದ ಮೂರು ದಶಕಗಳಿಂದ ಕಥಾಯಾನದಲ್ಲಿ ತೊಡಗಿಕೊಂಡಿರುವ (ಮೊದಲ ಸಂಕಲನ: 'ಅಧೋಮುಖ' - 1995) ಬಳಗಾರರು ಕನ್ನಡ ಕಥಾಲೋಕದ ಪ್ರಮುಖ ಧ್ವನಿಯಾಗಿ ರೂಪುಗೊಂಡಿರುವುದಕ್ಕೆ ನಿದರ್ಶನದ ರೂಪದಲ್ಲಿ ಈ ಸಂಕಲನದ ಕಥೆಗಳನ್ನು ಗಮನಿಸಬಹುದು.

ಸುಖ ಹಾಗೂ ಸುಖದ ಆಳದಲ್ಲಿರಬಹುದಾದ ಅಪಸವ್ಯಗಳನ್ನೊಳಗೊಂಡ ಆಧುನಿಕ ಬದುಕಿನ ಸಾಧ್ಯತೆಗಳ ಶೋಧ ಹಾಗೂ ವರ್ತಮಾನದ ಬಿಕ್ಕಟ್ಟುಗಳ ಮುಖಾಮುಖಿ ಈ ಹೊತ್ತಿನ ಕನ್ನಡ ಕಥಾಸಾಹಿತ್ಯದ ಎರಡು ಮುಖ್ಯ ನೆಲೆಗಳು. ಈ ಜನಪ್ರಿಯ ಧಾರೆಗಳಿಂದ ದೂರ ಉಳಿದವರಂತೆ ಕಥೆಗಳನ್ನು ಕಟ್ಟುತ್ತಿರುವ ಬಳಗಾರರು ಮೂರು ದಶಕಗಳ ಅವಧಿಯಲ್ಲಿ ತಮ್ಮದೇ ಆದ ಅನನ್ಯ ಶೈಲಿಯೊಂದನ್ನು ರೂಪಿಸಿಕೊಂಡಿದ್ದಾರೆ. ಬದುಕಿನ ಸಣ್ಣ ಸಣ್ಣ ದನಿಗಳನ್ನು ಗಮನಿಸುತ್ತ, ಅದನ್ನು ಅಷ್ಟೇ ಘನವಾದ ಭಾಷೆಯಲ್ಲಿ ಹಿಡಿದಿಡುವ ಪ್ರಯತ್ನ ಅವರದು. ವಿರಳ ಮನೆಗಳ ಗಾಢ ಪರಿಸರ ಹಾಗೂ ಅಂತರಂಗದಲ್ಲಿ ಏಕಾಕಿಯಾದ ಮನುಷ್ಯರ ಬದುಕಿನ ಸಾಧ್ಯತೆಗಳನ್ನು ಶೋಧಿಸುವ ಪ್ರಯತ್ನಗಳ ಮೂಲಕ ಬಳಗಾರರ ಕಥೆಗಳು ಕರುಣಿಸುವ ಅನುಭವ, ಸಣ್ಣಕಥೆಯ ಚೌಕಟ್ಟನ್ನು ವಿಸ್ತರಿಸಲು ಸಹೃದಯರನ್ನು ಒತ್ತಾಯಿಸುವಂತಿದೆ.

'ಮಾರ ಮಿಂದನು' ಸಂಕಲನದ ಪಾತ್ರಗಳು ಮೇಲ್ನೋಟಕ್ಕೆ ವರ್ತಮಾನದ ಭರಾಟೆಯ ಲೋಕಕ್ಕೆ ಸೇರದಂತೆ ಕಾಣಿಸಿದರೂ, ಆ ಪಾತ್ರಗಳ ಮನಸ್ಸಿನ ತಾಕಲಾಟಗಳು ಈ ಹೊತ್ತಿನ ಮನುಷ್ಯನ ಬದುಕಿನ ಸಿಕ್ಕುಗಳೇ ಆಗಿವೆ. ನಗರದ ಸೋಂಕಿನಿಂದ ದೂರವುಳಿದಿರುವ ಮೇದಿನಿಯ 'ಹೋಮ್ ಸ್ಟೇ'ಗೆ ತನ್ನ ಯುವ ಗೆಳೆಯರೊಂದಿಗೆ ಬರುವ ದಾಕಪ್ಪನ ಮನಸ್ಸಿನ ತಳಮಳ, ಬೇರು ಬಿಳಲುಗಳ ನಡುವಿನ ಕೊಂಡಿ ಕಳೆದುಕೊಂಡ ಈ ತಲೆಮಾರಿನ ಬಹುತೇಕರದೂ ಆಗಿದೆ. 'ರಂಭಾ ವಿವಾಹ' ಕಥೆಯಲ್ಲಿನ ಪರಮಯ್ಯ ಹಾಗೂ ದಮಯಂತಿ ಅವರು ತೆಗೆದುಕೊಳ್ಳುವ ನಿಲುವು ಈ ಹೊತ್ತಿನ ನೈತಿಕ-ಅನೈತಿಕತೆಯ ಕುರಿತ ಜಿಜ್ಞಾಸೆಯೂ ಆಗಿದೆ. ಜೀವನದ ಕಟುವಾಸ್ತವಗಳೆದುರು ನಾಟಕ (ಕಲೆ) ರಸಹೀನವಾಗಿ ಕಾಣಿಸುವುದು, ಮೈಮನಗಳಲ್ಲಿ ತಾರುಣ್ಯ ಉಳಿಸಿಕೊಂಡ ತಂದೆ ಹಾಗೂ ತಾರುಣ್ಯದಲ್ಲೇ ಮುಪ್ಪಡರಿದಂತಿರುವುದು ('ಅಕಾಲ'), ಹಾಸ್ಟೆಲ್‌ನಲ್ಲಿನ ಮಕ್ಕಳು ಸೇರಿದಂತೆ ನಗರದ ನಾಗರಿಕರ ಆರೋಗ್ಯ ಸಮಸ್ಯೆಗಳಿಗೆ ಕುಡಿಯುವ ನೀರು ಕಲುಷಿತವಾಗಿರುವುದೇ ಕಾರಣ ಎನ್ನುವ ಯಾರಿಗೂ ಮುಖ್ಯವೆನ್ನಿಸದ ಸತ್ಯದಿಂದ ಮಾರ ದಿಗ್ಭ್ರಮೆಗೊಳ್ಳುವುದು – ಈ ಕಂಪನಗಳು ತಮ್ಮ ಪಾತ್ರ, ಪರಿಧಿ, ಪರಿಸರದಾಚೆಗೂ ವಿಸ್ತರಿಸಿ, ಈ ತಲೆಮಾರಿನ ಬದುಕಿನ ಶೋಧವೂ ಆಗುವುದರಲ್ಲಿ ಬಳಗಾರರ ಕಥನಗಳ ಅಪೂರ್ವ ಸಾಧನೆಯಿದೆ.

ಕಥೆ

ಸುರಹೊನ್ನೆ ಅರವಿಂದ
ಅವರ
ಕುದುರೆಕೊಂಡ

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ಅಶೋಕ ಹೊಸಮನಿ
ಅವರ
ಉದಾರಿ ಕವಿಯೊಬ್ಬನ ಸ್ವಗತ

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry


ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಡಿಶ್ಯೂ ಚಿಕ್ಕು ಕೇಲ್ರಾಷ್ಟ್ರ ಕಥೆಯ


ದೋಣಿಗೆ ಸಿಟ್ಟಾದ ಶಾರ್ಕ್!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗುಂಡ ಸಮುದ್ರ ತೀರಕ್ಕೆ ಹೋಗಿದ್ದ. ಅಲ್ಲಿ ಆತನಿಗೊಂದು ಮೀನಿನ ಆಕಾರದಲ್ಲಿದ್ದ ಸ್ಪೀಡ್ ಬೋಟ್ ಕಾಣಿಸಿತು. ಅದರ ಹೊರಮೈ ಮೇಲೆ ಮೀನಿನ ಚಿತ್ರವನ್ನು ಬಿಡಿಸಿದ್ದರು. ಅದರಲ್ಲಿ ಕುಳಿತ ಗುಂಡ ವೇಗವಾಗಿ ಹುರ್ರೇ...ಹುರ್ರೇ... ಎನ್ನುತ್ತಾ ಬೋಟ್ ಚಲಾಯಿಸಿದ. ಕೆಲ ಹೊತ್ತಿನಲ್ಲಿ ಬೋಟ್ ಎದುರಿಗೆ ನಾಲ್ಕೈದು ಶಾರ್ಕ್‌ಗಳು ಬಂದವು. ಬೇರೊಂದು ದೊಡ್ಡ ಮೀನು ತಮ್ಮ ಬಳಿಗೆ ಬರುತ್ತಿದೆ ಎಂದುಕೊಂಡ ಅವುಗಳು ಸಿಟ್ಟಿನಿಂದ ಹಲ್ಲು ಕಡಿದು ಕಣ್ಣುಕೆಂಪು ಮಾಡಿದವು. ಇದನ್ನು ಕಂಡ ಗುಂಡ ಹೆದರಿ ಕಾಪಾಡಿ ಎಂದು ಕಿರುಚಿಕೊಂಡ.

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಫಜಲ್ ಅಹಮದ್
ತುಮಕೂರು




ತನುಶ್ರೀ ಎ.
ಬಾಗಲಕೋಟೆ



ವೇದಾ ರೇವಣ್ಣವರ
ವಿಜಯಪುರ



ಸಾಹಿತ್ಯ ಎಸ್.
ಹೂವಿನಹಡಗಲಿ



ಸುಮಂತ್ ಎಂ.
ಕೊಪ್ಪಳ



ಮಾನ್ವಿತ ಸಿ.
ಮೂಡಿಗೆರೆ

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ದಾರ	+	ಕಡಿ	+	ಳಿ	=	
2	ಪದ	+	ಕರ್ಣ	+	ಸ್ವ	=	
3	ಸಾರ	+	ಮರು	+	ಸ	=	
4	ಕರೆ	+	ನವ	+	ಬ	=	
5	ಗುಡಿ	+	ಪಣ	+	ಸು	=	

ಜಾಣಪದ ಆಟ

ಇಲ್ಲಿ ಕೊಟ್ಟಿರುವ 'ಕಾರ' ಪದಕ್ಕೆ ಅಕ್ಷರ ಪಟ್ಟಿಯಿಂದ ಎರಡಕ್ಷರ ಆಯ್ದು ತುಂಬಿ ನಾಲ್ಕಕ್ಷರ ಪದ ಮಾಡಿ

1			ಕಾ	ರ
2			ಕಾ	ರ
3			ಕಾ	ರ
4			ಕಾ	ರ
5			ಕಾ	ರ
6			ಕಾ	ರ
7			ಕಾ	ರ
8			ಕಾ	ರ
9			ಕಾ	ರ
10			ಕಾ	ರ

ಅಕ್ಷರ ಪಟ್ಟಿ

ಹ	ಮ	ಅ	ರಿ	ಧಿ
ಮ	ರ	ಪ	ಹಂ	ಧ
ದ	ಪ್ರ	ರ	ತೀ	ಅ
ಬ	ಸ	ಸ	ರ	ಅಂ

ಮೋಜಿನ ಇಂಗ್ಲಿಷ್ ವರ್ಡ್ ಗೇಮ್

ಇಲ್ಲಿ ಕೊಟ್ಟಿರುವ I,E ಅಕ್ಷರಗಳಿಗೆ ಇನ್ನೆರಡು ವ್ಯಂಜನ ಅಕ್ಷರ ಸೇರಿಸಿ ಅರ್ಥಬದ್ಧ ಪದ ರಚಿಸಿ..

1		I		E
2		I		E
3		I		E
4		I		E
5		I		E
6		I		E
7		I		E
8		I		E
9		I		E
10		I		E

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..


ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಗಣಿತದಲ್ಲಿ ಗರ್ದಿಗಮ್ಮತ್ತು

ಸಂಖ್ಯಾ ಪಿರಮಿಡ್: ತಾರ್ಕಿಕ ಗಣಿತ

ಇಲ್ಲಿ ಕೊಟ್ಟಿರುವ ಸಂಖ್ಯಾ ಪಿರಮಿಡ್‌ನಲ್ಲಿ ಬಿಟ್ಟಿರುವ ಸಂಖ್ಯೆಗಳನ್ನು ನಿಮ್ಮ ತಾರ್ಕಿಕ ಶಕ್ತಿಯಿಂದ ಯೋಚಿಸಿ ತುಂಬಿ. ಕೆಳಗಿನ ಎರಡು ವೃತ್ತಗಳ ಸಂಖ್ಯೆ ಮೊತ್ತ ಅದರ ಮೇಲಿನ ವೃತ್ತದ ಸಂಖ್ಯೆಗೆ ಸಮವಾಗಿರುತ್ತದೆ. ಗಮನಿಸಿ.





ಶಬ್ದಾಟ

ಇದೊಂದು ಸ್ವಾರಸ್ಯಕರ ಪದ. ಇಲ್ಲಿ ಮೊದಲಿನ ಒಂದೊಂದೆ ಅಕ್ಷರ ತೆಗೆಯುತ್ತಾ ಹೋದರೂ ಉಳಿಯುವ ಪದಗಳು ಅರ್ಥಬದ್ಧವಾಗಿಯೇ ಇರುತ್ತವೆ.

ರ	ವಿ	ಕಿ	ರ	ಣ

ರ	ವಿ	ಕಿ	ರ	ಣ
	ವಿ	ಕಿ	ರ	ಣ
		ಕಿ	ರ	ಣ
			ರ	ಣ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಗಗನಯಾನಿ 2.ಬಾಡಿಗೆಮನೆ 3.ಗುರುಕಿರಣ 4.ಬರಸಿಡಿಲು 5.ಕರಕುಶಲ

ವರ್ಡ್‌ಗೇಮ್: 1.NOVEL 2.HONEY 3.NEVER 4.RIVER 5.MAGIC 6.CAMEL 7.CIVIC 8.LEVEL 9.BASIC 10.SOLID 11.POWER 12.VALID 13.RULER 14.MODEL 15.TUTOR

ಜಾಣಪದ ಆಟ: 1.ಹಕ್ಕಿಜ್ವರ 2.ಸತ್ಯಾಗ್ರಹ 3.ಹತ್ತಿಪ್ಪತ್ತು 4.ಇಪ್ಪತ್ತಾರು 5.ಕಟ್ಟಪ್ಪಣೆ 6.ಒಟ್ಟೊಟ್ಟಿಗೆ 7.ಹಕ್ಕೊತ್ತಾಯ 8.ಕಟ್ಟಿಟ್ಟಿದ್ದ 9.ಇಪ್ಪತ್ತೂರು 10.ಇನ್ನೊಬ್ಬರು



ಇವರಿಗೆ ಸೈಕಲ್ ಸವಾರಿ ಬಲು ಇಷ್ಟ

ಡೆನ್ಮಾರ್ಕ್‌ನ ರಸ್ತೆಯೊಂದರಲ್ಲಿ ಬಾಡಿಗೆ ಸೈಕಲ್‌ಗಳು. ನಿಗದಿತ ಬಾಡಿಗೆ ಪಾವತಿಸಿ ಇವುಗಳನ್ನು ರಸ್ತೆಗಿಳಿಸಬಹುದು



ನೆದರ್‌ಲ್ಯಾಂಡ್ಸ್‌ನ ಆಮ್‌ಸ್ಟರ್‌ಡ್ಯಾಮ್‌ನಲ್ಲಿ ಸೈಕಲ್ ಸವಾರರು

ಪ್ರಕಾಶ್ ಕೆ.ನಾಡಿಗ್

ನಾನು ಎರಡು ಬಾರಿ ಯೂರೋಪ್ ಪ್ರವಾಸ ಕೈಗೊಂಡಿದ್ದೆ. ಆಗ ಅಲ್ಲಿ ಗಮನಿಸಿದ ಮುಖ್ಯ ಅಂಶ ಅಲ್ಲಿನ ಬಹಳಷ್ಟು ದೇಶಗಳಲ್ಲಿ ಜನ ಹೆಚ್ಚಾಗಿ ಸೈಕಲ್ ಬಳಸುತ್ತಾರೆ. ಅದರಲ್ಲೂ ಡೆನ್ಮಾರ್ಕ್ ಹಾಗೂ ನೆದರ್‌ಲ್ಯಾಂಡ್ಸ್ ಸೈಕಲ್ ಬಳಕೆಯಲ್ಲಿ ಮುಂಚೂಣಿಯಲ್ಲಿವೆ. ಇಲ್ಲಿರುವಷ್ಟು ಸೈಕಲ್ ಬೇರಾವ ದೇಶಗಳಲ್ಲಿಯೂ ಕಾಣಸಿಗುವುದಿಲ್ಲ.

ಯೂರೋಪಿನ ಯಾವುದೇ ನಗರಗಳಿಗೆ ಹೋದರೂ ಇಷ್ಟವಾಗುವುದು ಅಲ್ಲಿನ ರಸ್ತೆಗಳು! ದೂಳುರಹಿತ ಈ ರಸ್ತೆಗಳಲ್ಲಿ ಓಡಾಡುವುದೇ ಖುಷಿ. 1960ರಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಪೆಟ್ರೋಲ್‌ನಲ್ಲಿ ಆದ ಏರುಪೇರು ಹಾಗೂ ಪರಿಸರದ ಮೇಲಾಗುತ್ತಿರುವ ಕೆಟ್ಟ ಪರಿಣಾಮದಿಂದ ಅಲ್ಲಿನ ಜನ ಸೈಕಲ್ ಉಪಯೋಗಕ್ಕೆ ಹೆಚ್ಚು ಒತ್ತು ಕೊಡಲಾರಂಭಿಸಿದರು. ಇದರಿಂದಾಗಿ ಅತಿ ಹೆಚ್ಚು ಸೈಕಲ್ ಉಪಯೋಗಿಸುವ ದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಲು ಕಾರಣವಾಯಿತು. ಪರಿಸರ ಮಾಲಿನ್ಯ ಇಲ್ಲಿ ಇಲ್ಲವೆಂದೇ ಹೇಳಬೇಕು. ಯಾಕೆಂದರೆ ಡ್ಯಾನಿಷಿಗರು, ನೆದರ್‌ಲ್ಯಾಂಡ್ಸ್ ಜನ ಹೆಚ್ಚಾಗಿ ಸೈಕಲ್ ಅನ್ನೇ ಅವಲಂಬಿಸಿದ್ದಾರೆ. ಪ್ರಪಂಚದಲ್ಲೇ ಸೈಕಲ್‌ಗಳಿಗೋಸ್ಕರವಾಗಿ ಅತಿ ಹೆಚ್ಚು ನಿರ್ಮಾಣವಾದ ಪಥ ಇರುವುದು ಡೆನ್ಮಾರ್ಕ್‌ನಲ್ಲಿ. ಇಲ್ಲಿ ಬಹಳ ಮಂದಿ ಕಚೇರಿಗಳಿಗೂ ಸೈಕಲ್‌ನಲ್ಲಿಯೇ ತೆರಳುತ್ತಾರೆ. ರಸ್ತೆಯ ಇಕ್ಕೆಲಗಳಲ್ಲಿ ಸೈಕಲ್ ಪಥ ಇದೆ.

ಇಲ್ಲಿ ಹೆಚ್ಚಿನವರು ಸೈಕಲ್ ಅನ್ನೇ ಅವಲಂಬಿಸಿರುವುದರಿಂದ ಸರ್ಕಾರ ಸೈಕಲ್ ಸ್ಟ್ಯಾಂಡ್‌ಗಳನ್ನು ನಿರ್ಮಿಸಿದೆ. ಬಳಕೆದಾರರು ನಿಗದಿತ ಹಣ ಹಾಕಿದರೆ ಅದರ ಬೀಗ ತೆರೆದುಕೊಳ್ಳುತ್ತದೆ. ಸೈಕಲ್ ಅನ್ನು ತೆಗೆದುಕೊಂಡು ಓಡಾಡಬಹುದು. ಮತ್ತೆ ಇದೇ ರೀತಿ ಇರುವ ಸೈಕಲ್ ನಿಲ್ದಾಣಗಳಲ್ಲಿ ಅದನ್ನು ಬಿಟ್ಟು ಹೋಗಬಹುದು. ಸೈಕಲ್ ಚಕ್ರದಲ್ಲಿ ಗಾಳಿ ಕಡಿಮೆ ಇದೆಯೇ? ಚಿಂತೆ ಬೇಡ. ಅಲ್ಲಲ್ಲಿ ಸಿಗ್ನಲ್ ದೀಪದ ಕೆಳಗೆ ಇರುವ ಏರ್‌ಪೈಪ್‌ಗಳಿಂದ ಗಾಳಿಯನ್ನು ತುಂಬಿಸಿಕೊಳ್ಳಬಹುದು. ಡೆನ್ಮಾರ್ಕ್ ರಸ್ತೆಗಳಲ್ಲಿ ನಿಮಗೆ ಹೆಚ್ಚಾಗಿ ಕಾಣುವುದು ಒಂದೋ ಕಾರು ಅಥವಾ ಸೈಕಲ್. ಸರ್ಕಾರ ಕೂಡ ಪರಿಸರದ ಬಗ್ಗೆ ಕಾಳಜಿ ಹೊಂದಿರುವುದರಿಂದ ಈ ರೀತಿಯ ಸೈಕಲ್ ನಿಲ್ದಾಣಗಳನ್ನು ಮಾಡಿ ಸೈಕಲ್ ಬಳಕೆಯನ್ನು ಉತ್ತೇಜಿಸುತ್ತದೆ.

ಡೆನ್ಮಾರ್ಕ್‌ನಂತೆ ಆಮ್‌ಸ್ಟರ್‌ಡ್ಯಾಮ್ ಕೂಡ ಮುಂದುವರಿದ ದೇಶವಾಗಿದ್ದರೂ ಇವರು ಸೈಕಲ್ ತುಳಿಯುವುದನ್ನು ಬಿಟ್ಟಿಲ್ಲ. ನಗರದ ತುಂಬಾ ಸೈಕಲ್‌ಗಳಿಗಾಗಿಯೇ ಪ್ರತ್ಯೇಕ ಸಿಗ್ನಲ್ ದೀಪಗಳಿರುವ ರಸ್ತೆಗಳಿವೆ. ಸೈಕಲ್ ಪಥದಲ್ಲಿ ಬೇರೆ ಯಾರೂ ಹೋಗುವಂತಿಲ್ಲ. ಇಲ್ಲಿನ ಜನಸಂಖ್ಯೆಯಷ್ಟೇ ಸೈಕಲ್‌ಗಳು ಇದೆಯೆಂದರೆ ಆಶ್ಚರ್ಯವಾಗಬಹುದು. ನಮ್ಮಲ್ಲಿ ಕಾರು ಪಾರ್ಕಿಂಗ್ ಇರುವಂತೆ ಇಲ್ಲಿ ಸೈಕಲ್ ಪಾರ್ಕಿಂಗ್‌ಗಾಗಿಯೇ ಬಹುಮಹಡಿ ಕಟ್ಟಡಗಳಿವೆ. ಸೈಕಲ್ ಸವಾರರಿಗೆ ಉತ್ತೇಜನ ಕೊಡುವ ಮೂಲಕ ಒಂದು ಕಡೆ ಪೆಟ್ರೋಲ್ ಅವಲಂಬನೆ ಕಡಿಮೆ ಮಾಡುವುದರೊಂದಿಗೆ ಪರಿಸರ ಮಾಲಿನ್ಯವನ್ನೂ ತಡೆಯುತ್ತಿರುವ ಯೂರೋಪ್ ದೇಶಗಳ ಸರ್ಕಾರದ ಕ್ರಮವನ್ನು ಮೆಚ್ಚಬೇಕು.



ಊರ ನಡುವೆ ಮಿಯಾವಾಕಿ ಅರಣ್ಯ

ಸ್ಮಿತಾ ಮೈಸೂರ

ಗುಜರಾತಿನ ಕೆವಡಿಯಾ ಗ್ರಾಮ ಈಗ ಏಕತಾಮೂರ್ತಿ ಇರುವ ಏಕತಾ ನಗರ. ಸರ್ದಾರ್ ವಲ್ಲಭಭಾಯಿ ಪಟೇಲರ ಭವ್ಯಮೂರ್ತಿ ಇರುವ ಏಕತಾ ನಗರದ ಅನೇಕ ಆಕರ್ಷಣೆಗಳಲ್ಲಿ ಮಿಯಾವಾಕಿ ಅರಣ್ಯವೂ ಸೇರಿದೆ.

ಸ್ಥಳೀಯವಾಗಿ ಬೆಳೆಯುವ ಸಸ್ಯಗಳನ್ನು ಒತ್ತೊತ್ತಾಗಿ ಬೆಳೆಸಿ (ಮೂರು ಸಸಿಗಳನ್ನು ಹತ್ತಿರ ಹತ್ತಿರ ನೆಡುವುದು) ಅವುಗಳಿಗೆ ಬೇಕಾಗುವ ಪೋಷಕಾಂಶಗಳನ್ನು ನೀಡಿ ಊರ ಮಧ್ಯದಲ್ಲಿ ಕಾಡು ನಿರ್ಮಿಸುವುದು. ಇದರಿಂದ ನಶಿಸಿ ಹೋಗುವ ಗಿಡಮರಗಳನ್ನು ಉಳಿಸಿ ಪರಿಸರ ಮಾಲಿನ್ಯವನ್ನೂ ತಡೆಗಟ್ಟುವುದು ಇಂಥ ಕಾಡಿನ ಯೋಜನೆಯ ಉದ್ದೇಶ. ಇದು ಸಾಕಷ್ಟು ಯಶಸ್ವಿ ಕೂಡ ಆಗಿದೆ.

ಜಪಾನಿನ ಸಸ್ಯ ವಿಜ್ಞಾನಿ, ಪರಿಸರ ಪ್ರೇಮಿ ಅಕಿರಾ ಮಿಯಾವಾಕಿ ಅವರು ಎಪ್ಪತ್ತರ ದಶಕದಲ್ಲೇ ಇಂಥ ಯೋಜನೆಯನ್ನು ತಮ್ಮ ದೇಶದಲ್ಲಿ ಸಾಕಾರಗೊಳಿಸಿ ಯಶಸ್ವಿಯೂ ಆದರು. ಮಿಯಾವಾಕಿ ಅರಣ್ಯಕ್ಕೂ ಸಹಜವಾಗಿ ಬೆಳೆಯುವ ಅರಣ್ಯಕ್ಕೂ ಇರುವ ವ್ಯತ್ಯಾಸವಿಷ್ಟೆ–ಮಿಯಾವಾಕಿ ಅರಣ್ಯ ನಗರ ಪ್ರದೇಶಗಳಲ್ಲಿ ಅತ್ಯಂತ ವೇಗವಾಗಿ, ದಟ್ಟವಾಗಿ ಬೆಳೆಸಬಹುದು. ಪರಿಸರದಲ್ಲಿನ ಇಂಗಾಲಾಮ್ಲವನ್ನು ಪರಿಣಾಮಕಾರಿಯಾಗಿ ಕಡಿಮೆಗೊಳಿಸಬಹುದು. ಆದ್ದರಿಂದ ಇಂಥ ಅರಣ್ಯಗಳ ಬೆಳವಣಿಗೆಗೆ ಜಗತ್ತಿನಾದ್ಯಂತ ಮಿಯಾವಾಕಿ ಪ್ರೇರಣೆಯಾದರು.

ನಮ್ಮ ದೇಶದಲ್ಲೂ ಇಂಥ ಕಾಡುಗಳು ಈ ಸಸ್ಯ ವಿಜ್ಞಾನಿಯ ಹೆಸರಿನಿಂದಲೇ ಇವೆ. ಇಂಥ ಒಂದು ಕಾಡು ನೋಡ ಸಿಕ್ಕಿದ್ದು ಗುಜರಾತಿನ ಏಕತಾ ನಗರದಲ್ಲಿ. ಟಿಕೆಟ್ ಪಡೆದು ಒಳ ಹೋದಾಗ ಮೊದಲು ಈ ಕಾಡಿನ ವಿವರ ತಿಳಿಸುವ ಏಳೆಂಟು ನಿಮಿಷಗಳ ಸಾಕ್ಷ್ಯಚಿತ್ರವನ್ನು ತೋರಿಸುತ್ತಾರೆ. ನಂತರ ಕಾಡಿನ ಪ್ರವೇಶ. ಕಾಲುದಾರಿಗಳ ಮಾರ್ಗ ತೋರಿಸುವ ವಿವರ, ಬೆಳೆಸಿದ ಕಾಡಿನ ವಿವರ ತಿಳಿಸುವ ಫಲಕಗಳು, ಆಯಾ ಕಾಲಕ್ಕೆ ತಕ್ಕಂತೆ ಅರಳುವ ಹೂಗಳು ಸ್ವಾಗತಿಸುತ್ತವೆ. ಪ್ರವೇಶದಲ್ಲೇ ಇರುವ ಕಾರಂಜಿ, ಅಲ್ಲಲ್ಲಿ ತಂಗುದಾಣಗಳು ಕಣ್ಮನ ಸೆಳೆಯುತ್ತವೆ. ಜೇನುನೊಣಗಳನ್ನು ಸಾಕುವುದರಿಂದ ಆಗುವ ಪ್ರಯೋಜನಗಳು, ಜೇನುತುಪ್ಪದ ವಿವರ ತಿಳಿಸುವ ಫಲಕದ ಹತ್ತಿರ ಕಲ್ಲಿನಲ್ಲಿ ಕೆತ್ತಿದ ಜೇನುಗೂಡು ಗಮನ ಸೆಳೆಯುತ್ತದೆ. ಇಡೀ ಕಾಡನ್ನು ಐದು ಭಾಗಗಳನ್ನಾಗಿ ವಿಂಗಡಿಸಿದ್ದಾರೆ. ಸ್ಥಳೀಯವಾಗಿರುವ ಹೂಗಿಡಗಳು, ಮರಮುಟ್ಟು ಗಿಡಗಳು, ಹೂದೋಟ, ಔಷಧೀಯ ಸಸ್ಯಗಳು,



(ಇವೆಲ್ಲವನ್ನೂ ಸ್ಥಳೀಯವಾಗಿ ಬೆಳೆಯುವ ಪ್ರಭೇದಗಳಿಂದಲೇ ಆಯ್ದುಕೊಂಡಿದ್ದಾರೆ) ಮತ್ತು ಡಿಜಿಟಲ್ ಓರಿಯಂಟೇಶನ್ ಕೇಂದ್ರ–ಹೀಗೆ ಮಿಯಾವಾಕಿ ಅರಣ್ಯ ಅತ್ಯಂತ ವ್ಯವಸ್ಥಿತವಾಗಿ ನಿರ್ಮಾಣವಾಗಿದೆ.

ಊರಿನ ನಡುವೆ ದಟ್ಟವಾದ ಕಾಡೊಂದನ್ನ ಬೆಳೆಸಬಹುದು, ಪರಿಸರ ಸ್ವಚ್ಛತೆ ಕಾಪಾಡುವುದರ ಜೊತೆ, ನಶಿಸುವ ಗಿಡಗಳನ್ನು ರಕ್ಷಿಸಬಹುದು ಎಂಬ ಸಕಾರಾತ್ಮಕ ಚಿಂತನೆ ಈ ಮಿಯಾವಾಕಿ ಕಾಡು ಉಂಟು ಮಾಡುತ್ತದೆ.



ಚೆನ್ನೈನಲ್ಲಿ 15 ವರ್ಷಗಳ ನಂತರ ಡೆಲ್ಲಿಗೆ ಜಯ; ಸೂಪರ್ ಕಿಂಗ್ಸ್ ತಂಡಕ್ಕೆ ಸತತ ಮೂರನೇ ಸೋಲು

ರಾಹುಲ್ ಮಿಂಚು; ಡೆಲ್ಲಿಗೆ ಹ್ಯಾಟ್ರಿಕ್ ಜಯ

ಚೆನ್ನೈ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ಚೆಂದದ ಬ್ಯಾಟಿಂಗ್ ಬಲದಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಜಯದ 'ಹ್ಯಾಟ್ರಿಕ್' ಸಂಭ್ರಮ ಆಚರಿಸಿತು. ಡೆಲ್ಲಿ ತಂಡವು 15 ವರ್ಷಗಳ ನಂತರ ಚೆನ್ನೈನಲ್ಲಿ ಸಾಧಿಸಿದ ಗೆಲುವು ಇದಾಗಿದೆ.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು 25 ರನ್‌ಗಳಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಮಣಿಸಿತು. ಚೆನ್ನೈ ತಂಡಕ್ಕೆ ಇದು ಸತತ ಮೂರನೇ ಸೋಲು.

ಮಧ್ಯಾಹ್ನ ಆರಂಭವಾದ ಪಂದ್ಯದಲ್ಲಿ ಟಾಸ್ ಗೆದ್ದ ಡೆಲ್ಲಿ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲ ಓವರ್‌ನಲ್ಲಿಯೇ ಖಲೀಲ್ ಅಹಮದ್ ಎಸೆತವನ್ನು ಆಡುವ ಆತುರದಲ್ಲಿ ಜೇಕ್ ಫ್ರೇಸರ್ ಮೆಕ್‌ಗುರ್ಕ್ ಅವರು ಅಶ್ವಿನ್‌ಗೆ ಕ್ಯಾಚಿತ್ತರು. ಇನ್ನೊಂದು ಬದಿಯಲ್ಲಿದ್ದ ರಾಹುಲ್ ಇನಿಂಗ್ಸ್ ಕಟ್ಟುವ ಹೊಣೆಯನ್ನು ತಮ್ಮ ಮೇಲೆ ಎಳೆದುಕೊಂಡರು. ಅವರಿಗೆ ಅಭಿಷೇಕ್ ಪೊರೆಲ್ ಉತ್ತಮ ಜೊತೆ ನೀಡಿದರು. ರಾಹುಲ್ (77; 51ಎ, 4X6, 6X3) ಮತ್ತು ಅಭಿಷೇಕ್ (33; 20ಎ, 4X4, 6X1) ಎರಡನೇ ವಿಕೆಟ್ ಜೊತೆಯಾಟದಲ್ಲಿ 53 ರನ್ ಸೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 183 ರನ್ ಪೇರಿಸಿತು.

ಗುರಿ ಬೆನ್ನಟ್ಟಿದ ಚೆನ್ನೈ ತಂಡದ ಆರಂಭ ಚೆನ್ನಾಗಿರಲಿಲ್ಲ. 41 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು. ವಿಪ್ರಜ್ ನಿಗಮ್ (27ಕ್ಕೆ2) ಮತ್ತು ಮುಕೇಶ್ ಕುಮಾರ್ (36ಕ್ಕೆ1) ಅವರ ದಾಳಿಯ ಮುಂದೆ ತಂಡದ ರನ್ ಗಳಿಕೆ ವೇಗ ಕುಸಿಯಿತು. ಮಧ್ಯಮ ಕ್ರಮಾಂಕದಲ್ಲಿ ವಿಜಯಶಂಕರ್ (ಔಟಾಗದೇ 69; 54ಎ, 4X5, 6X1) ಮತ್ತು ಅನುಭವಿ ಮಹೇಂದ್ರಸಿಂಗ್ ಧೋನಿ (ಔಟಾಗದೇ 30; 26ಎ, 4X1, 6X1) ಅವರ ಪ್ರಯತ್ನಕ್ಕೆ ಫಲ ಸಿಗಲಿಲ್ಲ. ಡೆಲ್ಲಿ ಬೌಲರ್‌ಗಳು ಬಿಗಿ ಹಿಡಿತ ಸಾಧಿಸಿದರು. ಇದರಿಂದಾಗಿ ಚೆನ್ನೈ ಬಳಗಕ್ಕೆ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 158 ರನ್ ಗಳಿಸಲು ಮಾತ್ರ ಸಾಧ್ಯವಾಯಿತು.

ರಾಹುಲ್ ಬ್ಯಾಟಿಂಗ್: ಹೋದ ವರ್ಷ ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕರಾಗಿದ್ದ ರಾಹುಲ್ ಈ ಸಲ ಡೆಲ್ಲಿ ಕ್ಯಾಪಿಟಲ್ಸ್‌ನಲ್ಲಿ ಆಡುತ್ತಿದ್ದಾರೆ. ವಿಕೆಟ್‌ಕೀಪರ್ ಬ್ಯಾಟರ್ ರಾಹುಲ್ ಟೂರ್ನಿಯ ಮೊದಲ ಪಂದ್ಯದಲ್ಲಿ ಆಡಿರಲಿಲ್ಲ. ಅವರು 'ಪಿತೃತ್ವ ರಜೆ' ಪಡೆದಿದ್ದರು. ವಿಶಾಖಪಟ್ಟಣದಲ್ಲಿ ನಡೆದಿದ್ದ ಎರಡನೇ ಪಂದ್ಯದಲ್ಲಿ ಸನ್‌ರೈಸರ್ಸ್ ಎದುರು 15 ರನ್ ಗಳಿಸಿದ್ದರು.

ಆದರೆ ಈ ಪಂದ್ಯದಲ್ಲಿ ಅವರು ಚೆಂದದ ಬ್ಯಾಟಿಂಗ್ ತೋರಿಸಿದರು. ಈ ತಿಂಗಳ 18ರಂದು 33 ವಸಂತ ಪೂರೈಸಲಿರುವ ರಾಹುಲ್, ಟೂರ್ನಿಯಲ್ಲಿ ತಮ್ಮ ಮೊದಲ ಅರ್ಧಶತಕ ದಾಖಲಿಸಿದರು. ಅವರಿಗೆ ಒಟ್ಟಾರೆ ಐಪಿಎಲ್‌ನಲ್ಲಿ ಇದು 39ನೇಯದ್ದು.

ಅಭಿಷೇಕ್ ಅವರಿಗೆ ಎರಡನೇ ಓವರ್‌ನಲ್ಲಿ ಜೀವದಾನ ಲಭಿಸಿತು. ಇದರ ಲಾಭವನ್ನು ಪಡೆದ ಅವರು ಇನಿಂಗ್ಸ್‌ಗೆ ಬಲ ತುಂಬಿದರು. ಸ್ಪಿನ್ನರ್ ರವೀಂದ್ರ ಜಡೇಜ ಓವರ್‌ನಲ್ಲಿ ಅಭಿಷೇಕ್ ಔಟಾದರು. ಆಗ ರಾಹುಲ್ ಜೊತೆಗೂಡಿದ ನಾಯಕ ಅಕ್ಷರ್ ಪಟೇಲ್ (21; 14ಎ) ಅವರೂ ರನ್ ವೇಗ ನಿರ್ವಹಿಸಿದರು. ಅವರ ನಂತರ ಸಮೀರ್ ರಿಜ್ವಿ (20 ;15ಎ) ಕೂಡ ಒಂದಿಷ್ಟು ಹೊತ್ತು ರಾಹುಲ್‌ಗೆ ಜೊತೆ ನೀಡಿದರು. ಕೊನೆ ಓವರ್‌ನಲ್ಲಿ ರಾಹುಲ್ ಅವರು ಮಥೀಷ ಪಥಿರಾಣ ಎಸೆತ ಆಡುವ ಭರದಲ್ಲಿ ವಿಕೆಟ್‌ಕೀಪರ್ ಧೋನಿಗೆ ಕ್ಯಾಚಿತ್ತರು.

ಟ್ರಿಸ್ಟನ್ ಸ್ಟಬ್ಸ್ 12 ಎಸೆತಗಳಲ್ಲಿ 24 ರನ್ ಗಳಿಸಿ ಅಜೇಯರಾಗುಳಿದರು. 200ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ ಅವರು ತಂಡದ ಮೊತ್ತ ಹೆಚ್ಚಲು ಕಾರಣರಾದರು.

ಪಂದ್ಯ ವೀಕ್ಷಿಸಿದ ಧೋನಿ ಅಪ್ಪ, ಅಮ್ಮ



ಚೆನ್ನೈನಲ್ಲಿ ಶನಿವಾರ ಐಪಿಎಲ್ ಪಂದ್ಯ ವೀಕ್ಷಿಸಿದ ಮಹೇಂದ್ರಸಿಂಗ್ ಧೋನಿ ಅವರ ತಾಯಿ ದೇವಕಿ ದೇವಿ ಮತ್ತು ತಂದೆ ಪಾನ್ ಸಿಂಗ್ —ಪಿಟಿಐ ಚಿತ್ರ

ಚೆನ್ನೈ (ಪಿಟಿಐ): ಮಹೇಂದ್ರಸಿಂಗ್ ಧೋನಿ ಅವರ ತಂದೆ ಪಾನ್ ಸಿಂಗ್ ಮತ್ತು ತಾಯಿ ದೇವಿಕಿ ದೇವಿ ಅವರು ಶನಿವಾರ ಚೆಪಾಕ್‌ನಲ್ಲಿ ನಡೆದ ಪಂದ್ಯವನ್ನು ವೀಕ್ಷಿಸಿದರು.

ಧೋನಿ 2008ರಿಂದಲೂ ಚೆನ್ನೈ ತಂಡಕ್ಕೆ ಆಡುತ್ತಿದ್ದಾರೆ. ಆದರೆ ಇದೇ ಮೊದಲ ಸಲ ಧೋನಿ ಆಡಿದ ಪಂದ್ಯವನ್ನು ಅವರ ತಂದೆ ತಾಯಿ ವೀಕ್ಷಿಸಲು ಆಗಮಿಸಿದ್ದರು. ಧೋನಿಯವರ ಪತ್ನಿ ಸಾಕ್ಷಿ ಮತ್ತು ಮಗಳು ಝೀವಾ ಕೂಡ ಈ ಸಂದರ್ಭದಲ್ಲಿ ಹಾಜರಿದ್ದರು.

ಗಾಯಗೊಂಡಿರುವ ಋತುರಾಜ್ ಗಾಯಕವಾಡ್ ಅವರು ಈ ಪಂದ್ಯದಿಂದ ವಿಶ್ರಾಂತಿ ಪಡೆಯುವರು. ಅವರ ಬದಲಿಗೆ ಧೋನಿ ನಾಯಕತ್ವ ವಹಿಸುವರು ಎಂಬ ಮಾತುಗಳು ಶುಕ್ರವಾರ ಕೇಳಿಬಂದಿದ್ದವು. ಆದರೆ ಋತುರಾಜ್ ಅವರು ಆಡಿದರು. ನಾಯಕತ್ವವನ್ನು ವಹಿಸಿದರು. ಟಾಸ್ ಸಂದರ್ಭದಲ್ಲಿ ಮಾಧ್ಯಮದೊಂದಿಗೆ ಮಾತನಾಡಿದ ಋತುರಾಜ್, 'ನನ್ನ ಮೊಣಕೈ ಗಾಯವು ಶಮನವಾಗಿದೆ. ಫಿಟ್ ಆಗಿದ್ದೇನೆ' ಎಂದರು.

ರಾಂಚಿಯ ಧೋನಿ ಅವರಿಗೆ ಈ ಟೂರ್ನಿಯು ಕೊನೆಯದ್ದು ಎನ್ನಲಾಗಿದೆ. 43 ವರ್ಷ ವಯಸ್ಸಿನ ಧೋನಿ ಕೆಲವು ವರ್ಷಗಳ ಹಿಂದೆಯೇ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ಐಪಿಎಲ್‌ನಿಂದಲೂ ಅವರು ಶೀಘ್ರ ನಿವೃತ್ತಿ ಘೋಷಿಸುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.



ಕೆ.ಎಲ್. ರಾಹುಲ್ ಅರ್ಧಶತಕ ಪೂರೈಸಿ ಸಂಭ್ರಮಿಸಿದರು —ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು

ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 6ಕ್ಕೆ183 (ಕೆ.ಎಲ್. ರಾಹುಲ್ 77, ಅಭಿಷೇಕ್ ಪೊರೆಲ್ 33, ಅಕ್ಷರ್ ಪಟೇಲ್ 21, ಸಮೀರ್ ರಿಜ್ವಿ 20, ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 24, ಖಲೀಲ್ ಅಹಮದ್ 25ಕ್ಕೆ2, ರವೀಂದ್ರ ಜಡೇಜ 19ಕ್ಕೆ1, ನೂರ್ ಅಹಮದ್ 36ಕ್ಕೆ1, ಮಥೀಷ ಪಥಿರಾಣ 31ಕ್ಕೆ1) **ಚೆನ್ನೈ ಸೂಪರ್ ಕಿಂಗ್ಸ್:** 20 ಓವರ್‌ಗಳಲ್ಲಿ 5ಕ್ಕೆ158 (ವಿಜಯ ಶಂಕರ್ ಔಟಾಗದೇ 69, ಶಿವಂ ದುಬೆ 18, ಮಹೇಂದ್ರಸಿಂಗ್ ಧೋನಿ ಔಟಾಗದೇ 30, ವಿಪ್ರಜ್ ನಿಗಮ್ 27ಕ್ಕೆ2, ಮಿಚೆಲ್ ಸ್ಟಾರ್ಕ್ 27ಕ್ಕೆ1, ಮುಕೇಶ್ ಕುಮಾರ್ 36ಕ್ಕೆ1) ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ 25 ರನ್‌ಗಳ ಜಯ. ಪಂದ್ಯಶ್ರೇಷ್ಠ: ಕೆ.ಎಲ್. ರಾಹುಲ್.

ರಿಷಭ್ ಪಂತ್‌ಗೆ ₹ 12 ಲಕ್ಷ ದಂಡ

ಲಖನೌ (ಪಿಟಿಐ): ನಿಗದಿಯ ಅವಧಿಯೊಳಗೆ ಓವರ್‌ಗಳನ್ನು ಮುಗಿಸುವಲ್ಲಿ ವಿಫಲರಾದ ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕ ರಿಷಭ್ ಪಂತ್ ಅವರಿಗೆ ₹ 12 ಲಕ್ಷ ದಂಡ ವಿಧಿಸಲಾಗಿದೆ.



ರಿಷಭ್ ಪಂತ್

ಶುಕ್ರವಾರ ಏಕನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಲಖನೌ ತಂಡವು 12 ರನ್‌ಗಳಿಂದ ಮುಂಬೈ ಇಂಡಿಯನ್ಸ್ ತಂಡವನ್ನು ಸೋಲಿಸಿತು. 90 ನಿಮಿಷಗಳಲ್ಲಿ 20 ಓವರ್‌ಗಳನ್ನು ಪೂರೈಸುವುದು ಕಡ್ಡಾಯ ನಿಯಮ. ಆದರೆ 19ನೇ ಓವರ್‌ಗಳಾಗುವಾಗಲೇ ತಂಡವು ನಿಗದಿಯ ಅವಧಿ ಮೀರಿತ್ತು. ಅದರಿಂದಾಗಿ 30 ಯಾರ್ಡ್ ವೃತ್ತದ ಹೊರಗೆ ಒಬ್ಬ ಫೀಲ್ಡರ್ ಕಡಿಮೆ ಮಾಡಬೇಕಾಯಿತು.

'ಪಂತ್ ನಾಯಕತ್ವದ ತಂಡದ ಮೊದಲ ಪ್ರಕರಣ ಇದಾಗಿದೆ. ಐಪಿಎಲ್ ನಿಯಮ 2.22ರ ಪ್ರಕಾರ ದಂಡ ವಿಧಿಸಲಾಗಿದೆ' ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಿಗ್ವೇಶ್‌ಗೆ ಮತ್ತೆ ದಂಡ: ಲಖನೌ ತಂಡದ ಸ್ಪಿನ್ನರ್ ದಿಗ್ವೇಶ್ ರಾಠಿ ಅವರಿಗೆ ಮತ್ತೆ ದಂಡ ವಿಧಿಸಲಾಗಿದೆ. ಈ ಬಾರಿಯೂ ಅವರಿಗೆ 'ನೋಟ್‌ಬುಕ್ ಸಂಭ್ರಮ' ಆಚರಣೆ ಮಾಡಿದ್ದ ಕಾರಣಕ್ಕೇ ದಂಡ ಹಾಕಲಾಗಿದೆ. ಅವರ ಪಂದ್ಯದ ಸಂಭಾವನೆಯ ಅರ್ಧಭಾಗವನ್ನು ದಂಡ ವಿಧಿಸಲಾಗುವುದು. ಪಂದ್ಯದಲ್ಲಿ ನಮನ್ ಧೀರ್ ವಿಕೆಟ್ ಗಳಿಸಿದಾಗ ಅವರು ಈ ರೀತಿ 'ನೋಟ್‌ಬುಕ್ ಸಂಭ್ರಮ' ಅಚರಿಸಿದರು.

ಈಚೆಗೆ ಪಂಜಾಬ್ ಕಿಂಗ್ಸ್ ತಂಡದ ವಿರುದ್ಧವೂ ಇಂತಹದೇ ಸಂಭ್ರಮಕ್ಕಾಗಿ ದಿಗ್ವೇಶ್ ಅವರಿಗೆ ದಂಡ ಹಾಕಿ, ಒಂದು ಡಿಮೆರಿಟ್ ಪಾಯಿಂಟ್ ಕೂಡ ಕೊಡಲಾಗಿತ್ತು.

'ಟೂರ್ನಿಯಲ್ಲಿ ದಿಗ್ವೇಶ್ ಅವರ ಎರಡನೇ ಪ್ರಕರಣ ಇದಾಗಿದೆ. ಇದರೊಂದಿಗೆ ಅವರ ಖಾತೆಯಲ್ಲಿ ಒಟ್ಟು ಎರಡು ಡಿಮೆರಿಟ್ ಪಾಯಿಂಟ್ ಸೇರಿವೆ' ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇನಿಂಗ್ಸ್‌ನಲ್ಲಿ ಬಿಗಿ ದಾಳಿ ನಡೆಸಿದ್ದ ದಿಗ್ವೇಶ್ ರಾಠಿ (21ಕ್ಕೆ1) ಅವರು ಪಂದ್ಯದ ಆಟಗಾರ ಗೌರವಕ್ಕೂ ಪಾತ್ರರಾದರು.



ಮೇರು ನಟನಿಗೆ ಶ್ರದ್ಧಾಂಜಲಿ.

ಹೈದರಾಬಾದ್‌ಗೆ ಗುಜರಾತ್ ಸವಾಲು


ಲಯಕ್ಕೆ ಮರಳುವತ್ತ ಸನ್ ಚಿತ್ತ

ಹೈದರಾಬಾದ್ (ಪಿಟಿಐ): ಸಿಡಿಲಬ್ಬರದ ಬ್ಯಾಟಿಂಗ್‌ನಿಂದ ಬೃಹತ್ ಮೊತ್ತಗಳನ್ನು ಪೇರಿಸುವ ಸನ್‌ರೈಸರ್ಸ್ ಹೈದರಾಬಾದ್ ತಂಡವು ಕಳೆದ ಕೆಲವು ಪಂದ್ಯಗಳಿಂದ ಮಂಕಾಗಿದೆ. ಭಾನುವಾರ ತನ್ನ ತವರಿನಂಗಳದಲ್ಲಿ ನಡೆಯಲಿರುವ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ಎದುರು ಲಯಕ್ಕೆ ಮರಳುವ ಒತ್ತಡದಲ್ಲಿದೆ.

ಸನ್‌ರೈಸರ್ಸ್ ತಂಡವು ಆಡಿದ ಕಳೆದ ಮೂರು ಪಂದ್ಯಗಳಲ್ಲಿ ಕ್ರಮವಾಗಿ 190, 163 ಮತ್ತು 120 ರನ್‌ಗಳ ಮೊತ್ತಗಳನ್ನು ಪೇರಿಸಿತ್ತು. ಅಲ್ಲದೇ ಸತತ ಸೋಲುಗಳಿಂದಾಗಿ ಪಾಯಿಂಟ್ ಪಟ್ಟಿಯಲ್ಲಿ ಕೊನೆಯ ಸ್ಥಾನಕ್ಕಿಳಿದಿದೆ. ಟೂರ್ನಿಯಲ್ಲಿ ತನ್ನ ಮೊದಲ ಪಂದ್ಯದಲ್ಲಿ 286 ರನ್‌ಗಳ ಮೊತ್ತ ಗಳಿಸಿ ತಂಡವು ಈ ರೀತಿ ಕುಸಿಯುತ್ತಿರುವುದು ನಾಯಕ ಪ್ಯಾಟ್ ಕಮಿನ್ಸ್ ಅವರ ಒತ್ತಡ ಹೆಚ್ಚಿಸಿದೆ.

ತಂಡದ ರನ್ ಯಂತ್ರಗಳಾದ ಅಭಿಷೇಕ್ ಶರ್ಮಾ, ಟ್ರಾವಿಸ್ ಹೆಡ್, ಇಶಾನ್ ಕಿಶನ್, ನಿತೀಶ್ ಕುಮಾರ್, ಹೆನ್ರಿಚ್ ಕ್ಲಾಸೆನ್, ಅಭಿನವ್ ಮನೋಹರ್ ಅವರು ನಿರೀಕ್ಷೆಗೆ ತಕ್ಕಂತೆ ಆಡುತ್ತಿಲ್ಲ. ಅವರು ಲಯಕ್ಕೆ ಮರಳಿದರೆ ಮತ್ತೆ ರನ್ ಹೊಳೆ ಹರಿಯುವುದರಲ್ಲಿ ಅನುಮಾನವೇ ಇಲ್ಲ.

ಆದರೆ ಶುಭಮನ್ ಗಿಲ್ ನಾಯಕತ್ವದ ಗುಜರಾತ್ ತಂಡವು ತಾನು ಆಡಿದ ಕಳೆದ ಎರಡೂ ಪಂದ್ಯಗಳಲ್ಲಿ ಅಮೋಘ ಜಯ ಸಾಧಿಸಿದೆ. ಅದರಲ್ಲೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಅದರ ತವರಿನಲ್ಲಿಯೇ ಮಣಿಸಿರುವುದು ಗಿಲ್ ಬಳಗದ ಆತ್ಮ ವಿಶ್ವಾಸವನ್ನು ವೃದ್ಧಿಸಿದೆ. ತಂಡದ ವೇಗಿ ಮೊಹಮ್ಮದ್ ಸಿರಾಜ್, ಕನ್ನಡಿಗ ಪ್ರಸಿದ್ಧ ಕೃಷ್ಣ, ಸ್ಪಿನ್ನರ್ ರಶೀದ್ ಖಾನ್, ಮೊಹಮ್ಮದ್ ಅರ್ಷದ್ ಖಾನ್ ಅವರು ಉತ್ತಮ ಲಯದಲ್ಲಿದ್ದಾರೆ.



ಶುಭಮನ್



ಇಶಾನ್ ಕಿಶನ್

ಆರ್‌ಸಿಬಿ ಎದುರು ಚೆಂದದ ಬ್ಯಾಟಿಂಗ್ ಮಾಡಿದ್ದ ಜೋಸ್ ಬಟ್ಲರ್ ಅವರು ಲಯಕ್ಕೆ ಮರಳಿದ್ದರು. ಅವರೊಂದಿಗೆ ಗಿಲ್, ಬಿ. ಸಾಯಿ ಸುದರ್ಶನ್, ಶಾರೂಕ್ ಖಾನ್ ಮತ್ತು ರಾಹುಲ್ ತೆವಾಟಿಯಾ ಕೂಡ ರನ್ ಹೊಳೆ ಹರಿಸಬಲ್ಲ ಸಮರ್ಥರಾಗಿದ್ದಾರೆ. ಎದುರಾಳಿ ತಂಡದ ಬೌಲರ್‌ಗಳಿಗೆ ಕಠಿಣ ಸವಾಲೊಡ್ಡಬಲ್ಲ ಬ್ಯಾಟರ್‌ಗಳು ಇವರಾಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಶೂಟಿಂಗ್: ಸಿಫ್ಟ್ ಕೌರ್‌ಗೆ ಚಿನ್ನ

ನವದೆಹಲಿ (ಪಿಟಿಐ): ಹಿನ್ನಡೆಯಿಂದ ಚೇತರಿಸಿಕೊಂಡ ಭಾರತದ ಶೂಟರ್ ಸಿಫ್ಟ್ ಕೌರ್ ಸಮ್ರಾ ಅವರು ಅರ್ಜೆಂಟೀನಾದ ಬ್ಯೂನೊ ಏರ್ಸ್‌ನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವ ಕಪ್‌ನಲ್ಲಿ ಮಹಿಳೆಯರ 50 ಮೀಟರ್ ರೈಫಲ್ 3 ಪೊಸಿಷನ್ಸ್ ಸ್ಪರ್ಧೆಯ ಫೈನಲ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡರು. ಇದು ಹಾಲಿ ವಿಶ್ವಕಪ್‌ನಲ್ಲಿ ಭಾರತಕ್ಕೆ ಮೊದಲ ಚಿನ್ನ.



ಸಿಫ್ಟ್ ಕೌರ್

ಈ ಸ್ಪರ್ಧೆಯಲ್ಲಿ ವಿಶ್ವದಾಖಲೆ ಹೊಂದಿರುವ 23 ವರ್ಷ ವಯಸ್ಸಿನ ಸಿಫ್ಟ್ ಅವರಿಗೆ ವಿಶ್ವಕಪ್‌ನಲ್ಲಿ ಇದು ಮೊದಲ ವೈಯಕ್ತಿಕ ಚಿನ್ನ ಸಹ.

ಶುಕ್ರವಾರ ರಾತ್ರಿ ನಡೆದ ಫೈನಲ್‌ನಲ್ಲಿ 15 ಶಾಟ್‌ಗಳ ನಂತರ (ಮೊಣಕಾಲೂರಿ ಶೂಟ್ ಮಾಡುವ ಹಂತದಲ್ಲಿ) ಫರೀದ್‌ಕೋಟ್‌ನ ಸ್ಪರ್ಧಿ, ಜರ್ಮನಿಯ ಅನಿಟಾ ಮಂಗೋಲ್ಡ್ ಅವರಿಗಿಂತ 7.2 ಪಾಯಿಂಟ್ಸ್ ಹಿಂದೆಯಿದ್ದರು. ಆದರೆ ಈ ಹಂತದಲ್ಲಿ ಪ್ರದರ್ಶನ ಮಟ್ಟ ಸುಧಾರಿಸಿಕೊಂಡ ಅವರು ಒಟ್ಟು 45 ಶಾಟ್‌ಗಳ ಫೈನಲ್‌ನಲ್ಲಿ 458.6 ಪಾಯಿಂಟ್ಸ್ ಕಲೆಹಾಕಿದರು. ಮಂಗೋಲ್ಡ್ 455.3 ಪಾಯಿಂಟ್ಸ್ ಸಂಗ್ರಹಿಸಿ ಎರಡನೇ ಸ್ಥಾನಕ್ಕೆ ಸರಿದರು.

ಅರಿನಾ ಅಲ್ಟುಖೋವಾ (ಕಜಕಸ್ತಾನ) 445.9 ಪಾಯಿಂಟ್‌ಗಳೊಂದಿಗೆ ಮೂರನೇ ಸ್ಥಾನ ಪಡೆದರು.

ಭಾರತ ಈ ಚಿನ್ನದ ಜೊತೆಗೆ ಒಂದು ಕಂಚಿನ ಪದಕ ಗೆದ್ದುಕೊಂಡಿದೆ. ಚೈನ್ ಸಿಂಗ್ ಪುರುಷರ ರೈಫಲ್ 3 ಪೊಷಿಷನ್ಸ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದರು.

ಸಿಫ್ಟ್ ಸಾಧನೆ: ಅರ್ಹತಾ ಸುತ್ತಿನಲ್ಲಿ ಸಿಫ್ಟ್ ಕೌರ್ ಅವುರ 590 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನದೊಡನೆ ಫೈನಲ್‌ಗೆ ಅರ್ಹತೆ ಪಡೆದಿದ್ದರು. ಹಾಲಿ ಒಲಿಂಪಿಕ್ ಚಾಂಪಿಯನ್ ಚಿಯರಾ ಲಿಯೋನ್, ಮಾಜಿ ಒಲಿಂಪಿಕ್ ಚಾಂಪಿಯನ್ ನಿನಾ ಕ್ರಿಸ್ಟೆನ್ (ಸ್ವಿಟ್ಜರ್ಲೆಂಡ್) ಮೊದಲ ಎಂಟರಲ್ಲಿ ಸ್ಥಾನ ಪಡೆಯಲು ವಿಫಲರಾದರು.

ರೈಝಾ ಮುನ್ನಡೆ: ಮಹಿಳೆಯರ ಸ್ಕೀಟ್ ವಿಭಾಗದಲ್ಲಿ ನಾಲ್ಕು ಸುತ್ತುಗಳು ಮುಗಿದಿದ್ದು, ಪ್ಯಾರಿಸ್ ಒಲಿಂಪಿಯನ್ ರೈಝಾ ದಿಲ್ಲೋನ್ ಭಾರತದ ಸ್ಪರ್ಧಿಗಳ ಪೈಕಿ ಅಗ್ರಸ್ಥಾನದಲ್ಲಿದ್ದು 94 ಪಾಯಿಂಟ್ಸ್ ಗಳಿಸಿ ಆರನೇ ಸ್ಥಾನದಲ್ಲಿದ್ದಾರೆ.

ಯಶಸ್ವಿ ಬೀಸಾಟ; ಜೋಫ್ರಾ ಆರ್ಭಟ

ರಾಜಸ್ಥಾನ ರಾಯಲ್ಸ್ ಜಯಭೇರಿ: ಪಂಜಾಬ್ ಕಿಂಗ್ಸ್‌ಗೆ ಮೊದಲ ಸೋಲು

ಮುಲ್ಲನಪುರ (ಪಿಟಿಐ): ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರ ಆಕರ್ಷಕ ಅರ್ಧಶತಕ ವ್ಯರ್ಥವಾಗಲು ವೇಗಿ ಜೋಫ್ರಾ ಆರ್ಚರ್ ಬಿಡಲಿಲ್ಲ.

206 ರನ್‌ಗಳ ಗುರಿ ಬೆನ್ನಟ್ಟಿದ ಪಂಜಾಬ್ ಕಿಂಗ್ಸ್ ತಂಡಕ್ಕೆ ಮೊದಲ ಓವರ್‌ನಲ್ಲಿಯೇ 'ಡಬಲ್ ಆಘಾತ' ನೀಡಿದ ಜೋಫ್ರಾ (25ಕ್ಕೆ3) ಮಿಂಚಿದರು. ಇದರಿಂದಾಗಿ ರಾಜಸ್ಥಾನ ರಾಯಲ್ಸ್ ತಂಡವು 50 ರನ್‌ಗಳಿಂದ ಜಯಿಸಿತು.

ಸಂಜು ಸ್ಯಾಮ್ಸನ್ ನಾಯಕತ್ವದ ರಾಯಲ್ಸ್ ಸತತ ಎರಡನೇ ಗೆಲುವು ಸಾಧಿಸಿತು. ಶ್ರೇಯಸ್ ಅಯ್ಯರ್ ಬಳಗವು ಮೊದಲ ಸೋಲಿನ ಕಹಿಯುಂಡಿತು. ಟೂರ್ನಿಯಲ್ಲಿ ತನ್ನ ಮೊದಲೆರಡೂ ಪಂದ್ಯಗಳಲ್ಲಿ ಭರ್ಜರಿ ಜಯಸಾಧಿಸಿದ್ದ ಆತಿಥೇಯರು ಇಲ್ಲಿ ಎಡವಿದರು.

ಮಹಾರಾಜ ಯದುವೀಂದ್ರಸಿಂಗ್ ಅಂತರರಾಷ್ಟ್ರೀಯ ಕ್ರಿಕೆಟ್ ಮೈದಾನದಲ್ಲಿ ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಜೈಸ್ವಾಲ್ (67; 45 ಎಸೆತ) ಮತ್ತು ನಾಯಕ ಸಂಜು ಸ್ಯಾಮ್ಸನ್ (38; 26ಎ) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ ಸೇರಿಸಿದ 89 ರನ್ ಅಡಿಪಾಯದ ಮೇಲೆ ರಾಯಲ್ಸ್ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 205 ರನ್ ಗಳಿಸಿತು. ಅದಕ್ಕುತ್ತರವಾಗಿ ಪಂಜಾಬ್ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 155 ರನ್ ಗಳಿಸಿತು.



ವೇಗಿ ಜೋಫ್ರಾ ಆರ್ಚರ್ (ಮಧ್ಯ) ಅವರನ್ನು ಅಭಿನಂದಿಸಿದ ಬ್ಯಾಟರ್ ಯಶಸ್ವಿ ಜೈಸ್ವಾಲ್ ಹಾಗೂ ನಾಯಕ ಸಂಜು ಸ್ಯಾಮ್ಸನ್ —ಎಎಫ್‌ಪಿ ಚಿತ್ರ

ಇನಿಂಗ್ಸ್‌ನ ಮೊದಲ ಎಸೆತದಲ್ಲಿಯೇ ಪ್ರಿಯಾಂಶ್ ಆರ್ಯ ಮತ್ತು ಕೊನೆ ಎಸೆತದಲ್ಲಿ ಶ್ರೇಯಸ್ ಅಯ್ಯರ್ ಅವರ ಸ್ಟಂಪ್ ಎಗರಿಸುವಲ್ಲಿ ಜೋಫ್ರಾ ಸಫಲರಾದರು. ಈ ಸಂದರ್ಭದ ಲಾಭ ಪಡೆದ ಉಳಿದ ಬೌಲರ್‌ಗಳೂ ಹಿಡಿತ ಸಾಧಿಸಿದರು. ಇದರಿಂದ ಪಂಜಾಬ್ ಬ್ಯಾಟರ್‌ಗಳು ಒತ್ತಡಕ್ಕೊಳಗಾದರು. ಈ ನಡುವೆಯೂ ಐದನೇ ಕ್ರಮಾಂಕದ ನೇಹಾಲ್ ವಧೇರಾ (62; 41ಎ, 4X4, 6X3) ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ (30; 21ಎ) ಹೋರಾಟ ಮಾಡಿದರು. ಆದರೂ ತಂಡ ಗೆಲುವಿನತ್ತ ವಾಲಲಿಲ್ಲ.

ಯಶಸ್ವಿ ಆಟ: ಕಳೆದ ಕೆಲವು ಪಂದ್ಯಗಳಲ್ಲಿ ರನ್ ಬರ ಎದುರಿಸಿದ ಜೈಸ್ವಾಲ್ ಇಲ್ಲಿ ಅರ್ಧಶತಕ ಗಳಿಸುವಲ್ಲಿ ಯಶಸ್ವಿಯಾದರು. 10 ಓವರ್‌ಗಳವರೆಗೂ ಯಶಸ್ವಿ ಮತ್ತು ಸಂಜು ವಿಕೆಟ್ ಪತನಕ್ಕೆ ಆಸ್ಪದ ಕೊಡಲಿಲ್ಲ. ಯಶಸ್ವಿ 3 ಬೌಂಡರಿ ಮತ್ತು 5 ಸಿಕ್ಸರ್ ಎತ್ತಿದರು. ಸಂಜು ಅರ್ಧಡಜನ್ ಬೌಂಡರಿ ಬಾರಿಸಿದರು.

11ನೇ ಓವರ್‌ನಲ್ಲಿ ಲಾಕಿ ಫರ್ಗ್ಯುಸನ್ ಅವರು ಈ ಜೊತೆಯಾಟ ಮುರಿದರು. ಸಂಜು ದೊಡ್ಡ ಹೊಡೆತ ಆಡುವ ಯತ್ನದಲ್ಲಿ ಶ್ರೇಯಸ್‌ಗೆ ಕ್ಯಾಚ್ ಆದರು. ಲಾಕಿ ತಮ್ಮ ಇನ್ನೊಂದು ಓವರ್‌ನಲ್ಲಿ ಯಶಸ್ವಿಯನ್ನು ಕ್ಲೀನ್‌ಬೌಲ್ಡ್ ಮಾಡುವಲ್ಲಿ ಸಫಲರಾದರು. ಆದರೆ ಇದರಿಂದ ರನ್ ಗಳಿಕೆಗೆ ಪೆಟ್ಟು ಬೀಳದಂತೆ ರಿಯಾನ್ ಪರಾಗ್ (ಅಜೇಯ 43) ಕೂಡ ತಂಡಕ್ಕೆ ಬಲ ತುಂಬಿದರು.

ಸಂಕ್ಷಿಪ್ತ ಸ್ಕೋರು: ರಾಜಸ್ಥಾನ ರಾಯಲ್ಸ್: 20 ಓವರ್‌ಗಳಲ್ಲಿ 4ಕ್ಕೆ205 (ಯಶಸ್ವಿ ಜೈಸ್ವಾಲ್ 67, ಸಂಜು ಸ್ಯಾಮ್ಸನ್ 38, ರಿಯಾನ್ ಪರಾಗ್ ಅಜೇಯ 43, ಲಾಕಿ ಫರ್ಗ್ಯುಸನ್ 37ಕ್ಕೆ2) ಪಂಜಾಬ್ ಕಿಂಗ್ಸ್: 20 ಓವರ್‌ಗಳಲ್ಲಿ 9ಕ್ಕೆ155 (ಪ್ರಭಸಿಮ್ರನ್ ಸಿಂಗ್ 17, ನಿಹಾಲ್ ವಧೇರಾ 62, ಗ್ಲೆನ್ ಮ್ಯಾಕ್ಸ್‌ವೆಲ್ 30, ಜೋಫ್ರಾ ಆರ್ಚರ್ 25ಕ್ಕೆ3, ಸಂದೀಪ್ ಶರ್ಮಾ 21ಕ್ಕೆ2, ಮಹೀಷ್ ಥೀಕ್ಷಣ 26ಕ್ಕೆ2) ಫಲಿತಾಂಶ: ರಾಜಸ್ಥಾನ ರಾಯಲ್ಸ್ ತಂಡಕ್ಕೆ 50 ರನ್‌ಗಳ ಜಯ. ಪಂದ್ಯ ಶ್ರೇಷ್ಠ: ಜೋಫ್ರಾ ಆರ್ಚರ್

ಪಾಯಿಂಟ್ಸ್ ಪಟ್ಟಿ

	ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
1	ಡಿಸಿ	3	3	0	6	1.257
2	ಆರ್‌ಸಿಬಿ	3	2	1	4	1.149
3	ಜಿಟಿ	3	2	1	4	0.807
4	ಪಿಬಿಕೆಎಸ್	3	2	1	4	0.074
5	ಕೆಕೆಆರ್	4	2	2	4	0.070
6	ಎಲ್‌ಎಸ್‌ಜಿ	4	2	2	4	0.048
7	ಆರ್‌ಆರ್	4	2	2	4	-0.185
8	ಎಂಐ	4	1	3	2	0.108
9	ಸಿಎಸ್‌ಕೆ	3	1	2	2	-0.891
10	ಎಸ್‌ಆರ್‌ಎಚ್	4	1	3	2	-1.612

ಆರೇಂಜ್ ಕ್ಯಾಪ್
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 201 ರನ್

ಪರ್ಪಲ್ ಕ್ಯಾಪ್
ನೂರ್ ಅಹ್ಮದ್ (ಸಿಎಸ್‌ಕೆ) 10 ವಿಕೆಟ್

ಬಾಕ್ಸಿಂಗ್: ಫೈನಲ್‌ಗೆ ಅಭಿನಾಶ್

ನವದೆಹಲಿ (ಪಿಟಿಐ): ಇಟಲಿಯ ಗಿಯಾನ್‌ಲುಯಿಗಿ ಮಲಂಗ ಅವರ ಎದುರು ಬಹುತೇಕ ಪರಿಪೂರ್ಣ ನಿರ್ವಹಣೆ ತೋರಿದ ಭಾರತದ ಅಭಿನಾಶ್ ಜಾಮವಾಲ್ ಅವರು ಬ್ರೆಜಿಲ್‌ನ ಇಗವಾಕು ನಗರದಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಕಪ್ ಟೂರ್ನಿಯ 67 ಕೆ.ಜಿ. ವಿಭಾಗದ ಫೈನಲ್‌ಗೆ ಲಗ್ಗೆಯಿಟ್ಟರು.

ಶುಕ್ರವಾರ ನಡೆದ ಸೆಣಸಾಟದಲ್ಲಿ 22 ವರ್ಷ ವಯಸ್ಸಿನ ಅಭಿನಾಶ್, ತಮ್ಮ ಎತ್ತರ, ವೇಗ ಬಳಸಿ ಮಲಂಗಾ ಎದುರು ಮೇಲುಗೈ ಸಾಧಿಸಿದರು. ಅಂತಿಮವಾಗಿ 5–0 ಸರ್ವಾನುಮತದ ಆಧಾರದಲ್ಲಿ ಜಯಶಾಲಿಯಾದರು. ಐವರಲ್ಲಿ ನಾಲ್ವರು ತೀರ್ಪುಗಾರರು ಅವರಿಗೆ 'ಪರಿಪೂರ್ಣ 30' ಅಂಕ ನೀಡಿದರು.

ಮಲಂಗ ಅವರು ಮೊದಲ ಸುತ್ತಿನಲ್ಲೇ ಕೌಂಟ್‌ಡೌನ್ ಎದುರಿಸಬೇಕಾಯಿತು. ಸೆಣಸಾಟದ ಉಳಿದ ಅವಧಿಯಲ್ಲೂ ಅಭಿನಾಶ್ ಮೇಲುಗೈ ಉಳಿಸಿಕೊಂಡರು.

55 ಕೆ.ಜಿ. ವಿಭಾಗದಲ್ಲಿ ಭಾರತದ ಮನೀಷ್ ರಾಥೋಡ್ ಅವರ ಅಭಿಯಾನ ಸೆಮಿಫೈನಲ್ ಹಂತದಲ್ಲಿ ಅಂತ್ಯಗೊಂಡಿತು.

ನ್ಯೂಜಿಲೆಂಡ್ ತಂಡಕ್ಕೆ ಸರಣಿ ಕಿರೀಟ

ಮೌಂಟ್ ಮಾಂಗಾನೂಯಿ (ಎಎಫ್‌ಪಿ): ವೇಗದ ಬೌಲರ್ ಬೆನ್ ಸಿಯರ್ಸ್ ಅವರ ಐದು ವಿಕೆಟ್ ಗೊಂಚಲಿನ ನೆರವಿನಿಂದ ನ್ಯೂಜಿಲೆಂಡ್ ತಂಡ ಶನಿವಾರ ನಡೆದ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು 43 ರನ್‌ಗಳಿಂದ ಸೋಲಿಸಿತು. ಸರಣಿಯನ್ನು ಆತಿಥೇಯರು 3–0ಯಿಂದ ಗೆದ್ದುಕೊಂಡರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 42 ಓವರುಗಳಲ್ಲಿ 8 ವಿಕೆಟ್‌ಗೆ 264 (ರಿಸ್ ಮರಿಯು 58, ಹೆನ್ರಿ ನಿಕೋಲ್ಸ್ 31, ಡೇರಿಲ್ ಮಿಚೆಲ್ 43, ಮೈಕೆಲ್ ಬ್ರೇಸ್‌ವೆಲ್ 59; ನಸೀಮ್ ಶಾ 54ಕ್ಕೆ2, ಅಕಿಫ್ ಜಾವೆದ್ 52ಕ್ಕೆ4); ಪಾಕಿಸ್ತಾನ: 40 ಓವರುಗಳಲ್ಲಿ 221 (ಅಬ್ದುಲ್ಲಾ ಶಫೀಕ್ 33, ಬಾಬರ್ ಆಜಂ 50, ಮೊಹಮ್ಮದ್ ರಿಜ್ವಾನ್ 37; ಜೇಕಬ್ ಡಫಿ 40ಕ್ಕೆ2, ಬೆನ್ ಸಿಯರ್ಸ್ 34ಕ್ಕೆ5) **ಪಂದ್ಯದ ಆಟಗಾರ:** ಮೈಕೆಲ್ ಬ್ರೇಸ್‌ವೆಲ್.

ಬ್ಯಾಸ್ಕೆಟ್‌ಬಾಲ್: ನ್ಯಾಷನಲ್ಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಷನಲ್ಸ್ ಬಿಸಿ ಮೈಸೂರು ತಂಡ ಕರ್ನಾಟಕ ಗ್ರಾಮೀಣ ಬ್ಯಾಸ್ಕೆಟ್‌ಬಾಲ್ ಲೀಗ್‌ನಲ್ಲಿ ಶನಿವಾರ ವೈಸಿಬಿಸಿ ಬಳ್ಳಾರಿ ತಂಡವನ್ನು 62–45 ಅಂಕಗಳಿಂದ ಮಣಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪುರುಷರ ವಿಭಾಗದ ಲೀಗ್ ಪಂದ್ಯದಲ್ಲಿ ನ್ಯಾಷನಲ್ಸ್ ಬಿಸಿ ಮೈಸೂರು ತಂಡದ ಪರ ರೋನಕ್ (27 ಅಂಕ) ಅಮೋಘ ಪ್ರದರ್ಶನ ನೀಡಿ ತಂಡದ ಗೆಲುವಿನ ರೂವಾರಿಯಾದರು.

ಎರಡನೇ ಪಂದ್ಯದಲ್ಲಿ ವಿಬಿಸಿ ಮಂಡ್ಯ ತಂಡ 58–40 ಅಂಕಗಳಿಂದ ಕುವೆಂಪು ಬಿಸಿ ಕಲಬುರ್ಗಿ ತಂಡವನ್ನು ಸೋಲಿಸಿತು. ವಿಬಿಸಿ ತಂಡದ ಪರ ಶಶಾಂಕ್ ಗೌಡ (22 ಅಂಕ) ಮತ್ತು ಕುವೆಂಪು ಬಿಸಿ ತಂಡದ ಪರ ಸಂದೇಶ್ (18 ಅಂಕ) ಪಡೆದರು.

ಮೂರನೆ ಪಂದ್ಯದಲ್ಲಿ ಮಂಗಳೂರು ಬಿಸಿ ತಂಡ 84–74 ಅಂಕಗಳಿಂದ ವಿಜಯನಗರ ಬಿಸಿ ಮೈಸೂರು ತಂಡವನ್ನು ಮಣಿಸಿತು.

ನಾಲ್ಕನೆ ಪಂದ್ಯದಲ್ಲಿ ಇನ್‌ಸ್ಪೈರ್ ಬಿಸಿ ಧಾರಾವಾಡ ತಂಡ ವೈಎಫ್‌ಬಿಸಿ ಕೋಲಾರ ವಿರುದ್ಧ 42–39ಯಿಂದ ಜಯಿಸಿತು. ಗೆದ್ದ ತಂಡಗಳು ಸೂಪರ್ ಲೀಗ್ ಹಂತಕ್ಕೆ ಅರ್ಹತೆ ಪಡೆದಿವೆ.

ಐಎಸ್‌ಎಲ್ ಎರಡನೇ ಲೆಗ್ ಸೆಮಿಫೈನಲ್ ಇಂದು

ಗೋವಾಕ್ಕೆ ಉತ್ಸಾಹಿ ಬಿಎಫ್‌ಸಿ ಸವಾಲು

ಮಡಗಾಂವ್ (ಪಿಟಿಐ): ಉತ್ತಮ ಲಯದ ಜೊತೆಗೆ ಸೆಮಿಫೈನಲ್‌ನ ಮೊದಲ ಲೆಗ್ ಗೆದ್ದು ಉತ್ಸಾಹದಲ್ಲಿರುವ ಬೆಂಗಳೂರು ಎಫ್‌ಸಿ ತಂಡ ಭಾನುವಾರ ಇಲ್ಲಿನ ಫತೋರ್ಡಾ ಕ್ರೀಡಾಂಗಣದಲ್ಲಿ ನಡೆಯಲಿರುವ ಸೆಮಿಫೈನಲ್ ಎರಡನೇ ಲೆಗ್‌ನಲ್ಲಿ ಆತಿಥೇಯ ಎಫ್‌ಸಿ ಗೋವಾ ತಂಡವನ್ನು ಎದುರಿಸಲಿದೆ.

ಒಂದೆಡೆ ಬೆಂಗಳೂರು ತಂಡ ಇಲ್ಲೂ ಗೆಲುವು ಸಾಧಿಸಿ ಫೈನಲ್‌ಗೆ ಸ್ಥಾನ ಕಾದಿರಿಸುವ ತವಕದಲ್ಲಿದೆ. ಇನ್ನೊಂದು ಕಡೆ ಗೋವಾ ತಂಡವು, ಬೆಂಗಳೂರಿನಲ್ಲಿ ಅನುಭವಿಸಿದ ಸೋಲಿಗೆ ಪ್ರತಿಕಾರ ತೀರಿಸುವ ಹವಣಿಕೆಯಲ್ಲಿದೆ.

ಬೆಂಗಳೂರು ತಂಡ ಪ್ಲೇಆಫ್‌ನ ಎರಡೂ ಪಂದ್ಯಗಳನ್ನು ಅಧಿಕಾರಯುತ ವಾಗಿ ಗೆದ್ದುಕೊಂಡಿದೆ. ಎರಡೂ ಪಂದ್ಯಗಳಲ್ಲಿ ಎದುರಾಳಿಗಳಿಗೆ ಗೋಲು ಬಿಟ್ಟು ಕೊಟ್ಟಿಲ್ಲ. ಮುಂಬೈ ಸಿಟಿ ಮೇಲೆ 5–0ಯಿಂದ ಗೆದ್ದ ಸುನಿಲ್ ಚೆಟ್ರಿ ಪಡೆ, ಮೂರು ದಿನಗಳ ಹಿಂದೆ ಸೆಮಿಫೈನಲ್‌ನ ಮೊದಲ ಲೆಗ್‌ನಲ್ಲಿ ಎಫ್‌ಸಿ ಗೋವಾ ಮೇಲೆ 2–0 ಗೆಲುವು ದಾಖಲಿಸಿದೆ. ಹೀಗಾಗಿ ಈ ತಂಡ, ಮನೊಲೊ ಮಾರ್ಕ್ವೆಝ್ ತರಬೇತಿಯ ಗೋವಾ ತಂಡಕ್ಕೆ ಪ್ರಬಲ ಸವಾಲೊಡ್ಡಲಿದೆ.



ಬೆಂಗಳೂರಿನಲ್ಲಿ ಬುಧವಾರ ನಡೆದ ಸೆಮಿಫೈನಲ್ ಮೊದಲ ಲೆಗ್‌ನಲ್ಲಿ ಎಫ್‌ಸಿ ಗೋವಾ ವಿರುದ್ಧ ಗೋಲು ಗಳಿಸಿದ ವೇಳೆ ಬಿಎಫ್‌ಸಿ ಆಟಗಾರರ ಸಂಭ್ರಮ...

ಗೋವಾ ಪ್ಲೇಆಫ್‌ನಲ್ಲಿ ಸತತ ಮೂರು ಪಂದ್ಯಗಳಲ್ಲಿ ಸೋತಿದೆ. ಐಎಸ್‌ಎಲ್‌ನ ದೀರ್ಘ ಇತಿಹಾಸದಲ್ಲಿ ಗೋವಾ ತಂಡಕ್ಕೆ ಹಿಂದೆಂದೂ ಈ ರೀತಿ ಆಗಿಲ್ಲ. ಭಾನುವಾರದ ಪಂದ್ಯದಲ್ಲಿ ಸೋಲು ಎದುರಾದರೆ ಪ್ಲೇಆಫ್‌ನಲ್ಲಿ ಅದು ತಂಡದ ಕಳಪೆ ಸಾಧನೆ ಎನಿಸಲಿದೆ.

ಗೋಲ್ ಕೀಪರ್ ಹೃತಿಕ್ ತಿವಾರಿ ಗೋವಾದ ಪರ ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ. ಋತುವಿನ ಏಳು ಪಂದ್ಯಗಳಲ್ಲಿ ಗೋಲು ಬಿಟ್ಟುಕೊಟ್ಟಿಲ್ಲ. 51 ಗೋಲು ಅವಕಾಶಗಳನ್ನು ತಡೆದಿದ್ದಾರೆ.

ಬೆಂಗಳೂರಿನ ತಂಡವು ತನ್ನ ಪ್ರಬಲ ರಕ್ಷಣೆಯ ಜೊತೆ ಗೋಲು ಗಳಿಸುವ ಸಾಮರ್ಥ್ಯದ ಮೇಲೆ ಭರವಸೆ ಇಟ್ಟುಕೊಂಡಿದೆ. ಹಾಲಿ ಐಪಿಎಲ್‌ನಲ್ಲಿ 47 ಗೋಲುಗಳನ್ನು ಗಳಿಸಿದೆ. ಒಂದೇ ಋತುವಿನಲ್ಲಿ 50 ಗೋಲುಗಳನ್ನು ಗಳಿಸಿದ ನಾಲ್ಕನೇ ತಂಡವಾಗುವ ಹಾದಿಯಲ್ಲಿದೆ. ಎಫ್‌ಸಿ ಗೋವಾ (2019–20), ಮುಂಬೈ ಸಿಟಿ (2022–23) ಮತ್ತು ಮೋಹನ್ ಬಾಗನ್ ಸೂಪರ್ ಜೈಂಟ್ (2023–24) ಮಾತ್ರ ಹಿಂದೆ ಈ ಮೈಲಿಗಲ್ಲು ಸಾಧಿಸಿವೆ.

ಮುಖಾಮುಖಿ: ಐಎಸ್‌ಎಲ್‌ನಲ್ಲಿ ಬೆಂಗಳೂರು–ಗೋವಾದ ತಂಡಗಳು 18 ಬಾರಿ ಮುಖಾಮುಖಿಯಾಗಿವೆ. ಬೆಂಗಳೂರು ಎಂಟು ಪಂದ್ಯಗಳನ್ನು, ಗೋವಾ ಐದು ಪಂದ್ಯಗಳಲ್ಲಿ ಜಯಶಾಲಿಯಾಗಿದೆ. ಐದು ಪಂದ್ಯಗಳು ಸಮಬಲದಲ್ಲಿ (ಡ್ರಾ) ಅಂತ್ಯಕಂಡಿವೆ.

ಆದರೆ ಮನೊಲೊ ಮಾರ್ಕ್ವೆಝ್ ಅವರಿಗೆ ತಮ್ಮ ತಂಡ ಫೈನಲ್ ತಲುಪುವ ನಂಬಿಕೆಯಿದೆ. 'ಈ ಹಿಂದಿನದ್ದು ಮತ್ತು ಅಂಕಿ ಅಂಶಗಳು ಈಗ ಮುಖ್ಯವಲ್ಲ. ನಾವು ಫೈನಲ್‌ಗೆ ತಲುಪುವೆವು ಎಂಬ ವಿಶ್ವಾಸ ನಮಗಿದೆ' ಎಂದಿದ್ದಾರೆ ಅವರು.

'ಪ್ರಶಸ್ತಿ ಸುತ್ತಿಗೆ ಪಡೆಯುವ ಕಡೆಯೇ ನಮ್ಮ ಗಮನ' ಎಂದು ಬೆಂಗಳೂರು ಎಫ್‌ಸಿ ಕೋಚ್ ಜೆರಾರ್ಡ್ ಝೂರ್ಗೋಝಾ ಪುನರುಚ್ಚರಿಸಿದ್ದಾರೆ

ಟೆನಿಸ್: ಚಾಪೆಲ್–ಗ್ರಿಗೋರಿ ಜೋಡಿಗೆ ಡಬಲ್ಸ್ ಪ್ರಶಸ್ತಿ

ಫೈನಲ್‌ಗೆ ಕ್ಲಾರ್ಕ್– ಕ್ರಾಫರ್ಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ರ ಶ್ರೇಯಾಂಕದ ಜೇ ಕ್ಲಾರ್ಕ್ ಅವರು ಹೆಚ್ಚಿನ ಪ್ರಯಾಸವಿಲ್ಲದೇ ನೇರ ಸೆಟ್‌ಗಳಿಂದ ಭಾರತದ ಚಿರಾಗ್ ದುಹಾನ್ ಅವರನ್ನು ಸೋಲಿಸಿ ಎಸ್.ಎಂ.ಕೃಷ್ಣ ಸ್ಮರಣಾರ್ಥ ಓಪನ್ ಐಟಿಎಫ್ ಟೆನಿಸ್ ಟೂರ್ನಿಯ ಫೈನಲ್ ತಲುಪಿದ್ದಾರೆ. ಬ್ರಿಟನ್‌ನ ಆಟಗಾರ ಭಾನುವಾರ ನಡೆಯುವ ಫೈನಲ್‌ನಲ್ಲಿ ಸ್ವದೇಶದ ಆಟಗಾರ, ಎರಡನೇ ಶ್ರೇಯಾಂಕದ ಒಲಿವರ್ ಕ್ರಾಫರ್ಡ್ ಅವರನ್ನು ಎದುರಿಸಲಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ 277ನೇ ಸ್ಥಾನದಲ್ಲಿರುವ ಬ್ರಿಟನ್‌ನ ಕ್ಲಾರ್ಕ್, ತಮಗಿಂತ ಸಾಕಷ್ಟು ಕೆಳಗಿನ ಸ್ಥಾನದಲ್ಲಿರುವ, 1016ನೇ ಕ್ರಮಾಂಕದ ದುಹಾನ್ ವಿರುದ್ಧ ಅನಿರೀಕ್ಷಿತಕ್ಕೆ ಅವಕಾಶ ನೀಡದೇ 6–3, 6–3ರಲ್ಲಿ ಜಯಗಳಿಸಿದರು. 26 ವರ್ಷ ವಯಸ್ಸಿನ ಕ್ಲಾರ್ಕ್, ಕಬ್ಬನ್‌ಪಾರ್ಕ್‌ನ ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದ ಕೋರ್ಟ್‌ನಲ್ಲಿ 89 ನಿಮಿಷಗಳಲ್ಲಿ ಪಂದ್ಯ ಗೆದ್ದರು.

ಅವರು ಭಾರತದಲ್ಲಿ ಸತತ ನಾಲ್ಕನೇ ಐಟಿಎಫ್ ಟೂರ್ನಿಯ ಫೈನಲ್ ತಲುಪಿದ್ದಾರೆ. ಮೂರನೇ ಪ್ರಶಸ್ತಿಯೊಡನೆ ಭಾರತ ಪ್ರವಾಸ ಮುಗಿಸುವ ತವಕದಲ್ಲಿದ್ದಾರೆ.

ಇನ್ನೊಂದು ಸೆಮಿಫೈನಲ್‌ನಲ್ಲಿ ಒಲಿವರ್ ಕ್ರಾಫರ್ಡ್ 6–4, 6–4 ರಿಂದ ಜಪಾನ್‌ನ ರ್‍ಯುಕಿ ಮತ್ಸುದಾ ಅವರನ್ನು ಹಿಮ್ಮೆಟ್ಟಿಸಿದರು. ಕ್ರಾಫರ್ಡ್ ವಿಶ್ವ ಕ್ರಮಾಂಕದಲ್ಲಿ 293ನೇ ಸ್ಥಾನದಲ್ಲಿದ್ದಾರೆ.



ಎಸ್.ಎಂ.ಕೃಷ್ಣ ಸ್ಮರಣಾರ್ಥ ಐಟಿಎಫ್ ಟೆನಿಸ್ ಟೂರ್ನಿಯಲ್ಲಿ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡ ಕಜಕಸ್ತಾನದ ಲೊಮಾಕಿನ್ (ಎಡಗಡೆ) ಮತ್ತು ಅಮೆರಿಕದ ನಿಕ್ ಚಾಪೆಲ್ ಅವರು ಟ್ರೋಫಿಯೊಂದಿಗೆ. ಪ್ರಜಾವಾಣಿ ಚಿತ್ರ: ಎಸ್‌.ಕೆ.ದಿನೇಶ್

ಚಾಪೆಲ್–ಲೊಮಾಕಿನ್‌ಗೆ ಪ್ರಶಸ್ತಿ: ಅಮೆರಿಕದ ನಿಕ್ ಚಾಪೆಲ್– ಕಜಕಸ್ತಾನದ ಗ್ರಿಗೊರಿ ಲೊಮಾಕಿನ್ ಅವರು 6–2, 7–6 (5) ರಿಂದ ಮೂರನೇ ಶ್ರೇಯಾಂಕದ ಭಾರತದ ಎಸ್.ಡಿ.ಪ್ರಜ್ವಲ್ ದೇವ್ (ಮೈಸೂರು)– ನಿತಿನ್ ಕುಮಾರ್ ಸಿನ್ಹಾ (ಕೋಲ್ಕತ್ತ) ಅವರನ್ನು ಸೋಲಿಸಿ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡರು.